ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ನಮ್ಮ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋಗುವುದೇಕೆ? ಅದನ್ನು ತಪ್ಪಿಸುವ ಬಗೆ ಎಂತು?



ಭಾರತದಲ್ಲೇ ಇಂಟರ್ನ್‌ಷಿಪ್: ವೈದ್ಯ ವಿದ್ಯಾರ್ಥಿಗಳಿಗೆ ಅವಕಾಶ 6
ಒಡನಾಟ ಮೆಲುಕು ಹಾಕಿದ ಭಗವಾನ್
ಹಿಜಾಬ್ ವಿವಾದ: ಕಾಲೇಜಿಗೆ ರಜೆ 5
'ಪುನೀತ್ ಅಭಿನಯಕ್ಕೆ ಬೆರಗಾಗಿದ್ದ ರಾಜ್' 5



ಕೇಂದ್ರ ಪುರಸ್ಕೃತ 'ಮಾತೃ ವಂದನಾ' ಯೋಜನೆಗೆ ಅನುದಾನದ ಕೊರತೆ

ಪೋಷಣ ಅಭಿಯಾನ 'ಅಪೌಷ್ಟಿಕ'

• ರಾಜೇಶ್ ರೈ ಚಟ್ಲ

ಬೆಂಗಳೂರು: ಗರ್ಭಿಣಿಯರು, ಬಾಣಂತಿಯರಲ್ಲಿ ಅಪೌಷ್ಟಿಕತೆ, ರಕ್ತಹೀನತೆ, ಶಿಶುಮರಣ ತಡೆಯಲು 'ಮಾತೃ ವಂದನಾ', ಮಕ್ಕಳು, ಮಹಿಳೆಯರಲ್ಲಿ ಅಪೌಷ್ಟಿಕತೆ ಕಡಿಮೆ ಮಾಡಲು 'ಪೋಷಣ ಅಭಿಯಾನ' ಯೋಜನೆಗಳು ಜಾರಿಯಲ್ಲಿವೆ. ಈ ಎರಡೂ ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಗಳು 'ಆರ್ಥಿಕ ಅಪೌಷ್ಟಿಕತೆ'ಯಿಂದ ಸೊರಗುತ್ತಿವೆ; ಎದ್ದು ನಿಲ್ಲಲೂ ಸಾಧ್ಯವಾಗದಷ್ಟರ ಮಟ್ಟಿಗೆ ನಿತ್ರಾಣಗೊಂಡಿವೆ!

ಮೂಲಗಳ ಪ್ರಕಾರ, ಎರಡೂ ಯೋಜನೆಗಳಿಗೆ ಕೇಂದ್ರದ ಅನುದಾನ ಕೆಲವು ಕೋಟಿ ರೂಪಾಯಿ ಬರಬೇಕಿದೆ. ಯೋಜನೆಯ ಅನುಷ್ಠಾನ ನಿರ್ವಹಿಸುತ್ತಿರುವ ಮಹಿಳಾ ಮತ್ತು ಕಲ್ಯಾಣ ಇಲಾಖೆ ಇದನ್ನು ಒಪ್ಪಲು ತಯಾರಿಲ್ಲ. ಯೋಜನೆಗಳ ಅನುಷ್ಠಾನಕ್ಕೆ ಅನುದಾನದ ಕೊರತೆ ಎದುರಾಗಿಲ್ಲ ಎಂದು ತಿಳಿಸಿದೆ. ಆದರೆ, ಪೋಷಣ ಅಭಿಯಾನದಡಿ ಫಲಾನುಭವಿಗಳಿಗೆ ಆಹಾರ ಪೂರೈಕೆ ವಿಳಂಬವಾಗುತ್ತಿದೆ; ಮಾತೃ ವಂದನಾ ಪ್ರೋತ್ಸಾಹಧನ ಸೂಕ್ತ ಸಮಯಕ್ಕೆ ಫಲಾನುಭಗಳ ಕೈ ಸೇರುತ್ತಿಲ್ಲ.

'ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ (ಐಸಿಡಿಎಸ್) ಅನುಷ್ಠಾನಗೊಳ್ಳುತ್ತಿರುವ ಈ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ₹ 400 ಕೋಟಿಗೂ ಹೆಚ್ಚು ಅನುದಾನ ಬರಬೇಕಾಗಿದೆ. ಆದರೆ, ಇತ್ತೀಚೆಗೆ ಬಿಡಿಗಾಸೂ ನೀಡಿಲ್ಲ. ಮಾಹಿತಿ ಬಹಿರಂಗಪಡಿಸಿದರೆ ಸಮಸ್ಯೆಗೆ ಸಿಲುಕುತ್ತೇವೆ. ನಮಗ್ಯಾಕೆ ಆ ಉಸಾಬರಿ ಎಂಬ ಕಾರಣಕ್ಕೆ ಸತ್ಯಾಂಶಗಳನ್ನು ಮುಚ್ಚಿಡಲಾಗುತ್ತಿದೆ' ಎಂದು ಹೆಸರು ಹೇಳಲು ಇಚ್ಛಿಸದ ಕೆಳಹಂತದ ಸಿಬ್ಬಂದಿ ತಿಳಿಸಿದರು.

'ಯೋಜನೆಗಳ ಅನುಷ್ಠಾನದಲ್ಲಿ ಆಧಾರ ಸ್ತಂಭದಂತಿರುವ ಅಂಗನವಾಡಿ ಕಾರ್ಯಕರ್ತೆಯರ ವಿಚಾರದಲ್ಲೂ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಬಡ ಕಾರ್ಯಕರ್ತೆಯರು ಮುಷ್ಕರ, ಪ್ರತಿಭಟನೆಗೆ ಇಳಿಯುತ್ತಿದ್ದಂತೆ ಇಲಾಖೆಯ ಹೊಣೆ ಹೊತ್ತ ಸಚಿವರ ದಾರಿ ತಪ್ಪಿಸಿ ಭರವಸೆಯ ಸೌಧ ಕಟ್ಟುವ ಅಧಿಕಾರಿಗಳು ಬಳಿಕ ಸುಮ್ಮನಾಗುತ್ತಾರೆ. ಪೋಷಣ ಅಭಿಯಾನದಲ್ಲಿ ಗುತ್ತಿಗೆ ನೆಲೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ಕೆಲವು ತಿಂಗಳುಗಳಿಂದ ವೇತನವೇ ಪಾವತಿಯಾಗಿಲ್ಲ. ಕೇಂದ್ರದಿಂದ ಅನುದಾನ ಬಂದ ತಕ್ಷಣ ವೇತನ ನೀಡಲಾಗುವುದು ಎಂದು ಹೇಳಿ ಈ ಸಿಬ್ಬಂದಿಯನ್ನು ದುಡಿಸಿಕೊಳ್ಳಲಾಗುತ್ತಿದೆ' ಎಂಬ ದೂರುಗಳು ಹೊಸದೇನಲ್ಲ.

ಮಾತೃ ವಂದನಾ ಯೋಜನೆ 2017ರ ನವಂಬರ್‌ನಿಂದ ಜಾರಿಗೆ ಬಂದಿದ್ದು, ಪೋಷಣ ಅಭಿಯಾನ 2018ರ ಸೆಪ್ಟೆಂಬರ್‌ನಲ್ಲಿ ಆರಂಭಗೊಂಡಿದೆ. 'ಪ್ರಧಾನ ಮಂತ್ರಿ' ಹೆಸರಿನೊಂದಿಗೆ ಜೋಡಣೆಗೊಂಡು, ಭರ್ಜರಿ ಪ್ರಚಾರದೊಂದಿಗೆ ಚಾಲನೆ ಪಡೆದ ಈ ಯೋಜನೆಗಳು ಕೇಂದ್ರದ ಅನುದಾನ ವಿಳಂಬದಿಂದ ಹಾದಿ ತಪ್ಪಿವೆ. ಸಕಾಲದಲ್ಲಿ ಅನುದಾನ ಪಡೆಯಲು ಪ್ರಯತ್ನಗಳು ಆಗುತ್ತಿಲ್ಲ. ಪೋಷಣ ಅಭಿಯಾನ ಯೋಜನೆಯ ಅನುಷ್ಠಾನದ ಪ್ರಗತಿ ದಾಖಲಿಸಲು 'ಪೋಷಣ್ ಟ್ರ್ಯಾಕರ್' ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಅದಕ್ಕೆಂದೇ ಅಂಗನವಾಡಿ ಕಾರ್ಯಕತೆಯರಿಗೆ ಸ್ಮಾರ್ಟ್ ಫೋನ್ ನೀಡಲಾಗಿದೆ. ಆದರೆ, ಆ ಸ್ಮಾರ್ಟ್ ಫೋನ್‌ಗಳು ಕಳಪೆ. ಹೀಗಾಗಿ ಟ್ರ್ಯಾಕಿಂಗ್ ಆಗುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಹೇಳಿದರೆ ಅವರು ತಲೆಕೆಡಿಸಿಕೊಳ್ಳುವುದಿಲ್ಲ. ಇದರಿಂದಾಗಿ ಅಪೌಷ್ಟಿಕತೆ ಹೋಗಲಾಡಿಸಲು ರೂಪಿಸಿರುವ ಯತ್ನಕ್ಕೆ ಹಿನ್ನಡೆಯಾಗಿದೆ; ಗುರಿಯ ಪ್ರಗತಿ ಕುಂಠಿತವಾಗಿದೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ಒಳನೋಟ
ಕೈಕೊಟ್ಟ ಕೇಂದ್ರ ಸರ್ಕಾರ
ಪ್ರತಿಕ್ರಿಯಿಸಿ: 9606038256
feedback@prajavani.co.in

ರಾಜ್ಯದಲ್ಲಿ ಮಕ್ಕಳಲ್ಲಿ ಪೌಷ್ಟಿಕತೆ ಸ್ಥಿತಿಗತಿ (ಜನವರಿ –2022)

ಒಟ್ಟು ಮಕ್ಕಳು	42,67,861	
ಸಾಮಾನ್ಯ	39,68,395	92.98%
ಅಪೌಷ್ಟಿಕ ಮಕ್ಕಳು	2,93,335	6.87%
ತೀವ್ರ ಅಪೌಷ್ಟಿಕ ಮಕ್ಕಳು	6,131	0.14%

ಮಕ್ಕಳು– ಮಹಿಳೆಯರಲ್ಲಿ ರಕ್ತಹೀನತೆ



ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ 2015–16 ಹಾಗೂ 2018–21ರ ಅವಧಿಯ ವರದಿಗಳನ್ನು ಹೋಲಿಸಿದಾಗ ಕರ್ನಾಟಕದಲ್ಲಿ ಕುಂಠಿತ ಬೆಳವಣಿಗೆ ಕಂಡುಬಂದಿರುವ 5 ವರ್ಷದ ಒಳಗಿನ ಮಕ್ಕಳ ಪ್ರಮಾಣ ಅಲ್ಪ ಕುಸಿದಿದೆ. ಆದರೆ, ಮಕ್ಕಳು, ಮಹಿಳೆಯರಲ್ಲಿ ರಕ್ತಹೀನತೆ ಕಾಡುತ್ತಿದೆ. ಈ ಸಮಸ್ಯೆ ಇರುವ 5 ವರ್ಷದ ಮಕ್ಕಳ ಪ್ರಮಾಣವು ಶೇ 60.9ರಿಂದ 65.5ಕ್ಕೆ ಏರಿಕೆ ಆಗಿದ್ದರೆ, ಮಹಿಳೆಯರ ಪ್ರಮಾಣ ಶೇ 44.8ರಿಂದ 47.8ಕ್ಕೆ ಹೆಚ್ಚಿದೆ. ಎರಡೂ ಯೋಜನೆಗಳ 'ಫಲ' ಪಡೆಯಲು ಬಯಸಿ ಹೆಸರು ನೋಂದಾಯಿಸುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

–ಸಾಂದರ್ಭಿಕ ಚಿತ್ರ

ಸುಮಿಯತ್ತ ಸರ್ಕಾರದ ಗಮನ

ಉಕ್ರೇನ್: 700ಕ್ಕೂ ಹೆಚ್ಚು ವಿದ್ಯಾರ್ಥಿಗಳ ತೆರವಿಗೆ ಪ್ರಯತ್ನ

ಪ್ರಜಾವಾಣಿ ವಾರ್ತೆ



ಉಕ್ರೇನ್‌ನ ಇರ್ಪಿನ್ ಪಟ್ಟಣದಿಂದ ಶನಿವಾರ ಜನರನ್ನು ಸ್ಥಳಾಂತರಿಸುವ ವೇಳೆ ಯೋಧರೊಬ್ಬರು ಮಗುವನ್ನು ಹಿಡಿದು ಮುರಿದ ಸೇತುವೆಯನ್ನು ದಾಟಿದರು –ಎಎಫ್‌ಪಿ ಚಿತ್ರ

ನವದೆಹಲಿ: ಯುದ್ಧಪೀಡಿತ ಉಕ್ರೇನ್‌ನಿಂದ ಭಾರತೀಯರನ್ನು ತೆರವು ಮಾಡುವ ಕಾರ್ಯಾಚರಣೆ ಬಿರುಸಿನಿಂದ ನಡೆಯುತ್ತಿದೆ. 15 ವಿಮಾನಗಳಲ್ಲಿ 2,900 ಜನರನ್ನು ಶನಿವಾರ ಕರೆತರಲಾಗಿದೆ. ಈಗ, ಸುಮಿ ಎಂಬಲ್ಲಿ ಸಿಲುಕಿರುವ ಭಾರತೀಯರನ್ನು ಕರೆತರುವುದಕ್ಕೆ ಗಮನ ಕೇಂದ್ರೀಕರಿಸಲಾಗಿದೆ. ಶೆಲ್ ದಾಳಿ, ಹಿಂಸಾಚಾರ ಮತ್ತು ಸಾರಿಗೆ ಸೌಲಭ್ಯದ ಕೊರತೆಯು ಬಹುದೊಡ್ಡ ಸವಾಲಾಗಿದೆ. ಸುಮಿ ವಿಶ್ವವಿದ್ಯಾಲಯದಲ್ಲಿ ಸುಮಾರು 700 ವಿದ್ಯಾರ್ಥಿಗಳಿದ್ದು, ಸಹಾಯಕ್ಕೆ ಮೊರೆ ಇಡುತ್ತಿದ್ದಾರೆ. ರಷ್ಯಾದ ಪಟ್ಟಣವೊಂದರವರೆಗೆ ನಡೆದೇ ಹೋಗುವುದಾಗಿಯೂ ಅವರು ಬೆದರಿಕೆ ಹಾಕಿದ್ದಾರೆ.

ರಷ್ಯಾವು ಉಕ್ರೇನ್ ಮೇಲೆ ಆಕ್ರಮಣ ಆರಂಭಿಸಿದ ಫೆ. 23ರಿಂದ ಈವರೆಗೆ 13,300 ಭಾರತೀಯರನ್ನು ಕರೆತರಲಾಗಿದೆ. ಉಕ್ರೇನ್ ತೊರೆಯುವಂತೆ ಜನವರಿಯಲ್ಲಿ ಸೂಚನೆ ನೀಡಿದ ಬಳಿಕ ಈವರೆಗೆ ಸುಮಾರು 20 ಸಾವಿರ ಜನರು ತಾಯ್ನಾಡಿಗೆ ಮರಳಿದ್ದಾರೆ.

ಸುಮಿ ವಿಶ್ವವಿದ್ಯಾಲಯದಲ್ಲಿ ಸಿಲುಕಿರುವ ವಿದ್ಯಾರ್ಥಿಗಳನ್ನು ಕರೆತರಲು ಅನುಕೂಲವಾಗುವಂತೆ ಸ್ಥಳೀಯವಾಗಿ ಕದನ ವಿರಾಮ ಘೋಷಿಸಬೇಕು ಎಂದು ಭಾರತವು, ರಷ್ಯಾ ಮತ್ತು ಉಕ್ರೇನ್ ಅನ್ನು ಒತ್ತಾಯಿಸಿದೆ. ಮರಿಯುಪೋಲ್ ಮತ್ತು ವೊಲ್ನೊವಾಖಾ ನಗರಗಳಿಂದ ನಾಗರಿಕರನ್ನು ತೆರವು ಮಾಡುವುದಕ್ಕಾಗಿ ಈ ನಗರಗಳಲ್ಲಿ ರಷ್ಯಾವು ಶನಿವಾರ ಕದನ ವಿರಾಮ ಘೋಷಿಸಿತ್ತು.

ಹಾರ್ಕಿವ್ ಮತ್ತು ಪಿಸೊಚಿನ್ ನಗರಗಳಲ್ಲಿ ಇದ್ದ ಭಾರತೀಯರಲ್ಲಿ ಹೆಚ್ಚಿನವರನ್ನು ತೆರವು ಮಾಡಲಾಗಿದೆ. ಈಗ, ಸುಮಿ ನಗರದತ್ತ ಗಮನ ಹರಿಸಲಾಗುತ್ತಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ. ಈಶಾನ್ಯ ಉಕ್ರೇನ್‌ನಲ್ಲಿರುವ ಈ ನಗರವು ರಷ್ಯಾ ಗಡಿಗೆ ಹತ್ತಿರದಲ್ಲಿದೆ.


'ವಿದ್ಯಾರ್ಥಿಗಳನ್ನು ತೆರವು ಮಾಡುವುದಕ್ಕಾಗಿ ಇರುವ ವಿವಿಧ ಆಯ್ಕೆಗಳನ್ನು ಪರಿಶೀಲಿಸುತ್ತಿದ್ದೇವೆ. ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವುದೇ ದೊಡ್ಡ ಸವಾಲು. ನಾವು ಅವರ ಜತೆ ಸಂಪರ್ಕದಲ್ಲಿದ್ದೇವೆ. ವಿದ್ಯಾರ್ಥಿಗಳು ಸುರಕ್ಷಿತವಾಗಿ ಹೊರಬರಲು ಇರುವ ಅತ್ಯುತ್ತಮ ಆಯ್ಕೆ ಕದನವಿರಾಮವೇ ಆಗಿದೆ' ಎಂದು ಬಾಗ್ಚಿ ಹೇಳಿದ್ದಾರೆ.

ಸುಮಿಯಲ್ಲಿರುವ ವಿದ್ಯಾರ್ಥಿಗಳು ಶನಿವಾರ ವಿಡಿಯೊವೊಂದನ್ನು ಹಂಚಿಕೊಂಡಿದ್ದಾರೆ. ತಾವು ತಮ್ಮ ಪಾಡಿಗೆ ಮರಿಯುಪೋಲ್ ಕಡೆಗೆ ಸಾಗುವುದಾಗಿಯೂ ಅನಪೇಕ್ಷಿತ ಘಟನೆಗಳು ನಡೆದರೆ ಅದಕ್ಕೆ ಸರ್ಕಾರವೇ ಹೊಣೆ ಎಂದೂ ಈ ವಿಡಿಯೊದಲ್ಲಿ ಅವರು ಹೇಳಿದ್ದರು. ಅದಾದ ಬಳಿಕ, ಬಾಗ್ಚಿ ಅವರು ಮಾತನಾಡಿದ್ದಾರೆ.

ವಿಶೇಷ ಪುಟ 6

ಗುಂಡ್ಲುಪೇಟೆ: ಕ್ವಾರಿಯಿಂದ ಒಬ್ಬರ ಶವ ಹೊರಕ್ಕೆ 6

ಚಿನಕುರಳಿ
ಪ್ರಕಾಶ್ ಶೆಟ್ಟಿ




ಕಸ ವಿಲೇವಾರಿಯಲ್ಲಿ ಬಿಬಿಎಂಪಿ ವಿಫಲ: ಹೈಕೋರ್ಟ್

ಅಧಿಕಾರಿಗಳು ಜೈಲಿಗೆ ಹೋಗುವ ದಿನಗಳು ಹತ್ತಿರವಾಗುತ್ತಿವೆ...!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಬಿಬಿಎಂಪಿ) ಎಲ್ಲವೂ ಸರಿಯಾಗಿಲ್ಲ ಎಂಬುದು ದಿನೇ ದಿನೇ ಮನದಟ್ಟಾಗುತ್ತಿದೆ. ಇಲ್ಲಿರುವ ಅಧಿಕಾರಿಗಳು ಕಾನೂನಿಗಿಂತ ಮೇಲಿದ್ದೇವೆ ಎಂದು ಭಾವಿಸಿದಂತಿದೆ. ಇವರಿಗೆಲ್ಲಾ ಕಾನೂನು ಎಂದರೆ ಏನು ಎಂಬುದನ್ನು ಅರ್ಥ ಮಾಡಿಸುವ ಸಮಯ ಹತ್ತಿರ ಬಂದಿದೆ' ಎಂದು ಹೈಕೋರ್ಟ್ ಗುಡುಗಿದೆ.



'ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವಲ್ಲಿ ಬಿಬಿಎಂಪಿ ವಿಫಲವಾಗಿದೆ' ಎಂದು ಆಕ್ಷೇಪಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

3C ಪುಟ ನೋಡಿ

ನೋಡಿ ನೋಡಿ ಸಾಕಾಗಿದೆ..!

'ಇಲ್ಲಿಗೆ ಬಂದಾಗಿನಿಂದಲೂ ನಾನೂ ನೋಡುತ್ತಲೇ ಇದ್ದೇನೆ. ನ್ಯಾಯಾಲಯದ ಆದೇಶಗಳನ್ನು ನಿರ್ಲಕ್ಷಿಸುವ ಹಾಗೂ ಒಂದಿಲ್ಲೊಂದು ರೀತಿಯಲ್ಲಿ ಸಮಸ್ಯೆಗಳನ್ನು ಬೆಳೆಸಿಕೊಂಡು ಹೋಗುತ್ತಿರುವ ಬಿಬಿಎಂಪಿ ಸುಧಾರಣೆಯಾಗುವ ಹಾದಿಯಲ್ಲಿ ಇಲ್ಲ. ಇದನ್ನು ನೋಡಿ ನೋಡಿ ಸಾಕಾಗಿ ಹೋಗಿದೆ' ಎಂದು ಮುಖ್ಯ ನ್ಯಾಯಮೂರ್ತಿಗಳು ತೀವ್ರ ಅಸಮಾಧಾನ ಹೊರಹಾಕಿದರು.

'ಕೆಲವು ಹಿರಿಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಈಗ ಸಮಯ ಕೂಡಿ ಬಂದಿದೆ. ಅವರಿಗೆ ತಪ್ಪು-ಸರಿಯ ಅನುಭವವಾಗುವಂತೆ ಮಾಡಬೇಕಿದೆ. ಅದರಲ್ಲೂ, ಹೈಕೋರ್ಟ್ ಆದೇಶಗಳನ್ನು ಆಗಿಂದಾಗ್ಗೆ ಉಲ್ಲಂಘಿಸುತ್ತಲೇ ದುರ್ನಡತೆ ಮುಂದುವರಿಸಿರುವ ಮುಖ್ಯ ಆಯುಕ್ತ ಗೌರವ ಗುಪ್ತ ನೆರವಿಗಂತೂ ಈಗ ಕಾನೂನು ಬರುವುದಿಲ್ಲ' ಎಂದು ಕಿಡಿ ಕಾರಿದರು. 'ಮುಖ್ಯ ಆಯುಕ್ತ ಗೌರವ ಗುಪ್ತ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೂ ಮುನ್ನ ಅವರಿಗೆ ವೈಯಕ್ತಿಕ ಪ್ರಮಾಣಪತ್ರ ಸಲ್ಲಿಸಲು ಹತ್ತು ದಿನಗಳ ಕಾಲಾವಕಾಶ ನೀಡಲಾಗಿದೆ. ಮುಂದಿನ ವಿಚಾರಣೆ ನಡೆಯುವ 17ರಂದು ಅವರು ಖುದ್ದು ಹಾಜರಾಗಬೇಕು' ಎಂದು ಸೂಚಿಸಿದೆ.

ರಾಜ್ಯದ ಮಧ್ಯಮಾವಧಿ ವಿತ್ತೀಯ ಯೋಜನೆಯ ಅಂದಾಜು

2025ಕ್ಕೆ ಸಾಲ ₹ 7.38 ಲಕ್ಷ ಕೋಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025–26ನೇ ಆರ್ಥಿಕ ವರ್ಷಕ್ಕೆ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹ 7,38,510 ಕೋಟಿ ತಲುಪಲಿದೆ.

ಆರ್ಥಿಕ ಇಲಾಖೆಯು ವಿಧಾನಮಂಡಲದಲ್ಲಿ ಶುಕ್ರವಾರ ಮಂಡಿಸಿರುವ 2022–26ರ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಈ ಅಂದಾಜು ಮಾಡಲಾಗಿದೆ.

2021–22ನೇ ಆರ್ಥಿಕ ವರ್ಷದ ಪರಿಷ್ಕೃತ ಅಂದಾಜಿನ ಪ್ರಕಾರ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹ 4,58,042 ಕೋಟಿ. 2022–23ನೇ ಆರ್ಥಿಕ ವರ್ಷದಲ್ಲಿ ಸಾಲದ ಪ್ರಮಾಣ ₹60,334 ಕೋಟಿಯಷ್ಟು ಹೆಚ್ಚಲಿದ್ದು, ₹ 5,18,366 ಕೋಟಿ ತಲುಪಲಿದೆ ಎಂಬ ಅಂದಾಜು ವರದಿಯಲ್ಲಿದೆ.

ಮುಂದಿನ ನಾಲ್ಕು ಆರ್ಥಿಕ ವರ್ಷಗಳಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತದಲ್ಲಿ ₹ 2,80,468 ಕೋಟಿಯಷ್ಟು ಹೆಚ್ಚಳವಾಗಲಿದೆ. ಪ್ರಸಕ್ತ ವರ್ಷದಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 26.61ರಷ್ಟಿದೆ. ಮುಂದಿನ ವರ್ಷದಿಂದ ಗಣನೀಯ ಏರಿಕೆಯಾಗಲಿದ್ದು, 2025ರಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತವು ರಾಜ್ಯದ ಆಗಿನ ಜಿಎಸ್‌ಡಿಯ ಶೇ 27.55ರಷ್ಟಾಗಲಿದೆ ಎಂದು ಆರ್ಥಿಕ ಇಲಾಖೆ ಅಂದಾಜಿಸಿದೆ.

ಈಗ ರಾಜ್ಯ ಸರ್ಕಾರವು ವಾರ್ಷಿಕ ₹ 27,161 ಕೋಟಿ ಬಡ್ಡಿ ಪಾವತಿಸುತ್ತಿದೆ. 2025–26ರ ವೇಳೆಗೆ ಸರ್ಕಾರವು ಪಡೆದ ಸಾಲದ ಮೇಲಿನ ಬಡ್ಡಿಯ ಮೊತ್ತ ₹ 42,789 ಕೋಟಿ ತಲುಪಲಿದೆ.

ಕುಸಿತದ ಆತಂಕ: ರಾಜ್ಯ ಸರ್ಕಾರದ ಒಟ್ಟು ಸಾಲದ ಪ್ರಮಾಣದಲ್ಲಿನ ಹೆಚ್ಚಳಕ್ಕೆ ಹೋಲಿಸಿದರೆ ವರಮಾನ ಸಂಗ್ರಹಣೆಯಲ್ಲಿನ ಏರಿಕೆ ಕಡಿಮೆ ಇರಲಿದೆ ಎಂದು ಅಂದಾಜಿನಲ್ಲಿ ಹೇಳಲಾಗಿದೆ. ಜಿಎಸ್‌ಡಿಪಿಗೆ ಹೋಲಿಸಿದರೆ ಸ್ವೀಕೃತಿಗಳ ಪ್ರಮಾಣವು ಕುಸಿಯುತ್ತಾ ಸಾಗಲಿದೆ.

2021–22ರ ಪರಿಷ್ಕೃತ ಅಂದಾಜಿನ ಪ್ರಕಾರ, ರಾಜ್ಯದ ರಾಜಸ್ವ ಸ್ವೀಕೃತಿಗಳ ಮೊತ್ತ ₹ 1,89,579 ಕೋಟಿ. 2022–23ರಲ್ಲಿ ರಾಜಸ್ವ ಸ್ವೀಕೃತಿಯಲ್ಲಿ ಕೇವಲ 309 ಕೋಟಿಯಷ್ಟು ಹೆಚ್ಚಳವಾಗಲಿದ್ದು, ₹ 1,89,888 ಕೋಟಿ ತಲುಪಲಿದೆ. 2025–26ರಲ್ಲಿ ರಾಜ್ಯದ ಒಟ್ಟು ರಾಜಸ್ವ ಸ್ವೀಕೃತಿಗಳ ಮೊತ್ತ ₹ 2,37,868 ಕೋಟಿ ತಲುಪಬಹುದು ಎಂದು ಆರ್ಥಿಕ ಇಲಾಖೆ ಹೇಳಿದೆ.

8ನೇ ಪುಟ ನೋಡಿ

ಕೇಂದ್ರದಂತೆ ಆಸ್ತಿ ನಗದೀಕರಣ


'ಸರ್ಕಾರಿ ಸ್ವತ್ತುಗಳ ಆಸ್ತಿ ನಗದೀಕರಣದ ಮೂಲಕ ಮುಂದಿನ ದಿನಗಳಲ್ಲಿ ಸರ್ಕಾರದ ಸ್ವೀಕೃತಿಗಳನ್ನು ಹೆಚ್ಚಿಸಿಕೊಳ್ಳಬಹುದು ಎಂಬ ಪ್ರಸ್ತಾವವನ್ನು ಸಮಿತಿಯು ಒಪ್ಪಿಕೊಂಡಿದೆ. ಹೂಡಿಕೆ ಹಿಂತೆಗೆತದಿಂದ ರಾಜಸ್ವ ಹೆಚ್ಚಿಸಿಕೊಳ್ಳುವ ಹಲವು ಆಯ್ಕೆಗಳನ್ನೂ ಗಮನಿಸಲಾಗಿದೆ' ಎಂದು ಮಧ್ಯಮಾವಧಿ ವಿತ್ತೀಯ ಯೋಜನೆ ಹೇಳಿದೆ.

ರಾಜ್ಯ ಸರ್ಕಾರದ ಸಾಲದ ಮೊತ್ತ

₹1,89,579 ಕೋಟಿ 2021-22

₹1,89,888 ಕೋಟಿ 2022-23

₹2,37,868 ಕೋಟಿ 2025-26 (ಅಂದಾಜು)



ಅಂತರರಾಷ್ಟ್ರೀಯ ಕ್ರೀಡಾಪಟು ಬಿ.ಜಿ.ಸಂದೇಶ್

ಅಂಗವೈಕಲ್ಯದ ನೋವು ಮರೆಸಿದ ಕ್ರೀಡೆ

ಪ್ರಜಾವಾಣಿ ವಾರ್ತೆ



ಮನೋನಂದನ ಕೇಂದ್ರ ಕೃಷ್ಣರಾವ್ ಉದ್ಯಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಾಕಥಾನ್‌ಗೆ ಅಂಗವಿಕಲ ಕ್ರೀಡಾಪಟು ಬಿ.ಜಿ.ಸಂದೇಶ್ ಚಾಲನೆ ನೀಡಿದರು. ಹೈಕೋರ್ಟ್ ನ್ಯಾಯಾಧೀಶ ಪಿ.ಎಸ್‌.ದಿನೇಶ್, ಶಾಸಕ ರವಿ ಸುಬ್ರಹ್ಮಣ್ಯ, ಮನೋನಂದನ ಕೇಂದ್ರದ ಅಧ್ಯಕ್ಷ ಮಿಲಿಂದ್ ಗೋಖಲೆ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಅಂಗವೈಕಲ್ಯವನ್ನು ಶಾಪವೆಂದು ಭಾವಿಸದೆ ಛಲದಿಂದ ಮುಂದೆ ಸಾಗಬೇಕು. ಆಗ ಜೀವನದಲ್ಲಿ ಎಂತಹ ನ್ಯೂನತೆಯನ್ನಾದರೂ ಮೆಟ್ಟಿ ನಿಂತು ಸಾಧನೆ ಮಾಡಬಹುದು' ಎಂದು ಅಂಗವಿಕಲ ಕ್ರೀಡಾಪಟು ಬಿ.ಜಿ. ಸಂದೇಶ್ ತಿಳಿಸಿದರು. ಮನೋನಂದನ ಕೇಂದ್ರವು ಬೆಳ್ಳಿ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ನೂತನ ಪ್ರಕಲ್ಪಗಳ ಚಾಲನೆ ಕಾರ್ಯಕ್ರಮದಲ್ಲಿ ಶನಿ ವಾರ ಅವರು ಜೀವನಾನುಭವ ಹಂಚಿಕೊಂಡರು.

'ಜನಿಸುವಾಗಲೇ ನನ್ನ ಕಾಲುಗಳಲ್ಲಿ ಸ್ವಾಧೀನ ಇರಲಿಲ್ಲ. ಹೀಗಾಗಿ ತೆವಳಿಕೊಂಡೆ ಶಾಲೆ ಹಾಗೂ ಕಾಲೇಜುಗಳಿಗೆ ಹೋಗುತ್ತಿದ್ದೆ. ಸೇನೆಗೆ ಸೇರಿ ದೇಶ ಸೇವೆ ಮಾಡಬೇಕೆಂಬುದು ಬಾಲ್ಯದ ಕನಸಾಗಿತ್ತು. ಅದು ಅಸಾಧ್ಯವೆಂಬುದು ಕ್ರಮೇಣ ಮನದಟ್ಟಾಯಿತು. ಹಾಗಂತ ಸುಮ್ಮನೆ ಕೂರಲಿಲ್ಲ. ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಂಡೆ. ಅವಿ ರತ ಪರಿಶ್ರಮದಿಂದ ಅಂತರ ರಾಷ್ಟ್ರೀಯ ಕೂಟಗಳಲ್ಲಿ ಪದಕಗಳನ್ನು ಗೆದ್ದು ದೇಶದ ಹಿರಿಮೆ ಹೆಚ್ಚಿಸಿದೆ. ಕ್ರೀಡೆ ನನ್ನೆಲ್ಲಾ ನೋವುಗಳನ್ನು ಮರೆಯುವಂತೆ ಮಾಡಿತು' ಎಂದರು.

ಬಸವನಗುಡಿಯ ರಾಮಕೃಷ್ಣಮಠದ ಅಧ್ಯಕ್ಷ ಸ್ವಾಮಿ ನಿತ್ಯಸ್ಥಾನಾನಂದಜೀ ಮಹಾರಾಜ್, 'ಎಲ್ಲರೂ ಸಮಾಜಕ್ಕೆ ಸೇವೆ ಸಲ್ಲಿಸುವ ಮನೋಭಾವ ಮೈಗೂಡಿಸಿಕೊಳ್ಳಬೇಕು. ಸಮಾಜದ ಆರೋಗ್ಯ ಕಾಪಾಡಬೇಕಾದುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ. ಆಗ ಮಾತ್ರ ಶಾಂತಿ ಮತ್ತು ಸಹಭಾಳ್ವೆಯ ಜೀವನ ಸಾಧ್ಯ' ಎಂದು ಹೇಳಿದರು.

ಶಾಸಕ ರವಿ ಸುಬ್ರಹ್ಮಣ್ಯ, 'ರಾಷ್ಟ್ರೀಯ ಸ್ವಯಂ ಸೇವಾ ಸಂಘವು ಹಲವು ಸೇವಾ ಕಾರ್ಯಗಳ ಮೂಲಕ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಅಂಗವಿಕಲ ಮಕ್ಕಳನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ದಿಸೆಯಲ್ಲೂ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಮನೋನಂದನ ಕೇಂದ್ರ ಅದಕ್ಕೊಂದು ಉದಾಹರಣೆ' ಎಂದು ತಿಳಿಸಿದರು.

'ಮನೋನಂದನ ಕೇಂದ್ರದ ಈಗಿನ ಕಟ್ಟಡದ ಉನ್ನತೀಕರಣ ಕಾರ್ಯವಾಗಬೇಕು. ಅದಕ್ಕೆ ಅಗತ್ಯ ನೆರವು ನೀಡಲಾಗುತ್ತದೆ. ಅಂಗವಿಕಲ ಮಕ್ಕಳು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದನ್ನು ಪ್ರೇರೇಪಿಸಲು ಅವರಿಗಾಗಿಯೇ ವಿಶೇಷ ಉದ್ಯಾನ ಸ್ಥಾಪಿಸಲು ನಿರ್ಧರಿಸಿದ್ದೇವೆ' ಎಂದರು.

ಮಡಿವಾಳ ವಧು ವರರ ಸಮಾವೇಶ 13ಕ್ಕೆ

ಬೆಂಗಳೂರು: ರಾಜ್ಯ ಮಡಿವಾಳರ ಸಂಘದ ವತಿಯಿಂದ ಮಡಿವಾಳ ಸಮುದಾಯದ ವಧು-ವರರ ಸಮಾವೇಶವನ್ನು ಇದೇ 13ರಂದು ಬೆಳಿಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. 'ರಾಜ್ಯದ ವಿವಿಧ ಜಿಲ್ಲೆಗಳಿಗೆ ಸದ್ಯ 250ಕ್ಕೂ ಹೆಚ್ಚು ವಧು-ವರರು ನೋಂದಣಿ ಮಾಡಿಕೊಂಡಿದ್ದಾರೆ. ಸಮುದಾಯದವರ ಅನುಕೂಲಕ್ಕಾಗಿ ಈ ವೇದಿಕೆ ರೂಪಿಸಿದ್ದೇವೆ. ಸಮುದಾಯದ ವಧು-ವರರು ಹಾಗೂ ಅವರ ಪೋಷಕರು ಸಮಾವೇಶದಲ್ಲಿ ಭಾಗವಹಿಸಬಹುದು' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಯಲ್ಲಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಂಘದ ಅಧ್ಯಕ್ಷ ಸಿ.ನಂಜಪ್ಪ,'ಅತಿ ಹಿಂದುಳಿದ ಮಡಿವಾಳ ಸಮುದಾಯವನ್ನು ರಾಜ್ಯ ಬಜೆಟ್‌ನಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಸಮುದಾಯಕ್ಕೆ ನೆರವಾಗದಿದ್ದರೆ, ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು' ಎಂದು ಎಚ್ಚರಿಸಿದರು. ಸಮಾವೇಶದ ಸ್ಥಳ: ಕರ್ನಾಟಕ ರಾಜ್ಯ ಮಡಿವಾಳರ ಸಂಘ, ಶೇಷಾದ್ರಿಪುರ

ಸಂಪರ್ಕ: 9448974251

ಚೇತನ್ ವಿರುದ್ಧ ಚಾರ್ಜ್‌ಶೀಟ್: ಅನುಮತಿ ಕೋರಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣ್ಯದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎನ್ನಲಾದ ಪ್ರಕರಣದಲ್ಲಿ ನಟ ಚೇತನ್ ವಿರುದ್ಧ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಲು ಬಸವನಗುಡಿ ಠಾಣೆ ಪೊಲೀಸರು, ಗೃಹ ಇಲಾಖೆ ಅನುಮತಿ ಕೋರಿದ್ದಾರೆ. ವಿಪ್ರ ಯುವ ವೇದಿಕೆ ಅಧ್ಯಕ್ಷ ಪವನ್ ಕುಮಾರ್ ಶರ್ಮಾ ಎಂಬುವರು ಚೇತನ್ ವಿರುದ್ಧ ದೂರು ನೀಡಿದ್ದರು. ಧಾರ್ಮಿಕ ಭಾವನೆ ಕೆರಳಿಸುವುದು (ಐಪಿಸಿ 129(ಎ) ಹಾಗೂ ದ್ವೇಷ ಭಾವನೆ ಹೆಚ್ಚಿಸುವ (ಐಪಿಸಿ 153 (ಬಿ) ಆರೋಪದಡಿ ಎಫ್‌ಐಆರ್ ದಾಖಲಾಗಿತ್ತು. 'ಪ್ರಕರಣ ಸಂಬಂಧ ಚೇತನ್ ಅವರನ್ನು ವಿಚಾರಣೆ ನಡೆಸಲಾಗಿದೆ. ಅವಹೇಳನಕಾರಿ ಹೇಳಿಕೆಯ ವಿಡಿಯೊಗಳನ್ನು ಪರಿಶೀಲಿಸಲಾಗಿದೆ. ಇಂಥ ಪ್ರಕರಣದಲ್ಲಿ ಆರೋಪಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಸರ್ಕಾರದ ಅನುಮತಿ ಬೇಕು. ಹೀಗಾಗಿ, ಗೃಹ ಇಲಾಖೆಗೆ ಪತ್ರ ಬರೆಯಲಾಗಿದೆ. ಅದಕ್ಕೆ ಪ್ರತಿಕ್ರಿಯೆ ಬರಬೇಕಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಕೊಲೆ ಯತ್ನ ಪ್ರಕರಣ: ವಕೀಲ ಜಗದೀಶ್‌ಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಯತ್ನ ಪ್ರಕರಣದಡಿ ಬಂಧಿಸಲಾಗಿರುವ ವಕೀಲ ಜಗದೀಶ್ ಕೆ.ಎನ್. ಮಹಾದೇವ್ ಅವರಿಗೆ ಜಾಮೀನು ಮಂಜೂರು ಮಾಡಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

ವಕೀಲರೊಬ್ಬರ ಮರ್ಮಾಂಗಕ್ಕೆ ಒದ್ದು ಕೊಲೆಗೆ ಯತ್ನಿಸಿದ ಆರೋಪದಡಿ ಜಗದೀಶ್ ಅವರನ್ನು ಪೊಲೀಸರು ಬಂಧಿಸಿದ್ದರು. ಈ ಪ್ರಕ ರಣದಲ್ಲಿ ಜಗದೀಶ್ ಅವರಿಗೆ ಷರ ತ್ತುಬದ್ಧ ಜಾಮೀನು ಸಿಕ್ಕಿದೆ. ಜಾತಿ ನಿಂದನೆ ಪ್ರಕರಣದ ಜಾಮೀನು ಅರ್ಜಿ ವಿಚಾರಣೆ ಮಾ.7ಕ್ಕೆ ಮುಂದೂಡಯಾಗಿದೆ.

ನಿಧನ ವಾರ್ತೆ

ಡಿ.ಎನ್. ವಿಶಾಲಾಕ್ಷಿ



ಬೆಂಗಳೂರು: ನಗರದ ಮಲ್ಲೇಶ್ವರದ ಡಿ.ಎನ್. ವಿಶಾಲಾಕ್ಷಿ (89) ಅವರು ಶನಿವಾರ ನಿಧನರಾದರು.

ಇವರು, ಕರ್ನಾಟಕ ವಿದ್ಯುತ್ ಮಂಡಳಿ ಸದಸ್ಯರಾಗಿ ಕೆಲಸ ಮಾಡಿದ್ದ ದಿವಂಗತ ಕೆ. ಎನ್. ನಾಗರಾಜ್ ಪತ್ನಿ. ವಿಶಾಲಾಕ್ಷಿ ಅವರಿಗೆ ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ವಹಣೆ ಮತ್ತು ನೆಲದ ಅಡಿಯಲ್ಲಿ ವಿದ್ಯುತ್ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಇದೇ 6 ಮತ್ತು 7ರಂದು ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ವಿಘ್ನೇಶ್ವರ ನಗರ, ಸಂಜೀವಿನಿ ನಗರ, ಸಣ್ಣಕ್ಕಿ ಬಯಲು, ರಾಮನ್ ಕಾಲೇಜು, ವೃಷಭಾವತಿ ನಗರ, ಮಾರುತಿ ನಗರ, ಕೆಂಪೇಗೌಡ ನಗರ, ಗಾಂಧಿ ನಗರ, ಉಲ್ಲಾಳ ನಗರ, ಉತ್ತರಹಳ್ಳಿ ರಸ್ತೆ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ಕುವೆಂಪು ಮುಖ್ಯ ರಸ್ತೆ, ಜಿ.ಕೆ. ಗಲ್ಲಿ, ಗಂಗಾನಗರ, ಯಮುನಾ ನಗರ ಸ್ಕೂಲ್, ಸರ್ ಎಂ.ವಿ. 5ನೇ ಬ್ಲಾಕ್, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ, ಬಿಡಿಎ ಕಾಲೋನಿ, ಮುನೇಶ್ವರ ಬಡಾವಣೆ, ಎನ್‌ಎಸ್ ಬಡಾವಣೆ, ಕೆ.ಜಿ. ನಗರ, ರಾಜೀವ್ ಗಾಂಧಿ ನಗರ, ಲಗ್ಗೆರೆ ಮುಖ್ಯ ರಸ್ತೆ, ವಿಧಾನಸೌಧ ಬಡಾವಣೆ, ಎಂಇಐ ಕಾಲೋನಿ, ಪ್ರೀತಿ ನಗರ, ಆರ್‌ಎಂವಿ ಎರಡನೇ ಹಂತ, ಡಾಲರ್ಸ್ ಕಾಲೋನಿ, ಸಿ.ಎಂ. ಹಳ್ಳಿ, ಜಲದರ್ಶಿನಿ, ಎ.ಕೆ. ಕಾಲೋನಿ, ಮತ್ತಿಕೆರೆ, ಆರ್‌ಎಂವಿ ಎರಡನೇ ಹಂತ, ನ್ಯೂ ಬಿಇಎಲ್ ರಸ್ತೆ, ಎಲ್‌.ಜಿ. ಹಳ್ಳಿ, ನೇತಾಜಿ ನಗರ, ಸಂಜಯ ನಗರ, ಎಲ್‌.ಜಿ. ಹಳ್ಳಿ 80 ಅಡಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

‘ನಿಷ್ಕರ್ಷ’ ಸಿನಿಮಾ ನೋಡಿ ಕೃತ್ಯ

ಎಸಿ ಡಕ್ಟ್‌ನಿಂದ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಠಾಣೆ ವ್ಯಾಪ್ತಿಯ ಬಟ್ಟೆ ಅಂಗಡಿಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿ ಆನಂದ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಜಿಗಣಿ ನಿವಾಸಿ ಆನಂದ್, ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ಬಟ್ಟೆ ಅಂಗಡಿಯೊಂದರಲ್ಲಿ ಜ. 31ರಂದು ಕೃತ್ಯ ಎಸಗಿ ಪರಾರಿಯಾಗಿದ್ದ. ಕಳ್ಳತನ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ, ವ್ಯವಸ್ಥಿತವಾಗಿ ಸಂಚು ರೂಪಿಸಿ ಕೃತ್ಯ ಎಸಗುತ್ತಿದ್ದ. ಬಟ್ಟೆ ಅಂಗಡಿಗೆ ಹಲವು ಬಾರಿ ಭೇಟಿ ನೀಡಿದ್ದ ಆರೋಪಿ, ಯಾವ ರೀತಿ ಕಳ್ಳತನ ಮಾಡಬೇಕೆಂದು ತಿಳಿದುಕೊಂಡಿದ್ದ. ಕಳ್ಳತನದ ನಂತರ, ಮಳಿಗೆಯಿಂದ ಪರಾರಿಯಾಗುವುದು ಹೇಗೆ ಎಂಬುದನ್ನೂ ಯೋಚಿಸಿದ್ದ’ ಎಂದೂ ತಿಳಿಸಿದರು.

ಕಿಟಕಿ ಸರಳು ಮುರಿದು ಒಳನುಗ್ಗಿದ್ದ: ‘ಬಹುಮಹಡಿ ಕಟ್ಟಡದಲ್ಲಿ ಬಟ್ಟೆ ಮಳಿಗೆ ಇದೆ. ಐದನೇ ಮಹಡಿ ಕಿಟಕಿಯ ಕಬ್ಬಿಣದ ಸರಳು ಮುರಿದಿದ್ದ ಆರೋಪಿ, ಅದರ ಮೂಲಕವೇ ಮಳಿಗೆಯೊಳಗೆ ನುಗ್ಗಿದ್ದ’ ಎಂದು ಪೊಲೀಸರು ಹೇಳಿದರು.

‘ನಗದು ವಿಭಾಗದ ಡ್ರಾನಲ್ಲಿಟ್ಟಿದ್ದ ₹ 6.50 ಲಕ್ಷವನ್ನು ಆರೋಪಿ ಕದ್ದಿದ್ದ. ನಂತರ, ಮಳಿಗೆಯ ಹವಾನಿಯಂತ್ರಕ (ಎ.ಸಿ) ಡಕ್ಟ್‌ನಿಂದ ಹೊರಗೆ ಬಂದು ಪರಾರಿಯಾಗಿದ್ದ. ಕೃತ್ಯದ ದೃಶ್ಯಗಳು ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಕ್ಯಾಮೆರಾದ ಡಿವಿಆರ್ ಅನ್ನೇ ಆರೋಪಿ ಕದ್ದೊಯ್ದಿದ್ದ. ಈಗ ₹ 5.8 ಲಕ್ಷ ನಗದು ಹಾಗೂ ಡಿವಿಆರ್ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

‘ಭಾರತಿನಗರ, ಜೀವನ್‌ಭಿಮಾನಗರ, ಮೈಕೊ ಲೇಔಟ್, ಮಂಡ್ಯ, ಶಿವಮೊಗ್ಗ ಸೇರಿ ವಿವಿಧ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಕಳ್ಳತನ ಎಸಗಿರುವ ಮಾಹಿತಿ ಲಭ್ಯವಾಗಿದೆ.

ಸಿನಿಮಾ ನೋಡಿ ಕೃತ್ಯಕ್ಕೆ ಸಂಚು: ‘ಆರೋಪಿ ಆನಂದ್, ‘ನಿಷ್ಕರ್ಷ’ ಸಿನಿಮಾವನ್ನು ಹಲವು ಬಾರಿ ನೋಡಿದ್ದ. ಬ್ಯಾಂಕ್‌ಗೆ ನುಗ್ಗಿದ್ದ ಕಳ್ಳರು ಹವಾನಿಯಂತ್ರಕ ವ್ಯವಸ್ಥೆಯ ಕೊಳವೆ ಮೂಲಕ ಪರಾರಿಯಾಗುವ ದೃಶ್ಯ ಸಿನಿಮಾದಲ್ಲಿದೆ. ಅದನ್ನು ನೋಡಿಯೇ ಆರೋಪಿ, ಮಳಿಗೆಯಿಂದ ಪರಾರಿಯಾಗಲು ಇದೇ ವಿಧಾನ ಅನುಸರಿಸಿದ್ದ. ಈ ಬಗ್ಗೆ ಆತನೇ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಮಹಿಳೆಯರ ವಿಡಿಯೊ ಚಿತ್ರೀಕರಿಸುತ್ತಿದ್ದ ವೃದ್ಧ

ಬೆಂಗಳೂರು: ಮಹಿಳೆಯರ ಖಾಸಗಿ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸುತ್ತಿದ್ದ ಆರೋಪದಡಿ ನಾರಾಯಣಗೌಡ (60) ಎಂಬಾತನನ್ನು ಪೀಣ್ಯ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಯಾದ ನಾರಾಯಣಗೌಡ, ತನ್ನ ಅಕ್ಕ-ಪಕ್ಕದ ಮನೆಗಳ ಮಹಿಳೆಯರು ಹಾಗೂ ಯುವತಿಯರ ಖಾಸಗಿ ವಿಡಿಯೊ ಚಿತ್ರೀಕರಿಸುತ್ತಿದ್ದ. ಆತನ ವಿರುದ್ಧ ಪ್ರಕರಣ ದಾಖಲಾಗಿತ್ತು. ವಶಕ್ಕೆ ಪಡೆದು ಪರಿಶೀಲಿಸಿದಾಗ, ಆತನ ಮೊಬೈಲ್‌ನಲ್ಲಿ ಫೋಟೊ ಹಾಗೂ ವಿಡಿಯೊಗಳು ಪತ್ತೆಯಾದವು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಿಟಕಿಯಲ್ಲಿ ಇಣುಕಿ ನೋಡುತ್ತಿದ್ದ ಆರೋಪಿ, ಮಹಿಳೆಯರ ಖಾಸಗಿ ಫೋಟೊಗಳನ್ನು ಮೊಬೈಲ್‌ನಲ್ಲಿ ಕ್ಲಿಕ್ಕಿಸುತ್ತಿದ್ದ. ವಿಡಿಯೊ ಸಹ ಚಿತ್ರೀಕರಿಸುತ್ತಿದ್ದನೆಂದು ಗೊತ್ತಾಗಿದೆ. ಮನೆಯೊಂದರಲ್ಲಿ ಇಣುಕಿ ನೋಡುತ್ತಿದ್ದಾಗಲೇ ಆತನನ್ನು ನಿವಾಸಿಯೊಬ್ಬರು ನೋಡಿ ಬೆನ್ನಟ್ಟಿದ್ದರು. ಆದರೆ, ಆರೋಪಿ ತಪ್ಪಿಸಿಕೊಂಡಿದ್ದ.’

ಆರೋಪಿ ವಾಸವಿದ್ದ ಪ್ರದೇಶದ ಹಲವು ಮಹಿಳೆಯರು, ಯುವತಿಯರ ಫೋಟೊ ಹಾಗೂ ವಿಡಿಯೊಗಳು ಮೊಬೈಲ್‌ನಲ್ಲಿವೆ ಎಂದೂ ತಿಳಿಸಿವೆ.

₹ 50 ಲಕ್ಷ ಮೌಲ್ಯದ ಡ್ರಗ್ಸ್: 2 ಬಂಧನ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಇಬ್ಬರು ನೈಜೀರಿಯಾ ಪ್ರಜೆಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಕ್ರಿಸ್ಟಿಯನ್ ಇಯ್ಕಾ, ಜಾನ್ ಒಬಿನಾ ಬಂಧಿತರು. ಅವರಿಂದ ₹ 50 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಬಿ.ಕಾಂ ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಜೀವನ್‌ಭಿಮಾನಗರ ಠಾಣೆ ವ್ಯಾಪ್ತಿಯಲ್ಲಿ ಪೇಯಿಂಗ್ ಗೆಸ್ಟ್ ಕಟ್ಟಡವೊಂದರ ಐದನೇ ಮಹಡಿಯಿಂದ ಬಿದ್ದು ಭವ್ಯಾ (19) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಭವ್ಯಾ

'ಮುಳಬಾಗಿಲಿನ ಭವ್ಯಾ, ಕೋರಮಂಗಲದ ಜ್ಯೋತಿ ನಿವಾಸ್ ಕಾಲೇಜಿನಲ್ಲಿ ಬಿ.ಕಾಂ ಪದವಿ ಕೋರ್ಸ್‌ನ ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅಮರಜ್ಯೋತಿ ನಗರದ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಉಳಿದುಕೊಂಡಿದ್ದ ಅವರು, ಅಲ್ಲಿಂದಲೇ ಕಾಲೇಜಿಗೆ ಹೋಗಿ ಬರುತ್ತಿದ್ದರು' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ಹೇಳಿದರು.

‘ಪೇಯಿಂಗ್ ಗೆಸ್ಟ್ ಕಟ್ಟಡದ ಐದನೇ ಮಹಡಿಗೆ ಶುಕ್ರವಾರ ಸಂಜೆ ಹೋಗಿದ್ದ ಭವ್ಯಾ, ಅಲ್ಲಿಂದಲೇ ಜಿಗಿದಿದ್ದರು. ನೆಲಮಹಡಿಗೆ ಬಿದ್ದು ತೀವ್ರ ಗಾಯಗೊಂಡ ಅವರು ಮೃತಪಟ್ಟಿದ್ದಾರೆ. ಈ ಬಗ್ಗೆ ಸ್ನೇಹಿತೆಯರ ಹೇಳಿಕೆ ಪಡೆಯಲಾಗಿದೆ’ ಎಂದೂ ತಿಳಿಸಿದರು.

ಮಗಳ ಆತ್ಮಹತ್ಯೆ ಸಂಬಂಧ ಪೋಷಕರು ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಜೀವನ್‌ಭಿಮಾನಗರ ಪೊಲೀಸರು, ತನಿಖೆ ಮುಂದುವರಿಸಿದ್ದು ಜ್ಯೋತಿ ನಿವಾಸ್ ಕಾಲೇಜಿನಲ್ಲೂ ಪರಿಶೀಲಿಸಿದ್ದಾರೆ.

‘ಬಿ.ಕಾಂ ಪದವಿಯ ಮೊದಲ ವರ್ಷದ ಪರೀಕ್ಷೆ ಬರೆಯಲು ಮಗಳು ಕಾಲೇಜಿಗೆ ಹೋಗಿದ್ದಳು. ನಕಲು ಮಾಡಿದರೆಂಬ ಕಾರಣಕ್ಕೆ ಮಗಳನ್ನು ಕಾಲೇಜಿನ ಆಡಳಿತ ಮಂಡಳಿ ಡಿಬಾರ್ ಮಾಡಿದೆ. ಇದರಿಂದ ನೊಂದಿದ್ದ ಮಗಳು, ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ ಮರಳಿದ ಬಳಿಕ ನಮಗೆ ಕರೆ ಮಾಡಿದ್ದಳು. ‘ನನ್ನನ್ನು ಕಾಲೇಜಿನಿಂದ ಡಿಬಾರ್ ಮಾಡಿದ್ದಾರೆ. ನನಗೆ ಬದುಕು ಇಷ್ಟವಿಲ್ಲ ಎಂದು ಹೇಳಿ ಕರೆ ಕಡಿತಗೊಳಿಸಿದ್ದಳು. ಮತ್ತೆ ಕರೆ ಮಾಡಿದರೂ ಸ್ವೀಕರಿಸಿರಲಿಲ್ಲ. ಗಾಬರಿಯಾಗಿ, ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ ಬಂದಿದ್ದೆವು. ಅಷ್ಟರಲ್ಲೇ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಳು ಎಂದು ಪೋಷಕರು ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ಆರೋಪ ತಳ್ಳಿ ಹಾಕಿರುವ ಜ್ಯೋತಿ ನಿವಾಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಟಿ.ಎಸ್. ವಾಸುದೇವಮೂರ್ತಿ, ‘ನಾವು ಯಾವುದೇ ವಿದ್ಯಾರ್ಥಿಯನ್ನು ಡಿಬಾರ್ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

‘ನಕಲು ಮಾಡುತ್ತಿದ್ದ ವೇಳೆ ಸಿಕ್ಕಿಬಿದ್ದಿದ್ದ ಭವ್ಯಾ ಅವರಿಗೆ ಬುದ್ಧಿವಾದ ಹೇಳಲಾಗಿತ್ತು. ಮುಂದಿನ ವರ್ಷ ಪರೀಕ್ಷೆ ಬರೆಯುವಂತೆ ತಿಳಿ ಹೇಳಿ ಕಾಲೇಜಿನಿಂದ ಅವರನ್ನು ಕಳುಹಿಸಲಾಗಿತ್ತು. ಡಿಬಾರ್ ಮಾಡಿಲ್ಲ. ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವುದು ದುಃಖದ ಸಂಗತಿ’ ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

REQUIRED ACCOUNTS (B.Com) with past experience in Construction companies & knowledge of Tally, MS Excel and word. Phone: 9900182163 Email: info@smsconstructions.co.in

WANTED for CA's Office
A CA's firm in Malleshwaram invites applications from candidates having experience of handling Income Tax, GST and Audit matters.
Contact: e-mail: vishnuram@vishnuram.in
Walk-in: Call 080-23568910 23568911

Cook

WANTED GOOD COOK and ASSISTANT COOK who can prepare Both North and South Indian Dishes for NEW RESORT in SAKLESHAPUR. Contact: 9448007111

KERALA FAMILY wants a cook proficient in north south dishes contact 9515131345

Drivers

WANTED DRIVER for Car & Goods Bolero Vehicle, in and around Nandini Layout, Contact after 9am. Ph: 9845030795/ 23377027

Marketing & Sales

REQUIRED LADY STENO /RECEPTIONIST with 1- 3 years Experience For Yeshwanthpur. Please send email to hiren5665@gmail.com

Part-Time Jobs

JOB MULTIPLE Openings in MNC Part/ Full time for Home Makers, Self Employed, VRS, Retired, working professionals Age 25-70. Contact: 9986074281

THOSE WHO Are Lost Job, MNC Provide Work From Home 30 to 35K: 7019215243/ 9886641282

Receptionist/ Secretary

LADY ASSISTANT for Dental Clinic- Near Ulsoor Lake, weekdays morning 9 to evening 8 with break. Scheduling, Assisting and maintaining, 8000/- to 10,000/-. Contact: 95385-67072

"REQUIRED FEMALE-RECEPTIONIST" for(Day-& Night shift)'Shekhar Hospital, Bull-temple-Road, Bangalore-19, Good-Salary offered. Contact: 080-22421144/ 9901927970

OTHERS

Medical

MEDICAL REGISTRATION BAMS, BHMS, BNYS, BUMS, BPT, ANM, GNM. B.Sc Nursing B.Sc. MLT, D.Pharma, B.Pharma, and All Paramedical Course, (Only for Practitioners) SHREE DEVI INSTITUTE, BANGALOREMob: 9591725892/ 9611096435

MATRIMONIAL

Brides Wanted

Brahmin

BRIDE WANTED
Divorced without issues, Smartha Brahmin Groom, 1989 born, 5'6 Inch, MBA Education Qualification, work in Central Govt. GST Dept. in Bengaluru. Seeks a suitable Second Marriage Girl without issues only born from 1989 to 1995 from any Thrimathasta Brahmins community, from a trust worthy, well educated & good Family background. Girl must be Graduate/ Post graduate. Working or non working profession is ok for us.
Contact: 8762185170

SUITABLE ANY Brahmin Girl South/ North for Second Marriage Not Consummated 40/ 5.8/ BE/ SWE/ 15 Lakh, Bangalore. 9483658921

Hindu

IIT+ISB-MBA 30/5'6' Yadav 45 LPA seeks PQ Bangalore working girl. Father CL-1 officer. M:8319605368

Kannada

BRIDE WANTED
35 year old Male Vokkaliga fair & handsome, B.Sc qualified income upto Rs. 75,000/- per month. Seeking Alliance from Vokkaliga Community Girl.
Contact: 8618101073

BRAHMIN, 30, 6' MCA Bangalore, good networth looking for suitable match. contact Ushodhaya- 9611919477

Muslim

DUBAI BASED Sunni Muslim family is looking for a suitable match for their 34 year Old MBBS, only son,Father Retired from Sharjah,Now Settled in Bangalore.Only Well Established,Educated,Serious marriage seekers may Contact (080-69074922)

1988 BORN Divorced Sunni Muslim MBA Boy, Associated With Import/ Export Family Business Is Looking For A Beautiful Girl For Remarriage. Widowed And Divorced Aceeptable (080-69074922)

Bride Required Others

BANGALORE BASED CNB, 29, 170 cm, MBBS MD, financially well-off with a good networth seeks suitable match. contact Ushodhaya- 9611919477

BANGALORE BASED Caste No Bar 32, 165 cm, BE MS, Lives in USA, good net worths. contact Ushodhaya- 9611919477

Grooms Wanted

Muslim

1994 BORN, Beautiful, Sunni Muslim Bangalore based girl,B Arch from VTU,Working as a Jr. Architect, Father Retired as a Vice Principal from a Reputed School of Dubai is looking for an educated boy for early marriage (080-69103048)

DUBAI BASED Sunni Muslim family is looking for a well established, educated alliance for the marriage of their beautiful 27 year old MBA daughter for early marriage (080-69074944)

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

BUSINESS

Business to Business

Business

WANTED FINANCIAL Partner (50/50) for Beach facing 5 Acres Property at GOKARNA near Goa. WAFERS PVT. LTD- 9342247637.

Construction And Maintenance

KGN BUILDERS
Construct your DREAM HOME Just Rs.1,650/- Psqft (Ground+2) Fully Furnished 9886677711

Consultants

RETIRED BANK Officials can assist you For Loan Closure and One Time Settlement of Bank NPA Loans. Call Arun 9945699789. We are not Financiers.

Finance

PMS A start-up Company is inviting Investment by diluting shares with Min Rs.12 Lacs. ROI expected ratio 1:3 from the 1st year. For details contact 7019371267 or visit office @ M.G.Road Church Street, Bangalore.

Financial Services

"URGENT LOAN Avail @ 3.5%. per Annum Personal, Business, Project all types loan in just 5 days OM SAI FINANCE LTD. Call/ WhatsApp: 8826494700."

Business Offers

Business For Sale

CHAPATI MFG unit for sale High Speed Automatic Machine Dough Ball Cutting Machine Lunch Box Machine Honda Generator etc 6361700741

HARDWARE PLUMBING/ Painting Business shop for Sale at Vijayanagar, Fully furnished, Bangalore. Call: 9901987873, 9986787873

Machinery & Tools

MENTHOL UNIT for sale: Fractional column 65ft, NEW 2t Freezer 9-Nos, Centrifuge machine, Sieving machine, 125kv Stabiliser, Polar & Refractometer, UV spectrum meter. Ct: 9884044255 Tamil Nadu Villupuram.

Dealers And Stockists

GANGAJAL DEALERS
PAHARI HAAT — PUNYADA - HOLY GANGAJAL
We are a Govt. of Uttarakhand authorized drawer, packer, and supplier of holy "Gangajal" of river Bhagirathi from Gangotri Valley.
Available in 300 ml food grade Pet bottles.
Dealers invited from Karnataka, Andhra
E-mail us on: paharihaat.ddn@gmail.com

PUBLIC NOTICE

THE LaLiT
TENDER NOTICE
Sealed tenders are invited on the prescribed form for the supply of following items to The LaLiT Ashok Bangalore, for the financial year 2022-23 : **Indian Fruits & Vegetables, English Vegetables and Imported Fruits, Chinese Food, Mushrooms, Milk and Dairy Products, Poultry - Chicken, Egg, Mutton, Fresh Seafood, Frozen Seafood, Meat, Cold Cuts, Indian Grocery & Provisions, Frozen Peas & Corn, Charcoal & Firewood, Fuel Gel, General Stationery, Printing Stationery, Ice Cream, Chemicals, Cleaning Supply, Paper Supply.** Particulars of specifications and prescribed form can be obtained from the Purchase Office between 10:00 to 16:30 hours on Cash Payment of Rs. 1200/- (Rupees Twelve hundred only) for each set (Non-Refundable) from 6th March to 14th March, 2022. Sealed Tenders will be received by 16:30 hours on 14th March, 2022 at the Purchase Office. Late applications shall not be accepted.

Purchase Manager
The LaLiT Ashok Bangalore
Kumara Krupa High Grounds
Bengaluru - 560001
Ph : 080-68177777

PERSONAL

Change of Name

NAME CHANGE
I, RATHNAVATHI, Spouse of **No. JC168526A, Ex. Nb/Sub,** Name **HUKRAPPA. U.** (Address) No 15. Sri Durga Nilaya, Kateramma Temple Road, 5th Cross. Doddabommasandra, Bengaluru-560097 have changed my name from. **RATHNAVATHI** to **RATHNAVATHI. K.G.** (New name) vide Affidavt dated 04-03-2022 (Date of Affidavit) before Mr. Kundan Babu. M. Advocate & Notary. Govt. of India, # 256, 5th Main. 1st Phase. Manjunath Nagar, Bengaluru- 560 010

I, SILVI W/o. Late Edwin R/at #10, Sri Ramaswamy Nilaya, 1st Floor, Opp. SLN Public school, Vibhutipura, Bengaluru- 560037 have changed my name to GNANA SELVAM vide affidavit dated 05/03/2022 before notary R.J. Solanki., Bangalore

I, KRISHNACHARI BANGALORE SRINIVASACHAR (DOB: 03.02.1967) S/o. Srinivasachar. H.N. R/o. #133, 6th Main Road, Vidhanasoudha Layout, Laggere, Bengaluru- 560058 Have Changed My Name to KRISHNACHAR SRINIVASACHAR vide Affidavit Dated: 18.02.2022 Before Notary R. Basavaraja, Bengaluru.

I, B. PRADEEP KUMAR, S/o. Kothur Bhaskar, & Devaki .B, aged about 36 years, R/at No. 78, Vara Prasad Nilaya, 3rd Main, Guru Raghavendra Nagar, J.P. Nagar, 7th Phase, Bangalore- 560078, have changed my name to AHHOBAL SHETTY vide affidavit dated: 03-03-2022, before Notary H.G. Padmanabha Rao Bangalore.

I, ARMY No.8037147L, Rank Nk, Name: Shanur Nadaf S/o. Dadasab R/at. Unit PCTC, Blr-33 wrongly mentioned my Wife name as SARINA instead of SARINA NADAF. Hereby declaring actual & correct name is SARINA NADAF only. affidavit 04/03/2022 notary C. Santhosh, Bangalore.

I, MANIGANDAN. S. S/o. Sadappa. Y. R/a #19, 1st Main, 3rd Cross, Near Yallamma Temple, Vibhuthipura, Marathahalli Post, Bengaluru- 560037 Have Changed My Name to S. MANIKANTA vide Affidavit Dated: 04.03.200 Before Notary A. Manjula, Bengaluru.

JC673571Y- SUB/ SKT- RAJNISH KUMAR MISHRA at ASC Centre (South) Bangalore changed my Minor Daughter's name PRANJALI MISHRA to PRANJLI MISHRA notary K.V.Mani Bangalore.

MORE Classifieds IN SUPPLEMENT

WEEKEND CORNER

ಕ್ಲಾಸಿಫೈಡ್ಸ್

ಜನಸೇವಾ ವಿದ್ಯಾಕೇಂದ್ರ
ಬಾಲಕರ ನಿಲಯ ಶಾಲೆಗಳು
ಚನ್ನೇನಹಳ್ಳಿ ಮಾಗಡಿ ರಸ್ತೆ, ಬೆಂಗಳೂರು ನಗರ ಜಿಲ್ಲೆ–562130
ದೂರವಾಣಿ: 9241216119, 9480609078

2022–23ನೇ ಸಾಲಿನ ಪ್ರವೇಶಗಳಿಗೆ ಕರೆ

5, 6, 7ನೇ ತರಗತಿಗಳು:	ಉತ್ತಮ ಇಂಗ್ಲೀಷ್ ಭಾಷಾ ಕಲಿಕೆಯೊಂದಿಗೆ ಕನ್ನಡ ಮಾಧ್ಯಮ (ಸ್ಥಳೀಯ ವಿದ್ಯಾರ್ಥಿಗಳಿಗೆ ಕೂಡ ಅವಕಾಶವಿದೆ)
8ನೇ ತರಗತಿ:	ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ ಪ್ರಥಮ ಭಾಷೆ ಕನ್ನಡ/ಸಂಸ್ಕೃತ
9ನೇ ತರಗತಿ:	ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ


ಎಲ್ಲಾ ವಿವರಗಳುಳ್ಳ ಪರಿಚಾಯಿಕೆಗೆ ರೂ.250/– ಮಾತ್ರ ಯಾವುದೇ ಬ್ಯಾಂಕಿನ ಆನ್‌ಲೈನ್ ಅಥವಾ ನಗದು ಮೂಲಕ ಪಡೆಯಬಹುದು
Contact: 9241216119, 9480609078
ಮೊದಲನೇ ಹಂತದ ಪರಿಚಾಯಿಕೆ ಪಡೆಯಲು ಕೊನೆಯ ದಿನಾಂಕ: 10/04/2022

ಮೊದಲನೇ ಹಂತದ ಪ್ರವೇಶ ಪರೀಕ್ಷೆಗಳು

8ನೇ ತರಗತಿ ಎಲ್ಲಾ ಜಿಲ್ಲೆಯವರಿಗೆ	14.04.2022 ಗುರುವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ
5, 6, 7 ಮತ್ತು 9ನೇ ತರಗತಿಗಳು	15.04.2022 ಶುಕ್ರವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ

(ಅವಕಾಶವಿದ್ದಲ್ಲಿ ಪರಿಚಾಯಿಕೆ ನೀಡಿ ಎರಡನೇ ಹಂತದ ಪ್ರವೇಶ ಪರೀಕ್ಷೆ ನಡೆಸಲಾಗುವುದು)
ಗೌರವ ಕಾರ್ಯದರ್ಶಿ

JANASEVA P.U.COLLEGE
Residential for Boys
Channenahalli,20th K.M.Magadi Main Road,Bangalore-562130
Email:janasevapuc@gmail.com, 123jsvkhighschool@gmail.com
ADMISSIONS OPEN FOR THE ACADEMIC YEAR 2022-23
First Year PUC — Science (PCMB/PCMCs) Commerce (HEBA) (SEBA)
Excellent coaching by experienced and highly qualified faculty members, Very Good Hostel Facility in natural environment.
Local Students (Boys & Girls) may also apply
College Bus Facilities are available for day scholars.
Application forms are available in the college Office between 10 a.m. to 5 p.m.
Mob: 9480609078 / 9148275341
-Hon Secretary







ಮತ್ತೆ ಮಂದಹಾಸ ಮೂಡಿಸಿದ ಚಿತ್ರೋತ್ಸವ

• ಸುಕೃತ ಎಸ್.

ಬೆಂಗಳೂರು: ಅಲ್ಲಲ್ಲಿ ಮೂರು ನಾಲ್ಕು ಜನರ ಸಣ್ಣ ಸಣ್ಣ ಗುಂಪುಗಳು, ಸ್ನೇಹಿತರೊಂದಿಗೆ ಮಾತುಕತೆಯಲ್ಲಿ ತೊಡಗಿದ್ದ ಸಿನಿಮಾ, ಧಾರಾವಾಹಿ ನಟ, ನಟಿಯರು... ಎರಡು ವರ್ಷಗಳ ನಂತರ ಪರಸ್ಪರ ಮುಖಾಮುಖಿಯಾದ ಖುಷಿಯು ಎಲ್ಲರ ಮೊಗದಲ್ಲೂ ಮಂದಹಾಸ ಮೂಡಿಸಿತ್ತು. ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ-ವು ಈ ಅವಕಾಶವನ್ನು ಒದಗಿಸಿತ್ತು.

ಒರಾಯನ್ ಮಾಲ್‌ನಲ್ಲಿ ಚಲನ-ಚಿತ್ರೋತ್ಸದ ಎರಡನೇ ದಿನವಾದ ಶನಿವಾರ, ಹಿರಿಯ, ಕಿರಿಯ ನಿರ್ದೇಶಕರು, ನಟ, ನಟಿಯರು ಹುರುಪಿನಿಂದ ತಮ್ಮ ತಮ್ಮ ಸ್ನೇಹಿತರೊಂದಿಗೆ ಸಿನಿಮಾಗಳನ್ನು ಆಸ್ವಾದಿಸಿದರು. 'ಕೊರೊನಾ ಕಾರಣದಿಂದ ನಾವು ಭೇಟಿಯೇ ಆಗಿರಲಿಲ್ಲ. ಒಟ್ಟಿಗೆ ಕೂತು ಸಿನಿಮಾ ನೋಡಿ, ಅದರ ಬಗ್ಗೆ ತುಸು ಚರ್ಚಿಸಿ ಮತ್ತೊಂದು ತೆರೆಗೆ ಸಿನಿಮಾ ನೋಡಲು ಓಡುವುದು... ಈ ಎಲ್ಲವನ್ನೂ ಮರಳಿ ಅನುಭ-ವಿಸುವಂತಾಗಿದೆ' ಎಂದು ನಿರ್ಮಾಪಕಿ ವಸುಂಧರಾ ಅನುಭವ ಹಂಚಿಕೊಂಡರು.

> ದೊಡ್ಡಮಟ್ಟದ ಚಿತ್ರೋತ್ಸವ ಹೊಸತನದೊಂದಿಗೆ ಬಂದಿದೆ. ಗೋವಾ, ಬರ್ಲಿನ್ ಚಲನ ಚಿತ್ರೋತ್ಸವಗಳಲ್ಲಿ ನೋಡಬಹುದಾದ ಚಿತ್ರಗಳನ್ನು ಇಲ್ಲಿಯೂ ನೋಡಬಹುದು. ಹಾಗೆ ನೋಡಿದರೆ ಪ್ರಾದೇಶಿಕ ಭಾಷೆಗಳ ಚಿತ್ರಗಳು ಇಂಥ ಉತ್ಸವದ ಮೂಲಕ ಜಗತ್ತಿನೆಡೆಗೆ ಪ್ರಯಾಣಿಸುತ್ತವೆ.
>
> **ಸೋಮೇಂದ್ರ ಹರ್ಷ,** ಸಂಸ್ಥಾಪಕ ಜೈಪುರ ಚಲನಚಿತ್ರೋತ್ಸವ, ರಾಜಸ್ಥಾನ

> ಗೋವಾ ಚಲನ ಚಿತ್ರೋತ್ಸವದಲ್ಲಿಯೂ ಇತ್ತೀಚೆಗೆ ಕನ್ನಡ ಚಿತ್ರಗಳಿಗೆ ತುಂಬಾ ಮಾನ್ಯತೆ ಸಿಕ್ಕಿದೆ. ಇದು ಇಡೀ ಉದ್ಯಮಕ್ಕೊಂದು ಪ್ಲಸ್ ಪಾಯಿಂಟ್
>
> **ನವೀನ್ ದ್ವಾರಕಾನಾಥ್,** ಚಿತ್ರ ನಿರ್ದೇಶಕ

'ಮನೆಯಲ್ಲಿ ಒಬ್ಬರೇ ಕೂತು ಟಿ.ವಿಯಲ್ಲಿ ಸಿನಿಮಾ ನೋಡುವುದಕ್ಕೂ, ಸಿನಿಮೋತ್ಸವದಲ್ಲಿ ನೋಡುವುದಕ್ಕೂ ವ್ಯತ್ಯಾಸ ಇದೆ. ಇಲ್ಲಿಗೆ ಹಿರಿಯ ನಿರ್ದೇಶಕರು, ವಿಮರ್ಶಕರು, ತಂತ್ರಜ್ಞರು ಬಂದಿರುತ್ತಾರೆ. ಸಿನಿಮಾ ಅಧ್ಯಯನಕ್ಕೆ ಇದೊಂದು ಉತ್ತಮ ವೇದಿಕೆ. ಹಿರಿ-ಕಿರಿಯರ ವಿಚಾರ ವಿನಿಮಯಕ್ಕೂ ಇಲ್ಲಿ ಅವಕಾಶ ಇದೆ' ಎಂದರು.

ದೊಡ್ಡ ಪರದೆಯ ಮಜವೇ ಬೇರೆ: 'ಮನೆಯಲ್ಲೇ ಕೂತು ಜಗತ್ತಿನ ಸಿನಿಮಾ ಲೋಕಕ್ಕೆ ತೆರೆದುಕೊಳ್ಳುವ ಅವಕಾಶವನ್ನು ಒಟಿಟಿ ವೇದಿಕೆ ನಮಗೆ ನೀಡಿದೆ. ಒಟಿಟಿ ಎಂದರೆ ಹೆಚ್ಚಾಗಿ ಎಲ್ಲರೂ ಮೊಬೈಲ್‌ನಲ್ಲೇ ಸಿನಿಮಾ ನೋಡುತ್ತಾರೆ. ಆದರೆ, ದೊಡ್ಡ ಪರದೆಯಲ್ಲಿ ಸಿನಿಮಾ ನೋಡುವ ಮಜವೇ ಬೇರೆ' ಎಂದು ನಿರ್ದೇಶಕ ಅಭಿ ಕನಸಿನ ಕವನ ಅವರು ತಮ್ಮ ಅನುಭವ ಹಂಚಿಕೊಂಡರು.

'ನಾನು ಈ ಚಲನಚಿತ್ರೋತ್ಸವದಲ್ಲಿ ಮೂರು ನಾಲ್ಕು ಬಾರಿ ಭಾಗವಹಿಸಿ-ದ್ದೇನೆ. ಜನರಲ್ಲಿ ಈ ಬಾರಿ ಅಷ್ಟೊಂದು ಉತ್ಸಾಹ ಕಾಣಿಸುತ್ತಿಲ್ಲ. ಈಗ ಆನ್‌ಲೈನ್‌ನಲ್ಲೂ ಸಿನಿಮಾ ನೋಡಬಹುದು. ಹಾಗಾಗಿ ಪ್ರೇಕ್ಷಕರು ಕಮ್ಮಿ ಆಗಿದ್ದಾರೆ' ಎಂದರು.

'ಸಿಖ್ಖರಿಗೆ ಧಕ್ಕೆಯಾಗದಂತೆ ವಸ್ತ್ರಸಂಹಿತೆ ರೂಪಿಸಿ'

ಬೆಂಗಳೂರು: 'ಶೈಕ್ಷಣಿಕ ಸಂಸ್ಥೆಗಳಲ್ಲಿ ವಸ್ತ್ರಸಂಹಿತೆ ವಿಚಾರವಾಗಿ ಅನಗತ್ಯ ವಿವಾದ ಸೃಷ್ಟಿಯಾಗಿದ್ದು, ಸಿಖ್ ಧರ್ಮದ ನಂಬಿಕೆ ಮತ್ತು ಆಚರಣೆಗಳಿಗೆ ಧಕ್ಕೆಯಾಗದಂತೆ ಸರ್ಕಾರ ಒಂದು ಸ್ಪಷ್ಟ ಆದೇಶ ಹೊರಡಿಸಬೇಕು' ಎಂದು ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ಆಗ್ರಹಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಖ್ ಸಮುದಾಯದ ಮುಖಂಡ ಎಸ್.ಮಹೇಂದರ್ ಪಾಲ್ ಸಿಂಗ್, 'ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ 'ಟರ್ಬನ್' ಧರಿಸಿ ಬಂದ ಸಿಖ್ ವಿದ್ಯಾರ್ಥಿಗೆ ಅದನ್ನು ತೆಗೆಯುವಂತೆ ಒತ್ತಾಯಿಸಲಾಗಿದೆ. ಮಂಗಳೂರಿನಲ್ಲಿ ಒಬ್ಬ ವಿದ್ಯಾರ್ಥಿಗೆ ಶಾಲೆಯಲ್ಲಿ ದಾಖಲಾತಿ ನಿರಾಕರಿ-ಸಿದ್ದಾರೆ. ಈ ಘಟನೆಗಳಿಂದ ಸಿಖ್ ಸಮುದಾಯಕ್ಕೆ ಅವಮಾನ ಆಗಿದೆ' ಎಂದು ದೂರಿದರು.

'ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಸಿಖ್ ಸಮುದಾಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಆದೇಶ ಹೊರಡಿಸಬೇಕೆಂದು ಕೇಳಿಕೊಂಡಿದ್ದೇವೆ. ಅವರಿಂದಲೂ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ' ಎಂದು ಹೇಳಿದರು.

'ರಾಜಕಾರಣಿಗಳಿಂದ ಶಾಸಕಾಂಗ ದುರ್ಬಲ'

ನಗರದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಾಜಿ ಶಾಸಕ ವೈ.ಎಸ್.ವಿ. ದತ್ತ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕಾಂಗ ದಿನೇ ದಿನೇ ದುರ್ಬಲವಾಗಲು ದರಿದ್ರ ರಾಜಕಾರಣಿಗಳೇ ಕಾರಣ. ಚರ್ಚೆ ನಡೆಸದೆಯೇ ಐದು ನಿಮಿಷಗಳಲ್ಲಿ ಮಸೂದೆಗಳಿಗೆ ಅನುಮೋದನೆ ನೀಡುವ ಪರಿಸ್ಥಿತಿಗೆ ಶಾಸಕಾಂಗ ತಲುಪಿದೆ' ಎಂದು ಮಾಜಿ ಶಾಸಕ ವೈ.ಎಸ್.ವಿ. ದತ್ತ ಬೇಸರ ವ್ಯಕ್ತಪಡಿ-ಸಿದರು.

'ವೈವಿಧ್ಯತೆಯಲ್ಲಿ ಏಕತೆ ಬೆಳೆಸುವುದು: ಸವಾಲುಗಳು ಮತ್ತು ಅವಕಾಶಗಳು' ಕುರಿತು ಏಕಂ ಸಾಥ್ ಟ್ರಸ್ಟ್ ಶನಿವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ನ್ಯಾಯಾಂಗ ಕ್ರಿಯಾಶೀಲವಾಗಿದೆ ಎಂದರೆ ಶಾಸಕಾಂಗ ಸತ್ತಿದೆ ಎಂದೇ ಅರ್ಥೈಸಿಕೊಳ್ಳಬೇಕು. ಶಾಸಕಾಂಗದ ಪರಮಾಧಿಕಾರವನ್ನು ಕಡೆಗಣಿಸಿದ್ದ-ರಿಂದ ನ್ಯಾಯಾಂಗ ಪ್ರಬಲವಾಗುತ್ತಿದೆ. ಪ್ರತಿಯೊಂದು ವಿಷಯದಲ್ಲೂ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗುವ ಪರಿಸ್ಥಿತಿ ಸೃಷ್ಟಿಸಲಾಗಿದೆ' ಎಂದು ವಿಶ್ಲೇಷಿಸಿದರು.

'ದೇಶವು ಸರ್ವಾಧಿಕಾರದತ್ತ ಸಾಗುತ್ತಿದ್ದು, ಇದಕ್ಕೆ ಪೂರಕವಾದ ರಾಜಕೀಯ ವ್ಯವಸ್ಥೆ ಹಾಗೂ ಕಲುಷಿತವಾದ ಮತ್ತು ವಿಷಮ ವಾತಾವರಣ ಸೃಷ್ಟಿಸಲಾಗಿದೆ. ಭ್ರಮಾತ್ಮಕ ಮತ್ತು ಭಾವನಾತ್ಮಕ ಸ್ಥಿತಿಯಲ್ಲಿ ಬದುಕುತ್ತಿರುವ ಜನರನ್ನು ವಾಸ್ತವಕ್ಕೆ ಕರೆತರುವ ಮೂಲಕ ಸೌಹಾರ್ದಯುತ ವಾತಾವರಣ ಸೃಷ್ಟಿಸಬೇಕಾಗಿದೆ' ಎಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಮಾತನಾಡಿದರು. ವೈ.ಎಸ್.ವಿ. ದತ್ತ, ಏಕಂ ಸಾಥ್ ಟ್ರಸ್ಟ್ ಅಧ್ಯಕ್ಷ ಎ. ರವೀಂದ್ರ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಡಾ. ಮೊಹಮ್ಮದ್ ತಹಾ ಮಾಥೀನ್, ಪ್ರೊ.ಪ್ರೊ. ಜೆರೋಮ್ ನಿರ್ಮಲರಾಜ್ ಇದ್ದರು —ಪ್ರಜಾವಾಣಿ ಚಿತ್ರ

ವೈದ್ಯ ಡಾ. ಮೊಹಮ್ಮದ್ ತಹಾ ಮಾಥೀನ್ ಮಾತನಾಡಿ, 'ಹಿಜಾಬ್ ಅನ್ನು ಯಾರು ಧರಿಸುತ್ತಾರೆ ಅಥವಾ ಇಲ್ಲವೋ ಎನ್ನುವುದು ಮುಖ್ಯವಾಗಬಾ-ರದು. ಇಂತಹ ವಿವಾದಗಳ ಉದ್ದೇಶವು ಭ್ರಷ್ಟಾಚಾರ ಮತ್ತು ಹತ್ತಾರು ಸಮಸ್ಯೆಗಳಿಂದ ನಾಗರಿಕರ ಗಮನವನ್ನು ಬೇರೆಡೆ ಸೆಳೆಯುವುದೇ ಆಗಿದೆ' ಎಂದು ಹೇಳಿದರು.

> **ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವೈವಿಧ್ಯತೆಯ ಆಶಯಕ್ಕೆ ಧಕ್ಕೆ ತರಬಾರದು. ವೈವಿಧ್ಯತೆಯಲ್ಲೇ ಏಕತೆ ಸಾಧಿಸಬೇಕು. ಶಿಕ್ಷಣದ ಮೂಲಕ ಅರಿವು ಮೂಡಿಸಿ ಸಮಾಜದಲ್ಲಿ ಬದಲಾವಣೆ ತರಬಹುದು**
>
> **ಪ್ರೊ. ಜಿರೋಮ್ ನಿರ್ಮಲರಾಜ್**
> ಏಕಂ ಸಾಥ್ ಟ್ರಸ್ಟ್ ಸದಸ್ಯ

'ಬಹುತೇಕ ಶಾಸಕರು ತಮ್ಮ ಆಸ್ತಿಯನ್ನು ದುಪ್ಪಟ್ಟು ಮಾಡಿಕೊಳ್ಳಲು ಹೆಚ್ಚು ಆಸಕ್ತಿ ವಹಿಸಿದ್ದಾರೆ. ಕೆಲವರು ಪ್ರಾಮಾಣಿಕ ಶಾಸಕರಿದ್ದಾರೆ. ವೈವಿಧ್ಯತೆಯ ಸಂಸ್ಕೃತಿ ಹೊಂದಿರುವ ದೇಶದಲ್ಲಿ ಸಹಬಾಳ್ವೆ ಮತ್ತು ಸೌಹಾರ್ದ ಮುಖ್ಯವಾಗಬೇಕು. ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಎಲ್ಲರಿಗೂ ಸುಲಭವಾಗಿ ದೊರೆಯಬೇಕು' ಎಂದರು.

> **ಶಾಸಕಾಂಗವನ್ನು ನಾವೇ ದುರ್ಬಲ ಮಾಡಿದ್ದೇವೆ. ಸಾರ್ವಜನಿಕ ಹಿತಾಸಕ್ತಿ ಯಾರಿಗೂ ಮುಖ್ಯವಾಗುತ್ತಿಲ್ಲ. ಸಮಾಜದ ಎಲ್ಲ ವರ್ಗಗಳ ಒಳಿತಿಗಾಗಿ ಯೋಚಿಸಬೇಕು.**
>
> **ಜಯಪ್ರಕಾಶ್ ಹೆಗ್ಡೆ,** ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ

> **ಸ್ವಾತಂತ್ರ್ಯ, ಸಮಾನತೆಯೇ ಪ್ರಜಾಪ್ರಭುತ್ವದ ತಳಹದಿ. ಸಮಾಜದಲ್ಲಿ ಭ್ರಾತೃತ್ವದ ಮೂಲಕ ಸಮಾನತೆ ಸಾಧಿಸಬೇಕು. ಆದರೆ, ಭ್ರಾತೃತ್ವವನ್ನು ಮರೆಯುತ್ತಿದ್ದೇವೆ.**
>
> **ಡಾ. ಎ. ರವೀಂದ್ರ,**
> ಏಕಂ ಸಾಥ್ ಟ್ರಸ್ಟ್ ಅಧ್ಯಕ್ಷ

> **ಬಹುತ್ವ ಸಂಸ್ಕೃತಿಯ ದೇಶದಲ್ಲಿ ಸಹಿಷ್ಣುತೆ ಮೂಲ ಆಧಾರ. ಮನೆಯಲ್ಲಿರುವ ಸಹಿಷ್ಣುತೆ ದೇಶದೆಲ್ಲೆಡೆ ಇರಬೇಕು. ಆದರೆ, ಆಹಾರ, ಬಟ್ಟೆ ನೋಡಿ ದ್ವೇಷ ಸಾಧಿಸುವ ಮನಸ್ಥಿತಿಗೆ ತಲುಪಿರುವುದು ದುರದೃಷ್ಟಕರ**
>
> **ಎಚ್.ಎನ್. ನಾಗಮೋಹನ್ ದಾಸ್**
> ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಮಹಾಬೋಧಿ ಸೊಸೈಟಿ ನೇತೃತ್ವದಲ್ಲಿ ಸ್ಥಳೀಯರ ಪ್ರತಿಭಟನೆ

'ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಿಷೇಧಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಹೃದಯ ಭಾಗದಲ್ಲಿರುವ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಾಗೂ ಮುಷ್ಕರ ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕು' ಎಂದು ಆಗ್ರಹಿಸಿ ಮಹಾಬೋಧಿ ಸೊಸೈಟಿ ನೇತೃತ್ವದಲ್ಲಿ ಗಾಂಧಿನಗರದ ನಿವಾಸಿಗಳು ಶನಿವಾರ ಪ್ರತಿಭಟನೆ ನಡೆಸಿದರು.

'ಕೇಂದ್ರ ಕಾರಾಗೃಹವನ್ನು ಸ್ಥಳಾಂತರಿಸಿ, ಆ ಜಾಗವನ್ನು ಸ್ವಾತಂತ್ರ್ಯ ಉದ್ಯಾ-ನವನ್ನಾಗಿ ಅಭಿವೃದ್ಧಿಪಡಿಸಿದಾಗ ಅದು ಶಾಂತಿಯ ತಾಣವಾಗಲಿದೆ ಎಂದು ಎಲ್ಲರೂ ನಂಬಿದ್ದರು. ಅಲ್ಲಿ ಪ್ರತಿಭಟನೆ, ಮುಷ್ಕರ ಹಾಗೂ ಸಭೆ–ಸಮಾರಂಭ-ಗಳನ್ನು ನಡೆಸಲು ಅವಕಾಶ ನೀಡುವ ಮೂಲಕ ಸರ್ಕಾರವು ಸ್ಥಳೀಯರ ನೆಮ್ಮದಿ ಕಸಿಯುತ್ತಿದೆ. ಸ್ವಾತಂತ್ರ್ಯ ಉದ್ಯಾನವನ್ನು ನಾಲ್ಕು ದಿಕ್ಕುಗಳಿಗೆ ಸಂಪರ್ಕಿಸುವ ಕಾಳಿದಾಸ ಮಾರ್ಗ, ಶೇಷಾದ್ರಿ ಮಾರ್ಗ, ವೈ.ರಾಮಚಂದ್ರ ಮಾರ್ಗ ಹಾಗೂ ಅರಮನೆ ರಸ್ತೆಗಳಲ್ಲಿ ಪ್ರತಿಭಟನೆಗಳಿಂದಾಗಿ ನಿತ್ಯವೂ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಶಾಲೆ, ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು ಇದರಿಂದ ಪರಿತಪಿಸುವಂತಾಗಿದೆ. ಈ ಮಾರ್ಗಗಳಲ್ಲಿ ಅಶಾಂತಿಯ ವಾತಾವರಣವೂ ಸೃಷ್ಟಿಯಾಗುತ್ತಿದೆ' ಎಂದು ಪ್ರತಿಭಟನಾಕಾರರು ದೂರಿದರು.



ಮಹಾಬೋಧಿ ಸೊಸೈಟಿ ಸದಸ್ಯರು ಶನಿವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

'ಪ್ರತಿಭಟನೆ ಹಾಗೂ ಮುಷ್ಕರದ ವೇಳೆ ಧ್ವನಿವರ್ಧಕಗಳನ್ನು ಬಳಸಲಾ-ಗುತ್ತದೆ. ವಾಹನ ದಟ್ಟಣೆಯಿಂದಾಗಿ ಶಬ್ದ ಹಾಗೂ ವಾಯು ಮಾಲಿನ್ಯವೂ ಹೆಚ್ಚಾಗುತ್ತಿದೆ. ಇದರಿಂದ ಮಕ್ಕಳು ಹಾಗೂ ವೃದ್ಧರ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತಿದೆ. ಉದ್ಯಾನದ ಪಕ್ಕದಲ್ಲೇ ಮಹಾಬೋಧಿ ಸೊಸೈಟಿ ಇದೆ. ಆಶ್ರಮದಲ್ಲಿ ಧ್ಯಾನ, ಪ್ರವಚನ ಹಾಗೂ ಪಠಣಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಸೊಸೈಟಿಯಲ್ಲಿ ಭಿಕ್ಷು ತರಬೇತಿ ಶಾಲೆಯೂ ಇದೆ. ಉದ್ಯಾನದ ಆಸುಪಾಸಿನಲ್ಲೇ ಬಿಬಿಎಂಪಿಯ ಶಾಲೆ ಹಾಗೂ ಹಲವು ಕಾಲೇಜುಗಳೂ ಇವೆ. ಪ್ರತಿಭಟನೆಗಳಿಂದಾಗಿ ಪಾಠ ಪ್ರವಚನ-ಗಳನ್ನು ನಡೆಸಲು ಅಡಚಣೆಯಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಸ್ಥಳೀಯ ನಿವಾಸಿಗಳ ಹಿತದೃಷ್ಟಿಯಿಂದ ಸರ್ಕಾರವು ಪ್ರತಿಭಟನಾ ಸ್ಥಳವನ್ನು ಬೇರೆಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ಸ್ವಾತಂತ್ರ್ಯ ಉದ್ಯಾನವನ್ನು ಪ್ರಶಾಂತ ತಾಣವಾಗಿ ಪರಿವರ್ತಿಸುವ ಇಚ್ಛಾಶಕ್ತಿ ತೋರಬೇಕು. ಕಾಳಿದಾಸ ರಸ್ತೆಯ ಕಡೆ ಇರುವ ಉದ್ಯಾನದ ಭಾಗಕ್ಕೆ ಮೊದಲಿನಂತೆ ಎತ್ತರದ ಕಾಂಪೌಂಡ್ ನಿರ್ಮಿಸಬೇಕು. ಈ ರಸ್ತೆಯಲ್ಲಿ ಮುಷ್ಕರಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕು. ಕಾಳಿದಾಸ ರಸ್ತೆ ಹಾಗೂ ಶೇಷಾದ್ರಿ ರಸ್ತೆಗಳನ್ನು ಖಾಸಗಿ ಬಸ್‌ಗಳ ನಿಲುಗಡೆ ತಾಣವನ್ನಾಗಿ ಮಾರ್ಪಡಿ-ಸುವುದಕ್ಕೆ ಅವಕಾಶ ನೀಡಬಾರದು' ಎಂದು ಮಹಾಬೋಧಿ ಸೊಸೈಟಿಯ ಪ್ರಧಾನ ಕಾರ್ಯದರ್ಶಿ ಆನಂದ ಭಿಕ್ಕು ಒತ್ತಾಯಿಸಿದರು.

ಕದ್ದ ಸಿಮ್‌ಕಾರ್ಡ್‌ನಿಂದ ಕರೆ ಮಾಡಿ ಸ್ನೇಹ

ಮಹಿಳೆಯರಿಗೆ ಕಿರುಕುಳ ನೀಡುತ್ತಿದ್ದ 'ಕಳ್ಳ'

ಪ್ರಜಾವಾಣಿ ವಾರ್ತೆ



ಮಂಜುನಾಥ್

ಬೆಂಗಳೂರು: ಮಹಿಳೆಯರ ಮೊಬೈಲ್‌ಗೆ ಕರೆ ಮಾಡಿ ಸ್ನೇಹ ಬೆಳೆಸಿ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪಿ ಮಂಜುನಾಥ್ ಅಲಿಯಾಸ್ ಚೂಲು ಮಂಜ (37) ಎಂಬಾತನನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಮಧುಗಿರಿ ತಾಲ್ಲೂಕಿನ ಮೈದನಹಳ್ಳಿಯ ಮಂಜುನಾಥ್, ಮೊಬೈಲ್ ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ಕದ್ದ ಮೊಬೈಲ್‌ಗಳ ಸಿಮ್‌ಕಾರ್ಡ್‌ನಲ್ಲಿರುತ್ತಿದ್ದ ಮಹಿಳೆಯರ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಸ್ನೇಹ ಬೆಳೆಸಿ ಕಿರುಕುಳ ನೀಡುತ್ತಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಕೀಲರು, ಪೊಲೀಸ್ ಅಧಿಕಾರಿ, ಉದ್ಯಮಿಗಳು, ಖಾಸಗಿ ಕಂಪನಿ ಉದ್ಯೋಗಿಗಳು ಸೇರಿದಂತೆ 100ಕ್ಕೂ ಹೆಚ್ಚು ಮಹಿಳೆಯರಿಗೆ ಆರೋಪಿ ಕಿರುಕುಳ ನೀಡಿರುವುದು ತನಿಖೆಯಿಂದ ಗೊತ್ತಾಗಿದೆ. ಲೈಂಗಿಕ ಕಿರುಕುಳ (ಐಪಿಸಿ 354) ಆರೋಪ ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವ-ರಿಸಲಾಗಿದೆ' ಎಂದು ತಿಳಿಸಿದರು.

ಬಾಲ್ಯದಿಂದಲೇ ಕಳ್ಳತನ: 'ಹುಟ್ಟೂರಿನಲ್ಲಿ ಐದನೇ ತರಗತಿವರೆಗೆ ವ್ಯಾಸಂಗ ಮಾಡಿ ಬೆಂಗಳೂರಿಗೆ ಬಂದಿದ್ದ ಆರೋಪಿ, ಹಲವೆಡೆ ಸಣ್ಣ–ಪುಟ್ಟ ಕೆಲಸ ಮಾಡುತ್ತಿದ್ದ. ಅದರ ಜೊತೆಯಲ್ಲೇ, ಮೆಜೆಸ್ಟಿಕ್‌ನಲ್ಲಿ ಸುತ್ತಾಡಿ ಕಳ್ಳತನ ಮಾಡುತ್ತಿದ್ದ. ಆರಂಭದಲ್ಲಿ ಪರ್ಸ್ ಕದಿಯುತ್ತಿದ್ದ ಆರೋಪಿ, ಕೆಲ ವರ್ಷದಿಂದ ಬೆಲೆಬಾಳುವ ಮೊಬೈಲ್ ಕಳವು ಮಾಡಲಾರಂಭಿಸಿದ್ದ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕದ್ದ ಮೊಬೈಲ್‌ನಲ್ಲಿರುತ್ತಿದ್ದ ಸಿಮ್‌ಕಾರ್ಡ್‌ಗಳನ್ನು ಆರೋಪಿ ಸಂಗ್ರ-ಹಿಸಿಟ್ಟುಕೊಳ್ಳುತ್ತಿದ್ದ. ಮೊಬೈಲ್‌ಗಳನ್ನು ಮಾತ್ರ ಮಾರುತ್ತಿದ್ದ. ಕೆಲ ದಿನ ಬಿಟ್ಟು ಸಿಮ್‌ಕಾರ್ಡ್‌ಗಳನ್ನು ಬೇರೊಂದು ಮೊಬೈಲ್‌ಗೆ ಹಾಕಿ ಆನ್ ಮಾಡುತ್ತಿದ್ದ ಆರೋಪಿ, ಅದರಲ್ಲಿರುವ ಮಹಿಳೆಯರ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡುತ್ತಿದ್ದ. ಸ್ನೇಹಿತನಂತೆ ಮಾತನಾಡಿ ಪರಿಚಯಿಸಿಕೊಳ್ಳುತ್ತಿದ್ದ' ಎಂದೂ ತಿಳಿಸಿದರು.

ಸಲುಗೆ ಬೆಳೆಸಿ, ಕಿರುಕುಳ: 'ಆರೋಪಿ ಜೊತೆ ಮಾತನಾಡಲು ಹಿಂದೇಟು ಹಾಕುತ್ತಿದ್ದ ಕೆಲ ಮಹಿಳೆಯರು, ಆತನ ನಂಬರ್ ಬ್ಲಾಕ್ ಮಾಡುತ್ತಿದ್ದರು. ಬಹುಪಾಲು ಮಹಿಳೆಯರು, ಆತನ ಜೊತೆ ಮಾತುಕತೆ ಮುಂದುವರಿಸಿದ್ದರು. ಅಂಥವರ ಜೊತೆ ಆರೋಪಿ ಸಲುಗೆಯನ್ನೂ ಹೊಂದಿದ್ದ' ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

'ನಾನಾ ಆಮಿಷಗಳನ್ನು ಒಡ್ಡಿ ಕೆಲ ಮಹಿಳೆಯರನ್ನು ಆರೋಪಿ ಲೈಂಗಿಕವಾಗಿ ಬಳಸಿಕೊಂಡಿದ್ದಾ-ನೆ. ಕೆಲವರಿಂದ ಹಣ ಪಡೆದು ವಂಚಿಸಿದ್ದಾನೆ. ಎಲ್ಲರೂ ಹೇಳಿಕೆ ನೀಡಿದ್ದಾರೆ' ಎಂದೂ ಹೇಳಿದರು.

'ಮಹಿಳೆಯರಿಗೆ ನಗ್ನ ವಿಡಿಯೊ ಕಳುಹಿಸಿ, ಅಶ್ಲೀಲ ಮಾತು'

'ಮಹಿಳೆಯರು ತನ್ನ ಜೊತೆ ಚೆನ್ನಾಗಿ ಮಾತನಾಡುತ್ತಿದ್ದಂತೆ ಆರೋಪಿ, ಅವರಿಗೆ ನಗ್ನ ವಿಡಿಯೊ ಕಳುಹಿಸುತ್ತಿದ್ದ. ಅದಾದ ನಂತರ, ಅಶ್ಲೀಲವಾಗಿ ಮಾತನಾ-ಡುತ್ತಿದ್ದ. ಹಲವರು ಆರೋಪಿಗೆ ಬೈಯುತ್ತಿದ್ದರು. ಅವರಿಗೆ ನಿರಂತರವಾಗಿ ಕರೆ ಮಾಡುತ್ತಿದ್ದ ಆರೋಪಿ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ. ಕೆಲ ಮಹಿಳೆಯರು, ಆರೋಪಿ ಜೊತೆ ಹೆಚ್ಚಿನ ಸಲುಗೆ ಇಟ್ಟುಕೊಂಡಿದ್ದರು. ಆಗಾಗ ಆರೋಪಿಯನ್ನು ಭೇಟಿಯಾಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ವಾಣಿಜ್ಯ ಚಟುವಟಿಕೆಗಳ ತಾಣ

ಒಂದೂ ಕಾಲು ಶತಮಾನ ಕಂಡ ಮಲ್ಲೇಶ್ವರ ಬಡಾವಣೆ

ಬೆಂಗಳೂರು ನಮ್ಮ ಹೆಮ್ಮೆ...


• ಶಿವರಾಜ ರಾಮನಾಳ

ಬೆಂಗಳೂರು: ಸುತ್ತಲೂ ಕಣ್ಣಿಗೆ ತಂಪಿಡುವ ಹಸಿರು, ಹೊಂಬೆಳಕಿನ ನಡುವೆ ನಡೆದು ಸಾಗುವಾಗ ಮೂಡುವ ಬೆಚ್ಚನೆಯ ಭಾವ, ಬಗೆ ಬಗೆ ತಿನಿಸುಗಳ ಉಪಾಹಾರ ಮಂದಿರಗಳು, ಆಭರಣ ಮಳಿಗೆಗಳು.. ನಗರದ ಅತ್ಯಂತ ಹಳೆಯ ವಸತಿ ಪ್ರದೇಶಗಳಲ್ಲಿ ಒಂದಾದ ಮಲ್ಲೇಶ್ವರ ಬಡಾವಣೆಯ ನೋಟವಿದು.

ತನ್ನ ಹೆಸರಿನಿಂದಲೇ ಗಮನ ಸೆಳೆಯುವ ಮಲ್ಲೇಶ್ವರಕ್ಕೆ 133 ವರ್ಷಗಳ ಇತಿಹಾಸವಿದೆ. ಮೈಸೂರಿನ ಅರಸರಾದ 10ನೇ ಚಾಮರಾಜ ಒಡೆಯರ್ ಸೂಚನೆ ಮೇರೆಗೆ ಅಂದಿನ ದಿವಾನರಾಗಿದ್ದ ಕುಮಾರಪುರಂ ಶೇಷಾದ್ರಿ ಅಯ್ಯರ್ ಅವರು 1889ರ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ಬಡಾವಣೆಗಳನ್ನು ನಿರ್ಮಿಸಲು ಸಮಿತಿಯೊಂದನ್ನು ರಚಿಸಿದರು. ಸಮಿತಿಯ ಶಿಫಾರಸಿನಂತೆ ಮಲ್ಲೇಶ್ವರ ಬಡಾವಣೆ ನಿರ್ಮಾಣ ಕಾರ್ಯಕ್ಕೂ ಚಾಲನೆ ಸಿಕ್ಕಿತ್ತು. ಆದರೆ ನಿರ್ಮಾಣ ಕಾರ್ಯ ವೇಗ ಪಡೆದಿದ್ದು, 1892ರಲ್ಲಿ ವಿ.ಪಿ.ಮಾಧವರಾಯರು ಸಮಿತಿ ಅಧ್ಯಕ್ಷರಾದ ಬಳಿಕ. 1895ರ ಮಾರ್ಚ್ 28 ರಂದು ಸಮಿತಿಯನ್ನು ವಿಸರ್ಜಿಸಿ, ಬಡಾವಣೆಯ ನಿವೇಶನಗಳನ್ನು ಮುನ್ಸಿಪಲ್ ಕೌನ್ಸಿಲ್‌ಗೆ ವರ್ಗಾಯಿಸಲಾಯಿತು. ಎಲ್ಲಾ ಸಮುದಾಯದವರಿಗೆ ನಿವೇಶನ ಹಂಚಲು ತೀರ್ಮಾನಿಸಲಾಯಿತು.

ಪ್ಲೇಗ್ ಸೋಂಕು: ದೇಶದಲ್ಲಿ 1897ರಲ್ಲಿ ಪ್ಲೇಗ್ ಲಕ್ಷಾಂತರ ಜನರ ಜೀವ ಬಲಿ ಪಡೆದಿತ್ತು. ಆಗಷ್ಟೇ ನಿರ್ಮಾಣವಾಗಿದ್ದ ಮಲ್ಲೇಶ್ವರ ಬಡಾವಣೆಯಲ್ಲಿ ತಾತ್ಕಾಲಿಕ ಶಿಬಿರಗಳನ್ನು ರಚಿಸಿ ಜನರಿಗೆ ಆಶ್ರಯ ಕಲ್ಪಿಸಲಾಯಿತು. ಶಿಬಿರಗಳಲ್ಲಿ ಆಶ್ರಯ ಪಡೆದವರೇ ಬಳಿಕ ಈ ಬಡಾವಣೆಯಲ್ಲಿ ವಾಸ್ತವ್ಯ ಮುಂದುವರಿಸಿದರು. ಮೈಸೂರಿನ ಹಂಗಾಮಿ ದಿವಾನರಾಗಿದ್ದ, ಮೈಸೂರು ವಿಶ್ವವಿದ್ಯಾಲಯದ ಮೊದಲ ಕುಲಪತಿ ಎಚ್.ವಿ.ನಂಜುಂಡಯ್ಯ ಈ ಬಡಾವಣೆಯ ಮೊದಲ ನಿವಾಸಿ ಎಂದು ಹೇಳಲಾಗುತ್ತದೆ. ಮಲ್ಲೇಶ್ವರ ಹೆಸರು ಬರಲು ಇಲ್ಲಿ ಮೊದಲು ಮಲ್ಲಾಪುರ ಎಂಬ ಗ್ರಾಮ ಇದ್ದುದೂ ಕಾರಣ ಎಂಬ ಪ್ರತೀತಿಯೂ ಇದೆ. ಇಲ್ಲಿನ ಕಾಡು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಿಂದಾಗಿಯೂ ಈ ಪ್ರದೇಶಕ್ಕೆ ಮಲ್ಲೇಶ್ವರ ಎಂದು ನಾಮಕರಣ ಮಾಡಲಾಯಿತು ಎನ್ನಲಾಗುತ್ತದೆ. ಮಲ್ಲೇಶ್ವರ ಧಾರ್ಮಿಕ ಕೇಂದ್ರವೂ ಹೌದು. ಇಲ್ಲಿ ದತ್ತಾತ್ರೇಯ, ನಂದೀಶ್ವರ ಮೊದಲಾದ ಹತ್ತಾರು ದೇವಸ್ಥಾನಗಳಿವೆ, ಯತಿರಾಜ, ರಾಘವೇಂದ್ರಸ್ವಾಮಿ... ಮೊದಲಾದ ಮಠಗಳಿವೆ. ವಾಣಿಜ್ಯೀಕರಣದಿಂದಾಗಿ ಮಲ್ಲೇಶ್ವರವು ಪ್ರಶಾಂತ ವಾತಾವರಣದ ಚಹರೆಯನ್ನು ಕ್ರಮೇಣ ಕಳೆದುಕೊಳ್ಳುತ್ತಿದೆ. ಆದಾಗ್ಯೂ ಹಳೆಯ ಬೆಂಗಳೂರಿನ ಸೊಗಡನ್ನು ಇಲ್ಲಿ ಈಗಲೂ ಕಾಣಬಹುದು.

ಕಾಡು ಮಲ್ಲೇಶ್ವರನಿಗೆ ಶಿವಾಜಿ ನಂಟು: 'ಬಿದಿರು ಜನಾಂಗ ಲಿಂಗರೂಪಿ ಶಿವನಿಗೆ ಕಾಡು ಮಲ್ಲಿಕಾರ್ಜುನ ಎಂದು ನಾಮಕರಣ ಮಾಡಿ ಸಣ್ಣ ಚಪ್ಪರ ನಿರ್ಮಿಸಿ ಪೂಜೆ ಆರಂಭಿಸಿದರು. ಶಿವಾಜಿಯ ಸಹೋದರ ವೆಂಕೋಜಿ ಅಥವಾ ಏಕೋಜಿ 1669ರಲ್ಲಿ ಪ್ರದೇಶದಲ್ಲಿ ಸ್ಥಾಪಿಸಿ ಕಾಡು ಮಲ್ಲೇಶ್ವರ ದೇವಸ್ಥಾನ ನಿರ್ಮಿಸುತ್ತಾರೆ' ಎಂದು ಇತಿಹಾಸಕಾರ ಧರ್ಮೇಂದ್ರ ಮಾಹಿತಿ ನೀಡಿದರು.



ನಗರದ ಮಲ್ಲೇಶ್ವರ ಸಂಪಿಗೆ ರಸ್ತೆಯ ವಿಹಂಗಮ ನೋಟ —ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಸಂಪಿಗೆ ಮರಗಳು ಮಲ್ಲೇಶ್ವರದ ಹೆಗ್ಗುರುತು

'ಮಹಾರಾಜ ಮಿಲ್ಸ್ (ಈಗಿನ ಮಂತ್ರಿ ಮಾಲ್) ಸ್ಥಳದಲ್ಲಿ ದೊಡ್ಡ ಸಂಪಿಗೆ ಮರವಿತ್ತು. ಉದ್ದಕ್ಕೂ ಸಂಪಿಗೆ ಮರಗಳಿದ್ದ ಈ ರಸ್ತೆಯನ್ನು ಸಂಪಿಗೆ ರಸ್ತೆಯೆಂದು ಗುರುತಿಸಲಾಯಿತು. ಅಮ್ಮಣ್ಣಿ ಕಾಲೇಜಿನ ಸ್ಥಳದ ರಸ್ತೆಯಲ್ಲಿ ಬೇವಿನ ಮರಗಳಿದ್ದವು.ಅದಕ್ಕೆ ಬ್ರಿಟೀಷರು ಮಾರ್ಗೋಸಾ ರಸ್ತೆ ಎಂದು ಕರೆದರು' ಎಂದು ಮಲ್ಲೇಶ್ವರದ ನಿವಾಸಿ ಹಾಗೂ ವಿಮರ್ಶಕ ವಿಜಯಶಂಕರ್ ತಿಳಿಸಿದರು.

'ಸಂಪಿಗೆ ರಸ್ತೆ, ಮಾರ್ಗೋಸಾ ರಸ್ತೆಗಳ ಜೊತೆ ಇಲ್ಲಿ ತೆಂಗಿನ ಮರದ ರಸ್ತೆ, ಸೀಗೆ ಬೇಲಿ ರಸ್ತೆ, ಗಂಧದ ಕೋಟೆ ರಸ್ತೆಗಳೂ ಇವೆ' ಎಂದು ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಉಪಾಧ್ಯಕ್ಷ ರಕ್ಷಿತ್ ಶಿವರಾಮ್ ವಿವರಿಸಿದರು.

> **ಕಾಡು ಮಲ್ಲೇಶ್ವರ ದೇವಸ್ಥಾನದ ಸುತ್ತ ರುದ್ರಾಕ್ಷಿ, ಬಿಲ್ವ, ಹೂವುಗಳ ಮರಗಳನ್ನು ಬೆಳೆಸುತ್ತಿದ್ದೇವೆ. ಇದಕ್ಕೆ ಪವಿತ್ರ ವನ ಎಂದು ಹೆಸರಿಟ್ಟಿದ್ದೇವೆ**
> **ರಕ್ಷಿತ್ ಶಿವರಾಮ್,** ಉಪಾಧ್ಯಕ್ಷರು, ಕಾಡು ಮಲ್ಲೇಶ್ವರ ಗೆಳೆಯರ ಬಳಗ

ಅಂಕಿ-ಅಂಶಗಳು

291 ಎಕರೆ
ಮಲ್ಲೇಶ್ವರ ಬಡಾವಣೆಯ ವಿಸ್ತೀರ್ಣ

10
ಮುಖ್ಯರಸ್ತೆಗಳು ಇಲ್ಲಿವೆ

18
ಅಡ್ಡ ರಸ್ತೆಗಳು ಇಲ್ಲಿವೆ

> **ಮಲ್ಲೇಶ್ವರದಲ್ಲಿ ಪಾದಚಾರಿ ಮಾರ್ಗಗಳೇ ಇಲ್ಲವಾಗಿದ್ದು ವ್ಯಾಪಾರಿಗಳು ಆಕ್ರಮಿಸಿದ್ದಾರೆ. ಎಲ್ಲೆಂದರಲ್ಲಿ ರಸ್ತೆ ಅಗೆದು ಮಲ್ಲೇಶ್ವರದ ಅಂದ ಕೆಡಿಸಿದ್ದಾರೆ**
> **ಮಾವಿನಕೆರೆ ರಂಗನಾಥ್,** ಸಾಹಿತಿ

ಎಂಜಿನಿಯರ್‌ಗಳನ್ನೇ ಬದಲಿಸಬೇಕಾದೀತು...

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ವಿಳಂಬ ಮಾಡುತ್ತಿರುವ ಪಾಲಿಕೆ ಎಂಜನಿಯರ್‌ಗಳು ಉದ್ದೇಶಪೂರ್ವಕವಾಗಿಯೇ ಹೀಗೆ ನಡೆದುಕೊಳ್ಳುತ್ತಿದ್ದಾರೆ. ಇವರು ಇದೇ ರೀತಿ ನಡೆದುಕೊಂಡರೆ ಎಂಜಿನಿಯರ್‌ಗಳನ್ನೇ ಬದಲಿಸಲು ಸರ್ಕಾರಕ್ಕೆ ಸೂಚಿಸುತ್ತೇವೆ' ಎಂದು ಬಿಬಿಎಂಪಿಗೆ ಹೈಕೋರ್ಟ್ ಗಂಭೀರ ಎಚ್ಚರಿಕೆ ನೀಡಿದೆ.

ನಗರದ ರಸ್ತೆ ಗುಂಡಿಗಳನ್ನು ಮುಚ್ಚುವ ವಿಚಾರಕ್ಕೆ ಸಂಬಂಧಿಸಿದಂತೆ 2015ರಲ್ಲಿ ವಿಜಯನ್ ಮೆನನ್ ಎಂಬುವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹಾಜರಿದ್ದ ಪಾಲಿಕೆ ಮುಖ್ಯ ಆಯುಕ್ತ ಗೌರವ ಗುಪ್ತ, 'ಹೈಕೋರ್ಟ್ ಆದೇಶದಂತೆ ತ್ವರಿತವಾಗಿ ನಗರದ ಎಲ್ಲ ರಸ್ತೆ ಗುಂಡಿಗಳನ್ನು ಮುಚ್ಚುತ್ತೇವೆ. ರಸ್ತೆ ಗುಮಟ್ಟದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಸದ್ಯ ನಗರದ 182 ರಸ್ತೆಗಳನ್ನು ಪೈಥಾನ್ ಯಂತ್ರ ಬಳಸಿ ದುರಸ್ತಿ ಮಾಡಲಾಗುತ್ತಿದೆ. ಸಂಚಾರ ದಟ್ಟಣೆ ಹೆಚ್ಚಿರುವ ಕಡೆ ಪೈಥಾನ್ ಯಂತ್ರ ಬಳಸಲಾಗುತ್ತಿದೆ. ಹೊಸ ಟೆಂಡರ್‌ಗೆ ಯಾರೂ ಬಿಡ್ ಸಲ್ಲಿಸಿಲ್ಲ. ಹೀಗಾಗಿ, ಪೈಥಾನ್ ಯಂತ್ರಕ್ಕಾಗಿ ಮತ್ತೆ ಟೆಂಡರ್ ಕರೆಯುತ್ತೇವೆ' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇನ್ನೂ ಏಕೆ ನೀವು ರಸ್ತೆ ಗುಂಡಿಗಳ ಸಮಸ್ಯೆ ಬಗೆಹರಿಸಿಲ್ಲ. ಸಾವಿರಾರು ಕೋಟಿ ರೂಪಾಯಿ ಸುರಿದರೂ ರಸ್ತೆಗಳು ಸರಿಯಾಗುತ್ತಿಲ್ಲ. ಈ ವಿಚಾರದಲ್ಲಿ ತಡ ಮಾಡುವುದನ್ನು ಸಹಿಸಲಾಗದು' ಎಂದು ಎಚ್ಚರಿಸಿತು.

'ರಸ್ತೆ ಗುಂಡಿ ಮುಚ್ಚಲು ಉತ್ತಮ ತಂತ್ರಜ್ಞಾನ ಬಳಸಿ. ಬರೀ ಕಣ್ಣೊರೆಸುವ ತಂತ್ರ ನಡೆಯುವುದಿಲ್ಲ' ಎಂದು ಹೇಳಿರುವ ನ್ಯಾಯಪೀಠ, ಪೈಥಾನ್ ಯಂತ್ರ ಬಳಕೆಗೆ ಸಂಬಂಧಿಸಿದಂತೆ ಮಾರ್ಚ್ 15ರೊಳಗೆ ಕ್ರಿಯಾ ಯೋಜನೆ ರೂಪಿಸಿದ ವಿವರಗಳನ್ನು ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿದೆ.

ಜೈಲಿಗೆ ಹೋಗುವ ದಿನಗಳು ಹತ್ತಿರವಾಗುತ್ತಿವೆ...!

ಒಂದನೇ ಪುಟದಿಂದ

ವಿಚಾರಣೆ ವೇಳೆ, 'ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಗ್ರಹಿಸಲಾಗುವ ಕಸವನ್ನು ಮಿಟ್ಟಗಾನಹಳ್ಳಿ ಕ್ವಾರಿ ಪ್ರದೇಶದಲ್ಲಿ ಸುರಿಯದಂತೆ ನ್ಯಾಯಾಲಯದ ಸ್ಪಷ್ಟ ನಿರ್ಬಂಧ ಇದ್ದರೂ ಈ ಆದೇಶವನ್ನು ಉಲ್ಲಂಘಿಸಲಾಗಿದೆ' ಎಂಬ ಆಕ್ಷೇಪಣೆಗೆ ನ್ಯಾಯಪೀಠ ಗರಂ ಆಯಿತು. ಮುಖ್ಯ ನ್ಯಾಯಮೂರ್ತಿಗಳಂತೂ ಬಿಬಿಎಂಪಿ ಪರ ಹಾಜರಾಗಿದ್ದ ಹಿರಿಯ ವಕೀಲ ಉದಯ್ ಹೊಳ್ಳ ಅವರನ್ನು, 'ನೀವು ಹಿರಿಯ ವಕೀಲರಾಗಿ ಇಂಥ ಆಯುಕ್ತರನ್ನು ಸಮರ್ಥಿಸಿಕೊಳ್ಳುತ್ತಿರುವುದು ವಿಷಾದನೀಯ' ಎಂದು ವ್ಯಥೆಯನ್ನು ಹೊರಹಾಕಿದರು.

'ಮುಖ್ಯ ಆಯುಕ್ತರು ನ್ಯಾಯಾಲಯದ ಆದೇಶಕ್ಕೆ ಸಂಪೂರ್ಣ ಅಗೌರವ ತೋರಿದ್ದಾರೆ. ಇದಕ್ಕಿಂತ ದೊಡ್ಡ ಅಗೌರವ ಇನ್ನೊಂದಿಲ್ಲ. ಸಂಕಟ ಒದಗಿದೆ ಎಂದು ಸಮರ್ಥಿಸಿಕೊಳ್ಳಲು ಈಗ ನಿಮ್ಮನ್ನು ನಿಯೋಜಿಸಲಾಗಿದೆ. ಇವರನ್ನು ನೀವು ಹೇಗೆ ಸಮರ್ಥಿಸಿಕೊಳ್ಳುತ್ತೀರಿ. ಹೀಗಾದರೆ ನಾವಾದರೂ ತಾನೆ ಏನು ಹೇಳುವುದು. ನಾವೆಲ್ಲರೂ ನ್ಯಾಯಾಲಯದ ಘನತೆ ಎತ್ತಿ ಹಿಡಿಯಬೇಕಲ್ಲವೇ. ಅಷ್ಟಕ್ಕೂ, ಯಾವುದಾದರೂ ಕಾನೂನಿನ ಮೂಲಕ ಅವರನ್ನು ರಕ್ಷಿಸಬಹುದು ಎಂದು ತೋರಿಸಿದರೆ ನಿಮಗೆ ಸ್ವಾಗತ' ಎಂದು ಕುಟುಕಿದರು.



> **ಗೌರವ ಗುಪ್ತ ಐಎಎಸ್ ಅಧಿಕಾರಿಯಾಗಿದ್ದಾರೆ. ಈ ಅಧಿಕಾರಿಯನ್ನು ಜೈಲಿಗೆ ಕಳುಹಿಸಬೇಕು. ನ್ಯಾಯಾಲಯದ ಆದೇಶ ಎಂದರೇನು ಎಂಬುದನ್ನು ಅವರಿಗೆ ಸ್ಪಷ್ಟವಾಗಿ ಅರ್ಥ ಮಾಡಿಸಬೇಕಿದೆ.**
> **ಋತುರಾಜ್ ಅವಸ್ಥಿ,** ಮುಖ್ಯ ನ್ಯಾಯಮೂರ್ತಿ

'ತಪ್ಪನ್ನು ಮನ್ನಿಸಿಬಿಡಿ'

ಮುಖ್ಯ ನ್ಯಾಯಮೂರ್ತಿಗಳ ಕೋಪವನ್ನು ತಣಿಸಲು ಪ್ರಯತ್ನಿಸಿದ ಉದಯ ಹೊಳ್ಳ ಅವರು, ಮಹಾಭಾರತದ ಶಿಶುಪಾಲ-ಕೃಷ್ಣನ ದೃಷ್ಟಾಂತವೊಂದನ್ನು ಉಲ್ಲೇಖಿಸಿದರು. ಮುಖ್ಯ ನ್ಯಾಯಮೂರ್ತಿಗಳನ್ನು ಕೃಷ್ಣನಿಗೂ, ತಪ್ಪಿತಸ್ಥ ಶಿಶುಪಾಲನ ಸ್ಥಾನದಲ್ಲಿ ಬಿಬಿಎಂಪಿಯನ್ನೂ ಇಟ್ಟು ತೂಗಿದ ಅವರು, 'ಶಿಶುಪಾಲ ನೂರು ತಪ್ಪುಗಳನ್ನು ಮಾಡಿದ್ದರೂ ಕೃಷ್ಣ ಶಿಶುಪಾಲನನ್ನು ಕ್ಷಮಿಸಿದ್ದ. ನಾವು ನಿಮ್ಮನ್ನು ಕೃಷ್ಣ ಎಂದು ನಂಬಿ ಬಂದಿದ್ದೇವೆ' ಬಿನ್ನವಿಸಿಕೊಂಡರು.

ಮುಖ್ಯಾಂಶಗಳು

- ಬಿಬಿಎಂಪಿ ಅಧಿಕಾರಿಗಳಿಗೆ ದಪ್ಪ ಚರ್ಮವಿದೆ
- ಇಂತಹ ಅಧಿಕಾರಿಗಳನ್ನು ಹೇಗೆ ತಾನೇ ಸಮರ್ಥಿಸಿ-ಕೊಳ್ಳುತ್ತೀರಿ?

ನಗರದಲ್ಲಿ ಇಂದು

ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಸೈಕ್ಲೊಥಾನ್: ಅತಿಥಿ–ಡಾ.ಎಚ್. ಸುದರ್ಶನ ಬಲ್ಲಾಳ್, ಆಯೋಜನೆ ಮತ್ತು ಸ್ಥಳ–ಮಣಿಪಾಲ್ ಆಸ್ಪತ್ರೆ, ಹಳೆ ವಿಮಾನ ನಿಲ್ದಾಣ ರಸ್ತೆ, ಬೆಳಿಗ್ಗೆ 6.30

ಕುಂಚಿಟಿಗ ಆದರ್ಶ ದಂಪತಿ ಪ್ರಶಸ್ತಿ ಪ್ರದಾನ ಹಾಗೂ ರಾಜ್ಯಮಟ್ಟದ ಸ್ನೇಹ ಮಿಲನ: ಸಾನ್ನಿಧ್ಯ–ಶಾಂತವೀರ ಸ್ವಾಮೀಜಿ, ಹನುಮಂತನಾಥ ಸ್ವಾಮೀಜಿ, ಅತಿಥಿಗಳು–ರಂಗಸ್ವಾಮಿ ನಟರಾಜ್, ಮುರಳೀಧರ ಹಾಲಪ್ಪ, ಕೆ.ಎಸ್.ನವೀನ್, ಎಸ್.ಲಿಂಗಮೂರ್ತಿ, ಕೆ.ಸಿ.ವೀರಣ್ಣ, ಆಯೋಜನೆ–ವಿಶ್ವ ಕುಂಚಿಟಿಗರ ಪರಿಷತ್ತು, ಸ್ಥಳ–ಮಳವಳ್ಳಿ ಚಿಕ್ಕಣ್ಣ ಚಾರಿಟೀಸ್ ಕಲ್ಯಾಣ ಮಂಟಪ, ಶೇಷಾದ್ರಿಪುರ, ಬೆಳಿಗ್ಗೆ 10

ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ: ಅತಿಥಿಗಳು–ಶ್ರೀನಿವಾಸ ಬಳ್ಳಿ, ಡಿ.ರೂಪಾ, ವಿ.ನಾಗರಾಜ್, ಆಯೋಜನೆ–ಸಮರ್ಥ ಭಾರತ, ಸ್ಥಳ–ಮಿಥಿಕ್ ಸೊಸೈಟಿ ಸಭಾಂಗಣ, ನೃಪತುಂಗ ರಸ್ತೆ, ಕೆ.ಆರ್. ವೃತ್ತದ ಬಳಿ, ಬೆಳಿಗ್ಗೆ 10

ಲಕ್ಷ್ಮೀಶ್ ಹೆಗಡೆ ಸೋಂದಾ ಅವರ 'ಬನವಾಸಿ ಮತ್ತು ಕದಂಬರ ಇತಿಹಾಸ' ಪುಸ್ತಕ ಬಿಡುಗಡೆ: ಅಜಿತ್ ಹನುಮಕ್ಕನವರ್, ಅತಿಥಿಗಳು–ನಟ ದೊಡ್ಡಣ್ಣ, ಪುಸ್ತಕ ಕುರಿತು–ಅನುರಾಧ, ಆಯೋಜನೆ–ಕದಂಬ ಪ್ರಕಾಶನ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಮಹಿಳಾ ದಿನ ಮತ್ತು ಕವಿಗೋಷ್ಠಿ: ಅತಿಥಿಗಳು–ವಿಜಯ್ ಗುರುರಾಜ್, ಎಚ್.ಕೆ.ಸುಪ್ರಭಾ, ಭಾರ್ಗವಿ, ಆಯೋಜನೆ–ಪ್ರತಿಭಾ ಹೊಂಗಿರಣ ಸಾಂಸ್ಕೃತಿಕ ವೇದಿಕೆ, ಸ್ಥಳ–ಕೆನ್‌ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಜಿಲ್ಲಾ ಮತ್ತು ತಾಲ್ಲೂಕು ವಕೀಲರ ಸಂಘದ ನೂತನ ಪದಾಧಿಕಾರಿಗಳ ಸಮ್ಮೇಳನ: ಉದ್ಘಾಟನೆ–ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ಅತಿಥಿಗಳು–ಸಚಿವ ಜೆ.ಸಿ.ಮಾಧುಸ್ವಾಮಿ, ಪ್ರಭುಲಿಂಗ ಕೆ.ನಾವದಗಿ, ಎಂ.ಬಿ. ನರಗುಂದ, ಅಧ್ಯಕ್ಷತೆ–ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ ಮತ್ತು ಸ್ಥಳ–ಬೆಂಗಳೂರು ವಕೀಲರ ಸಂಘ, ಹೈಕೋರ್ಟ್ ವಿಭಾಗ, ಬೆಳಿಗ್ಗೆ 10.30

ಮಡಿವಾಳ ಮಾಚಿದೇವ ಜಯಂತಿ: ಸಾನ್ನಿಧ್ಯ–ಮುಕ್ತಾನಂದ ಸ್ವಾಮೀಜಿ, ಉದ್ಘಾಟನೆ–ವಿ.ಸೋಮಣ್ಣ, ಅಧ್ಯಕ್ಷತೆ–ಸಿ.ನಂಜಪ್ಪ, ಅತಿಥಿಗಳು–ಅಶ್ವಥ್ ನಾರಾಯಣ, ಅರುಣ್ ಸೋಮಣ್ಣ, ಆಯೋಜನೆ–ಮಡಿವಾಳರ ಜಾಗೃತಿ ವೇದಿಕೆ, ಸ್ಥಳ–ಜ್ಞಾನಸೌಧ, ಅನಂತಕುಮಾರ್ ಸಭಾಂಗಣ, ಮೂಡಲಪಾಳ್ಯ, ಬೆಳಿಗ್ಗೆ 11

'ಬೀಯಿಂಗ್ ನೇಚರ್ ಫ್ರೆಂಡ್ಲಿ' ತೋಟದ ನಡಿಗೆ ಮತ್ತು ಚರ್ಚೆ: ಪ್ರೊ.ರಘೋತ್ತಮ ರಾವ್, ಆಯೋಜನೆ ಮತ್ತು ಸ್ಥಳ–ರಾಗಿ ಕಣ, ಬನ್ನೇರುಘಟ್ಟ ರಸ್ತೆ, ಗೊಟ್ಟಿಗೆರೆ, ಬೆಳಿಗ್ಗೆ 11

'ಲವಕುಶ' ಮತ್ತು 'ಶ್ರೀರಾಮ ನಿರ್ಯಾಣ' ಪೌರಾಣಿಕ ಯಕ್ಷಗಾನ ಪ್ರದರ್ಶನ: ಆಯೋಜನೆ–ಯಕ್ಷಗಾನ ತಪಸ್ಸಂಘ, ಸ್ಥಳ–ಉದಯಭಾನು ಕಲಾ ಸಂಘ, ಕೆಂಪೇಗೌಡ ನಗರ, ಮಧ್ಯಾಹ್ನ 3

ವಿಶ್ವ ಮಹಿಳಾ ದಿನ ಅಂಗವಾಗಿ 'ಸನ್ ಫ್ಲವರ್' ಸಿನಿಮಾ ಪ್ರದರ್ಶನ: ಆಯೋಜನೆ–ಹಿತೈಷಿಣಿ ಮಹಿಳಾ ಅಧ್ಯಯನ ಕೇಂದ್ರ, ಸಮಕಾಲೀನ ಮಹಿಳಾ ವೇದಿಕೆ, ಸ್ಥಳ–ವೀಣಾ ವಿಹಾರ, ಎನ್.ಆರ್.ಕಾಲೊನಿ, ಮಧ್ಯಾಹ್ನ 3.30

ಹಿಂದೂಸ್ತಾನಿ ಸಂಗೀತೋತ್ಸವ: ಉದ್ಘಾಟನೆ–ಉಸ್ತಾದ್ ಹಫೀಝ್ ಬಾಲೇಖಾನ್, ಅಧ್ಯಕ್ಷತೆ–ಪಂಡಿತ್ ಸತೀಶ್ ಹಂಪಿಹೊಳಿ, ಅತಿಥಿಗಳು–ಪಂಡಿತ್ ವೆಂಕಟೇಶ್ ಆಲ್ಕೋಡ್, ಮಾಧವ ಭಟ್, ಆಯೋಜನೆ–ಗುರು ಸಮರ್ಥ ಸಂಗೀತ ವಿದ್ಯಾಲಯ, ಸ್ಥಳ–ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ನಯನ ಸೂಡ ಅವರಿಂದ ಅಕ್ಕೈ ಪದ್ಮಶಾಲಿ ಅವರ ಜೀವನಾಧಾರಿತ 'ಅಕ್ಕಯ್' ನಾಟಕ ಪ್ರದರ್ಶನ: ಅಧ್ಯಕ್ಷತೆ–ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅತಿಥಿಗಳು–ಲೈಂಗಿಕ ಅಲ್ಪಸಂಖ್ಯಾತರ ಹೋರಾಟಗಾರ್ತಿ ಅನಿಂದ್ಯಾ ಹಾಜ್ರ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಗೀತಮ್ಮ ನಾಯಕ್, ಉಲಿವಾಲ ಮೋಹನ್ ಕುಮಾರ್, ಬೇಲೂರು ರಘುನಂದನ್, ಆಯೋಜನೆ–ಕಾಜಾಣ ಮತ್ತು ರಂಗಪಯಣ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6



'ಅಕ್ಕಯ್' ನಾಟಕ ಪ್ರದರ್ಶನ

'ವ್ಯೋಮಾ 360' ನಾಟಕೋತ್ಸವ: ನಾಟಕಗಳು–ಜಲ್ಪ, ಕರೋನಮ್ಮನ ಕೃಪೆ, ಒಂದು ವಿಲಯ ಕಥೆ, ಆಯೋಜನೆ–ಯೂ ಆ್ಯಂಡ್ ಮಿ ಥಿಯೇಟರ್, ಸ್ಥಳ–ವ್ಯೋಮಾ ರಂಗಮಂದಿರ, ಜೆ.ಪಿ.ನಗರ, ಸಂಜೆ 5ರಿಂದ

'ಸ್ವರ ಧಾರಾ' ಸಂಗೀತ ಕಾರ್ಯಕ್ರಮ: ಗಾಯನ–ಅನಿರುದ್ಧ ಐತಾಳ, ಇಂದ್ರಾಣಿ ಮುಖರ್ಜಿ, ಅತಿಥಿ–ಜಿ.ಎ.ರಾಮಕೃಷ್ಣ, ಆಯೋಜನೆ–ಸಪ್ತಕ ಬೆಂಗಳೂರು, ಸ್ಥಳ–ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಮಾನಸಿ ಪ್ರಸಾದ್ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ: ವಯೋಲಿನ್–ಮತ್ತೂರು ವಿಶ್ವಜಿತ್, ಮೃದಂಗ–ಅನೂರು ವಿನೋದ್ ಶ್ಯಾಮ್, ಆಯೋಜನೆ ಮತ್ತು ಸ್ಥಳ–ಶ್ರೀರಾಮ ಲಲಿತಾ ಕಲಾಮಂದಿರ, ಬನಶಂಕರಿ 2ನೇ ಹಂತ, ಸಂಜೆ 5.30

ಸ್ನೇಹ ಸೇತು: 'ಚಿತ್ರಾಕ್ಷಿ ಕಲ್ಯಾಣ' ಯಕ್ಷಗಾನ ಪ್ರದರ್ಶನ, ಹಿಮ್ಮೇಳ–ಸುಬ್ರಾಯ ಹೆಬ್ಬಾರ್ ಮತ್ತು ಸಂಗಡಿಗರು, ಅತಿಥಿ–ಜಿ.ಎಲ್.ಹೆಗಡೆ, ಆಯೋಜನೆ–ಉತ್ತರ ಕನ್ನಡ ಸಂಘ, ಸ್ಥಳ–ಉತ್ತರ ಕನ್ನಡ ಭವನ, ನಂದಿನಿ ಬಡಾವಣೆ, ಸಂಜೆ 5.30

'ಆರೋಗ್ಯ ಉದ್ಯಮದಲ್ಲಿ ಹೊಸ ಯುಗದ ಕೌಶಲ ಅಭಿವೃದ್ಧಿ' ಕುರಿತು ಅಂತರರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಅತಿಥಿಗಳು–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಆರೋಗ್ಯ ಸಚಿವ ಕೆ.ಸುಧಾಕರ್, ಎಚ್‌ಸಿಜಿ ಆಸ್ಪತ್ರೆಯ ಅಧ್ಯಕ್ಷ ಕೆ.ಎಸ್. ಗೋಪಿನಾಥ್, ಆಯೋಜನೆ–ಭಾರತೀಯ ವೈದ್ಯಕೀಯ ಸಂಘ ಹಾಗೂ ಭಾರತೀಯ ವಿದ್ಯುನ್ಮಾನ ವಲಯದ ಕೌಶಲ ಮಂಡಳಿ, ಸ್ಥಳ–ಕರ್ನಾಟಕ ವೈದ್ಯಕೀಯ ಮಂಡಳಿ, ವಸಂತನಗರ, ಸಂಜೆ 5.30

ಸಮಷ್ಟಿ ನಾಟಕೋತ್ಸವ: ನಾಟಕ–ವಾಲಿ ವಧೆ, ನಿರ್ದೇಶನ–ಎಂ.ಗಣೇಶ್, ಆಯೋಜನೆ–ಸಮಷ್ಟಿ, ಸ್ಥಳ–ಎಡಿಎ ರಂಗಮಂದಿರ, ಸಂಜೆ 7

ಭಾವಾಂತರಂಗ ನಾಟಕೋತ್ಸವ: ನಾಟಕ–ಮುಖ್ಯಮಂತ್ರಿ, ತಂಡ–ಕಲಾಗಂಗೋತ್ರಿ, ನಿರ್ದೇಶನ–ಬಿ.ವಿ.ರಾಜಾರಾಂ, ಆಯೋಜನೆ–ಭಾಗವತರು ಸಾಂಸ್ಕೃತಿಕ ಸಂಘಟನೆ, ಸ್ಥಳ–ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

'ಹನ್ಸ್-ಎನ್‌ಜಿ' ಯಶಸ್ವಿ ಪ್ರಯೋಗ ನಡೆಸಿದ ಎನ್‌ಎಎಲ್

ಬೆಂಗಳೂರು: ಸಮುದ್ರದಲ್ಲಿ ಕೈಗೊಂಡಿದ್ದ 'ಹನ್ಸ್-ಎನ್‌ಜಿ' ತರಬೇತಿ ವಿಮಾನದ ವಿವಿಧ ರೀತಿಯ ಹಾರಾಟ ಪ್ರಯೋಗಗಳು ಯಶಸ್ವಿಯಾಗಿವೆ.

ಈ ವಿಮಾನವನ್ನು ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯವು (ಎನ್‌ಎಎಲ್) ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದೆ. ದೇಶಿಯವಾಗಿ ಅಭಿವೃದ್ಧಿಪಡಿಸಿದ ಮೊದಲ ತರಬೇತಿ ವಿಮಾನ ಇದಾಗಿದೆ.

ಪುದುಚೇರಿಯಲ್ಲಿ ಫೆ.19ರಿಂದ ಮಾರ್ಚ್ 5ರವರೆಗೆ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿನ (ಸಿಎಸ್‌ಐಆರ್) ಸಹಯೋಗದಲ್ಲಿ ಈ ವಿಮಾನ ಹಾರಾಟದ ಪ್ರಯೋಗ ಕೈಗೊಳ್ಳಲಾಗಿತ್ತು.

ಈ ವಿಮಾನವು ಫೆ.19ರಂದು ಪ್ರತಿ ಗಂಟೆಗೆ 155 ಕಿ.ಮೀ. ವೇಗದಲ್ಲಿ 140 ನಾಟಿಕಲ್ ಮೈಲಿ ದೂರವನ್ನು ಒಂದೂವರೆ ಗಂಟೆಯಲ್ಲಿ ಕ್ರಮಿಸಿ ಪುದುಚೇರಿ ತಲುಪಿತ್ತು. ಅಲ್ಲಿ 18 ಗಂಟೆಗಳ ಹಾರಾಟ ನಡೆಸಿದ ಬಳಿಕ ಶನಿವಾರ ವಿಮಾನ ಬೆಂಗಳೂರಿಗೆ ಮರಳಿದೆ. ಅತ್ಯಾಧುನಿಕ ವ್ಯವಸ್ಥೆಗಳು ಮತ್ತು ದೂರಸಂವಹನ ಉಪಕರಣ (ಎಎಸ್‌ಟಿಇ) ವಿಂಗ್ ಕಮಾಂಡರ್ ಕೆ.ವಿ. ಪ್ರಕಾಶ್ ಮತ್ತು ವಿಂಗ್ ಕಮಾಂಡರ್ ದಿಲೀಪ್ ರೆಡ್ಡಿ ಅವರು ಈ ವಿಮಾನದ ಪೈಲಟ್‌ಗಳಾಗಿದ್ದರು. ಈ ವಿಮಾನದ ಪರೀಕ್ಷೆಯ ಫಲಿತಾಂಶಗಳ ಬಗ್ಗೆ ಎನ್‌ಎಎಲ್ ವಿನ್ಯಾಸಕಾರರಾದ ವಿಂಗ್ ಕಮಾಂಡರ್ ರೀಜು ಚಕ್ರವರ್ತಿ ವಿಶ್ಲೇಷಣೆ ನಡೆಸಿದರು. ಹನ್ಸ್-ಎನ್‌ಜಿ ಅತ್ಯಾಧುನಿಕ ವಿಮಾನವು 'ರೋಟ್ಯಾಕ್ಸ್' ಡಿಜಿಟಲ್ ನಿಯಂತ್ರಣ ಎಂಜಿನ್ ವ್ಯವಸ್ಥೆಯನ್ನು ಹೊಂದಿದ್ದು ಹಲವು ವೈಶಿಷ್ಟ್ಯಗಳನ್ನು ಹೊಂದಿದೆ.

'ಪ್ರಭಾರ ಪ್ರಾಂಶುಪಾಲರ ನೇಮಕಕ್ಕೆ ಕೌನ್ಸೆಲಿಂಗ್'

ಬೆಂಗಳೂರು: 'ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 410 ಪ್ರಾಂಶುಪಾಲರ ಹುದ್ದೆಗಳಿಗೆ ಕೌನ್ಸೆಲಿಂಗ್ ನಡೆಸಿ ಹಿರಿಯ ಉಪನ್ಯಾಸಕರನ್ನು ಪ್ರಭಾರ ಪ್ರಾಂಶುಪಾಲರಾಗಿ ನೇಮಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ

'ಪದವಿ ಕಾಲೇಜುಗಳಲ್ಲಿ ಗ್ರೇಡ್-1 ದರ್ಜೆಯ 327 ಹುದ್ದೆಗಳು ಮತ್ತು ಸ್ನಾತಕೋತ್ತರ ಕೋರ್ಸ್ ಇರುವ ಪದವಿ ಕಾಲೇಜುಗಳಲ್ಲಿ ಗ್ರೇಡ್- 2 ದರ್ಜೆಯ 38 ಹುದ್ದೆಗಳು ಲಭ್ಯವಿವೆ. ಈ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ಫೆಬ್ರವರಿ ತಿಂಗಳಲ್ಲಿ ನಿವೃತ್ತರಾಗಿದ್ದಾರೆ' ಎಂದಿದ್ದಾರೆ.

'ಪ್ರಾಂಶುಪಾಲರ ಹುದ್ದೆ ಖಾಲಿ ಇರುವ ಕಾಲೇಜುಗಳ ವಿವರಗಳನ್ನು ಕೌನ್ಸೆಲಿಂಗ್ ಆರಂಭಿಸುವುದಕ್ಕೂ 15 ದಿನಗಳ ಮೊದಲೇ ಕಾಲೇಜು ಶಿಕ್ಷಣ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಸೇವಾ ಜ್ಯೇಷ್ಠತೆಯ ಆಧರಿಸಿ ಆಯ್ಕೆ ಶ್ರೇಣಿ ಉಪನ್ಯಾಸಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕರನ್ನು ಮಾತ್ರವೇ ಕೌನ್ಸೆಲಿಂಗ್‌ಗೆ ಕರೆಯಲಾಗುವುದು. ಜತೆಗೆ, ಈ ಹುದ್ದೆಗೆ ಆಯ್ಕೆ ಆಗುವವರು ಬೋಧಿಸುವಂಥ ವಿಷಯವು ಆಯಾ ಕಾಲೇಜಿನಲ್ಲಿ ಇರುವಂತೆ ನೋಡಿಕೊಳ್ಳಲಾಗುವುದು' ಎಂದಿದ್ದಾರೆ.

ಕೌನ್ಸೆಲಿಂಗ್: 'ಸರ್ಕಾರಿ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆಯನ್ನು ಕೂಡ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲೇ ನಡೆಸಲು ತೀರ್ಮಾನಿಸಲಾಗಿದೆ. ಈ ಪ್ರಕ್ರಿಯೆ ಕೂಡ ಕೌನ್ಸೆಲಿಂಗ್ ಮೂಲಕವೇ ನಡೆಯಲಿದೆ' ಎಂದರು.

ತಕ್ಷಣ ಬದಲಿ ವ್ಯವಸ್ಥೆಗೆ ಜಲ ಶಕ್ತಿ ಸಚಿವ ಶೇಖಾವತ್ ಸೂಚನೆ

ಕುಡಿಯುವ ನೀರಲ್ಲಿ ಯುರೇನಿಯಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವು ಗ್ರಾಮಗಳಲ್ಲಿ ಮನೆಗಳಿಗೆ ಪೂರೈಕೆಯಾಗುತ್ತಿರುವ ಕುಡಿಯುವ ನೀರಿನಲ್ಲಿ ಯುರೇನಿಯಂ ಮಿಶ್ರಣ ಪತ್ತೆಯಾಗಿರುವ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿರುವ ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ತಕ್ಷಣ ಬದಲಿ ವ್ಯವಸ್ಥೆ ಮಾಡುವಂತೆ ನಿರ್ದೇಶನ ನೀಡಿದ್ದಾರೆ.


ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಗಳ ಅನುಷ್ಠಾನ ಕುರಿತು ವಿಧಾನಸೌಧದಲ್ಲಿ ಶನಿವಾರ ನಡೆದ ದಕ್ಷಿಣದ ರಾಜ್ಯಗಳ ಪ್ರಾದೇಶಿಕ ಸಮ್ಮೇಳನದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

'ಕರ್ನಾಟಕದ ಪೂರ್ವಭಾಗದ ಕೆಲವು ಹಳ್ಳಿಗಳಲ್ಲಿ ಯುರೇನಿಯಂ ಮಿಶ್ರಣದಿಂದ ಕಲುಷಿತಗೊಂಡಿರುವ ನೀರನ್ನು ಕುಡಿಯುವುದಕ್ಕೆ ಪೂರೈಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದು ಅತ್ಯಂತ ಗಂಭೀರವಾದ ವಿಚಾರ. ಯುರೇನಿಯಂ ಮಿಶ್ರಿತ ನೀರನ್ನು ಕುಡಿಯುವಂತೆ ಜನರ ಮೇಲೆ ಒತ್ತಡ ಹೇರಬಾರದು. ತಕ್ಷಣ ಸಮಸ್ಯೆ ಪರಿಹರಿಸುವಂತೆ ಸೂಚಿಸಿದ್ದೇನೆ' ಎಂದು ಕೇಂದ್ರ ಸಚಿವರು ಹೇಳಿದರು.

ರಾಜ್ಯದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಪೂರೈಸುತ್ತಿರುವ ಕುಡಿಯುವ ನೀರಿನಲ್ಲಿ ಯುರೇನಿಯಂ ಮಿಶ್ರಣ ಪತ್ತೆಯಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

'ಈ ಸಮಸ್ಯೆ ಕಂಡುಬಂದಿರುವ ಗ್ರಾಮೀಣ ಪ್ರದೇಶಗಳಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಒದಗಿಸಬೇಕು ಮತ್ತು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು. ಆಗ ಶುದ್ಧ ಕುಡಿಯುವ ನೀರು ಒದಗಿಸಲು ಸಾಧ್ಯವಾಗುತ್ತದೆ' ಎಂದು ಶೇಖಾವತ್ ತಿಳಿಸಿದರು.

'ಮೇಕೆದಾಟು ವಿವಾದ ಇತ್ಯರ್ಥಕ್ಕೆ ಮಾತುಕತೆ'



'ಬೆಂಗಳೂರು: ಮೇಕೆದಾಟು ಯೋಜನೆಗೆ ಸಂಬಂಧಿಸಿದ ವಿವಾದವನ್ನು ಮಾತುಕತೆ ಮೂಲಕ ಪರಿಹರಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಮಾತುಕತೆಯ ಮೂಲಕವೇ ವಿವಾದ ಪರಿಹರಿಸಿಕೊಳ್ಳುವುದು ಉತ್ತಮ. ಇದಕ್ಕಾಗಿ ಎರಡೂ ಕಡೆಯವರು ಕುಳಿತು ಚರ್ಚಿಸಿ, ಒಮ್ಮತಕ್ಕೆ ಬರಬೇಕಿದೆ' ಎಂದು ಹೇಳಿದರು.

'ಎರಡೂ ರಾಜ್ಯಗಳ ನಡುವೆ ಮಾತುಕತೆ ನಡೆಸಲು ನಾವು ಪ್ರಯತ್ನಿಸುತ್ತಿದ್ದೇವೆ. ಈ ಪ್ರಕ್ರಿಯೆ ಪ್ರಗತಿಯಲ್ಲಿದೆ. ಆದರೆ, ಯಾವ ದಿನ ನಡೆಯಲಿದೆ ಎಂಬುದನ್ನು ಹೇಳುವುದು ಕಷ್ಟ. ಎರಡೂ ರಾಜ್ಯಗಳು ಸಹಮತಕ್ಕೆ ಬಂದರೆ ಮಾತ್ರವೇ ಮಾತುಕತೆ ನಡೆಯಲು ಸಾಧ್ಯ' ಎಂದು ಹೇಳಿದರು.

ಮೇಕೆದಾಟು ಯೋಜನೆ ತ್ವರಿತವಾಗಿ ಅನುಷ್ಠಾನಕ್ಕೆ ಬರಬೇಕು ಎಂಬುದು ತಮ್ಮ ಬಯಕೆ ಕೂಡ. ಆದರೆ, ಈ ವಿಚಾರ ನ್ಯಾಯಾಲಯದಲ್ಲಿದೆ. ಹೀಗಾಗಿ ಹೆಚ್ಚು ಮಾತನಾಡುವುದು ಸರಿಯಲ್ಲ ಎಂದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ಕಾಂಗ್ರೆಸ್ ಮುಖಂಡರು ನಡೆಸಿದ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್ 55 ವರ್ಷಗಳ ಕಾಲ ಈ ದೇಶದಲ್ಲಿ ಅಧಿಕಾರ ನಡೆಸಿದೆ. ಆಗ ಕಾಂಗ್ರೆಸ್ ಪಕ್ಷದವರು ಸರಿಯಾಗಿ ಕೆಲಸ ಮಾಡಿದ್ದರೆ ಈಗ ಇಂತಹ ಸಮಸ್ಯೆಗಳೇ ಇರುತ್ತಿರಲಿಲ್ಲ' ಎಂದರು.

11 ಕೆರೆಗಳ ಒತ್ತುವರಿ ತೆರವು

ಬೆಂಗಳೂರು: ಸರ್ಕಾರಿ ಜಮೀನು ಕಬಳಿಸಿರುವವರ ವಿರುದ್ಧದ ಕಾರ್ಯಾಚರಣೆಯನ್ನು ಮುಂದುವರಿಸಿರುವ ನಗರ ಜಿಲ್ಲಾಡಳಿತವು 11 ಕೆರೆಗಳ ಒತ್ತುವರಿಯನ್ನು ಶನಿವಾರ ತೆರವುಗೊಳಿಸಿದೆ.

ಬೆಂಗಳೂರು ಪೂರ್ವ, ಯಲಹಂಕ ತಾಲ್ಲೂಕುಗಳಲ್ಲಿ 28 ಗುಂಟೆ ಸರ್ಕಾರಿ ಗೋಮಾಳ ಪ್ರದೇಶ ಒತ್ತುವರಿ ತೆರವುಗೊಳಿಸಲಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 22 ಗುಂಟೆ ಸರ್ಕಾರಿ ಖರಾಬು, ಬೆಂಗಳೂರು ಉತ್ತರ ತಾಲ್ಲೂಕಿನ 2 ಗುಂಟೆ ಸರ್ಕಾರಿ ಗುಂಡುತೋಪು, ಯಲಹಂಕ ಮತ್ತು ಆನೇಕಲ್ ತಾಲ್ಲೂಕಿಗಳಲ್ಲಿ 7 ಗುಂಟೆ ಸ್ಮಶಾನ ಜಾಗ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಜೆ.ಮಂಜುನಾಥ್ ವಿವರಿಸಿದ್ದಾರೆ.

ಒಟ್ಟು ₹3.89 ಕೋಟಿ ಮೌಲ್ಯದ 6 ಎಕರೆ 26 ಗುಂಟೆ ಸರ್ಕಾರಿ ಜಾಗ ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಉಕ್ರೇನ್: ಭಾರತೀಯರ ರಕ್ಷಣೆಗೆ ಪ್ರಧಾನಿ ಉನ್ನತ ಮಟ್ಟದ ಸಭೆ

ನವದೆಹಲಿ: ರಷ್ಯಾದ ದಾಳಿಗೆ ತುತ್ತಾಗಿರುವ ಉಕ್ರೇನ್ ಪರಿಸ್ಥಿತಿ ಹಾಗೂ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ತಾಯ್ನಾಡಿಗೆ ಕರೆತರುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಸಂಜೆ ಉನ್ನತ ಮಟ್ಟದ ಮತ್ತೊಂದು ಸಭೆ ನಡೆಸಿದರು.

ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ಸಚಿವ ಪಿಯೂಷ್ ಗೋಯೆಲ್ ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ರಷ್ಯಾದ ಸೇನೆ ಭಾರೀ ಪ್ರಮಾಣದ ಬಾಂಬ್ ಮತ್ತು ಶೆಲ್ ದಾಳಿ ನಡೆಸುತ್ತಿರುವ ಉಕ್ರೇನ್ ಸುಮಿ ನಗರದಲ್ಲಿ ಸಿಲುಕಿರುವ 700 ಭಾರತೀಯರನ್ನು ಸುರಕ್ಷಿತವಾಗಿ ಕರೆತರುವುದು ತಮ್ಮ ಮುಂದಿನ ಆದ್ಯತೆಯಾಗಿದೆ ಎಂದು ಸರ್ಕಾರ ತಿಳಿಸಿದೆ. ಅಲ್ಲದೆ ಈ ವೇಳೆ ಹಾರ್ಕಿವ್ ಮತ್ತು ಪಿಸೋಚಿನ್ ನಗರಗಳಲ್ಲಿರುವ ಭಾರತೀಯರನ್ನು ರಕ್ಷಿಸಲಾಗುತ್ತಿದೆ ಎಂದು ವಿದೇಶಾಂಗ ಇಲಾಖೆ ವಕ್ತಾರ ಅರಿಂದಮ್ ಬಗ್ಚಿ ಸಭೆಗೆ ಮಾಹಿತಿ ನೀಡಿದರು.

ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ಸ್ವದೇಶಕ್ಕೆ ಕರೆತರುವ ಸಲುವಾಗಿ ಕಳೆದ ಭಾನುವಾರದಿಂದ ಮೋದಿ ಅವರು ಹಿರಿಯ ಅಧಿಕಾರಿಗಳ ಜತೆ ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ ಭಾರತೀಯರ ರಕ್ಷಣೆ ಕಾರ್ಯಾಚರಣೆಗೆ ಸಹಕಾರ ನೀಡುವ ನಿಟ್ಟಿನಲ್ಲಿ ಭಾರತ ಸರ್ಕಾರ ನಾಲ್ವರು ಸಚಿವರನ್ನು ಉಕ್ರೇನ್ ಸುತ್ತಮುತ್ತಲ 4 ದೇಶಗಳಿಗೆ ಕಳುಹಿಸಿತ್ತು.

10ರಂದು ವಿಟಿಯು ಘಟಿಕೋತ್ಸವ

ರಾಯಚೂರಿನ ಬುಶ್ರಾಗೆ ದಾಖಲೆಯ 16 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ದ 21ನೇ ವಾರ್ಷಿಕ ಘಟಿಕೋತ್ಸವವನ್ನು ಮಾರ್ಚ್ 10ರಂದು ಬೆಳಿಗ್ಗೆ 11.30ಕ್ಕೆ ಇಲ್ಲಿನ 'ಜ್ಞಾನಸಂಗಮ' ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ' ಎಂದು ಕುಲಪತಿ ಪ್ರೊ.ಕರಿಸಿದ್ದಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಈ ಬಾರಿಯ ಘಟಿಕೋತ್ಸವದಲ್ಲಿ ಅತಿ ಹೆಚ್ಚಿನ ಚಿನ್ನದ ಪದಕ ಪಡೆಯುತ್ತಿರುವವರ ಪಟ್ಟಿಯಲ್ಲಿ ಹೆಚ್ಚಿನವರು ವಿದ್ಯಾರ್ಥಿನಿಯರೇ ಇದ್ದಾರೆ. ವಿದ್ಯಾರ್ಥಿ ಇರುವುದು ಒಬ್ಬರಷ್ಟೆ' ಎಂದರು.

ಚಿನ್ನದ ಪದಕಗಳನ್ನು ಬಾಚಿದ ವಿದ್ಯಾರ್ಥಿನಿಯರು: ರಾಯಚೂರಿನ ಎಸ್‌ಎಲ್‌ಎನ್ ಕಾಲೇಜಿನ ಬಿಇ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಬುಶ್ರಾ ಮತೀನ್ ಒಟ್ಟು 16 ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಬೆಂಗಳೂರು ಬಿ.ಎನ್.ಎಂ. ತಾಂತ್ರಿಕ ಸಂಸ್ಥೆಯ ಇ ಅಂಡ್ ಸಿ ವಿಭಾಗದ ಸ್ವಾತಿ ದಯಾನಂದ, ಬೆಳಗಾವಿಯ ಕೆ.ಎಲ್.ಇ. ಡಾ.ಎಂ.ಎಸ್. ಶೇಷಗಿರಿ ಎಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿವೇಕ್ ಭದ್ರಕಾಳಿ, ಬಳ್ಳಾರಿಯ ಬಳ್ಳಾರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್‌ನ ಇ ಅಂಡ್ ಇ ವಿಭಾಗದ ಚಂದನಾ ಎಂ. ತಲಾ 7 ಚಿನ್ನದ ಪದಕ ಪಡೆದಿದ್ದಾರೆ.

ಬೆಂಗಳೂರಿನ ಸಿಎಂಆರ್ ತಾಂತ್ರಿಕ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್‌ನ ರಮ್ಯಾ ಟಿ. 6, ಆರ್‌ಎನ್‌ಎಸ್‌ಐಟಿಯ ಎಲೆಕ್ಟ್ರಾನಿಕ್ಸ್ ಅಂಡ್ ಇನ್‌ಸ್ಟ್ರುಮೆಂಟೇಷನ್ ವಿಭಾಗದ ಪ್ರಜ್ಞಾ ಎನ್., ಶಿವಮೊಗ್ಗದ ಜೆಎನ್‌ಎನ್‌ಸಿಇ ಮಾಹಿತಿ ತಂತ್ರಜ್ಞಾನ ವಿಭಾಗದ ಪಲ್ಲವಿ ಮತ್ತು ಬೆಂಗಳೂರಿನ ಆರ್‌ಎನ್‌ಎಸ್‌ಐಟಿಯ ಎಂಬಿಎ ವಿದ್ಯಾರ್ಥಿನಿ ತೇಜಸ್ವಿನಿ ಆರ್. ತಲಾ 4 ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ಬೆಂಗಳೂರಿನ ಆರ್‌ಎನ್‌ಎಸ್‌ಐಟಿಯ ಎಂಸಿಎ ವಿದ್ಯಾರ್ಥಿನಿ ಅಶ್ವಿತಾ ಎನ್. ಮತ್ತು ದಾವಣಗೆರೆಯ ಯುಬಿಡಿಟಿ ಕಾಲೇಜಿನ ಎಂ.ಟೆಕ್. ವಿದ್ಯಾರ್ಥಿನಿ ಸವಿತಾ ಎಚ್.ಟಿ. ತಲಾ 3 ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ.

'57,498 ಬಿಇ/ಬಿ.ಟೆಕ್, 902 ಬಿ.ಆರ್ಕ್, 12 ಬಿ ಪ್ಲಾನ್, 4,362 ಎಂಬಿಎ, 1,387 ಎಂಸಿಎ, 1,292 ಎಂ.ಟೆಕ್, 73 ಎಂ.ಆರ್ಕ್ ಮತ್ತು 33 ಪಿಜಿ ಡಿಪ್ಲೊಮಾ, 515 ಪಿಎಚ್.ಡಿ, 4 ಎಂ.ಎಸ್ಸಿ (ಎಂಜಿನಿಯರಿಂಗ್) ಬೈ ರಿಸರ್ಚ್ ಮತ್ತು 3 ಇಂಟಿಗ್ರೇಟೆಡ್ ಡುಯೆಲ್ ಡಿಗ್ರಿ ಪದವಿಗಳನ್ನು ಪ್ರದಾನ ಮಾಡಲಾಗುವುದು' ಎಂದು ಪ್ರೊ.ಕರಿಸಿದ್ದಪ್ಪ ವಿವರಿಸಿದರು.

ಸರ್ಕಾರದಿಂದ 'ವಯೋಮಿತಿ' ಬೇಲಿ; ಕೃಷ್ಣಾ ತೀರದ ಹಳ್ಳಿಗಳಲ್ಲಿ ಅಪೌಷ್ಟಿಕತೆ ಪಿಡುಗು ಅಬಾಧಿತ

ಮಾತೃವಂದನಾ ವಂಚಿತ ಬಾಲ ಅಮ್ಮಂದಿರು

• ವೆಂಕಟೇಶ ಜಿ.ಎಚ್

ಬಾಗಲಕೋಟೆ: ಬೀಳಗಿ ತಾಲ್ಲೂಕಿನ ಸುನಗದ ವಿದ್ಯಾ (ಹೆಸರು ಬದಲಾಯಿಸಲಾಗಿದೆ) ಬಾಲ್ಯದಲ್ಲಿಯೇ ಅಮ್ಮನನ್ನು ಕಳೆದುಕೊಂಡವಳು. ಅಪ್ಪ ಕೃಷಿಕ. ಮನೆಯಲ್ಲಿ ನೋಡಿಕೊಳ್ಳುವವರಿಲ್ಲವೆಂಬ ಕಾರಣಕ್ಕೆ 9ನೇ ತರಗತಿಯಲ್ಲಿದ್ದಾಗಲೇ ಆಕೆಗೆ ಮದುವೆ ಮಾಡಿದರು.

ಆನಂತರ ಆಕೆ ಗರ್ಭಿಣಿಯಾದಳು. ಏಳು ತಿಂಗಳಿಗೆ ಹುಟ್ಟಿದ ಗಂಡು ಮಗುವಿನ ತೂಕ ಒಂದೂವರೆ ಕಿಲೋ ಇತ್ತು. ಅವಧಿಗೆ ಮುನ್ನ ಜನನ, ಅಪೌಷ್ಟಿಕತೆ ಕಾರಣ ಜೀವನ್ಮರಣದಿಂದ ಬಳಲುತ್ತಿದ್ದ ಮಗುವಿಗೆ 28 ದಿನಗಳ ಕಾಲ ಬಾಗಲಕೋಟೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಆಸ್ಪತ್ರೆಯ ಬಿಲ್ ಹೊಂದಿಸಲು ಅಪ್ಪ ಇದ್ದ ಹೊಲ ಮಾರಿದ್ದಾರೆ.

ಗರ್ಭಿಣಿ, ಬಾಣಂತಿಯರು ಹಾಗೂ ಹುಟ್ಟುವ ಮಕ್ಕಳು ಅಪೌಷ್ಟಿಕತೆಯಿಂದ ಬಳಲದಂತೆ ತಡೆಯಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಮಾತೃವಂದನಾ, ಮಾತೃಪೂರ್ಣ ಯೋಜನೆಗಳನ್ನು ಜಾರಿಗೊಳಿಸಿವೆ. ಸವಲತ್ತು ಪಡೆಯುವ ಹೆಣ್ಣುಮಕ್ಕಳಿಗೆ 18 ವರ್ಷ ತುಂಬಿರಬೇಕು ಎಂಬ ಷರತ್ತು ವಿಧಿಸಿವೆ. ಈ ನಿಯಮದಿಂದ ವಿದ್ಯಾಗೆ ಸವಲತ್ತು ದೊರಕಿಲ್ಲ. ಅಪೌಷ್ಟಿಕತೆಯ ಕರಿನೆರಳು ಅಮ್ಮ–ಮಗು ಇಬ್ಬರನ್ನೂ ಬಾಧಿಸಿದೆ.


ಬಾಗಲಕೋಟೆ ಹೊರವಲಯದಲ್ಲಿ ಕಂಕುಳಲ್ಲಿ ಕಂದನ ಹೊತ್ತು ಮನೆಗೆ ನೀರು ಹೊತ್ತೊಯ್ದ ಬಾಲೆ

ಸುನಗ ಮಾತ್ರವಲ್ಲ ಕೃಷ್ಣಾ ತೀರದ ಪ್ರತಿ ಹಳ್ಳಿಯಲ್ಲೂ ಮೈಗಡರಿದ ಎಳೆ ಕೂಸು ಸಂತೈಸುತ್ತಲೇ ಹೊಲ, ಮನೆಗಳಲ್ಲಿ ಚಾಕರಿಯಲ್ಲಿ ತೊಡಗಿರುವ ಇಂತಹ ಹತ್ತಾರು ಬಾಲ ಅಮ್ಮಂದಿರು ಕಾಣುತ್ತಾರೆ.

ಬಾಲ್ಯ ವಿವಾಹ ಆದವರಿಗೆ ಕಾನೂನಿನ ಭಯ. ಈ ಯೋಜನೆಗಳ ಅನುಷ್ಠಾನದ ಹೊಣೆ ಹೊತ್ತ ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಚಿಂತೆ. ದಾಖಲೆ ಪುಸ್ತಕದಲ್ಲಿ ಬಾಲೆಯ ವಯಸ್ಸು ನಮೂದು ಆದಲ್ಲಿ ನಾಳೆ, ಬಾಲ್ಯ ವಿವಾಹ ತಡೆಯಲಿಲ್ಲವೇಕೆ ಎಂಬ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ ಎಂದು ಅವರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದರಿಂದ ಹೊಟ್ಟೆಯೊಳಗಿನ ಮಗು ಸೌಲಭ್ಯದಿಂದ ವಂಚಿತವಾಗುತ್ತಿದೆ.

ಹೊಂದಾಣಿಕೆಗೆ ಪ್ರಯತ್ನ: 'ದಾಖಲೆಯಲ್ಲಿ ಎಷ್ಟು ಫಲಾನುಭವಿಗಳಿರುವರೋ ಸರ್ಕಾರ ಅಷ್ಟಕ್ಕೆ ಮಾತ್ರ ಪೌಷ್ಟಿಕ ಆಹಾರ ಕೊಡುತ್ತದೆ. ನಾವು ಕಂಡಂತೆ ಕೆಲವು ಹೆಣ್ಣುಮಕ್ಕಳ ಮನೆಯಲ್ಲಿ ದಿನದ ಊಟಕ್ಕೂ ತತ್ವಾರ. ಮಾನವೀಯ ನೆಲೆಯಲ್ಲಿ ಅಂತಹವರಿಗೆ ನಾವೇ ಊಟ ಕೊಡುತ್ತೇವೆ. ಬೇರೆ ಹೆಣ್ಣುಮಕ್ಕಳ ಪಾಲಿನಲ್ಲಿ ಅಲ್ಪಸ್ವಲ್ಪ ಹೊಂದಿಸಿ (ಮ್ಯಾಚಿಂಗ್) ಕೊಡುತ್ತೇವೆ. ಇಲ್ಲಿಯೂ ಮತ್ತೊಂದು ಹೆಣ್ಣು ಮಗುವಿನ ಪಾಲು ಕಿತ್ತುಕೊಡಬೇಕಿದೆ' ಎನ್ನುತ್ತಾರೆ ಅಮೀನಗಡದ ಅಂಗನವಾಡಿ ಕಾರ್ಯಕರ್ತೆ.

'ಇದು ಎಲ್ಲರ ತಪ್ಪುಗಳಿಂದ ಆದ ಸಮಸ್ಯೆ. ಅದನ್ನು ಮುಚ್ಚಿ ಹಾಕುವ ಬದಲು ಒಪ್ಪಿಕೊಳ್ಳೋಣ. ಹದಿಹರೆಯದ ಅಮ್ಮಂದಿರು ಮಾನಸಿಕವಾಗಿ, ದೈಹಿಕವಾಗಿ ಬೆಳೆದಿರುವುದಿಲ್ಲ. ಐದು ತಿಂಗಳು ತುಂಬುವವರೆಗೂ ತಾನು ಗರ್ಭಿಣಿ ಎಂಬುದು ತಿಳಿಯದೇ ಸಾಮಾನ್ಯ ಮಕ್ಕಳಂತೆ ಆಟದಲ್ಲಿ ತೊಡಗಿದ್ದ ಮಕ್ಕಳನ್ನು ನೋಡಿದ್ದೇವೆ. ಸರ್ಕಾರ ಇಂತಹವರ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು' ಎಂದು ಬಾಗಲಕೋಟೆಯ ಸರ್ಕಾರೇತರ ಸಂಸ್ಥೆ 'ರೀಚ್'ನ ಜಿ.ಎನ್.ಕುಮಾರ್ ಮನವಿ ಮಾಡುತ್ತಾರೆ.

'ಸಾಮಾನ್ಯ ಮಹಿಳೆಗೆ ಕೊಡುವುದಕ್ಕಿಂತ ಸ್ವಲ್ಪ ಹೆಚ್ಚಿನ ಪಾಲು ಪೌಷ್ಟಿಕಾಂಶಯುಕ್ತ ಆಹಾರ ಇವರಿಗೆ ಕೊಡಬೇಕು. ಮಾತೃವಂದನಾ ಭಾಗವಾಗಿಯೇ ವಿಶೇಷ ಆದ್ಯತೆ, ಕಾಳಜಿ ತೋರಲು ಅವಕಾಶ ಮಾಡಿಕೊಡಿ' ಎಂದು ಮನವಿ ಮಾಡುತ್ತಾರೆ.

ಇದೊಂದು ಸಮಾಜದ ನೈತಿಕತೆ ಪ್ರಶ್ನೆ...

'ಬಾಲ ಅಮ್ಮಂದಿರ ಸಮಸ್ಯೆ ಸರ್ಕಾರದ ಗಮನಕ್ಕೂ ಇದೆ. ಆದರೆ ಇದೊಂದು ಸಮಾಜದ ನೈತಿಕತೆಯ ಪ್ರಶ್ನೆ. ಹೀಗಾಗಿ ಅವರ ನೆರವಿಗೆ ಧಾವಿಸಲು ಹಿಂದೇಟು ಹಾಕುತ್ತಿದ್ದೇವೆ' ಎಂದು ಮಹಿಳಾ, ಮಕ್ಕಳ ಕಲ್ಯಾಣ ಇಲಾಖೆಯ ಹೆಸರು ಬಹಿರಂಗಪಡಿಸಲು ಇಚ್ಛಿಸದ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

'ಬಾಲ್ಯ ವಿವಾಹ ಮಾಡಿಕೊಂಡರೆ ಇಂತಹದ್ದೊಂದು ನೆರವಿನ ಪ್ಯಾಕೇಜ್ ಸಿಗಲಿದೆಯೇ ಎಂದು ನಾಳೆ ನೀವೇ (ಮಾಧ್ಯಮದವರು) ಪ್ರಶ್ನೆ ಮಾಡುತ್ತೀರಿ. ಸರ್ಕಾರದವರು ನೆರವಿಗೆ ಬರುತ್ತಾರೆ ಎಂದರೆ ನಾವೇಕೆ ಬಾಲ್ಯ ವಿವಾಹ ಮಾಡಬಾರದು ಎಂದು ಜನರು ಕೇಳುತ್ತಾರೆ. ಪರೋಕ್ಷವಾಗಿ ನಾವೇ ಈ ಪಿಡುಗು ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಸುಮ್ಮನಿದ್ದೇವೆ' ಎನ್ನುತ್ತಾರೆ.

ಅಪೌಷ್ಟಿಕತೆ ನಿವಾರಣೆಗೆ ಯೋಜನೆ

ಮಾತೃವಂದನಾ, ಮಾತೃಪೂರ್ಣ ಅಡಿ ಸರ್ಕಾರ ಗರ್ಭಿಣಿಯರಿಗೆ ನಗದು ರೂಪದಲ್ಲಿ ನೆರವಿನ ಜೊತೆಗೆ ಪ್ರತಿ ತಿಂಗಳು ಬೆಲ್ಲ, ಬೇಳೆ ಕಾಳು, ಮೊಟ್ಟೆ, ಚಿಕ್ಕಿ, ಅಕ್ಕಿ ಕೊಡುತ್ತಿದೆ. ಅಪೌಷ್ಟಿಕತೆ ನೀಗಿ ಮಗು ಚೆನ್ನಾಗಿ ಬೆಳೆಯಲಿ, ತಾಯಿಯ ಹೊಟ್ಟೆ ಒಳಗಿಂದಲೇ ತಯಾರಿ ಆಗಲಿ ಎಂಬುದು ಯೋಜನೆಯ ಉದ್ದೇಶ.

ಅಂಗನವಾಡಿ; ಅಭಿಪ್ರಾಯಗಳು

'ಕೊಟ್ಟ ಆಹಾರ ಮಕ್ಕಳಿಗೆ ತಿನಿಸಲಿ'



ಅಂಗನವಾಡಿ ಶಾಲೆಗೆ ಬರುವ ಮಕ್ಕಳಲ್ಲಿ ಅಪೌಷ್ಟಿಕತೆ ಕಡಿಮೆ ಮಾಡಲು ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ತೊಗರಿ ಬೇಳೆ, ಹೆಸರು ಬೇಳೆ, ಅಕ್ಕಿ ಸೇರಿದಂತೆ ವಿವಿಧ ಬೇಳೆಗಳ ಮಿಶ್ರಣದ ಹಿಟ್ಟು ಕೊಡಲಾಗುತ್ತಿದೆ. ಮೊಟ್ಟೆ, ಹಾಲು ಹಾಗೂ ಬಾಳೆಹಣ್ಣು ಕೂಡ ನೀಡಲಾಗುತ್ತಿದೆ. ಪೋಷಕರು ತಪ್ಪದೆ ಇವುಗಳನ್ನು ಮಕ್ಕಳಿಗೆ ತಿನ್ನಿಸಬೇಕು. ಮಗುವಿಗೆ ಸರಿಯಾಗಿ ಎದೆ ಹಾಲು ಉಣಿಸಿ ಸರ್ಕಾರ ನೀಡುವ ಆಹಾರವನ್ನು ನಿಯಮಿತವಾಗಿ ನೀಡಿದರೆ ಮಕ್ಕಳಲ್ಲಿ ಪೌಷ್ಟಿಕಾಂಶ ಪ್ರಮಾಣ ಹೆಚ್ಚಾಗುತ್ತದೆ.

ಲತಾ ಘೋಡಕೆ, ಅಂಗನವಾಡಿ ಕಾರ್ಯಕರ್ತೆ, ಹುಬ್ಬಳ್ಳಿ

'ಹಿಟ್ಟಿನ ರೂಪದ ಆಹಾರ ಉತ್ತಮ'



ನನ್ನಿಬ್ಬರು ಮಕ್ಕಳು ಅಂಗನವಾಡಿಗೆ ಹೋಗುತ್ತಿದ್ದಾರೆ. ಅಲ್ಲಿ ಕೊಡುತ್ತಿರುವ ಆಹಾರ ಉತ್ತಮವಾಗಿದೆ. ಬಹಳಷ್ಟು ಮಕ್ಕಳು ಕಾಳು, ಬೇಳೆ ನೇರವಾಗಿ ತಿನ್ನುವುದಿಲ್ಲ. ಆದ್ದರಿಂದ ಈಗ ಸರ್ಕಾರ ಹಿಟ್ಟಿನ ರೂಪದಲ್ಲಿ ಕೊಡುತ್ತಿರುವುದರಿಂದ ಅದನ್ನು ಹಾಲಿನಲ್ಲಿ ಮಿಶ್ರಣ ಮಾಡಿ ಕೊಡಲಾಗುತ್ತಿದೆ. ಅಂಗನವಾಡಿಯಲ್ಲಿ ನೀಡುವ ಹಿಟ್ಟಿನ ಜೊತೆಗೆ ನಾವೂ ಕೂಡ ಮನೆಯಲ್ಲಿ ಸಾಧ್ಯವಾದಷ್ಟು ಪೌಷ್ಟಿಕ ಆಹಾರ ಕೊಡಬೇಕು. ಮನೆ ಹಾಗೂ ಶಾಲೆ ಎರಡೂ ಕಡೆ ಪೌಷ್ಟಿಕ ಆಹಾರ ಕೊಟ್ಟರೆ ಮಕ್ಕಳ ಬೆಳವಣಿಗೆ ಚೆನ್ನಾಗಿ ಇರುತ್ತದೆ.

ರಾಜಶೇಖರ ಪೂಜಾರ, ಪೋಷಕರು ಕೊಪ್ಪಳ

'ತಾಯಿ ಹಾಲು ಅತ್ಯುತ್ತಮ'



ಮಗು ಹುಟ್ಟಿದ ಮೊದಲ ಅರ್ಧಗಂಟೆಯಿಂದಲೇ ತಾಯಿ ಹಾಲುಣಿಸಬೇಕು. ಆರರಿಂದ ಮೊದಲ ಒಂದು ವರ್ಷದ ಅವಧಿಯಲ್ಲಿ ಮಗು ಎಷ್ಟು ಹಾಲು ಕುಡಿಯುತ್ತದೆಯೋ; ಅಷ್ಟು ಚೆನ್ನಾಗಿ ಬೆಳೆಯುತ್ತದೆ. ಬಹುತೇಕ ತಾಯಂದಿರು ಮಗು ಹುಟ್ಟಿದ ಕೆಲ ದಿನಗಳಲ್ಲಿಯೇ ಬಾಟಲಿ ಹಾಲು ಅಥವಾ ಪೌಡರ್‌ನಿಂದ ಮಾಡಿದ ಹಾಲು ಕುಡಿಸುವ ರೂಢಿ ಆರಂಭಿಸುತ್ತಾರೆ. ಇದರಿಂದಾಗಿ ಮಗುವಿನಲ್ಲಿ ಪೌಷ್ಟಿಕಾಂಶ, ಕಬ್ಬಿಣದ ಅಂಶ ಸೇರಿದಂತೆ ಹಲವು ತೊಂದರೆಗಳು ಕಾಡುತ್ತವೆ. ವಯಸ್ಸಿಗೆ ಅನುಗುಣವಾಗಿ ಎತ್ತರ ಮತ್ತು ತೂಕದ ಬೆಳವಣಿಗೆ ಆಗುವುದಿಲ್ಲ. ಈ ಕೊರತೆ ಕಾಡಿದರೆ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ

ಶಿಲ್ಪಾ ಮಾಕಳಿ, ಕಿಮ್ಸ್ ಮಕ್ಕಳ ವಿಭಾಗದ ವೈದ್ಯೆ, ಹುಬ್ಬಳ್ಳಿ

'ಹಿಟ್ಟು ಬೇಡ, ಬೇಳೆ ಕೊಡಲಿ'

ಆರು ತಿಂಗಳಿಂದ ಮೂರು ವರ್ಷದ ಮಕ್ಕಳಿಗೆ ಮೊದಲು ತೊಗರಿಬೇಳೆ, ಹೆಸರು ಬೇಳೆ, ಅಕ್ಕಿ ಹೀಗೆ ಹಲವು ಕಾಳು, ಬೇಳೆಗಳನ್ನು ಕೊಡಲಾಗುತ್ತಿತ್ತು. ಅದನ್ನು ಪ್ರತ್ಯೇಕವಾಗಿ ಹಿಟ್ಟು ಮಾಡಿಸಿ ಅವರಿಗೆ ಬೇಕಾದ್ದನ್ನು ತಿನ್ನಿಸುತ್ತಿದ್ದೆವು. ಈಗ ಎಲ್ಲವೂ ಸೇರಿ ಹಿಟ್ಟಿನ ಪ್ಯಾಕೇಟ್ ನೀಡಲಾಗುತ್ತಿದೆ. ಹಿಟ್ಟು ಗುಣಮಟ್ಟದ್ದಾಗಿರುವುದಿಲ್ಲ. ಎಲ್ಲಾ ಬೇಳೆಗಳನ್ನು ಮಿಶ್ರಣ ಮಾಡಿರುವುದರಿಂದ ಕೆಲಬಾರಿ ವಾಸನೆಯಿಂದ ಕೂಡಿರುತ್ತದೆ. ಬೇಳೆಗಳು ಹಸಿಯಾಗಿದ್ದಾಗಲೇ ಹಿಟ್ಟು ಮಾಡುವುದರಿಂದ ಹೀಗಾಗುತ್ತದೆ. ಆದ್ದರಿಂದ ಹಿಟ್ಟಿನ ಬದಲು ಕಾಳುಗಳು ಹಾಗೂ ಹಣ್ಣುಗಳನ್ನು ಕೊಟ್ಟರೆ ಉತ್ತಮ.

ಸ್ವಾತಿ ಶಿವನಗೌಡರ, ಪೋಷಕರು, ಹುಬ್ಬಳ್ಳಿ.

ಪೌಷ್ಟಿಕತೆ ವೃದ್ಧಿಸಿತೇ ಮೊಟ್ಟೆ, ಬಾಳೆಹಣ್ಣು?

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಶಾಲಾ ಮಕ್ಕಳ ಕಲಿಕೆಯಲ್ಲಿ ಗುಣಾತ್ಮಕ ಬದಲಾವಣೆ ಹಾಗೂ ಆರೋಗ್ಯದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಮೊಟ್ಟೆ–ಬಾಳೆಹಣ್ಣು ವಿತರಣೆ ಕೂಡ ಈ ಗುರಿ ಸಾಧನೆಯ ಮೆಟ್ಟಿಲುಗಳೇ ಆಗಿವೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು ಮತ್ತು ವಿಜಯಪುರ ಜಿಲ್ಲೆ ಸೇರಿದಂತೆ ಅಲ್ಲಿನ ಶಾಲಾ ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಸಮೀಕ್ಷೆ ಕಾರ್ಯ ಕೈಗೆತ್ತಿಕೊಂಡಿದ್ದು, ಈ ಹೊಣೆಯನ್ನು ಗದುಗಿನಲ್ಲಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ವಹಿಸಿದೆ. ಒಟ್ಟು 115 ದಿನಗಳ ಅವಧಿಯ ಸಮೀಕ್ಷೆಯು ಮೂರು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದ ಸಮೀಕ್ಷೆ ಹಾಗೂ ಮಧ್ಯಮ ಅವಧಿಯಲ್ಲಿ ಆದ ವ್ಯತ್ಯಾಸಗಳನ್ನು ಗುರುತಿಸುವ ಪ್ರಕ್ರಿಯೆ (ಮಿಡ್ ಪ್ರೊಸೆಸ್ ರಿವ್ಯೂ) ಕೂಡ ಮುಗಿದಿದ್ದು, ವಿಶ್ಲೇಷಣೆ ಕಾರ್ಯ ಇನ್ನಷ್ಟೇ ಆಗಬೇಕಿದೆ.

'ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಗ್ರಾಮೀಣಾಭಿವೃದ್ಧಿ, ಶಾಲಾ ಶಿಕ್ಷಣ ಸೇರಿದಂತೆ ವಿವಿಧ ವಿಷಯಗಳಲ್ಲಿ ತಜ್ಞತೆ, ಅನುಭವ ಹೊಂದಿರುವುದರಿಂದ ಸರ್ಕಾರ ಈ ಕೆಲಸವನ್ನು ನಮಗೆ ವಹಿಸಿದೆ. ಆಹಾರ ವಿಜ್ಞಾನ, ಸಾರ್ವಜನಿಕ ಆರೋಗ್ಯ, ಸಾಮಾಜಿಕ ಕಾರ್ಯ ವಿಭಾಗದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಡಾ. ಸುರೇಶ್ ಕೃಷ್ಣರಾವ್ ಮಾರ್ಗದರ್ಶನದಲ್ಲಿ ಸಮೀಕ್ಷೆಯಲ್ಲಿ ತೊಡಗಿದ್ದಾರೆ' ಎನ್ನುತ್ತಾರೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ.

ಮಕ್ಕಳಲ್ಲಿನ ಅಪೌಷ್ಟಿಕತೆ ಮಟ್ಟ ಎಷ್ಟಿದೆ ಎಂಬುದರ ಪ್ರಾಯೋಗಿಕ ಅಧ್ಯಯನಕ್ಕೆ ಯಾದಗಿರಿ ಜಿಲ್ಲೆ ಹಾಗೂ ಅದರೊಂದಿಗೆ ಹೋಲಿಕೆ ಮಾಡಿ ನೋಡಲು ಮಕ್ಕಳಲ್ಲಿ ಪೌಷ್ಟಿಕತೆ ಮಟ್ಟ ಚೆನ್ನಾಗಿರುವ ಗದಗ ಜಿಲ್ಲೆಯನ್ನು ಆಯ್ದುಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಈ ಎರಡೂ ಜಿಲ್ಲೆಗಳಿಂದ ತಲಾ ಮೂರುವರೆ ಸಾವಿರದಂತೆ ಒಟ್ಟು ಏಳು ಸಾವಿರ ವಿದ್ಯಾರ್ಥಿಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಸಮೀಕ್ಷಾ ತಂಡದ ಸದಸ್ಯರು ವಿದ್ಯಾರ್ಥಿಗಳ ತೂಕ, ಎತ್ತರ, ಅವರ ಆಹಾರಕ್ರಮ, ಹಿಮೊಗ್ಲೋಬಿನ್ ಪ್ರಮಾಣ ಮೊದಲಾದ ಪ್ರಾಥಮಿಕ ಅಂಕಿ ಅಂಶಗಳನ್ನು ಸಂಗ್ರಹಿಸಿದ್ದಾರೆ.

'ವಾರದಲ್ಲಿ ಮೂರು ದಿನ ಮೊಟ್ಟೆ ಅಥವಾ ಬಾಳೆಹಣ್ಣು ಕೊಡುವುದರಿಂದ 1ರಿಂದ 8ನೇ ತರಗತಿ ಅಥವಾ 5ರಿಂದ 12 ವರ್ಷದೊಳಗಿನ ವಿದ್ಯಾರ್ಥಿಗಳ ಪೌಷ್ಟಿಕತೆ ಪ್ರಮಾಣದಲ್ಲಿನ ಎಷ್ಟು ವ್ಯತ್ಯಾಸ ಕಂಡುಬರುತ್ತದೆ ಎಂಬುದನ್ನು ಅರಿಯಲು ಈ ಸಮೀಕ್ಷೆ ನಡೆಸಲಾಗುತ್ತಿದೆ. ವ್ಯತ್ಯಾಸ ಕಂಡುಬಂದಲ್ಲಿ ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದರಿಂದ ಬದಲಾವಣೆ ಸಾಧ್ಯವೇ ಎಂಬುದನ್ನು ಯೋಚಿಸಲು, ಅಧ್ಯಯನ ಮಾಡಲು ಶಿಕ್ಷಣ ಇಲಾಖೆ ನಮ್ಮ ವಿಶ್ವವಿದ್ಯಾಲಯಕ್ಕೆ ಈ ಕೆಲಸ ಕೊಟ್ಟಿದೆ' ಎನ್ನುತ್ತಾರೆ ಪ್ರೊ. ಚಟಪಲ್ಲಿ.

ಈ ಸಮೀಕ್ಷೆಯು ವೈಜ್ಞಾನಿಕವಾಗಿ ನಡೆಯುತ್ತಿರುವುದರಿಂದ ಫಲಿತಾಂಶ ಕೂಡ ಉತ್ತಮವಾಗಿರಲಿದೆ. ಮೂರು ಹಂತದಲ್ಲಿ ಸಿಕ್ಕ ಅಂಕಿ ಅಂಶಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಪೌಷ್ಟಿಕತೆ ಮಟ್ಟ ಪ್ರಾರಂಭದಲ್ಲಿ ಹೇಗಿತ್ತು, ಮಧ್ಯದಲ್ಲಿ ಏನು ವ್ಯತ್ಯಾಸ ಕಂಡು ಬಂತು ಹಾಗೂ ಮೂರನೇ ಸಮೀಕ್ಷೆ ಸಂದರ್ಭದ ವೇಳೆಗೆ ಆದ ಬದಲಾವಣೆಗಳೇನು ಎಂಬುದರ ಆಧಾರದಲ್ಲಿ ವಿಶ್ಲೇಷಣೆ ನಡೆಸಿ, ವಿಶ್ವವಿದ್ಯಾಲಯ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ ಎಂದು ಅವರು ವಿವರಿಸುತ್ತಾರೆ.

ವ್ಯತ್ಯಾಸ ತಿಳಿಯಲು ಸಮೀಕ್ಷೆ ನೆರವು

ಮಧ್ಯಮ ಹಂತದ ವ್ಯತ್ಯಾಸಗಳ ಪರಿಶೀಲನೆಗೆ ಗದಗ ಮತ್ತು ಯಾದಗಿರಿ ಜಿಲ್ಲೆಗಳಿಂದ ತಲಾ ಆರು ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಮೊದಲ ಹಂತದ ಸಮೀಕ್ಷೆಯಲ್ಲಿ ಗುರುತಿಸಿದಂತೆ ಅಪೌಷ್ಟಿಕತೆ ಪ್ರಮಾಣ ಜಾಸ್ತಿ ಇರುವ ಯಾದಗಿರಿ, ಸುರಪುರ, ಶಹಾಪುರ ತಾಲ್ಲೂಕಿನ ಆರು ಶಾಲೆಗಳು ಹಾಗೂ ಗದಗ ಜಿಲ್ಲೆಯಿಂದ ಮುಂಡರಗಿ, ಶಿರಹಟ್ಟಿ ಮತ್ತು ರೋಣ ತಾಲ್ಲೂಕಿನ ಆರು ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು.

'ಪ್ರಾಥಮಿಕ ಸಮೀಕ್ಷೆ ವೇಳೆ ವಿದ್ಯಾರ್ಥಿಗಳ ತೂಕ, ಎತ್ತರ, ತೋಳಿನ ಸುತ್ತಳತೆ ಮೊದಲಾದ ಮಾಹಿತಿ ಕಲೆ ಹಾಕಲಾಗಿತ್ತು. ಮಧ್ಯದ ಅವಧಿಯಲ್ಲಿ ಇವುಗಳಲ್ಲಿ ಏನಾದರೂ ಪ್ರಗತಿ ಕಂಡು ಬಂದಿದೆಯೇ? ಎಂಬ ಅಂಶವನ್ನು ಅದರೊಂದಿಗೆ ಹೋಲಿಕೆ ಮಾಡಿ ನೋಡಲಾಗುವುದು. ಸಾಮಾನ್ಯವಾಗಿ ನಿಯಮಿತವಾಗಿ ಮೊಟ್ಟೆ, ಬಾಳೆಹಣ್ಣು ಕೊಡುವುದರಿಂದ ವಿದ್ಯಾರ್ಥಿಗಳ ಪೌಷ್ಟಿಕತೆ ಪ್ರಮಾಣದಲ್ಲಿ ಬದಲಾವಣೆ ಕಂಡು ಬರುತ್ತದೆ. ಈ ಅಂಕಿ ಅಂಶಗಳನ್ನು ವಿಶ್ಲೇಷಣೆ ಮಾಡುವ ಕಾರ್ಯ ಇನ್ನಷ್ಟೇ ನಡೆಯಬೇಕಿದೆ. ಕೊನೆ ಹಂತದ ಸಮೀಕ್ಷೆಯಲ್ಲಿ ವಿದ್ಯಾರ್ಥಿಗಳ ಪೌಷ್ಟಿಕತೆ ಪ್ರಮಾಣದಲ್ಲಿ ಆಗಿರುವ ಬದಲಾವಣೆ ಕುರಿತಾದ ವರದಿ ಜತೆಗೆ ವಿದ್ಯಾರ್ಥಿಗಳ ಆರೋಗ್ಯ ಸುಧಾರಣಾ ಕ್ರಮಗಳು, ಆಹಾರ ಪದ್ಧತಿ ಬದಲಾವಣೆ ಬಗ್ಗೆ ಕೂಡ ಶಿಫಾರಸು ಮಾಡಲಾಗುವುದು' ಎನ್ನುತ್ತಾರೆ ಪ್ರೊ.ವಿಷ್ಣುಕಾಂತ ಎಸ್. ಚಟಪಲ್ಲಿ.

'ಯಾವುದೇ ಒಂದು ಸಮೀಕ್ಷೆ ಪ್ರಾರಂಭಕ್ಕೂ ಮುನ್ನ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಮೂಲ ವಿವರಗಳನ್ನು ಕಲೆ ಹಾಕಲಾಗುತ್ತದೆ. ಕೊನೆ ಹಂತದ ಸಮೀಕ್ಷೆಯಲ್ಲಿ ಅದರಿಂದ ಏನು ಪರಿಣಾಮ ಆಗಿದೆ ಎಂಬ ಅಂಶ ಗುರುತಿಸಲಾಗುತ್ತದೆ. ಈ ಎರಡು ಅವಧಿಗಳ ನಡುವೆ ಮಾಡುವ ಸಮೀಕ್ಷೆಯಿಂದ ನಮಗೆ ಆಗಿರುವ ವ್ಯತ್ಯಾಸದ ಬಗ್ಗೆ ತಿಳಿದುಬರುತ್ತದೆ' ಎನ್ನುತ್ತಾರೆ ಅವರು.

ಮೈಸೂರಿನಲ್ಲಿ ಸಕಾರಾತ್ಮಕ ಸ್ಪಂದನ

• ಮಹಮ್ಮದ್ ನೂಮಾನ್

ಮೈಸೂರು: 'ಗರ್ಭಿಣಿಯಾಗಿದ್ದಾಗ ₹ 3 ಸಾವಿರ, ಹೆರಿಗೆ ಬಳಿಕ ₹ 2 ಸಾವಿರವನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿತ್ತು. ಅಗತ್ಯ ಆಹಾರ ಖರೀದಿಸಿ ಹಣ ಸದ್ಬಳಕೆ ಮಾಡಿಕೊಂಡೆ....'

– 'ಮಾತೃವಂದನಾ' ಯೋಜನೆಯ ಫಲಾನುಭವಿಗಳಲ್ಲಿ ಒಬ್ಬರಾದ ತಾಲ್ಲೂಕಿನ ಹಿನಕಲ್‌ನ ರಮ್ಯಾ ಅವರ ಮಾತಿದು.

'ಹಣ್ಣು, ಸೊಪ್ಪು ಸೇರಿ ಪೌಷ್ಟಿಕ ಆಹಾರ ಖರೀದಿಸಿದೆ. ಹೆರಿಗೆಯ ಬಳಿಕ ಬಂದ ಹಣದಲ್ಲಿ ಶಿಶುವಿಗೆ ಪೂರಕ ಆಹಾರ, ಡೈಪರ್ ಖರೀದಿಸಿದೆ. ಪತಿ ಹಾಗೂ ತವರು ಮನೆಯವರನ್ನು ನೆಚ್ಚಿಕೊಳ್ಳ ಬೇಕಾದ ಅವಶ್ಯಕತೆಯೇ ಬರಲಿಲ್ಲ' ಎಂದರು.

ತಾಯಂದಿರಲ್ಲಿರುವ ಅಪೌಷ್ಟಿಕತೆ ಹೋಗಲಾಡಿಸಲು ಆರಂಭಿಸಿರುವ 'ಮಾತೃವಂದನಾ' ಯೋಜನೆಯು ಜಿಲ್ಲೆಯಲ್ಲಿ ಇಂಥ ಸಕಾರಾತ್ಮಕ ಪರಿಣಾಮಗಳನ್ನು ಬೀರಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗರ್ಭಿಣಿಯರ ನೋಂದಣಿ ಪ್ರಕ್ರಿಯೆ ಸಮರ್ಪಕವಾಗಿ ನಡೆಯುತ್ತಿದ್ದು, ಆರಂಭದಿಂದಲೇ ಅವರ ಆರೋಗ್ಯದ ಮೇಲೆ ನಿಗಾ ವಹಿಸಲು ಸಾಧ್ಯವಾಗಿದೆ.

'ಫಲಾನುಭವಿಗಳ ನೋಂದಣಿ ವಿಚಾರದಲ್ಲಿ ಜಿಲ್ಲೆಯು ರಾಜ್ಯದಲ್ಲೇ ಐದನೇ ಸ್ಥಾನದಲ್ಲಿದೆ. 2017 ರಿಂದ 2021ರ ಡಿಸೆಂಬರ್‌ವರೆಗೆ ಒಟ್ಟು 70,880 ಫಲಾನುಭವಿಗಳನ್ನು ಗುರುತಿಸಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಬಿ.ಬಸವರಾಜು ತಿಳಿಸಿದರು.

ಮಾತೃವಂದನಾ, ಪೋಷಣ್ ಅಭಿಯಾನ ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ಮುಂಚೂಣಿಯಲ್ಲಿರುವುದರಿಂದ ತಾಯಿ ಮತ್ತು ಶಿಶು ಮರಣ ಪ್ರಮಾಣವೂ ಇಳಿಮುಖವಾಗಿದೆ.

ಆರೋಗ್ಯ ಇಲಾಖೆ ಪ್ರಕಾರ, ಜಿಲ್ಲೆಯಲ್ಲಿ ಶಿಶು ಮರಣ ಪ್ರಮಾಣ (ಜನಿಸುವ ಸಾವಿರ ಮಕ್ಕಳಿಗೆ) 8.2 ರಷ್ಟಿದೆ. ದೇಶ ಮತ್ತು ರಾಜ್ಯದ ಒಟ್ಟಾರೆ ಸರಾಸರಿಗೆ ಹೋಲಿಸಿದರೆ ಇದು ತುಂಬಾ ಕಡಿಮೆ. ರಾಜ್ಯದಲ್ಲಿ ಶಿಶು ಮರಣ ಪ್ರಮಾಣ ಸಾವಿರ ಮಕ್ಕಳಿಗೆ ಸರಾಸರಿ 23 ರಷ್ಟಿದೆ.

2021ರ ಏಪ್ರಿಲ್‌ನಿಂದ 2022ರ ಜನವರಿ ವರೆಗೆ ಒಟ್ಟು 25,976 ಮಕ್ಕಳು ಜನಿಸಿದ್ದಾರೆ. 212 ಶಿಶುಗಳು ಸಾವಿಗೀಡಾಗಿವೆ.

ತಾಯಿ ಮರಣ ಪ್ರಮಾಣವೂ ತಗ್ಗಿದೆ. ಕಳೆದ 10 ತಿಂಗಳಲ್ಲಿ ತಾಯಿ ಮರಣ ಪ್ರಮಾಣ (1 ಲಕ್ಷಕ್ಕೆ) 63 ರಷ್ಟಿದೆ.

'ಮಾತೃವಂದನಾ ಯೋಜನೆಯು ಬಡ, ಮಧ್ಯಮ ವರ್ಗದ ಕುಟುಂಬದವರಿಗೆ ಹೆಚ್ಚಿನ ನೆರವು ನೀಡಿದೆ. ಈಗ ₹5 ಸಾವಿರ ನೀಡುತ್ತಿದ್ದು, ಮೊತ್ತವನ್ನು ಇನ್ನಷ್ಟು ಹೆಚ್ಚಿಸಬೇಕು' ಎಂಬುದು ಇನ್ನೊಬ್ಬ ಫಲಾನುಭವಿ ರಾಧಿಕಾ ಅವರ ಮನವಿ.

ಅಭಿಯಾನಗಳಿಗೆ ವರ್ಷದಿಂದ ಬಾರದ ಹಣ

• ಸಂತೋಷ ಈ. ಚಿನಗುಡಿ

ಕಲಬುರಗಿ: ಒಂದು ವರ್ಷದಿಂದ ಜಿಲ್ಲೆಯಲ್ಲಿ ಮಾತೃವಂದನಾ ಮತ್ತು ಪೋಷಣ ಅಭಿಯಾನ ಕಾರ್ಯಕ್ರಮಗಳಿಗೆ ಹಣ ಬಂದಿಲ್ಲ.

2020ರ ಡಿಸೆಂಬರ್‌ನಿಂದ 2021ರ ಡಿಸೆಂಬರ್‌ವರೆಗೂ ಪೋಷಣ ಅಭಿಯಾನಕ್ಕೆ ಹಣ ನೀಡಿಲ್ಲ. ಬಾಲ ವಿಕಾಸ ಸಮಿತಿಗೆ ಪ್ರತಿ ತಿಂಗಳು ₹ 500 ಸಂದಾಯ ಮಾಡಬೇಕು. ಅಂಗನವಾಡಿಯವರು ತಿಂಗಳಲ್ಲಿ ಎರಡು ಜಾಗೃತಿ ಕಾರ್ಯಕ್ರಮ ಮಾಡಬೇಕು. ಆದರೆ, ಇದಕ್ಕೆ ಬೇಕಾದ ಹಣವನ್ನೂ ಇಲಾಖೆ ನೀಡಿಲ್ಲ.

ಆರು ವರ್ಷದೊಳಗಿನ ಮಕ್ಕಳಿಗೆ ಅನ್ನಪ್ರಾಶನ, ಎರಡನೇ ಗರ್ಭ ಧರಿಸಿದವರ ಮಗುವಿಗೆ ಸುಪೋಷಣೆ, ಕಿಶೋರಿಯರು, ಹಿರಿಯರಿಗೆ ಆರೋಗ್ಯ ಅರಿವು– ಹೀಗೆ ಎಲ್ಲ ಕಾರ್ಯಕ್ರಮಗಳೂ ಅನುದಾನ ಕೊರತೆಯ ಕಾರಣ ಸ್ಥಗಿತಗೊಂಡಿವೆ.

ಈ ವರ್ಷ ಜನವರಿ ತಿಂಗಳಲ್ಲಿ ಮಾತ್ರ ಹಣ ಬಂದಿದ್ದು, ಎಲ್ಲ ಅಂಗನವಾಡಿಗಳಲ್ಲೂ ಒಂದೊಂದು ಕಾರ್ಯಕ್ರಮ ಮಾತ್ರ ಮಾಡಲಾಗಿದೆ.

'ಮಾತೃವಂದನಾ'ದಲ್ಲಿ 2020ರ ಡಿಸೆಂಬರ್‌ನಿಂದ ಈವರೆಗೂ ಯಾರಿಗೂ ನೆರವಿನ ಹಣ ಪಾವತಿಸಿಲ್ಲ. ಮೂರು ಕಂತುಗಳಲ್ಲಿ ನೀಡಬೇಕಾದ ₹ 5 ಸಾವಿರ ಹಣಕ್ಕಾಗಿ ಮಹಿಳೆಯರು ವಾರಕ್ಕೊಮ್ಮೆ ಅಂಗನವಾಡಿಗೆ ಅಲೆಯುವಂತಾಗಿದೆ.

'ತಾಯಿ ಕಾರ್ಡ್, ಆರೋಗ್ಯ ವಿವರ, ಅರ್ಜಿ ಭರ್ತಿ ಮಾಡಿ ಕಳುಹಿಸುವ ಕೆಲಸವನ್ನು ನಾವು ನಿಲ್ಲಿಸಿಲ್ಲ. ಹಳ್ಳಿಯ ಜನ ವಾರಕ್ಕೊಮ್ಮೆಯಾದರೂ ಅಂಗನವಾಡಿಗೆ ಬಂದು ತಕರಾರು ತೆಗೆಯುತ್ತಾರೆ. ಆದರೆ, ಇಲಾಖೆ ಹಣ ನೀಡದೇ ಇದ್ದರೆ ನಾವೇನು ಮಾಡಲು ಸಾಧ್ಯ?' ಎಂಬ ಅಸಹಾಯಕತೆ ಹಲವು ಅಂಗನವಾಡಿ ಕಾರ್ಯಕರ್ತೆಯರದ್ದು.

ಯಾದಗಿರಿ, ಬೀದರ್ ಸೇರಿದಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಇತರೆ ಜಿಲ್ಲೆಗಳಲ್ಲೂ ಇದೇ ಸ್ಥಿತಿ ಇದೆ.

'ಪ್ರತಿ ವಾರ ಮಾತೃವಂದನಾ ಹಣದ ಬಗ್ಗೆ ವಿಚಾರಿಸುತ್ತೇನೆ. ಅಂಗನವಾಡಿ ಕಾರ್ಯಕರ್ತೆಯರು ಕೋವಿಡ್ ಕಾರಣ ಇನ್ನೂ ಹಣ ಬಂದಿಲ್ಲ ಎಂದು ಹೇಳುತ್ತಾರೆ. ಆದರೆ, ತಾಯಿ ಕಾರ್ಡ್ ಮಾಡಿಸುವಾಗ ಕಂತಿನಲ್ಲಿ ಹಣ ಬರುತ್ತದೆ ಎಂದು ಹೇಳಿದ್ದರು' ಎಂದು ಯಾದಗಿರಿ ನಿವಾಸಿ ಶರಣಮ್ಮ ಬಸವರಾಜ ಹೇಳುತ್ತಾರೆ.

'ಯಾದಗಿರಿ ಜಿಲ್ಲೆಗೆ ₹8 ಕೋಟಿ ಹಣ ಬರಬೇಕಿದೆ. ಆದರೆ, ₹3.50 ಕೋಟಿ ಮಾತ್ರ ಬಂದಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಮಾತೃವಂದನಾ ಯೋಜನೆಯಡಿ ಗರ್ಭಿಣಿಯರಿಗೆ ಮೂರು ತಿಂಗಳಲ್ಲಿ ಪ್ರಥಮ ಕಂತು ₹ 1 ಸಾವಿರ, ಆರು ತಿಂಗಳಲ್ಲಿ ₹ 2 ಸಾವಿರ, ಹೆರಿಗೆ ನಂತರ ₹ 2 ಸಾವಿರ ಕೊಡಲಾಗುತ್ತಿದೆ' ಎಂದು ಬೀದರ್ ಜಿಲ್ಲೆ ಔರಾದ್ ಸಿಡಿಪಿಓ ಶಿವಪ್ರಕಾಶ್ ತಿಳಿಸಿದರು.

(ಪೂರಕ ಮಾಹಿತಿ: ಚಂದ್ರಕಾಂತ ಮಸಾನಿ, ಬಿ.ಜಿ. ಪ್ರವೀಣಕುಮಾರ)

ಪೋಷಣ ಅಭಿಯಾನ 'ಅಪೌಷ್ಟಿಕ'

ಒಂದನೇ ಪುಟದಿಂದ

ಪೋಷಣ ಅಭಿಯಾನ: ಗರ್ಭಧಾರಣೆಯಿಂದ ಹಿಡಿದು ಶಿಶು ಮತ್ತು ತಾಯಂದಿರಿಗೆ ಸಾವಿರ ದಿನಗಳ ಕಾಲ ಉತ್ತಮ ಪೌಷ್ಟಿಕ ಆಹಾರ ನೀಡಿ, ಆರೋಗ್ಯವಂತರನ್ನಾಗಿಸುವ ಉದ್ದೇಶದಿಂದ ಈ ಅಭಿಯಾನ ಜಾರಿಗೆ ತರಲಾಗಿದೆ. ರಕ್ತಹೀನತೆ, ಅತಿಸಾರ ತಡೆಗಟ್ಟುವುದು, ಪೌಷ್ಟಿಕ ಆಹಾರ ಪೂರೈಕೆ ಮಾಡುವುದರ ಮೂಲಕ ತಾಯಿ ಮತ್ತು ಶಿಶುವಿನ ಉತ್ತಮ ಆರೋಗ್ಯ ಕಾಪಾಡುವುದು ಈ ಯೋಜನೆಯ ಮುಖ್ಯ ಉದ್ದೇಶ.

'ಡಿಸೆಂಬರ್ ತಿಂಗಳಲ್ಲಿ ಪೂರೈಸಬೇಕಾದ ಪೌಷ್ಟಿಕ ಆಹಾರವನ್ನು ಈಗ (ಮಾರ್ಚ್) ತಿಂಗಳಲ್ಲಿ ನೀಡಲಾಗುತ್ತಿದೆ. ಬಾಣಂತಿಯರಿಗೆ ಆರು ತಿಂಗಳು ಮಾತ್ರ ಆಹಾರ ನೀಡಲಾಗುತ್ತಿದೆ. ಎರಡು ತಿಂಗಳ ವಿಳಂಬದಿಂದ ಅವರಿಗೆ ನಾಲ್ಕು ತಿಂಗಳ ಆಹಾರ ಮಾತ್ರ ಸಿಕ್ಕಂತಾಗುತ್ತಿದೆ. ಹೀಗೆ ಮಾಡಿದರೆ ಅಪೌಷ್ಟಿಕತೆ ನಿವಾರಣೆ ಸಾಧ್ಯವಾಗುವುದಾದರೂ ಹೇಗೆ' ಎಂದು ಅಂಗನವಾಡಿ ಕಾರ್ಯಕತೆಯೊಬ್ಬರು ಪ್ರಶ್ನಿಸುತ್ತಾರೆ.

ಮಾತೃವಂದನಾ ಯೋಜನೆ: 2010ರಲ್ಲಿ ಇಂದಿರಾ ಮಾತೃ ಯೋಜನೆ ಎಂಬ ಹೆಸರಿನಿಂದ ಆರಂಭಗೊಂಡ ಯೋಜನೆ, 2017ರಲ್ಲಿ ಕೆಲವು ಬದಲಾವಣೆಗಳೊಂದಿಗೆ ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯಾಗಿ ಬದಲಾಯಿತು. ಬಹುತೇಕ ತಾಯಂದಿರು ರಕ್ತಹೀನತೆಯಿಂದ ಬಳಲುತ್ತಿದ್ದು, ಕಡಿಮೆ ತೂಕದ ಮಗುವಿಗೆ ಜನ್ಮ ನೀಡುತ್ತಿದ್ದಾರೆ. ಗರ್ಭಾಶಯದಲ್ಲಿ ಸರಿಯಾದ ಪೋಷಣೆ ಸಿಗದಿದ್ದಾಗ ಮಗುವಿನ ಮೇಲೆ ಅದು ಅಡ್ಡಪರಿಣಾಮ ಬೀರುತ್ತದೆ. ಈ ಯೋಜನೆಯ ಮೂಲಕ ಅಂಥ ತಾಯಂದಿರಿಗೆ ಸಹಾಯಹಸ್ತ ನೀಡಲಾಗುತ್ತಿದೆ.

'ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕ ಆಹಾರ ಪಡೆಯುವುದಕ್ಕಾಗಿ ₹ 5,000 ಮೊತ್ತವನ್ನು ಮೂರು ಕಂತುಗಳಲ್ಲಿ ಫಲಾನುಭವಿಗಳ ಆಧಾರ್ ಲಿಂಕ್ ಮಾಡಿರುವ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ. ಗರ್ಭಿಣಿ ಎಂದು ಅಂಗನವಾಡಿ ಕೇಂದ್ರಗಳಲ್ಲಿ ನೋಂದಣಿ (150 ದಿನಗಳ ಒಳಗಾಗಿ) ಮಾಡಿದ ನಂತರ ಮೊದಲ ಕಂತು ₹ 1,000, ಗರ್ಭಿಣಿಯಾಗಿ ಆರು ತಿಂಗಳ ನಂತರ (ಕನಿಷ್ಠ ಒಂದು ಆರೋಗ್ಯ ತಪಾಸಣೆ ಆಗಿರಬೇಕು) ಎರಡನೇ ಕಂತು ₹ 2000, ಹುಟ್ಟಿದ ಮಗುವಿನ ಜನನ ನೋಂದಣಿಯ ಬಳಿಕ (ಮಗು ಮೊದಲ ಹಂತದ ಚುಚ್ಚುಮದ್ದು ಪಡೆದಿರಬೇಕು) ಮೂರನೇ ಕಂತು ₹ 2,000– ಹೀಗೆ ಮೂರು ಹಂತಗಳಲ್ಲಿ ಹೀಗೆ ಹಣ ಒದಗಿಸಲಾಗುತ್ತದೆ. ಆದರೆ, ಗರ್ಭಿಣಿಯರ ಆರೈಕೆಗೆ ಸಿಗಬೇಕಾದ ಮೊದಲ ಕಂತಿನ ಹಣ, ಹೆರಿಗೆಯಾಗಿ ಮಗುವಿಗೆ ಒಂದು ವರ್ಷ ತುಂಬಿದ ಬಳಿಕವೂ ಫಲಾನುಭವಿಗಳ ಕೈ ಸೇರುವುದಿಲ್ಲ. ಹೀಗಾದರೆ, ಯೋಜನೆಯಿಂದ ಏನು ಪ್ರಯೋಜನ' ಎಂದೂ ಅವರು ಪ್ರಶ್ನಿಸುತ್ತಾರೆ.

'ಮಾತೃ ವಂದನಾ ಯೋಜನೆ ಪಡೆಯಲು ಪತಿಯ ಲಿಖಿತ ಒಪ್ಪಿಗೆ ಮತ್ತು ಆತನ ಆಧಾರ್ ಕಾರ್ಡ್ ಕಡ್ಡಾಯವಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಯೋಜನೆಯ ಆರಂಭದಲ್ಲಿ ಸಿದ್ಧಪಡಿಸಿರುವ ಮಾರ್ಗಸೂಚಿ ಅನ್ವಯ ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ. ಇಲಾಖೆ ಅಧಿಕಾರಿಗಳು ಪತಿಯ ಆಧಾರ್ ನೀಡದೇ ಇದ್ದರೆ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ' ಎನ್ನುತ್ತಾರೆ.

ಮಾತೃವಂದನಾ ಯೋಜನೆ ಫಲಾನುಭವಿಗಳು

ವರ್ಷ	ನೋಂದಣಿ	ಪಾವತಿ ಆದ ಮೊತ್ತ (₹ ಕೋಟಿಗಳಲ್ಲಿ)
2017-18	3,52,765	20.69
2018-19	3,39,616	132.29
2019-20	4,99,066	183.06
2021-22	3,66,317	156.75

* ಮಾಹಿತಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಾತೃ ವಂದನಾ ಯೋಜನೆಗೆ ವೆಚ್ಚ ಅನುದಾನ (₹ ಕೋಟಿಗಳಲ್ಲಿ)



2017-2022

ಪೋಷಣ ಅಭಿಯಾನ ಯೋಜನೆಗೆ ಅನುದಾನ (₹ ಕೋಟಿಗಳಲ್ಲಿ)

ವರ್ಷ	ಕೇಂದ್ರ	ರಾಜ್ಯ
2018-19	52.55	35.03
2019-20	79.67	50.05
2021-22	52.55	35.03

ಇಲಾಖೆಯಲ್ಲೇ ಉಳಿದ 'ಸೀರೆ'!

'ಪೋಷಣ ಅಭಿಯಾನ'ದ ಪ್ರಚಾರಕ್ಕೆ 'ಪೋಷಣ ಅಭಿಯಾನ' ಎಂದು ಮುದ್ರಿಸಿದ ತಲಾ ₹ 600 ಬೆಲೆಯ ಸೀರೆಯನ್ನು ಸಮವಸ್ತ್ರವಾಗಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಪೂರೈಸಿರುವ ಇಲಾಖೆ, ಅದನ್ನು ಉಟ್ಟು ಕರ್ತವ್ಯ ನಿರ್ವಹಿಸುವಂತೆ ಸೂಚಿಸಿತ್ತು. ಆದರೆ, 'ಹೆಣ್ಣಿನ ದೇಹವನ್ನು ಪ್ರಚಾರದ ಸರಕಾಗಿಸಲು ಹೊರಟಿರುವುದು ನೀಚತನದ ಪರಮಾವಧಿ' ಎಂದು ಆಕ್ರೋಶಗೊಂಡ ಕಾರ್ಯಕರ್ತೆಯರು, ಆ ಸೀರೆ ಉಡಲು ನಿರಾಕರಿಸಿದ್ದಾರೆ. ಹೀಗಾಗಿ, ಲಕ್ಷಾಂತರ ಮೊತ್ತದ ಸೀರೆಗಳು ಇಲಾಖೆಯಲ್ಲಿ ರಾಶಿ ಬಿದ್ದಿವೆ. 'ಉಟ್ಟುಕೊಳ್ಳದಿದ್ದರೂ ಪರವಾಗಿಲ್ಲ. ತೆಗೆದುಕೊಂಡು ಹೋಗಿ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ರಾಜ್ಯದಾದ್ಯಂತ ಯಾರೂ ಸೀರೆ ಪಡೆದುಕೊಂಡಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮಾರ್ಚ್ 6, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 22 ನೇ ದಿನ
ತಿಥಿ: (ಫಾಲ್ಗುಣ ಶುಕ್ಲ) ಚತುರ್ಥಿ ಗಂ. 21-13 **ನಕ್ಷತ್ರ:** ಅಶ್ವಿನಿ ಗಂ. 27-51
ಯೋಗ: ಬ್ರಹ್ಮ ಗಂ. 24-00, **ಕರಣ:** ವಣಿಜ ಗಂ. 08-49.
ರಾಹುಕಾಲ: ಸಾಯಂಕಾಲ 04:30 – 06:00
ಸೂರ್ಯೋದಯ: 06-47 **ಸೂರ್ಯಾಸ್ತ:** 06-36
ಮುಸ್ಲಿಂ ದಿನಾಂಕ: 02 ಶಬನ್
ಅದೃಷ್ಟ ಸಂಖ್ಯೆ: 7, 15

ಮೇಷ: ಮಹತ್ವದ ಕಾರ್ಯಾಚರಣೆಗಾಗಿ ಅಥವಾ ದೇವರ ದರ್ಶನಕ್ಕಾಗಿ ದೂರ ಪ್ರಯಾಣ ಕಂಡುಬರುವುದು. ದುಡಿಮೆ ಸಾರ್ಥಕವಾಗುವ ಕೆಲಸವನ್ನು ಮಾಡಿ. ಸೇನೆಯಲ್ಲಿ ಕೆಲಸ ಮಾಡುವವರು ಹೆಚ್ಚಿನ ಶ್ರಮವಹಿಸಬೇಕಾಗುತ್ತದೆ.

ವೃಷಭ: ಷೇರಿನ ವ್ಯವಹಾರದಲ್ಲಿ ಹೆಚ್ಚಿನ ಹಣ ಸಂಗ್ರಹವಾದೀತು. ಕೃಷಿಕರಿಗೆ ವರಮಾನ ಹೆಚ್ಚಲಿದೆ. ಮಕ್ಕಳ ಭವಿಷ್ಯದ ಬಗ್ಗೆ ಯೋಜನೆಗಳನ್ನು ರೂಪಿಸಲು ಸಕಾಲ. ಈ ದಿನ ನಿಮ್ಮನ್ನು ಸಮಾಜ ಸೇವೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಿರಿ.

ಮಿಥುನ: ಇನ್ನೊಬ್ಬರಿಗೆ ತಿಳುವಳಿಕೆ ಹೇಳುವ ಕೆಲಸವನ್ನು ಈ ದಿನ ಮಾಡದಿರಿ. ಏಕೆಂದರೆ ನಿಮ್ಮಿಂದಲೇ ಅಪರಾಧ ನೆಡೆಯಬಹುದು. ದೇವರ ಧ್ಯಾನದಲ್ಲಿ ಕಾಲ ಕಳೆಯುವುದು, ಮಂದಿರಕ್ಕೆ ಹೋಗಿ ದೇವರ ದರ್ಶನ ಮಾಡುವುದು ಉತ್ತಮ.

ಕರ್ಕಾಟಕ: ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣಗಳ ಮಾರಾಟದಿಂದ ಲಾಭ ಇರಲಿದೆ.

ಸಿಂಹ: ಕಾರ್ಮಿಕರು ಸಹನಶೀಲರಾಗಿ ಇರುವುದರಿಂದ ಯಶಸ್ಸು ಪಡೆಯಬಹುದು. ಮನೆಯಲ್ಲಿ ಸಣ್ಣ-ಪುಟ್ಟ ವಿಚಾರಕ್ಕೆ ಭಿನ್ನಾಭಿಪ್ರಾಯ ಮೂಡಿಬಂದು ಅಶಾಂತಿಯ ವಾತಾವರಣ ಕಂಡುಬರಲಿದೆ.

ಕನ್ಯಾ: ಹೊಸ ಹುದ್ದೆಗೆ ಅಭ್ಯರ್ಥಿಯಾಗುವ ಬಯಕೆ ಉಂಟಾಗಲಿದೆ. ನಿಮ್ಮ ಪ್ರಾಮಾಣಿಕತನದಿಂದಾಗಿ ಒಳ್ಳೆಯ ಕೆಲಸವೊಂದು ಅಯಾಚಿತವಾಗಿ ಸಿಗುತ್ತದೆ. ಆತ್ಮಾಭಿಮಾನಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನೆಡೆದುಕೊಳ್ಳಿರಿ.

ತುಲಾ: ಗೃಹ ನಿರ್ಮಾಣದ ಜವಾಬ್ದಾರಿಯು ನಿಮ್ಮ ಜೀವನದಲ್ಲಿ ಸವಾಲಾಗಿ ಬಂದು ಜಯವನ್ನು ತರಲಿದೆ. ಇಂಜಿನಿಯರುಗಳಿಗೆ ಉದ್ಯೋಗದಲ್ಲಿ ಉತ್ತಮ ಬದಲಾವಣೆಯ ಅವಕಾಶವಿದೆ.

ವೃಶ್ಚಿಕ: ಶೀಘ್ರಕೋಪಿಗಳಾಗುವ ನಿಮ್ಮ ವ್ಯಕ್ತಿತ್ವಕ್ಕೆ ಬದಲಾವಣೆಯ ಗಾಳಿ ಬೀಸಲಿದೆ. ಮಾತಿನಲ್ಲಿ ಕಪಟತನ ಇಲ್ಲವಾದ್ದರಿಂದ ನಿಷ್ಠೂರವಾಗಬಹುದು. ಮಗಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡು ಬರಲಿದೆ.

ಧನು: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯವು ಮೂಡಿ ಬರಲಿದೆ. ಕಮಿಶನ್ ವ್ಯಾಪಾರದ ವೃತ್ತಿಯಲ್ಲಿರುವವರಿಗೆ ಲಾಭಾಂಶ ವೃದ್ಧಿಯಾಗುವುದು.

ಮಕರ: ದೇವತಾನುಗ್ರದಿಂದ ಸಕಲ ಅಭೀಷ್ಟವು ಸಿದ್ಧಿಯಾಗಿ ಸಂತೃಪ್ತಿಯಾಗುವುದು. ಮಂಗಳ ಕಾರ್ಯಕ್ಕೆ ಭಾಗಿಯಾಗಲು ದೂರ ಪ್ರಯಾಣ ಮಾಡಬೇಕಾಗುತ್ತದೆ. ಚಲನಚಿತ್ರರಂಗದವರಿಗೆ ಖ್ಯಾತಿ, ಗೌರವಾನ್ವಿತ ಅವಕಾಶ ಸಿಗುವುದು

ಕುಂಭ: ಹಿರಿಯರು ಹೇಳಿದಂತೆ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದನ್ನು ಕಲಿತುಕೊಳ್ಳಿರಿ. ಛಾಯಾಗ್ರಾಹಕರಿಗೆ ಹೆಚ್ಚಿನ ಅವಕಾಶಗಳು ಸಿಗಲಿವೆ.


ಮೀನ: ಕಲಾವಿದರಿಗೆ ಅತ್ಯುತ್ತಮ ದಿನವಾಗಿರುವುದು. ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವ ನಿಮ್ಮ ಪ್ರಯತ್ನ ಸಾರ್ಥಕವಾಗುತ್ತದೆ. ಪ್ರವೃತ್ತಿಯಿಂದ ಹಣ ಸಂಪಾದನೆಯಾಗುವುದು.

ಪದಬಂಧ 4889

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಗ್ಗೊಲೆಯ ಘಟನೆ (4)
3.ಕಾಸು ಇದ್ದಾಗ ಖರೀದಿಸಿದ ತೋಟ! (4)
5.ಟಕ ಟಕ ಶಬ್ದಮಾಡುತ್ತಿರುವ ಕುದುರೆ ಬಂಡಿ (3)
7.ರಕ್ತ ಕೀವುಗಳಿಂದ ತುಂಬಿ ಮೈಮೇಲೆ ಏಳುವ ಗುಳ್ಳೆ (2)
9.ಮನೋರಥದಲ್ಲಿ ಕಾಣುತ್ತಿರುವ ತೇರು! (2)
11.ನಾಯಕನಿಗೆ ಕಾಣಿಸಿದ ಸ್ವರ್ಗ (2)
12.ಯೌವ್ವನದಲ್ಲಿ ಪ್ರವೇಶಿಸಿರುವ ಅರಣ್ಯ! (2)
14.ಆ ಮುಖವಿದು! (3)
16.ಬುಡದಿಂದ ಬಂದಿರುವ ಬುನಾದಿ (4)
17.ಕೊನೆಗೆ ಬರವಿದ್ದಾಗಿನ ಬೆತ್ತಲೆ! (4)

ಮೇಲಿಂದ ಕೆಳಕ್ಕೆ
1.ಹಲಾಲುಕೋರನಿಂದಲೇ ಈ ನಷ್ಟ! (3)
2.ತಿರುಗಿದಾಗ ಕಾಣಿಸಿದ ಆಲಸ್ಯ (2)
3.ಉತ್ತರದವರ ಚಿಕ್ಕಪ್ಪ (2)
4.ಒಳ್ಳೆಯ ಹಾದಿಯಿದು (3)
6.ಪಾಲು ಬೇಕೆಂದು ತಿಳಿಸಿದ ಅಂಚೆ! (7)
8.ದುಃಖಾಂತವಾದ ನಾಟಕ (5)
9.ಬೆಳ್ಳಿ ಹಬ್ಬವಿದು (5)
10.ಮೇಲಕ್ಕೆ ಏಳುವುದು (3)
11.ಪಿತನ ಹತ್ತಿರ ಕ್ಷೌರಿಕಇದ್ದಾನಲ್ಲಾ! (3)
13.ಕ್ಷಣಿಕವಾದುದು ನರನಲ್ಲಿ ಇದೆಯಲ್ಲಾ! (3)
14.ಆ ದಿನದಲ್ಲೇ ಪ್ರಾರಂಭ ಇದೆ! (2)
15.ದಿವಾನ ವೀಕ್ಷಿಸಿರುವ ಹೊಳೆ (2)



4888 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನಂಗ 3.ಪರಾರಿ 5.ಸುಂಕ 6.ಬದುಕು 7.ರಿಪು 9.ಶಿಹ 11.ಸುಖಾಂತ 13.ಹಸು 14.ಗುಲಾಮ 15.ನಜರು

ಮೇಲಿಂದ ಕೆಳಕ್ಕೆ: 1.ಅಭ್ರಕ 2.ಗರೀಬ 3.ಪರಾಕು 4 ರಿಪೇರಿ 5.ಸುಂಟರಗಾಳಿ 8.ಪುಸಲಾಯಿಸು 10.ಹಡಗು 11.ಸುಧಾಮ 12.ತಲ್ಲೀನ 13.ಹಸುರು

ಸುಡೊಕು 5275

4		7		8			2	
								8
6		5		9		4		
	2		6				3	5
5		3	2		1	8		9
	1				9		4	2
	6			2				
		8	9					7
	5			3	4		9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5274 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚಿತ್ರೋತ್ಸವದಲ್ಲಿ ಪುನೀತ್ ರಾಜ್‌ಕುಮಾರ್ ನೆನಪು: ಒಡನಾಟ ಮೆಲುಕು ಹಾಕಿದ ಭಗವಾನ್

‘ಪುನೀತ್ ಅಭಿನಯಕ್ಕೆ ಬೆರಗಾಗಿದ್ದ ರಾಜ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಕ್ತ ಪ್ರಹ್ಲಾದ ಸಿನಿಮಾದಲ್ಲಿ ಪುನೀತ್ ಅವರ ಅಭಿನಯ ಕಂಡು ಸ್ವತಃ ರಾಜ್‌ಕುಮಾರ್ ಅವರೇ ಬೆರಗಾಗಿದ್ದರು. ಅಭಿನಯದಲ್ಲಿ ನನ್ನನ್ನೇ ಮೀರಿಸುವವನೊ ಏನೋ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು’ ಎಂದು ಸಿನಿಮಾ ನಿರ್ದೇಶಕ ಎಸ್‌.ಕೆ. ಭಗವಾನ್ ನೆನಪಿನ ಬುತ್ತಿ ಬಿಚ್ಚಿಟ್ಟರು.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಶನಿವಾರ ‘ಮೆಮೊರೀಸ್ ಆಫ್ ಹೀರೊ–ಪುನೀತ್ ರಾಜ್‌ಕುಮಾರ್’ ಕಾರ್ಯಕ್ರಮದಲ್ಲಿ ಪುನೀತ್ ಜತೆಗಿನ ಒಡನಾಟವನ್ನು ಅವರು ಮೆಲುಕು ಹಾಕಿದರು.

‘ರಾಜ್‌ಕುಮಾರ್ ಅವರು ಕೆಲವು ದೃಶ್ಯಗಳಲ್ಲಿ ಅಭಿನಯಿಸುವಾಗ ಎರಡು-ಮೂರು ಟೇಕ್ ತಗೆದುಕೊಂಡರೆ, ಪುನೀತ್ ಒಂದೇ ಟೇಕ್‌ನಲ್ಲಿ ಯಶಸ್ವಿಯಾಗುತ್ತಿದ್ದರು. ಪಾತ್ರವನ್ನು ಗ್ರಹಿಸುವ ಶಕ್ತಿ ಆ ವಯಸ್ಸಿನಲ್ಲೇ ಹೇಗೆ ಬಂದಿತ್ತೊ ಗೊತ್ತಿಲ್ಲ’ ಎಂದು ಬಣ್ಣಿಸಿದರು.

‘ಅಪ್ಪು ಹುಟ್ಟಿದ ದಿನವೇ ನಿನ್ನ ಕೈಗೆ ಬಿದ್ದಿದ್ದಾನೆ. ಅವನು ಕೀರ್ತಿಯ ಶಿಖರ ಏರೇ ಏರುತ್ತಾನೆ ಎಂಬುದು ನನ್ನ ನಂಬಿಕೆ ಎಂದು ಪಾರ್ವತಮ್ಮ ರಾಜ್‌ಕುಮಾರ್ ಹೇಳಿದ್ದರು. ಯಾವ ಮನಸಿನಿಂದ ಅದನ್ನು ಹೇಳಿದ್ದರೋ ಗೊತ್ತಿಲ್ಲ, ನಿಜವಾಯಿತು. ಇದ್ದಾಗ ಕೀರ್ತಿ ಸಂಪಾದಿಸಿದರು, ಹೋದ ನಂತರವೂ ಅವರ ಬಗ್ಗೆ ಜನ ಮಾತನಾಡುತ್ತಿದ್ದಾರೆ. ಹಾಗಾಗಿ, ಅವರ ಕೀರ್ತಿ ಸೂರ್ಯ–ಚಂದ್ರ ಇರುವ ತನಕ ಇದ್ದೇ ಇರುತ್ತದೆ’ ಎಂದರು.

‘ಶಕ್ತಿಧಾಮದ 4 ಎಕರೆ ಜಾಗದಲ್ಲಿ ದೊಡ್ಡ ಶಾಲೆ ಕಟ್ಟಬೇಕು ಎಂಬುದು ಅವರ ಆಸೆಯಾಗಿತ್ತು. ಕಟ್ಟಡ ನಿರ್ಮಾಣಕ್ಕೆ ಅಂದಾಜಿಸಿದ್ದ ₹8 ಕೋಟಿ ವ್ಯವಸ್ಥೆ ಮಾಡುವ ಜವಾಬ್ದಾರಿ ತೆಗೆದುಕೊಂಡಿದ್ದರು. ಈ ಶಾಲೆಯಲ್ಲಿ ಎಲ್ಲಾ ಬಡ ಮಕ್ಕಳಿಗೆ ಉಚಿತ ಶಿಕ್ಷಣ ಸಿಗಬೇಕು ಎಂದು ಬಯಸಿದ್ದರು. ಆದರೆ, ಕೆಲವೇ ದಿನಗಳಲ್ಲಿ ಅವರು ಇಲ್ಲವಾದರು. ಅವರ ಅದೊಂದು ಆಸೆ ಈಡೇರದೆ ಉಳಿದುಕೊಂಡಿತು’ ಎಂದು ಭಗವಾನ್ ಭಾವುಕರಾದರು.

ಸಿನಿಮಾ ನಿರ್ದೇಶಕ ಪವನ್ ಒಡೆಯರ್, ‘ಸಿನಿಮಾದಲ್ಲಿ ಅಭಿನಯಿಸಲು ನಾನು ಹಣ ಪಡೆಯುತ್ತೇನೆ. ಜನ ಹಣ ಕೊಟ್ಟು ಸಿನಿಮಾ ನೋಡುತ್ತಾರೆ. ಆದರೂ, ಜನ ನನ್ನ ಮೇಲೆ ಇಷ್ಟೊಂದು ಪ್ರೀತಿ, ಅಭಿಮಾನ ಇಟ್ಟುಕೊಂಡಿರುವುದು ಏಕೆ ಎಂಬುದೇ ಅರ್ಥವಾಗುವುದಿಲ್ಲ. ಅವರಿಗೆ ನಾವು ಏನು ಕೊಟ್ಟರೂ ಕಡಿಮೆಯೇ ಎನ್ನುತ್ತಿದ್ದರು ಪುನೀತ್ ಸರ್’ ಎಂದರು.

ಸಿನಿಮಾ ನಿರ್ದೇಶಕ ಚೇತನ್ ಕುಮಾರ್, ‘ಜೇಮ್ಸ್ ಚಿತ್ರದಲ್ಲಿ ಸೈನಿಕನ ಪಾತ್ರವನ್ನು ಅಪ್ಪು ಸರ್ ಮಾಡಿದ್ದಾರೆ. ಸೈನಿಕರ ರೀತಿಯ ವಸ್ತ್ರ ಧರಿಸುವಾಗ ಅತ್ಯಂತ ಜಾಗರೂಕತೆ ವಹಿಸುತ್ತಿದ್ದರು. ಸೈನಿಕರ ಗೌರವ ಕಡಿಮೆ ಆಗುವ ರೀತಿಯಲ್ಲಿ ನಮ್ಮ ವೇಷ ಇರಬಾರದು ಎಂಬುದು ಅವರ ಆಶಯವಾಗಿತ್ತು. ಜೇಮ್ಸ್ ಚಿತ್ರ ಸೆನ್ಸಾರ್ ಮಂಡಳಿಯ ಮುಂದಿದೆ. ಮಾ.17ರಂದು ಅವರ ಹುಟ್ಟುಹಬ್ಬದ ದಿನವೇ ಅಮೆರಿಕದ 72 ಕೇಂದ್ರಗಳಲ್ಲಿ ಸೇರಿ ವಿಶ್ವದಾದ್ಯಂತ ಬಿಡುಗಡೆಯಾಗಲಿದೆ’ ಎಂದರು.

ನಿರ್ಮಾಪಕ ಸೂರಪ್ಪ ಬಾಬು ಅವರು ‘ಪೃಥ್ವಿ’ ಚಿತ್ರ ನಿರ್ಮಾಣ ಸಂದರ್ಭದಲ್ಲಿ ಪುನೀತ್ ಜತೆಗಿನ ಒಡನಾಟ ಹಂಚಿಕೊಂಡರು.

‘ಪುನೀತ್ 14 ವರ್ಷದ ಹುಡುಗನಾಗಿದ್ದಾಗ ‘ಆಕಸ್ಮಿಕ’ ಸಿನಿಮಾ ನಿರ್ಮಾಣವಾಯಿತು. ಚಿತ್ರೀಕರಣದ ತಂಡ ತಂದಿದ್ದ ವಸ್ತ್ರಗಳನ್ನು ವಾಪಸ್ ಕಳುಹಿಸಿ ಅಪ್ಪು ಸ್ವತಃ ಅಂಗಡಿಗೆ ಹೋಗಿ ಹೊಸ ವಸ್ತ್ರ ಖರೀದಿಸಿ ತಂದಿದ್ದರು. ಅವುಗಳನ್ನೇ ಧರಿಸಿ ರಾಜ್‌ಕುಮಾರ್ ಅಭಿನಯಿಸಿದ್ದರು’ ಎಂದು ನಿರ್ದೇಶಕ ಪಿ. ಶೇಷಾದ್ರಿ ನೆನಪಿಸಿಕೊಂಡರು.

ಕನ್ನಡ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ಸಿನಿಮಾ ನಿರ್ದೇಶಕ ಬಿ.ರಾಮಮೂರ್ತಿ ಇದ್ದರು.



ಕಾರ್ಯಕ್ರಮದಲ್ಲಿ ಸಿನಿಮಾ ನಿರ್ದೇಶಕ ಚೇತನ್ ಕುಮಾರ್ ಮಾತನಾಡಿದರು. ಸೂರಪ್ಪ ಬಾಬು, ಎಸ್‌.ಕೆ. ಭಗವಾನ್, ಪವನ್ ಒಡೆಯರ್ ಇದ್ದರು –ಪ್ರಜಾವಾಣಿ ಚಿತ್ರ

ಹಿಜಾಬ್ ವಿವಾದ: ಕಾಲೇಜಿಗೆ ರಜೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಹಿಜಾಬ್ ಸಮಸ್ಯೆ ಉದ್ಭವಿಸಿದ್ದ ಇಲ್ಲಿನ ರಥಬೀದಿಯ ಪಿ.ದಯಾನಂದ ಪೈ-ಸತೀಶ್ ಪೈ ಪ್ರಥಮದರ್ಜೆ ಸರ್ಕಾರಿ ಕಾಲೇಜಿಗೆ ಅನಿರ್ದಿಷ್ಟಾವಧಿ ರಜೆ ಘೋಷಿಸಲಾಗಿದೆ.

ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ನಿರ್ದೇಶನದಂತೆ ಎಲ್ಲ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಸದ್ಯ ಆನ್‌ಲೈನ್ ತರಗತಿ ನಡೆಸಲಾಗುತ್ತದೆ ಎಂದು ಕಾಲೇಜಿನಿಂದ ವಿದ್ಯಾರ್ಥಿಗಳಿಗೆ ಸಂದೇಶ ಕಳುಹಿಸಲಾಗಿದೆ.

ರಥಬೀದಿ ಕಾಲೇಜಿನಲ್ಲಿ ಗುರುವಾರ ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿಲ್ಲ ಎಂದು ವಿದ್ಯಾರ್ಥಿನಿಯರು ದೂರಿದ್ದರು. ಶುಕ್ರವಾರವೂ ಇದು ಮುಂದುವರಿದಿದ್ದು, ಹಿಜಾಬ್ ಧರಿಸಿದ್ದ ಐವರು ವಿದ್ಯಾರ್ಥಿನಿಯರನ್ನು ಕಾಲೇಜಿನ ಗೇಟ್ ಬಳಿ ಕೆಲವು ಉಪನ್ಯಾಸಕರು ಹಾಗೂ ಕಾಲೇಜಿಗೆ ಸಂಬಂಧಿಸಿದ ಕೆಲವರು ತಡೆದಿದ್ದರು.

ಈ ವೇಳೆ ವಿದ್ಯಾರ್ಥಿಯೊಬ್ಬ, ಹಿಜಾಬ್ ಧರಿಸಿದ್ದ ವಿದ್ಯಾರ್ಥಿನಿಯರಿಗೆ ಕಾಲೇಜು ಪ್ರವೇಶ ದ್ವಾರದಲ್ಲಿ ಅಡ್ಡಪಡಿಸಿದ್ದ. ಇದರಿಂದ ಮಾತಿನ ಚಕಮಕಿ ನಡೆದಿತ್ತು. ಈ ಬಗ್ಗೆ ಮುಸ್ಲಿಂ ವಿದ್ಯಾರ್ಥಿನಿಯೊಬ್ಬರು ಬಂದರು ಠಾಣೆಯಲ್ಲಿ ದೂರು ನೀಡಿದ್ದಾರೆ. ಅದೇ ರೀತಿ ವಿದ್ಯಾರ್ಥಿ ಕೂಡ ತನಗೆ ಜೀವ ಬೆದರಿಕೆ ಹಾಕಲಾಗಿದೆ ಎಂದು ಸ್ಟೇಟಸ್ ಹಾಕಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಈ ಗೊಂದಲದ ಹಿನ್ನೆಲೆಯಲ್ಲಿ ಶನಿವಾರದಿಂದ ಕಾಲೇಜಿಗೆ ಅನಿರ್ದಿಷ್ಟಾವಧಿಗೆ ರಜೆ ಘೋಷಿಸಲಾಗಿದೆ ಎಂದು ಕಾಲೇಜು ಆಡಳಿತ ಮಂಡಳಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದೆ.

ಪ್ರತಿಭಟನೆ: ಹಿಜಾಬ್ ಧರಿಸಿ ತರಗತಿಗೆ ಹಾಜರಾಗಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನ 24 ಮುಸ್ಲಿಂ ವಿದ್ಯಾರ್ಥಿನಿಯರು ಶನಿವಾರ ಪ್ರತಿಭಟನೆ ನಡೆಸಿದರು.

ಕಾಲೇಜಿನ ಗೇಟ್ ಬಳಿ ವಿದ್ಯಾರ್ಥಿನಿಯರು ಪುಸ್ತಕ ಹಿಡಿದು ಕುಳಿತು ಪ್ರತಿಭಟನೆ ನಡೆಸಿದರು. ಹಿಜಾಬ್ ನಮ್ಮ ಹಕ್ಕು ಎಂದು ಘೋಷಣೆ ಕೂಗಿದರು. ಆಂತರಿಕ ಪರೀಕ್ಷೆಗೆ ಹಿಜಾಬ್ ಧರಿಸಿ ಹಾಜರಾಗಲು ಅನುಮತಿ ನೀಡಬೇಕು ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಒತ್ತಾಯಿಸಿದರು.

ಜಾತಿ ಕಾಲಂ ತೆಗೆಯಲಿ: ಶಾಂತವೀರ ಸ್ವಾಮೀಜಿ

ಹೊಳಲ್ಕೆರೆ: ‘ಸರ್ಕಾರಿ ಎಲ್ಲಾ ಇಲಾಖೆಗಳ ಅರ್ಜಿಗಳಲ್ಲಿ ಜಾತಿಕಾಲಂ ತೆಗೆಯಬೇಕು’ ಎಂದು ಹೊಸದುರ್ಗದ ಕುಂಚಿಟಿಗ ಪೀಠದ ಶಾಂತವೀರ ಸ್ವಾಮೀಜಿ ಸಲಹೆ ನೀಡಿದರು.

ಪಟ್ಟಣದಲ್ಲಿ ಶನಿವಾರ ನಡೆದ ‘ಶಿಕ್ಷಣದಲ್ಲಿ ಕನ್ನಡ ಮಾಧ್ಯಮ’ ಹಾಗೂ ‘ಕನ್ನಡ ಸಾಹಿತ್ಯ’ ಕುರಿತ ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಶಾಲಾ ದಾಖಲಾತಿ ಹಾಗೂ ಸರ್ಕಾರಿ ಅರ್ಜಿಗಳಲ್ಲಿ ಜಾತಿ ಕಾಲಂ ಇರುವುದರಿಂದ ಜಾತಿ ಪದ್ಧತಿ ಮತ್ತಷ್ಟು ಹೆಚ್ಚುತ್ತಿದೆ. ಈಗ ರಾಜಕೀಯ ಸೇರಿ ಎಲ್ಲಾ ಕ್ಷೇತ್ರಗಳಲ್ಲೂ ಜಾತಿಯೇ ಪ್ರಮುಖವಾಗುತ್ತಿದೆ. ಜಾತಿ ಪದ್ಧತಿಯ ಕಾರಣ ಯುವಕರಿಗೆ ಹೆಣ್ಣು ಸಿಗದಂತಾಗಿದೆ. ಸಮಾಜದಲ್ಲಿ ಹೆಣ್ಣುಮಕ್ಕಳಿದ್ದರೂ ತಮ್ಮದೇ ಜಾತಿಯಲ್ಲಿ ಮದುವೆಯಾಗುವ ಕಟ್ಟುಪಾಡು ಇರುವುದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಜಾತಿಯಿಂದ ಹೊರ ಬಂದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ’ ಎಂದು ಅಭಿಪ್ರಾಯಪಟ್ಟರು.

ಅನರ್ಹ ಅಧಿಕಾರಿಗಳನ್ನು ವಜಾಗೊಳಿಸಲು ಆಗ್ರಹ

ಮೈಸೂರು: ‘ಸುಪ್ರೀಂಕೋರ್ಟ್ ಆದೇಶಿಸಿರುವಂತೆ 1998ರ ಬ್ಯಾಚಿನ ಅನರ್ಹ ಅಧಿಕಾರಿಗಳನ್ನು ವಜಾಗೊಳಿಸಬೇಕು’ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್‌.ಶಿವರಾಮು ಒತ್ತಾಯಿಸಿದರು.

‘ಸರ್ಕಾರವೇ ನೇಮಿಸಿದ್ದ ಮಿಶ್ರಾ ಸಮಿತಿ, ಸಿಐಡಿ ತನಿಖೆ ಹಾಗೂ ಸತ್ಯಶೋಧನಾ ಸಮಿತಿಯ ವರದಿಯ ಆಧಾರದ ಮೇರೆಗೆ ಸುಪ್ರೀಂಕೋರ್ಟ್ ಆದೇಶ ಹೊರಡಿಸಿತ್ತು. ನಂತರ, ದಾಖಲಾದ ಮರುಪರಿಶೀಲನಾ ಅರ್ಜಿಗಳನ್ನೂ ವಜಾಗೊಳಿಸಿತ್ತು. ಅಷ್ಟಾದರೂ ಸರ್ಕಾರ ಈವರೆಗೂ ಆದೇಶವನ್ನು ಜಾರಿಗೆ ತಂದಿಲ್ಲ’ ಎಂದು ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಅನರ್ಹಗೊಂಡವರಲ್ಲಿ 9 ಮಂದಿ ಕೆಎಎಸ್‌ನಿಂದ ಐಎಎಸ್‌ಗೆ ಮುಂಬಡ್ತಿ ಪಡೆದಿದ್ದಾರೆ. ಅದರಿಂದ, ಅವರ ಸ್ಥಾನ ಪಡೆಯಬೇಕಾದವರಿಗೆ ಅನ್ಯಾಯವಾಗಿದೆ. ಕೂಡಲೇ ಅನರ್ಹಗೊಂಡವರನ್ನು ಐಎಎಸ್ ಹುದ್ದೆಗಳಿಂದ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದರು.

‘ಈ ಕುರಿತು ಒತ್ತಾಯಿಸಲು ಮಾರ್ಚ್ 7ರಂದು ಬೆಳಿಗ್ಗೆ 11.30ಕ್ಕೆ ಇಲ್ಲಿನ ರಾಮಸ್ವಾಮಿ ವೃತ್ತದಲ್ಲಿ ಪತ್ರ ಚಳವಳಿ ನಡೆಸಲಾಗುವುದು’ ಎಂದರು.

ಹರ್ಷನ ಪ್ರಕರಣ ವಾರದಲ್ಲಿ ಎನ್‌ಐಎಗೆ: ಶೋಭಾ ಕರಂದ್ಲಾಜೆ

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತ ಹರ್ಷನ ಕೊಲೆ ಪ್ರಕರಣವನ್ನು ಇನ್ನೊಂದು ವಾರದೊಳಗೆ ಎನ್‌ಐಎ ತನಿಖಾ ತಂಡಕ್ಕೆ ಒಪ್ಪಿಸಲಾಗುವುದು ಎಂದು ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಶಿವಮೊಗ್ಗದ ಹರ್ಷನ ಮನೆಗೆ ಶನಿವಾರ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಾವು ಕೇವಲ ಕುಟುಂಬಕ್ಕೆ ದುಃಖ ತಂದಿಲ್ಲ; ಬದಲಿಗೆ ಇಡೀ ದೇಶಕ್ಕೆ ನೋವು ತಂದಿದೆ. ಹರ್ಷನ ಸಾವಿನ ಹಿಂದೆ ಅಂತರರಾಷ್ಟ್ರೀಯ ಷಡ್ಯಂತ್ರ ಅಡಗಿದೆ ಎಂಬ ಶಂಕೆ ಇದೆ. ಕೇಂದ್ರ ಸರ್ಕಾರ ಈ ಪ್ರಕರಣವನ್ನು ಎನ್‌ಐಎಗೆ ವಹಿಸುವಂತೆ ರಾಜ್ಯ ಸರ್ಕಾರಕ್ಕೆ ಹೇಳಿದೆ. ಹಾಗಾಗಿ ವಾರದೊಳಗೆ ಎನ್‌ಐಎಗೆ ಈ ಪ್ರಕರಣ ಹಸ್ತಾಂತರಗೊಳ್ಳುವ ನಿರೀಕ್ಷೆ ಇದೆ’ ಎಂದರು.

‘ಹರ್ಷನ ಕೊಲೆ ಮಾಡಿರುವುದನ್ನು ನೋಡಿದರೆ ತಾಲಿಬಾನ್ ಸಂಸ್ಕೃತಿ ಎದ್ದುತೋರುತ್ತದೆ. ಕೊಲೆ ಮಾಡಿ ವಿಡಿಯೊ ಮಾಡಿ ಸಾಮಾಜಿಕ ಜಾಲ ತಾಣದಲ್ಲಿ ಹರಿಬಿಡುತ್ತಾರೆ ಎಂದರೆ ಅವರ ಮಾನಸಿಕತೆ ಎಷ್ಟಿದೆ ಎಂದು ತಿಳಿದುಬರುತ್ತದೆ. ಇದು ಒಂದು ಮನೆಯ ಸಮಸ್ಯೆಯಲ್ಲ. ಈ ಸಮಸ್ಯೆ ಇಡೀ ಹಿಂದೂ ಸಮಾಜದ ಸಮಸ್ಯೆ ಆಗಿದೆ. ಸುಮಾರು 30 ಹಿಂದೂ ಕಾರ್ಯಕರ್ತರನ್ನು ಸಮಾಜ ಕಳೆದುಕೊಂಡಿದೆ. ಇವರ ಅಟ್ಟಹಾಸವನ್ನು ತಡೆಯಬೇಕಿದೆ’ ಎಂದು ಹೇಳಿದರು.

ಜನಪ್ರತಿನಿಧಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣ: ಮಾಹಿತಿ ಕೇಳಿದ ಹೈಕೋರ್ಟ್

ಬೆಂಗಳೂರು: ‘ರಾಜ್ಯದ ಜನಪ್ರತಿನಿಧಿಗಳ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದಿರುವ ಬಗ್ಗೆ ಪೂರ್ಣ ಮಾಹಿತಿ ಒದಗಿಸಿ’ ಎಂದು ರಿಜಿಸ್ಟ್ರಾರ್ ಜನರಲ್ ಅವರಿಗೆ ಹೈಕೋರ್ಟ್ ಸೂಚಿಸಿದೆ.

ಈ ಕುರಿತ ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ವಿಚಾರಣೆ ನಡೆಸಿ, ‘ಈಗ ಒದಗಿಸಲಾಗಿರುವ ಮಾಹಿತಿಯಲ್ಲಿ ಸಂಪೂರ್ಣ ವಿವರಗಳಿಲ್ಲ. ಆದ್ದರಿಂದ ಪೂರ್ಣ ಮಾಹಿತಿ ನೀಡಿ’ ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ರಷ್ಯಾ-ಉಕ್ರೇನ್ ಸಮರಾಂಗಣ

ಪ್ರಜಾವಾಣಿ





ಉಕ್ರೇನ್‌ನ ಕೀವ್ ನಗರದಲ್ಲಿ ಶನಿವಾರ ರಷ್ಯಾ ಪಡೆಗಳ ದಾಳಿಗೆ ಬಲಿಯಾದ ಸಹೋದ್ಯೋಗಿಯ ಶವದ ಬಳಿ ಅರೆವೈದ್ಯಕೀಯ ಸಿಬ್ಬಂದಿಯೊಬ್ಬರು ದುಃಖಿಸಿದರು – ಎಪಿ/ಪಿಟಿಐ ಚಿತ್ರ (ಎಡಚಿತ್ರ) ಉಕ್ರೇನ್ ತೊರೆಯುತ್ತಿರುವ ನಿರಾಶ್ರಿತರು ಶನಿವಾರ ಕೀವ್ ನಗರದ ರೈಲು ನಿಲ್ದಾಣದಲ್ಲಿ ಸ್ಥಳಾಂತರಿಸಲು ಬಂದಿದ್ದ ರೈಲನ್ನು ನೂಕುನುಗ್ಗಲಿನಲ್ಲಿ ಹತ್ತಿದರು – ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆಗಳು

- ಉಕ್ರೇನ್ ವಾಯು ಪ್ರದೇಶವನ್ನು 'ನೋ ಫ್ಲೈ ಜೋನ್' ಎಂದು ಘೋಷಿಸುವ ಯಾವುದೇ ರಾಷ್ಟ್ರದ ಜತೆಗೂ ಶಸ್ತ್ರಾಸ್ತ್ರ ಸಂಘರ್ಷ. ಇದರಿಂದ ಸಂಭವಿಸುವ ಭಾರಿ ದುರಂತದ ಪರಿಣಾಮ ಯುರೋಪ್ ಅಷ್ಟೇ ಅಲ್ಲ, ಇಡೀ ವಿಶ್ವಕ್ಕೆ ಆಗಲಿದೆ– ರಷ್ಯಾ ಅಧ್ಯಕ್ಷ ಪುಟಿನ್ ಎಚ್ಚರಿಕೆ
- ರಷ್ಯಾದ ಭೀಕರ ದಾಳಿಯು ಉಕ್ರೇನ್‌ಗಷ್ಟೆ ಸೀಮಿತವಾಗಿಲ್ಲ. ಯುರೋಪಿನ ಭದ್ರತೆ ಮತ್ತು ಜಾಗತಿಕ ಶಾಂತಿ ಮೇಲಿನ ದಾಳಿಯೂ ಆಗಿದೆ– ಅಮೆರಿಕ ಅಧ್ಯಕ್ಷ ಜೋ ಬೈಡನ್ ಕಿಡಿ
- ಉಕ್ರೇನ್‌ನಲ್ಲಿ ಯುದ್ಧ ಶೀಘ್ರ ಕೊನೆಯಾಗದು. ಯುದ್ಧ ಕೊನೆಗಾಣಿಸುವವರೆಗೂ ಅಮೆರಿಕ ಮತ್ತು ಯುರೋಪ್ ಮಿತ್ರ ರಾಷ್ಟ್ರಗಳು ರಷ್ಯಾದ ಮೇಲೆ ತೀವ್ರ ಒತ್ತಡ ಹೇರಬೇಕು– ಅಮೆರಿಕದ ಕಾರ್ಯದರ್ಶಿ ಆಂಟೊನಿ ಬ್ಲಿಂಕೆನ್
- ಹಾರ್ಕಿವ್ ಮತ್ತು ಸುಮಿಯಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಮತ್ತು ಇತರ ವಿದೇಶಿಗರ ಸ್ಥಳಾಂತರಕ್ಕೆ ಕ್ರಾಸಿಂಗ್ ಪಾಯಿಂಟ್‌ಗಳಲ್ಲಿ ರಷ್ಯಾದ ಬಸ್‌ಗಳು ಸನ್ನದ್ಧ– ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ರಷ್ಯಾ ಮಾಹಿತಿ
- ರಷ್ಯಾದ ಪ್ರಮುಖ ವಿಮಾನಯಾನ ಸಂಸ್ಥೆ ಏರೋಫ್ಲಾಟ್, ಬೆಲರೂಸ್ ಹೊರತುಪಡಿಸಿ ಎಲ್ಲ ಅಂತರರಾಷ್ಟ್ರೀಯ ವಿಮಾನಯಾನಗಳ (ಸರಕು ಸಾಗಣೆ ಮತ್ತು ಪ್ರಯಾಣಿಕ) ಸಂಚಾರವನ್ನು ಇದೇ 8ರಿಂದ ಸ್ಥಗಿತಗೊಳಿಸುವುದಾಗಿ ಘೋಷಿಸಿದೆ
- ಉಕ್ರೇನ್‌ನ ಮೈಕೋಲೈವ್ ಬಂದರಿನಲ್ಲಿ ವ್ಯಾಪಾರಿ ಹಡಗಿನಲ್ಲಿ ಸಿಲುಕಿರುವ 21 ಭಾರತೀಯ ನಾವಿಕರು ಸುರಕ್ಷಿತ– ಹಡಗು ನಿರ್ವಹಣೆ ಸಂಸ್ಥೆಯ ಸಿಇಒ ಸಂಜಯ್ ಪ್ರಶಾರ್ ಹೇಳಿಕೆ
- ಉಕ್ರೇನ್‌ನಲ್ಲಿ ರಷ್ಯಾ ಆಕ್ರಮಣದಿಂದ ಈವರೆಗೆ 351 ನಾಗರಿಕರ ಸಾವು. 707 ನಾಗರಿಕರಿಗೆ ಗಾಯ– ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ
- ರಷ್ಯಾ ದಿನಕ್ಕೆ ಎರಡು ಡಜನ್‌ನಂತೆ 500 ವಿವಿಧ ಕ್ಷಿಪಣಿಗಳನ್ನು ಉಕ್ರೇನ್ ಮೇಲೆ ಉಡಾಯಿಸಿದೆ– ಪೆಂಟಗನ್ ಅಧಿಕಾರಿಗಳ ಮಾಹಿತಿ ಆಧರಿಸಿ 'ದಿ ಕೀವ್ ಇಂಡಿಪೆಂಡೆಂಟ್' ವರದಿ
- ನಾಲ್ಕು ಬ್ಯಾಂಕುಗಳ ವಹಿವಾಟು ನಿರ್ಬಂಧ ಸೇರಿ ಎಲೆಕ್ಟ್ರಾನಿಕ್ಸ್ ವಸ್ತುಗಳು, ಕಂಪ್ಯೂಟರ್‌ಗಳು, ಮಿಲಿಟರಿ ಉಪಕರಣಗಳನ್ನು ರಷ್ಯಾಕ್ಕೆ ರಫ್ತು ಮಾಡದಿರಲು ಸಿಂಗಪುರ ನಿರ್ಧಾರ
- ರಷ್ಯಾದ ಸಿರಿವಂತರ ಒಡೆತನದ ಸುಮಾರು 140 ದಶಲಕ್ಷ ಯೂರೋ ಮೌಲ್ಯದ ಐಶಾರಾಮಿ ವಿಲ್ಲಾ ಮತ್ತು ವಿಹಾರ ನೌಕೆಗಳನ್ನು ಮುಟ್ಟುಗೋಲು ಹಾಕಿಕೊಂಡ ಇಟಲಿ ಪೊಲೀಸರು
- ತನ್ನ ದೇಶದ ನಾಗರಿಕರಿಗೆ ತಕ್ಷಣವೇ ರಷ್ಯಾ ತೊರೆಯಲು ಬ್ರಿಟನ್ ಸೂಚನೆ

ಭಾನುವಾರ ಬರುವವರ ಸಂಖ್ಯೆ 200ಕ್ಕೂ ಹೆಚ್ಚು • ತಾಯ್ನಾಡಿಗೆ ಮರಳಿದ ನವೀನ್ ಒಡನಾಡಿಗಳು

ಉಕ್ರೇನ್: 372 ವಿದ್ಯಾರ್ಥಿಗಳು ವಾಪಸ್

• ಸಿದ್ದಯ್ಯ ಹಿರೇಮಠ

ನವದೆಹಲಿ: ಯುದ್ಧಪೀಡಿತ ಉಕ್ರೇನ್‌ನ ವಿವಿಧ ಭಾಗಗಳಲ್ಲಿ ಸಿಲುಕಿದ್ದ ಕರ್ನಾಟಕದ ಒಟ್ಟು 372 ವಿದ್ಯಾರ್ಥಿಗಳು ಶನಿವಾರ ಸಂಜೆಯವರೆಗೆ ತಾಯ್ನಾಡಿಗೆ ವಾಪಸಾಗಿದ್ದಾರೆ.

ರಾಜಧಾನಿ ಕೀವ್, ಹಾರ್ಕಿವ್, ಒಡೆಶಾ, ವಿನಿಟ್ಸಿಯಾ, ಇವಾನೊಫ್ರಾಂಕ್ವಿಸ್ಕ್, ಚೆರ್ನಿವ್ಸಿ, ಟರ್ನೋಪಿಲ್ ಮತ್ತಿತರ ನಗರಗಳಲ್ಲಿ ವೈದ್ಯಕೀಯ ಪದವಿಯ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ರೊಮೇನಿಯಾ, ಪೋಲೆಂಡ್, ಹಂಗೆರಿ ಗಡಿ ತಲುಪಿ, ಅಲ್ಲಿಂದ ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಿದ್ದ ವಿಮಾನದ ಮೂಲಕ ನವದೆಹಲಿ ಹಾಗೂ ಮುಂಬೈ ಮಾರ್ಗವಾಗಿ ರಾಜ್ಯದ ತಮ್ಮ ಊರುಗಳಿಗೆ ಮರಳಿದ್ದಾರೆ.

ಈ ಪೈಕಿ ನವದೆಹಲಿಗೆ 343 ಹಾಗೂ ಮುಂಬೈಗೆ 29 ವಿದ್ಯಾರ್ಥಿಗಳು ಬಂದಿದ್ದರು. ಅವರೆಲ್ಲರೂ ರಾಜ್ಯಕ್ಕೆ ತಲುಪಲು ರಾಜ್ಯ ಸರ್ಕಾರ ವಿಮಾನ ಪ್ರಯಾಣದ ವ್ಯವಸ್ಥೆ ಕಲ್ಪಿಸಿದೆ.

ರಾಜಧಾನಿ ಕೀವ್ ಮತ್ತು ಹಾರ್ಕಿವ್ ನಗರಗಳಲ್ಲಿ ಸಿಲುಕಿಕೊಂಡಿದ್ದ ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಶನಿವಾರ ಪೋಲೆಂಡ್ ಮತ್ತು ರೊಮೇನಿಯಾ ಗಡಿ ತಲುಪಿದ್ದಾರೆ. ಆ ಪೈಕಿ ಕರ್ನಾಟಕದ 200ಕ್ಕೂ ಅಧಿಕ ವಿದ್ಯಾರ್ಥಿಗಳಿದ್ದಾರೆ. ಅವರೆಲ್ಲ



ಉಕ್ರೇನ್‌ನ ಹಾರ್ಕಿವ್ ನಗರದಿಂದ ಶನಿವಾರ ನವದೆಹಲಿಗೆ ಬಂದಿಳಿದ ಕರ್ನಾಟಕದ ವಿದ್ಯಾರ್ಥಿನಿಯರಾದ ರುಬಿನಾ, ಹೀನಾ, ಭೂಮಿಕಾ ಹಾಗೂ ಅಕ್ಷಿತಾ

ಅಲ್ಲಿಂದ ಸಂಜೆ ಹೊರಡಲಿದ್ದು, ಭಾನುವಾರ ಬೆಳಗಿನ ಜಾವ ಹಾಗೂ ಮಧ್ಯಾಹ್ನ ನವದೆಹಲಿ ಮತ್ತು ಮುಂಬೈ ತಲುಪಲಿದ್ದಾರೆ ಎಂದು ದೆಹಲಿ ಕರ್ನಾಟಕ ಭವನದ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕೀವ್ ಮತ್ತು ಹಾರ್ಕಿವ್ ನಗರದಿಂದ ಹೊರಟಿದ್ದ ಒಟ್ಟು 75 ವಿದ್ಯಾರ್ಥಿಗಳು ಶನಿವಾರ ಮಧ್ಯಾಹ್ನದವರೆಗೆ ನವದೆಹಲಿ ತಲುಪಿದ್ದು, ಅವರ ಪೈಕಿ ಕೆಲವರನ್ನು ಈಗಾಗಲೇ ಬೆಂಗಳೂರಿಗೆ ಕಳುಹಿಸಿಕೊಡಲಾಗಿದೆ. ಇವರಲ್ಲಿ ಕೆಲವರು ಭಾನುವಾರ ಬೆಳಿಗ್ಗೆ 6 ಗಂಟೆಗೆ ವಿಮಾನದ ಮೂಲಕ ತೆರಳಲಿದ್ದಾರೆ ಎಂದು ಅವರು ಹೇಳಿದರು.

ನವೀನ್ ಸಹಾಯ ಮರೆಯಲಾರೆವು: ಉಕ್ರೇನ್ ಹಾರ್ಕಿವ್ ನಗರದಲ್ಲಿ ರಷ್ಯಾ ಪಡೆಗಳ ಶೆಲ್ ದಾಳಿಗೆ ಸಿಲುಕಿ ಕಳೆದ ಮಂಗಳವಾರ ಮೃತಪಟ್ಟಿರುವ ಹಾವೇರಿ ಜಿಲ್ಲೆಯ ಚಳಗೇರಿ ಗ್ರಾಮದ ಯುವಕ ನವೀನ್ ಗ್ಯಾನಗೌಡರ್ ಅವರ ಒಡನಾಡಿಗಳು ಶನಿವಾರ ತಾಯ್ನಾಡಿಗೆ ಸುರಕ್ಷಿತವಾಗಿ ವಾಪಸಾದರು.

'ವೈದ್ಯಕೀಯ ಪದವಿಯ 4ನೇ ವರ್ಷದ ವಿದ್ಯಾರ್ಥಿಯಾಗಿದ್ದ ನವೀನ್ ಸ್ನೇಹಜೀವಿಯಾಗಿದ್ದ. ಕಿರಿಯ ಸ್ನೇಹಿತರಿಗೆ ಸಾಕಷ್ಟು ನೆರವು ನೀಡುತ್ತಿದ್ದ. ಓದಿನಿಂದ ಹಿಡಿದು ಪ್ರತಿಯೊಂದು ವಿಷಯದಲ್ಲೂ ನವೀನ್ ಮಾಡುತ್ತಿದ್ದ ಸಹಾಯವನ್ನು ಮರೆಯಲಾರೆವು' ಎಂದು ಬೆಂಗಳೂರಿನ ಭೂಮಿಕಾ, ಕೊಡಗಿನ ಅಕ್ಷಿತಾ, ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿಯ ರುಬಿನಾ ಹಾಗೂ ಮಂಗಳೂರಿನ ಹೀನಾ ಸ್ಮರಿಸಿದರು.

'ಅವರ ಪಾರ್ಥಿವ ಶರೀರವನ್ನು ನಮ್ಮ ಕಾಲೇಜಿನ ಶವಾಗಾರದಲ್ಲಿ ಸುರಕ್ಷಿತವಾಗಿ ಇರಿಸಲಾಗಿದೆ ಎಂಬ ಮಾಹಿತಿ ದೊರೆತಿದೆ. ಆದಷ್ಟು ಬೇಗ ಸ್ವದೇಶಕ್ಕೆ ತರಲು ಉಭಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು' ಎಂದು ಅವರು ಕೋರಿದರು.

ನೆರವಿಗೆ ಬಂದ ಅಧಿಕಾರಿಗಳು: 'ಯುದ್ಧ ನಡೆಯುತ್ತಿದ್ದ ಜಾಗಕ್ಕೆ ಬಂದು ನಮ್ಮನ್ನು ಸುರಕ್ಷಿತವಾಗಿ ಕರೆತರುವುದು ರಾಯಭಾರಿ ಕಚೇರಿ ಸಿಬ್ಬಂದಿಗೆ ಖಂಡಿತ ಅಸಾಧ್ಯ. ಪೋಲೆಂಡ್ ಗಡಿ ತಲುಪಿದ ನಂತರ ಭಾರತೀಯ ಅಧಿಕಾರಿಗಳು ನಮಗೆ ಸಾಕಷ್ಟು ನೆರವಾದರು' ಎಂದು ರುಬಿನಾ ಹೇಳಿದರು.

'ಅನೇಕ ದೇಶಗಳ ರಾಯಭಾರಿ ಕಚೇರಿಗಳು ಯುದ್ಧಕ್ಕೆ ಅನೇಕ ದಿನ ಮೊದಲೇ ಬಾಗಿಲು ಮುಚ್ಚಿದ್ದರೂ ಭಾರತೀಯ ರಾಯಭಾರಿ ಕಚೇರಿಯ ಅಧಿಕಾರಿಗಳು ನಂತರವೇ ಅಲ್ಲಿಂದ ಮರಳಿದ್ದಾರೆ. ಬೇಗನೇ ಸ್ವದೇಶಕ್ಕೆ ತೆರಳುವಂತೆ ಸಾಕಷ್ಟು ಬಾರಿ ವಿದ್ಯಾರ್ಥಿಗಳಿಗೆ ಸೂಚಿಸಲಾಗಿತ್ತು. ಆದರೆ, ಯುದ್ಧ ನಡೆಯುವ ಸಾಧ್ಯತೆ ಇಲ್ಲ ಎಂದುಕೊಂಡು ಹಾಗೂ ನಮ್ಮ ಕಾಲೇಜು ಆಡಳಿತ ಮಂಡಳಿಯವರು ಹಾಜರಾತಿ ನೀಡುವುದಿಲ್ಲ ಎಂಬ ಕಾರಣದಿಂದ ನಾವು ಅಲ್ಲೇ ಇದ್ದೆವು. ಬೇಗ ವಾಪಸಾಗಿದ್ದರೆ ಪ್ರಯಾಸಪಡುವ ಅಗತ್ಯವಿರಲಿಲ್ಲ' ಎಂದು ಅವರು ತಿಳಿಸಿದರು.

ಮುದ್ದಿನ ಬೆಕ್ಕನ್ನು ತಂದ ಮಂಗಳೂರು ಯುವತಿ

ನವದೆಹಲಿ: ಉಕ್ರೇನ್‌ನ ಕೀವ್‌ನಿಂದ ಶನಿವಾರ ನವದೆಹಲಿಗೆ ವಾಪಸಾಗಿರುವ ವೈದ್ಯಕೀಯ ಪದವಿಯ 4ನೇ ವರ್ಷದ ವಿದ್ಯಾರ್ಥಿನಿ, ಮಂಗಳೂರಿನ ಲಕ್ಷಿತಾ ತನ್ನ ನೆಚ್ಚಿನ ಬೆಕ್ಕನ್ನು ಜತೆಗೆ ತಂದಿದ್ದಾರೆ.

'ರಷ್ಯಾ ಪಡೆಗಳ ನಿರಂತರ ದಾಳಿಯಿಂದಾಗಿ ಕೀವ್‌ನಲ್ಲಿ ತೀವ್ರ ಆತಂಕದ ಸ್ಥಿತಿ ಇತ್ತು. ಅಲ್ಲಿಂದ ಹೊರಡಬೇಕು ಎಂದು ನಿರ್ಧರಿಸಿದಾಗ, ನನ್ನ ಪ್ರೀತಿಯ ಬೆಕ್ಕು ಲೀಸಾ ಸ್ಥಿತಿ ಏನು ಎಂಬ ಪ್ರಶ್ನೆ ಕಾಡಿತು. ಸಾಕು ಪ್ರಾಣಿಗಳನ್ನು ಕರೆದೊಯ್ಯಲು ಅನುಮತಿ ಇದೆ ಎಂಬ ಮಾಹಿತಿ ಲಭಿಸಿದ್ದರಿಂದ ಲೀಸಾಳನ್ನೂ ಕರೆತಂದೆ' ಎಂದು ಲಕ್ಷಿತಾ ವಿವರಿಸಿದರು.

'ಯೂರೋಪಿಯನ್ ಶಾರ್ಟ್ ಹೇರ್ ತಳಿಯ ಹೆಣ್ಣು ಬೆಕ್ಕು ಲೀಸಾಳನ್ನು ಒಂದು ವರ್ಷದ ಹಿಂದೆ ದತ್ತು ಪಡೆದಿದ್ದೇನೆ. ಅದರೊಂದಿಗೆ ನನ್ನ ಒಡನಾಟ ಇದೆ. ಯುದ್ಧ ನಡೆಯುತ್ತಿರುವ ದೇಶದಲ್ಲಿ ಅವಳನ್ನು ಬಿಟ್ಟು ಬರಲು ಮನಸ್ಸು ಒಪ್ಪಲಿಲ್ಲ. ಉಕ್ರೇನ್ ಸ್ನೇಹಿತರ ಸುಪರ್ದಿಗೆ ಕೊಡೋಣವೆಂದರೂ ಅವರ ಬದುಕೇ ನಿಶ್ಚಿತವಿಲ್ಲ. ಹಾಗಾಗಿ ನನಗೆ ಎಷ್ಟೇ ಸಮಸ್ಯೆ ಆದರೂ ಪರವಾಗಿಲ್ಲ, ಜೊತೆಗೆ ಕರೆದೊಯ್ಯಬೇಕು ಎಂದು ನಿರ್ಧರಿಸಿ ಕರೆತಂದೆ. ನನ್ನೊಂದಿಗೆ ಅದನ್ನೂ ಕರೆತಂದಿದ್ದಕ್ಕೆ ಹೆಮ್ಮೆ ಇದೆ' ಎಂದು ಅವರು ಹೇಳಿದರು.



ಬೆಕ್ಕಿನೊಂದಿಗೆ ಲಕ್ಷಿತಾ

ಫೇಸ್‌ಬುಕ್, ಟ್ವಿಟರ್‌ಗೆ ರಷ್ಯಾ ನಿಷೇಧ

ಮಾಸ್ಕೊ/ಡಸೆಲ್ಡಾರ್ಫ್ (ರಾಯಿಟರ್ಸ್/ಎಪಿ): ಉಕ್ರೇನ್ ಸಂಘರ್ಷಕ್ಕೆ ಸಂಬಂಧಿಸಿದಂತೆ ತನ್ನ ವಿರುದ್ಧ ಸುಳ್ಳು ಸುದ್ದಿಗಳನ್ನು ಬಿತ್ತರಿಸಲಾಗುತ್ತಿದೆ ಎಂದು ಆರೋಪಿಸಿರುವ ರಷ್ಯಾ, ಫೇಸ್‌ಬುಕ್, ಟ್ವಿಟರ್ ಅನ್ನು ನಿಷೇಧಿಸಿದೆ.

ಸಾಮಾಜಿಕ ಮಾಧ್ಯಮ ದೈತ್ಯ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಂಡಿರುವುದರ ಜತೆಗೆ ರಷ್ಯಾ ಸರ್ಕಾರ, ಬಿಬಿಸಿ, ಅಮೆರಿಕ ಸರ್ಕಾರದ 'ವಾಯ್ಸ್ ಆಫ್ ಅಮೆರಿಕ', ರೇಡಿಯೋ ಫ್ರೀ ಯುರೋಪ್/ ರೇಡಿಯೊ ಲಿಬರ್ಟಿ, ಜರ್ಮನ್ ಬ್ರಾಡ್‌ಕಾಸ್ಟರ್ 'ಡಚ್ ವೆಲ್ಲೆ' ಮತ್ತು ಲಾಟ್ವಿಯಾ ಮೂಲದ ವೆಬ್‌ಸೈಟ್ 'ಮೆಡುಜಾ' ಮೇಲೆಯೂ ನಿರ್ಬಂಧಗಳನ್ನು ವಿಧಿಸಿದೆ. ಜತೆಗೆ ಆ್ಯಪಲ್ ಹಾಗೂ ಗೂಗಲ್ ಆ್ಯಪ್ ಸ್ಟೋರ್‌ಗಳ ಮೇಲೂ ನಿರ್ಬಂಧ ಹೇರಿದೆ.

ಸಿಎನ್‌ಎನ್ ರಷ್ಯಾದಲ್ಲಿ ತನ್ನ ಪ್ರಸಾರವನ್ನು ಸ್ಥಗಿತಗೊಳಿಸಿದೆ.

2 ಸಾವಿರಕ್ಕೂ ಅಧಿಕ ಮಂದಿ ಇಂದು ತವರಿಗೆ

ನವದೆಹಲಿ (ಪಿಟಿಐ): 'ಉಕ್ರೇನ್‌ನಲ್ಲಿ ಸಿಲುಕಿರುವವರ ಪೈಕಿ 2,200ಕ್ಕೂ ಅಧಿಕ ಭಾರತೀಯರನ್ನು 11 ವಿಮಾನಗಳ ಮೂಲಕ ಭಾನುವಾರ ಕರೆತರಲಾಗುತ್ತದೆ' ಎಂದು ನಾಗರಿಕ ವಿಮಾನಯಾನ ಸಚಿವಾಲಯ ಶನಿವಾರ ತಿಳಿಸಿದೆ.

'3,000 ಭಾರತೀಯರನ್ನು 15 ವಿಮಾನಗಳ ಮೂಲಕ ಶನಿವಾರ ಕರೆತರಲಾಗಿದೆ. ಈ ಕಾರ್ಯಾಚರಣೆಗೆ 12 ವಿಶೇಷ ನಾಗರಿಕ ವಿಮಾನಗಳು ಹಾಗೂ ಮೂರು ವಾಯುಪಡೆ ವಿಮಾನಗಳನ್ನು ನಿಯೋಜಿಸಲಾಗಿತ್ತು' ಎಂದೂ ತಿಳಿಸಿದೆ.

ರಷ್ಯಾ ದಾಳಿ ಮಾಡಿದ ಬೆನ್ನಲ್ಲೇ, ಉಕ್ರೇನ್ ಫೆ.24ರಿಂದ ತನ್ನ ವಾಯು ಪ್ರದೇಶ ಬಳಕೆಯನ್ನು ನಿರ್ಬಂಧಿಸಿದೆ. ಹೀಗಾಗಿ, ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ನೆರೆಯ ರಾಷ್ಟ್ರಗಳಾದ ರೊಮೇನಿಯಾ, ಹಂಗೆರಿ ಹಾಗೂ ಸ್ಲೋವೇಕಿಯಾದ ಮಾರ್ಗವಾಗಿ ಕರೆತರಲಾಗುತ್ತಿದೆ.

ಉಕ್ರೇನ್ ತೊರೆಯಲು ಅನುವು ಮಾಡಿಕೊಟ್ಟ ರಷ್ಯಾ ಪಡೆಗಳು

ಮರಿಯುಪೋಲ್, ವೊಲ್ನೋವಾಖಾ: ತಾತ್ಕಾಲಿಕ ಕದನ ವಿರಾಮ

ಕೀವ್, ಮಾಸ್ಕೊ (ಎಪಿ, ಎಎಫ್‌ಪಿ, ಪಿಟಿಐ, ರಾಯಿಟರ್ಸ್): ಉಕ್ರೇನ್ ಮೇಲೆ ನಡೆಯುತ್ತಿರುವ ರಷ್ಯಾದ ಆಕ್ರಮಣ ಹತ್ತನೇ ದಿನಕ್ಕೆ ಕಾಲಿಟ್ಟಿದೆ. ಭಾರತೀಯ ವಿದ್ಯಾರ್ಥಿಗಳು ಸೇರಿ ವಿದೇಶಿ ಪ್ರಜೆಗಳ ಸುರಕ್ಷಿತ ಸ್ಥಳಾಂತರಕ್ಕೆ ದಾರಿ ಮಾಡಿಕೊಡಬೇಕೆಂದು ಜಾಗತಿಕ ಮಟ್ಟದಲ್ಲಿ ಒತ್ತಡ ಹೆಚ್ಚಿದ ಪರಿಣಾಮ ಶನಿವಾರ ಮರಿಯುಪೋಲ್ ಮತ್ತು ವೊಲ್ನೋವಾಖಾ ನಗರಗಳಲ್ಲಿ ಮಾತ್ರ ರಷ್ಯಾ ಮತ್ತು ಉಕ್ರೇನ್ ಪಡೆಗಳ ನಡುವೆ 'ತಾತ್ಕಾಲಿಕ ಕದನ ವಿರಾಮ' ಇತ್ತು.

ಆದರೆ, 4.50 ಲಕ್ಷ ಜನಸಂಖ್ಯೆಯ ನಗರವನ್ನು ಸುತ್ತುವರಿದಿರುವ ರಷ್ಯಾ ಪಡೆಗಳು ಕದನ ವಿರಾಮ ಉಲ್ಲಂಘಿಸಿ ಶೆಲ್ ಮತ್ತು ಗುಂಡಿನ ದಾಳಿ ಮುಂದುವರಿಸಿವೆ ಎಂದು ಆರೋಪಿಸಿರುವ ಮರಿಯುಪೋಲ್‌ನ ಅಧಿಕಾರಿಗಳು, ನಾಗರಿಕರ ಸ್ಥಳಾಂತರ ಪ್ರಕ್ರಿಯೆಯನ್ನು ಮುಂದೂಡಿದ್ದಾರೆ.

'ನಾಗರಿಕರನ್ನು ಸಂಪೂರ್ಣ ಸ್ಥಳಾಂತರಿಸುವ ಮಾರ್ಗದಲ್ಲಿ ಕದನ ವಿರಾಮ ಖಾತ್ರಿಪಡಿಸಲು ರಷ್ಯಾದ ಜತೆಗೆ ಮಾತುಕತೆ ನಡೆಯುತ್ತಿದೆ' ಎಂದು ಮರಿಯುಪೋಲ್ ಸಿಟಿ ಕೌನ್ಸಿಲ್ ತಿಳಿಸಿದೆ.

'ತೀವ್ರ ಚಳಿ ಇರುವಾಗಲೇ ನಗರಕ್ಕೆ ನೀರು, ವಿದ್ಯುತ್ ಸರಬರಾಜು ಕಡಿತಗೊಂಡಿದೆ. ರಷ್ಯಾ ಪಡೆಗಳು ಮಾನವೀಯ ಪರಿಹಾರ ಕಾರ್ಯ ಕೈಗೊಳ್ಳಲು ಅವಕಾಶ ನೀಡಬೇಕು' ಎಂದು ಮರಿಯುಪೋಲ್ ಮೇಯರ್ ವಾಡಿಮ್ ಬಾಯ್ಚೆಂಕೊ ಆಗ್ರಹಿಸಿದ್ದಾರೆ.

'ಕದನ ನಿಲ್ಲಿಸುವುದು ನಮ್ಮ ಆದ್ಯತೆ. ಹೀಗಾದರಷ್ಟೇ, ಮೂಲಸೌಕರ್ಯ ಕಲ್ಪಿಸಬಹುದು. ನಗರಕ್ಕೆ ಆಹಾರ ಮತ್ತು ಔಷಧವನ್ನು ತರಲು ಮಾನವೀಯ ಕಾರಿಡಾರ್ ಸ್ಥಾಪಿಸಬಹುದು' ಎಂದು ಅವರು ಹೇಳಿದರು.

'ಶನಿವಾರ ಬೆಳಿಗ್ಗೆ ಮರಿಯುಪೋಲ್ ಮತ್ತು ವೊಲ್ನೋವಾಖಾ ಪ್ರದೇಶದಲ್ಲಿ ಕದನ ವಿರಾಮ ಘೋಷಣೆ ಮಾಡಲಾಯಿತು. ಪರಿಹಾರ ಕಾರ್ಯ ಕೈಗೊಳ್ಳಲು 'ಮಾನವೀಯ ಕಾರಿಡಾರ್' ತೆರೆಯಲಾಗಿದೆ. ನಾಗರಿಕರು ಈ ನಗರಗಳನ್ನು ತೊರೆಯಲು ಅವಕಾಶ ನೀಡಲಾಗಿದೆ' ಎಂದು ರಷ್ಯಾ ಸೇನೆ ತಿಳಿಸಿದೆ.

ಆದರೆ, ಉಕ್ರೇನ್‌ನಾದ್ಯಂತ ಪೂರ್ಣ ಪ್ರಮಾಣದ ವಿಶೇಷ ಮಿಲಿಟರಿ ಕಾರ್ಯಾಚರಣೆ ಮುಂದುವರಿಯಲಿದೆ ಎಂದೂ ರಷ್ಯಾದ ರಕ್ಷಣಾ ಇಲಾಖೆ ಸ್ಪಷ್ಟಪಡಿಸಿದೆ. ಕೀವ್ ಹೊರವಲಯದ ಇರ್ಪಿನ್ ನಗರದ ಮೇಲೆ ರಷ್ಯಾ ವಾಯುಪಡೆ ಶನಿವಾರ ಬಾಂಬ್ ದಾಳಿ ನಡೆಸಿದೆ.

ವ್ಯೂಹಾತ್ಮಕವಾಗಿ ಪ್ರಾಮುಖ್ಯತೆ ಪಡೆದಿರುವ ಮರಿಯುಪೋಲ್ ಮೇಲೆ ರಷ್ಯಾ ಕೆಲವು ದಿನಗಳಿಂದ ನಿರಂತರ ದಾಳಿ ನಡೆಸುತ್ತಿದೆ. ಮರಿಯುಪೋಲ್ ವಶಪಡಿಸಿಕೊಂಡರೆ ಕ್ರಿಮಿಯಾ ಕಡೆಯಿಂದ ಸೇನಾ ಪಡೆಗಳು ಉಕ್ರೇನ್‌ಗೆ ಸುಲಭವಾಗಿ ತಲುಪಬಹುದು. ಡಾನ್‌ಬಾಸ್ ಪ್ರದೇಶದಲ್ಲಿರುವ ಪ್ರತ್ಯೇಕವಾದಿಗಳಿಗೂ ಅನುಕೂಲವಾಗಲಿದೆ ಎನ್ನುವ ಲೆಕ್ಕಾಚಾರದಲ್ಲಿ ರಷ್ಯಾ ಇದೆ.

ರಷ್ಯಾ– ಬೆಲರೂಸ್ ಸಮ್ಮತಿ: ಉಕ್ರೇನ್ ತೊರೆಯುವ ನಾಗರಿಕರಿಗೆ 'ಮಾನವೀಯ ಕಾರಿಡಾರ್' ತೆರೆಯಲು ರಷ್ಯಾ ಮತ್ತು ಬೆಲರೂಸ್ ಶನಿವಾರ ಸಮ್ಮತಿಸಿವೆ.

ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಅವರು ಬೆಲರೂಸ್ ವಿದೇಶಾಂಗ ಸಚಿವ ವ್ಲಾಡಿಮಿರ್ ಮೇಕಿ ಈ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಬೆಲರೂಸ್ ವಿದೇಶಾಂಗ ಸಚಿವಾಲಯದ ಮಾಹಿತಿ ಉಲ್ಲೇಖಿಸಿ 'ರಿಯಾ' ಸುದ್ದಿಸಂಸ್ಥೆ ವರದಿ ಮಾಡಿದೆ.

ಮಾನವೀಯ ಕಾರಿಡಾರ್‌ಗಳನ್ನು ತೆರೆಯುವ ಬಗ್ಗೆ ರಷ್ಯಾದೊಂದಿಗೆ ಇನ್ನಷ್ಟು ಒಪ್ಪಂದಗಳನ್ನು ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ಉಕ್ರೇನ್ ಗೃಹ ಸಚಿವಾಲಯದ ಸಲಹೆಗಾರ ಆಂಟನ್ ಹೆರಾಶ್ಚೆಂಕೊ ಶನಿವಾರ ಹೇಳಿದ್ದಾರೆ.

ಭಾರತದಲ್ಲೇ ಇಂಟರ್ನ್‌ಷಿಪ್: ವೈದ್ಯ ವಿದ್ಯಾರ್ಥಿಗಳಿಗೆ ಅವಕಾಶ

ನವದೆಹಲಿ (ಪಿಟಿಐ): ವಿದೇಶಗಳಲ್ಲಿ ವೈದ್ಯಕೀಯ ಪದವಿ ಪಡೆದಿರುವ ಕೆಲ ವಿದ್ಯಾರ್ಥಿಗಳಿಗೆ ಯುದ್ಧ ಹಾಗೂ ಕೋವಿಡ್–19 ಪಿಡುಗಿನಂತಹ ಪರಿಸ್ಥಿತಿಯಿಂದಾಗಿ ಇಂಟರ್ನ್‌ಶಿಪ್ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಈ ವಿದ್ಯಾರ್ಥಿಗಳಿಗೆ ಭಾರತದಲ್ಲಿ ಇಂಟರ್ನ್‌ಶಿಪ್ ಪೂರ್ಣಗೊಳಿಸಲು ಅವಕಾಶ ನೀಡುವುದಾಗಿ ರಾಷ್ಟ್ರೀಯ ವೈದ್ಯಕೀಯ ಆಯೋಗ ತಿಳಿಸಿದೆ.

ಉಕ್ರೇನ್‌ನಲ್ಲಿನ ಯುದ್ಧ ಪರಿಸ್ಥಿತಿಯಿಂದ ಭಾರತೀಯ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ, ಆಯೋಗವು ಈ ಅವಕಾಶ ನೀಡಿದೆ. ಇದರಿಂದ ನೂರಾರು ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಕೋರ್ಸ್‌ಅನ್ನು ಸ್ಥಳೀಯವಾಗಿ ಪೂರ್ಣಗೊಳಿಸಲು ಸಹಕಾರಿಯಾಗಲಿದೆ.

ಈ ಕುರಿತು ಆಯೋಗವು ಎಲ್ಲ ರಾಜ್ಯಗಳ ವೈದ್ಯಕೀಯ ಮಂಡಳಿಗೆ ಸುತ್ತೋಲೆ ಕಳಿಸಿದೆ. ಭಾರತದಲ್ಲಿ ಇಂಟರ್ನ್‌ಷಿಪ್‌ಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು, ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇ) ನಡೆಸುವ 'ವಿದೇಶಿ ವೈದ್ಯ ಪದವಿ ಪರೀಕ್ಷೆ'ಯಲ್ಲಿ (ಎಫ್‌ಎಂಜಿಇ) ಉತ್ತೀರ್ಣರಾಗಿರಬೇಕು ಎಂದು ಈ ಸುತ್ತೋಲೆಯಲ್ಲಿ ವಿವರಿಸಲಾಗಿದೆ.

'ನಿಗದಿಪಡಿಸಿದ ಮಾನದಂಡಗಳನ್ನು ಪೂರೈಸುವ ಅಭ್ಯರ್ಥಿಗಳಿಗೆ ಒಂದು ವರ್ಷ ಅಥವಾ ಬಾಕಿ ಇರುವ ಅವಧಿಯ ಇಂಟರ್ನ್‌ಷಿಪ್ ಪೂರ್ಣಗೊಳಿಸಲು ಅವಕಾಶ ನೀಡಲಾಗುವುದು' ಎಂದೂ ಆಯೋಗವು ತಿಳಿಸಿದೆ.

'ಇಂಟರ್ನ್‌ಷಿಪ್ ಗಾಗಿ ಅರ್ಜಿ ಸಲ್ಲಿಸುವ ವಿದೇಶಗಳಲ್ಲಿ ಪದವಿ ಪಡೆದವರಿಂದ ಯಾವುದೇ ಶುಲ್ಕವನ್ನು ಪಡೆಯುವುದಿಲ್ಲ ಎಂಬ ಬಗ್ಗೆ ರಾಜ್ಯ ವೈದ್ಯಕೀಯ ಮಂಡಳಿಗಳು ವೈದ್ಯ ಕಾಲೇಜುಗಳಿಂದ ಮುಚ್ಚಳಿಕೆ ಪಡೆದುಕೊಳ್ಳಬೇಕು. ಅವರಿಗೆ ನಿಯಮಾನುಸಾರ ಮಾಸಿಕ ಭತ್ಯೆ ಸೇರಿದಂತೆ ಇತರ ಸೌಲಭ್ಯಗಳನ್ನು ನೀಡಬೇಕು' ಎಂದೂ ಸೂಚಿಸಿದೆ.

ಮೃತ ನವೀನ ಕುಟುಂಬಸ್ಥರಿಗೆ ₹25 ಲಕ್ಷ ಚೆಕ್ ವಿತರಣೆ

ಶಿಕ್ಷಣ ವ್ಯವಸ್ಥೆ ಬಗ್ಗೆ ಮರು ಪರಿಶೀಲನೆ

ಪ್ರಜಾವಾಣಿ ವಾರ್ತೆ

ಚಳಗೇರಿ (ಹಾವೇರಿ): 'ಮೆರಿಟ್ ಇದ್ದರೂ, ವಿದ್ಯಾರ್ಥಿಗಳು ಬಯಸಿದ ವೈದ್ಯಕೀಯ ಶಿಕ್ಷಣ ಸೇರಿದಂತೆ ಇತರ ಕೋರ್ಸ್‌ಗಳಿಗೆ ಅವಕಾಶ ಸಿಗುತ್ತಿಲ್ಲ ಎಂಬುದನ್ನು ಉಕ್ರೇನ್ ಘಟನೆ ತೋರಿಸಿಕೊಟ್ಟಿದೆ. ಈಗಿರುವ ಶಿಕ್ಷಣ ವ್ಯವಸ್ಥೆಯ ಬಗ್ಗೆ ಪುನರ್ ಪರಿಶೀಲನೆ ಮಾಡುವ ಅಗತ್ಯವಿದೆ. ಈ ಬಗ್ಗೆ ಕೇಂದ್ರ ಮಟ್ಟದಲ್ಲಿ ಕೂಡ ಗಂಭೀರದ ಚರ್ಚೆ ನಡೆದಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಉಕ್ರೇನ್‌ನಲ್ಲಿ ಮೃತಪಟ್ಟ ರಾಣೆಬೆನ್ನೂರು ತಾಲ್ಲೂಕು ಚಳಗೇರಿಯ ವಿದ್ಯಾರ್ಥಿ ನವೀನ ಗ್ಯಾನಗೌಡರ ಮನೆಗೆ ಶನಿವಾರ ಭೇಟಿ ನೀಡಿ, ಮೃತ ನವೀನ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.



ನವೀನ ಗ್ಯಾನಗೌಡರ ಪೋಷಕರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ₹25 ಲಕ್ಷದ ಚೆಕ್ ವಿತರಿಸಿದರು. ಈ ವೇಳೆ ವಚನಾನಂದ ಸ್ವಾಮೀಜಿ ಇದ್ದರು.

'ಕೊನೆಯದಾಗಿ ನನ್ನ ಮಗನ ಮುಖ ನೋಡಲು ಅವಕಾಶ ಕಲ್ಪಿಸಿಕೊಡಿ' ಎಂದು ಕಣ್ಣೀರಿಡುತ್ತ ನವೀನ ಗ್ಯಾನಗೌಡರ ತಾಯಿ ವಿಜಯಲಕ್ಷ್ಮಿ ಅವರು ಸೆರಗೊಡ್ಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಬೇಡಿಕೊಂಡರು.

ತಂದೆ ಶೇಖರಪ್ಪ ಅವರಿಗೆ ರಾಜ್ಯ ಸರ್ಕಾರದ ವತಿಯಿಂದ ₹25 ಲಕ್ಷದ ಚೆಕ್ ವಿತರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಪಾರ್ಥಿವ ಶರೀರ ತರಲು ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ದೊಡ್ಡ ಮಗ ಹರ್ಷ ಅವರ ಪಿಎಚ್.ಡಿ ಮುಗಿದ ನಂತರ ಉತ್ತಮ ಉದ್ಯೋಗ ದೊರಕಿಸಿಕೊಡುತ್ತೇವೆ' ಎಂದು ಸಾಂತ್ವನದ ಮಾತುಗಳನ್ನಾಡಿದರು.

'ಒನ್ ನೇಷನ್ ಒನ್ ರಿಸರ್ವೇಶನ್' ಜಾರಿಯಾಗಲಿ

ಹಾವೇರಿ: ನಮ್ಮ ದೇಶದಲ್ಲಿ 'ಒನ್ ನೇಷನ್– ಒನ್ ರಿಸರ್ವೇಶನ್' ಹಾಗೂ 'ಒನ್ ನೇಷನ್– ಒನ್ ಲಾ' ಪದ್ಧತಿಗಳು ಜಾರಿಯಾಗಬೇಕು. ಆಗ ಪ್ರಧಾನಿ ಮೋದಿ ಅವರ ಕನಸು 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಸಾಕಾರವಾಗುತ್ತದೆ' ಎಂದು ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ರಾಣೆಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದ ಮೃತ ನವೀನ ಗ್ಯಾನಗೌಡರ ಮನೆಗೆ ಶನಿವಾರ ಭೇಟಿ ನೀಡಿ, ತಂದೆ–ತಾಯಿಗೆ ಸಾಂತ್ವನ ಹೇಳಿದ ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

'ಮೀಸಲಾತಿ ಮತ್ತು ಶಿಕ್ಷಣ ವ್ಯವಸ್ಥೆಯಿಂದ ನಮ್ಮ ಪ್ರತಿಭಾವಂತ ಮಕ್ಕಳ ಕನಸುಗಳು ಈಡೇರುತ್ತಿಲ್ಲ. ಈ ಬಗ್ಗೆ ಸರ್ಕಾರ ಚಿಂತಿಸಬೇಕು' ಎಂದರು.

ಉಳಿದ ಇಬ್ಬರ ಪತ್ತೆಗಾಗಿ ಕಾರ್ಯಾಚರಣೆ, ಜೀವಂತವಾಗಿರುವ ಸಾಧ್ಯತೆ ಕ್ಷೀಣ

ಗುಂಡ್ಲುಪೇಟೆ: ಕ್ವಾರಿಯಿಂದ ಒಬ್ಬರ ಶವ ಹೊರಕ್ಕೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಗುಂಡ್ಲುಪೇಟೆ ತಾಲ್ಲೂಕಿನ ಮಡಹಳ್ಳಿಯ ಬಿಳಿಕಲ್ಲು ಕ್ವಾರಿಯ ಗುಡ್ಡ ಕುಸಿತದಲ್ಲಿ ಮಣ್ಣು, ಬಂಡೆಗಳ ಅಡಿ ಸಿಲುಕಿರುವ ಮೂವರು ಕಾರ್ಮಿಕರ ಪೈಕಿ ಒಬ್ಬರ ಮೃತದೇಹ ಪತ್ತೆಯಾಗಿದ್ದು, ಹೊರ ತೆರೆಯಲಾಗಿದೆ.

ಇನ್ನಿಬ್ಬರ ಪತ್ತೆಗೆ ಕಾರ್ಯಾಚರಣೆ ಮುಂದುವರಿದಿದ್ದು, ಅವರು ಜೀವಂತವಾಗಿರುವ ಸಾಧ್ಯತೆ ಕ್ಷೀಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊರಕ್ಕೆ ತೆಗೆಯಲಾದ ಮೃತ ದೇಹ ಉತ್ತರಪ್ರದೇಶದ ಗೋರಖ್‌ಪುರದ ಅಜೀಂ ಉಲ್ಲಾ ಅಲಿಯಾಸ್ ಬಬ್ಲೂ (24) ಎಂದು ಗುರುತಿಸಲಾಗಿದೆ.

ಕಲ್ಲು ಬಂಡಗಳ ಅಡಿಯಲ್ಲಿ ಸಿಲುಕಿರುವ ಇನ್ನಿಬ್ಬರು ಮಿರಾಜ್ (28) ಹಾಗೂ ಸರ್ಫ್ರಾಜ್ (18) ಕೂಡ ಉತ್ತರ ಪ್ರದೇಶದ ಗೋರಖ್‌ಪುರದವರೇ. ಅಜೀಂ ಉಲ್ಲಾ ಹಾಗೂ ಮಿರಾಜ್ ಅವರು ಹಿಟಾಚಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು. ಸರ್ಫ್ರಾಜ್ ಸಹಾಯಕರಾಗಿದ್ದರು.



ಗುಂಡ್ಲುಪೇಟೆ ತಾಲ್ಲೂಕಿನ ಮಡಹಳ್ಳಿಯಲ್ಲಿ ಕ್ವಾರಿ ಗುಡ್ಡ ಕುಸಿದ ಸ್ಥಳದಲ್ಲಿ ಬಂಡೆಗಳ ಅಡಿ ಸಿಲುಕಿದ್ದ ಕಾರ್ಮಿಕರ ಶವವನ್ನು ಹೊರತೆಗೆಯಲು ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ ಶನಿವಾರ ಕಾರ್ಯಾಚರಣೆ ನಡೆಸಿದರು

ಕಲ್ಲು ಬಂಡೆಗಳ ಅಡಿಯಲ್ಲಿ ಮುಚ್ಚಿ ಹೋಗಿದ್ದ ಹಿಟಾಚಿಯಲ್ಲಿ ಸಿಲುಕಿದ್ದ ಅಜೀಂ ಉಲ್ಲಾ ಅವರ ಶವವನ್ನು ರಾಷ್ಟ್ರೀಯ ವಿಪತ್ತು ಕಾರ್ಯಪಡೆ ಹಾಗೂ ರಾಜ್ಯ ವಿಪತ್ತು ಕಾರ್ಯಪಡೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಶನಿವಾರ ಸತತ 10 ಗಂಟೆಗಳ ಕಾರ್ಯಾಚರಣೆ ಬಳಿಕ ಹೊರತೆಗೆದರು.

ಅಲ್ಲಿಗೆ ಸಮೀಪದಲ್ಲೇ ಬಂಡೆಗಳ ಅಡಿಯಲ್ಲಿ ಸಿಲುಕಿಕೊಂಡಿರುವ ಮತ್ತೊಂದು ಹಿಟಾಚಿ ಕಡೆಯಿಂದ ದುರ್ವಾಸನೆ ಬರುತ್ತಿರುವುದರಿಂದ, ಉಳಿದಿಬ್ಬರ ಮೃತದೇಹವಿರಬಹುದೆಂಬ ಶಂಕೆಯಿಂದ ಅಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ.

ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್‌ನ ತಲಾ 20 ಮಂದಿ, ಅಗ್ನಿಶಾಮಕ ದಳದ 50 ಸಿಬ್ಬಂದಿ ಶನಿವಾರ ಬೆಳಿಗ್ಗೆ 6.30ಕ್ಕೆ ಕಾರ್ಯಾಚರಣೆ ಆರಂಭಿಸಿದ್ದರು.

ಸೋಮಣ್ಣ ಭೇಟಿ: ದುರಂತ ನಡೆದ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಶನಿವಾರ ಭೇಟಿ ನೀಡಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನೂ ಮಾತನಾಡಿಸಿದರು.

'ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಯನ್ನು ಪತ್ತೆ ಹಚ್ಚುವುದಕ್ಕಾಗಿ ಎಲ್ಲ ಗಣಿ ಚಟುವಟಿಕೆಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಲಾಗುವುದು. ಜಿಲ್ಲಾಧಿಕಾರಿ ನೇತೃತ್ವದ ಅಧಿಕಾರಿಗಳ ತಂಡ ಖುದ್ದಾಗಿ ಗಣಿಗಳಿಗೆ ಭೇಟಿ ನೀಡಿ, ಎಲ್ಲವೂ ನಿಯಮ ಪ್ರಕಾರ ನಡೆಯುತ್ತಿದ್ದರೆ, ಗಣಿಗಾರಿಕೆಗೆ ಅವಕಾಶ ನೀಡಲಿದೆ. ಈ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.

25 ವರ್ಷಗಳ ಹಿಂದೆ

ಗುರುವಾರ, 6-3-1997

- **ಉತ್ತರಪ್ರದೇಶ: ಭೂಗತ ಗುಂಪುಗಳ ನಿಯಂತ್ರಣಕ್ಕೆ ಕ್ರಮ**

ನವದೆಹಲಿ, ಮಾರ್ಚ್ 5 (ಪಿಟಿಐ)– ರಾಷ್ಟ್ರಪತಿ ಆಳ್ವಿಕೆ ಇರುವ ಉತ್ತರಪ್ರದೇಶದಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆಯನ್ನು ನಿಯಂತ್ರಣಕ್ಕೆ ತರಲು 14 ಅಂಶಗಳ ಕ್ರಿಯಾ ಯೋಜನೆಯೊಂದನ್ನು ಇಂದು ನಡೆದ ಕೇಂದ್ರ ಹಾಗೂ ರಾಜ್ಯದ ಉನ್ನತ ಅಧಿಕಾರಿಗಳ ಸಭೆಯಲ್ಲಿ ಅಂತಿಮಗೊಳಿಸಲಾಯಿತು.

ಉತ್ತರಪ್ರದೇಶದ ಮಾಫಿಯಾ ಗುಂಪುಗಳು ಹಾಗೂ ಭೂಗತ ದೊರೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲು ಈ ಕ್ರಿಯಾಯೋಜನೆ ರೂಪಿಸಲಾಗಿದ್ದು, ಕೇಂದ್ರ ಗೃಹ ಸಚಿವ ಇಂದ್ರಜಿತ್ ಗುಪ್ತಾ ನಾಳೆ ಸಂಸತ್ತಿನಲ್ಲಿ ಯೋಜನೆಯನ್ನು ಪ್ರಕಟಿಸುವರು.


50 ವರ್ಷಗಳ ಹಿಂದೆ

ಸೋಮವಾರ, 6-3-1972

- **ತುಮಕೂರಿನಲ್ಲಿ ಘರ್ಷಣೆ: ಕಲ್ಲೆಸೆತ, ಚಪ್ಪರಕ್ಕೆ ಬೆಂಕಿ, ಐದು ಮಂದಿಗೆ ಗಾಯ**

ತುಮಕೂರು, ಮಾರ್ಚ್ 5– ಇಂದು ಇಲ್ಲಿಯ ಮತದಾನ ಕೇಂದ್ರವೊಂದರ ಬಳಿ ಜನ ಸಂಘ ಮತ್ತು ಆಡಳಿತ ಕಾಂಗ್ರೆಸ್ ಬೆಂಬಲಿಗರ ನಡುವೆ ಘರ್ಷಣೆಯಾಗಿ ಕಲ್ಲು ತೂರಾಟದಲ್ಲಿ ಕನಿಷ್ಠ 5 ಮಂದಿ ಗಾಯಗೊಂಡಿದ್ದಾರೆ. ಬೆಳಿಗ್ಗೆ 11 ಗಂಟೆ ವೇಳೆಗೆ ಲೋಕೋಪಯೋಗಿ ಇಲಾಖೆ ಕಚೇರಿಗಳ ಬಳಿ ದೊಡ್ಡ ಗುಂಪೊಂದು ಬಿ.ಎಚ್.ರಸ್ತೆಯಲ್ಲಿ ಹುಲ್ಲಿನ ಮೇಲ್ಛಾವಣಿಯಲ್ಲಿದ್ದ ಹೋಟೆಲೊಂದಕ್ಕೆ ಬೆಂಕಿ ಹಚ್ಚಿತು ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ 25 ಮಂದಿಯನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆಂದು ತಿಳಿದು ಬಂದಿದೆ.

ಗುಂಡಣ್ಣ




ಅಂತರರಾಜ್ಯ ಜಲ ವಿವಾದಗಳ ಸುಲಲಿತ ಪರಿಹಾರ ಸಾಧ್ಯ– ಬೊಮ್ಮಾಯಿ ಪ್ರತಿಪಾದನೆ

ಜಲ ವಿವಾದ ಕಾಯ್ದೆಗೆ ತಿದ್ದುಪಡಿ ಅಗತ್ಯ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ಹಿತಾಸಕ್ತಿಯನ್ನೇ ಕೇಂದ್ರವಾಗಿಟ್ಟು ಕೊಂಡು ಜಲ ವಿವಾದಗಳನ್ನು ಪರಿಹರಿಸುವುದಕ್ಕೆ ಪೂರಕವಾಗಿ 'ಅಂತರರಾಜ್ಯ ಜಲ ವಿವಾದ ಕಾಯ್ದೆ'ಗೆ ತಿದ್ದುಪಡಿ ತರುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.


ಬಸವರಾಜ ಬೊಮ್ಮಾಯಿ

ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿ ದಂತೆ ವಿಧಾನಸೌಧದಲ್ಲಿ ಶನಿವಾರ ನಡೆದ ದಕ್ಷಿಣ ಭಾರತ ರಾಜ್ಯಗಳ ಪ್ರಾದೇಶಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಜಲ ವಿವಾದಗಳ ಪರಿ ಹಾರದ ಸಂದರ್ಭದಲ್ಲಿ ಸಂಕುಚಿತ ರಾಜಕಾರಣಕ್ಕೆ ಅವಕಾಶ ಇರಬಾರದು. ನದಿ ಪಾತ್ರಗಳ ನಿರ್ವಹಣೆಯ ಮೂಲಕವೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಜನರಿಗೆ ಹೆಚ್ಚು ನೀರು ಲಭ್ಯವಾಗುವಂತೆ ಮಾಡುವುದೇ ಅಂತಿಮ ಗುರಿ ಆಗಬೇಕು. ಈ ದಿಸೆಯಲ್ಲಿ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದರು.

ಜನರಿಗೆ ನೀರು ಒದಗಿಸುವುದು ಸರ್ಕಾರದ ಕರ್ತವ್ಯ. ಈ ವಿಚಾರದಲ್ಲಿ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಿದೆ. ನೀರಿನ ದುರ್ಬಳಕೆ ತಡೆಗೆ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕು. ಕಾಲುವೆಗಳಲ್ಲಿ ಹರಿಸುವ ನೀರು ಮತ್ತು ಅಂತಿಮವಾಗಿ ತಲುಪುವ ನೀರಿನ ಪ್ರಮಾಣದ ನಡುವೆ ಭಾರಿ ವ್ಯತ್ಯಾಸವಿದೆ. ಅದನ್ನು ತಗ್ಗಿಸಲು ಕಾಲುವೆಗಳ ಗುಣಮಟ್ಟ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ಗುರಿ ಮುಟ್ಟುವ ವಿಶ್ವಾಸ: ರಾಜ್ಯದಲ್ಲಿ 97.91 ಲಕ್ಷ ಮನೆಗಳಿವೆ. ಅವುಗಳಲ್ಲಿ 46.2 ಲಕ್ಷ ಮನೆಗಳಿಗೆ ಜಲ ಜೀವನ್ ಮಿಷನ್ ಯೋಜನೆ ಅಡಿಯಲ್ಲಿ ನಲ್ಲಿಯ ಮೂಲಕ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಬಾಕಿ ಇರುವ 50 ಲಕ್ಷ ಮನೆಗಳಿಗೆ ನಿಗದಿತ ಗಡುವಿನೊಳಗೆ ನಲ್ಲಿಯ ಮೂಲಕ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

'ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನದಲ್ಲಿ ಕೆಲವು ತೊಡಕುಗಳಿದ್ದವು. ಅವುಗಳನ್ನು ಪರಿಹರಿಸಲಾಗಿದೆ. ಈ ಯೋಜನೆಯನ್ನು ಖುದ್ದಾಗಿ ಅನುಷ್ಠಾನಕ್ಕೆ ತರಬೇಕು ಎಂಬುದು ಸರ್ಕಾರದ ಗುರಿ. ಈ ಕಾರಣದಿಂದ ನಾನು ಖುದ್ದಾಗಿ ಯೋಜನೆಯ ಅನುಷ್ಠಾನದ ಪ್ರಗತಿಯ ಕುರಿತು ಮೇಲ್ವಿಚಾರಣೆ ನಡೆಸುತ್ತಿದ್ದೇನೆ' ಎಂದರು.

ಅಂಗನವಾಡಿ ನೌಕರರ ಪ್ರತಿಭಟನೆ ಅಂತ್ಯ

ಬೆಂಗಳೂರು: ಕೆಲ ಬೇಡಿಕೆ ಈಡೇರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದರಿಂದ ಅಂಗನವಾಡಿ ನೌಕರರು ತಮ್ಮ ಅನಿರ್ದಿಷ್ಟಾವಧಿ ಪ್ರತಿಭಟನೆಯನ್ನು ಶನಿವಾರ ಅಂತ್ಯಗೊಳಿಸಿದ್ದಾರೆ.

'ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರ್ಕಾರ ಹಿಂದೇಟು ಹಾಕುತ್ತಿದೆ' ಎಂದು ಆರೋಪಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರದಿಂದ ಪ್ರತಿಭಟನೆ ಆರಂಭಿಸಲಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಂಗನವಾಡಿ ನೌಕರರು, ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸರ್ಕಾರದಿಂದ ಯಾವುದೇ ಭರವಸೆ ಸಿಗದಿದ್ದರಿಂದ ಉದ್ಯಾನದಲ್ಲಿ ಅಹೋ ರಾತ್ರಿ ಪ್ರತಿಭಟನೆ ನಡೆಸಿದ್ದರು.

ಪ್ರತಿಭಟನಾ ಸ್ಥಳಕ್ಕೆ ಬಂದಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಕೆಲ ಬೇಡಿಕೆ ಈಡೇರಿಸಿದ ಆದೇಶವನ್ನು ಮುಖಂಡರಿಗೆ ನೀಡಿದರು. ಬಳಿಕ ಅಂಗನವಾಡಿ ನೌಕರರು ಪ್ರತಿಭಟನೆ ಹಿಂಪಡೆದರು.

'ಅನುಕಂಪ ಆಧಾರದಲ್ಲಿ ಮಗಳು ಮತ್ತು ಸೊಸೆಗೂ ಕೆಲಸ ಕೊಡುವ ಹಾಗೂ ಕೋಳಿ ಮೊಟ್ಟೆ ಖರೀದಿಗೆ ಮುಂಗಡವಾಗಿ ಹಣ ನೀಡುವುದಾಗಿ ಆದೇಶ ಹೊರಡಿಸಲಾಗಿದೆ. ಇದರ ಪ್ರತಿಯನ್ನು ಅಧಿಕಾರಿಗಳು ನಮಗೆ ನೀಡಿದ್ದಾರೆ. ಉಳಿದ ಬೇಡಿಕೆ ಈಡೇರಿಸುವ ಜಂಟಿ ಸಭೆ ನಡೆಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಹೀಗಾಗಿ, ಪ್ರತಿಭಟನೆ ಹಿಂಪಡೆಯಲಾಗಿದೆ' ಎಂದು ಸಿಐಟಿಯು ಅಧ್ಯಕ್ಷೆ ಎಸ್. ವರಲಕ್ಷ್ಮಿ ಹೇಳಿದರು.

ಶಾಸಕರ ಸಂಬಳ ಹೆಚ್ಚಳಕ್ಕೆ ರಾಜ್ಯಪಾಲರ ಅಸ್ತು

ಬೆಂಗಳೂರು: ಸಭಾಧ್ಯಕ್ಷರು, ಉಪ ಸಭಾಧ್ಯಕ್ಷರು, ಸಭಾಪತಿ, ಉಪ ಸಭಾಪತಿ, ವಿರೋಧ ಪಕ್ಷದ ನಾಯಕರು, ಸರ್ಕಾರಿ ಮುಖ್ಯ ಸಚೇತಕರು, ವಿರೋಧ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರ ವೇತನ ಮತ್ತು ಭತ್ಯೆ ಹೆಚ್ಚಳಕ್ಕೆ ಅವಕಾಶ ಕಲ್ಪಿಸುವ 'ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಕಾಯ್ದೆ' ತಿದ್ದುಪಡಿ ಮಸೂದೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ, ಕಾಂಗ್ರೆಸ್ ಗದ್ದಲದ ಮಧ್ಯೆ ಯಾವುದೇ ಚರ್ಚೆ ನಡೆಯದೆ ಎರಡೂ ಸದನಗಳಲ್ಲಿ ಈ ಮಸೂದೆ ಅಂಗೀಕಾರಗೊಂಡಿತ್ತು.

'2015ರಿಂದ ಶಾಸಕರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ಆಗಿರಲಿಲ್ಲ. ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿದೆ. ಸಾಕಷ್ಟು ಶಾಸಕರು ಸಂಕಷ್ಟ ಅನುಭವಿಸಿದ್ದಾರೆ. ಆದ್ದರಿಂದ, ವೇತನ ಹೆಚ್ಚಿಸಲು ಅನುವಾಗುವಂತೆ ಕಾಯ್ದೆ ತಿದ್ದುಪಡಿಗೆ ಉದ್ದೇಶಿಸಲಾಗಿದೆ' ಎಂದು ಮಸೂದೆ ಮಂಡಿಸಿದ್ದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಸಮರ್ಥನೆ ನೀಡಿದ್ದರು.

ಬೆಲೆ ಸೂಚ್ಯಂಕದ ಆಧಾರದಲ್ಲಿ 2023 ಏಪ್ರಿಲ್ 1ರಿಂದ ಪ್ರತಿ 5 ವರ್ಷಕ್ಕೊಮ್ಮೆ ಸಂಬಳ ಹೆಚ್ಚಿಸುವ ಬಗ್ಗೆಯೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ವಿಧಾನಮಂಡಳದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಪರಿಷ್ಕರಣೆಯಿಂದ ವಾರ್ಷಿಕ ₹ 67 ಕೋಟಿ ಹೆಚ್ಚುವರಿ ವೆಚ್ಚ ಉಂಟಾಗಲಿದೆ.

ವಿಟಿಯು ಘಟಿಕೋತ್ಸವ: ಮೂವರಿಗೆ ಡಾಕ್ಟರ್ ಆಫ್ ಸೈನ್ಸ್ ಗೌರವ

ಪ್ರಜಾವಾಣಿ ವಾರ್ತೆ


ಕ್ರಿಸ್ ಗೋಪಾಲಕೃಷ್ಣ


ಡಾ.ಕೃಷ್ಣ ಎಲ್ಲಾ


ಪ್ರೊ.ರೋಹಿಣಿ ಗೋಡಬೋಲೆ


ಬುಶ್ರಾ ಮತೀನ್

ಬೆಳಗಾವಿ: 'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ದ 21ನೇ ವಾರ್ಷಿಕ ಘಟಿಕೋತ್ಸವದಲ್ಲಿ ತಾಂತ್ರಿಕ ಹಾಗೂ ವಿಜ್ಞಾನ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ಮೂವರಿಗೆ ಡಾಕ್ಟರ್ ಆಫ್ ಸೈನ್ಸ್ ಗೌರವ ಪದವಿ ಪ್ರದಾನ ಮಾಡಲಾಗುವುದು. ಇನ್ಫೊಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್, ಹೈದರಾಬಾದ್‌ನ ಭಾರತ್ ಬಯೋಟೆಕ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಅಧ್ಯಕ್ಷ ಡಾ.ಕೃಷ್ಣ ಎಲ್ಲಾ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಹೈಎನರ್ಜಿ ಭೌತಿಕ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ಪ್ರೊ.ರೋಹಿಣಿ ಗೋಡಬೋಲೆ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ವಿಟಿಯು ಕುಲಪತಿ ಪ್ರೊ.ಕರಿಸಿದ್ದಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಮಾರ್ಚ್ 10ರಂದು ಬೆಳಿಗ್ಗೆ 11.30ಕ್ಕೆ ಇಲ್ಲಿನ 'ಜ್ಞಾನಸಂಗಮ' ಕ್ಯಾಂಪಸ್‌ನಲ್ಲಿ ಆಯೋಜಿಸಲಾದ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ಲೋಕಸಭೆ ಸಭಾಪತಿ ಓಂ ಬಿರ್ಲಾ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮುಖ್ಯಅತಿಥಿಯಾಗಿ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ರಾಯಚೂರಿನ ಎಸ್‌ಎಲ್‌ಎನ್ ಕಾಲೇಜಿನ ಬಿಇ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಬುಶ್ರಾ ಮತೀನ್ ಒಟ್ಟು 16 ಚಿನ್ನದ ಪದಕಗಳನ್ನು ಪಡೆದಿದ್ದಾರೆ. ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಇದು ದಾಖಲೆಯಾಗಿದೆ. ಈವರೆಗೆ ಅತಿ ಹೆಚ್ಚು ಅಂದರೆ 13 ಚಿನ್ನದ ಪದಕಗಳನ್ನು ಗಳಿಸಿದ ದಾಖಲೆ ಇತ್ತು' ಎಂದು ಕುಲಪತಿ ತಿಳಿಸಿದರು.

'ಕಡಿಮೆಯಾಗದ ಗೂಂಡಾ ಮುಸಲ್ಮಾನರ ವಿಕೃತಿ'

ಪ್ರಜಾವಾಣಿ ವಾರ್ತೆ


ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: 'ಕೆಲವು ಗೂಂಡಾ ಮುಸಲ್ಮಾನರ ಮಾನಸಿಕ ವಿಕೃತಿ ಇನ್ನೂ ಕಡಿಮೆಯಾಗಿಲ್ಲ. ಅವರಿಗೆ ಮುಸ್ಲಿಂ ನಾಯಕರು ಕಿವಿಹಿಂಡಿ ಬುದ್ಧಿ ಹೇಳಬೇಕು' ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಮೆಗ್ಗಾನ್ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿ, ಹಲ್ಲೆಗೊಳಗಾದ ವೆಂಕಟೇಶ್ ಅವರ ಆರೋಗ್ಯ ವಿಚಾರಿಸಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಹರ್ಷ ಕೊಲೆಯ ನಂತರ ಹಿಂದೂ ಯುವಕರ ನೋವು, ಆಕ್ರೋಶ ಕಡಿಮೆಯಾಗಿಲ್ಲ. ಹರ್ಷ ಪ್ರಕರಣದ ಆರೋಪಿಗಳ ಬಂಧನವೂ ಆಗಿದೆ. ಆದರೆ, ಇದರ ಮಧ್ಯೆ ಪಕ್ಷದ ಕಾರ್ಯಕರ್ತ ವೆಂಕಟೇಶ್ ಅವರ ಮೇಲೆ ಮುಸಲ್ಮಾನ್ ಗೂಂಡಾಗಳು ಹಲ್ಲೆ ಮಾಡಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ವಾಕಿಂಗ್ ಹೋದವರ ಮೇಲೆ ಈ ರೀತಿ ಹಲ್ಲೆ ಮಾಡಿರುವುದು ಖಂಡನೀಯ. ಸಹಜವಾಗಿಯೇ ಹಿಂದೂ ಯುವಕರು ಘಟನೆ ಬಗ್ಗೆ ಆಕ್ರೋಶಗೊಂಡಿದ್ದಾರೆ' ಎಂದರು.

'ಶಾಂತ ಸ್ಥಿತಿಯನ್ನು ಮತ್ತಷ್ಟು ಕದಡುವ ರೀತಿಯಲ್ಲಿ ಕೆಲವರು ವರ್ತಿಸುತ್ತಿದ್ದಾರೆ. ಅಂಥವರಿಗೆ ಸಮುದಾಯದ ಹಿರಿಯರು ಪಾಠ ಕಲಿಸಬೇಕು. ಇಲ್ಲದಿದ್ದರೆ, ನಾವೇ ತಕ್ಕ ಪಾಠ ಕಲಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಆರ್ಥಿಕ ದಿವಾಳಿ ಮಾಡುತ್ತಿರುವ ಬಿಜೆಪಿ: ಸಿದ್ದರಾಮಯ್ಯ


ಸಿದ್ದರಾಮಯ್ಯ

ಸಾಲಿಗ್ರಾಮ (ಮೈಸೂರು): 'ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಜನರ ಮೇಲೆ ಸಾಲದ ಹೊರೆ ಹೆಚ್ಚಿಸಿ ದೇಶವನ್ನು ಆರ್ಥಿಕವಾಗಿ ದಿವಾಳಿ ಮಾಡುತ್ತಿವೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ತಂದ್ರೆಕೊಪ್ಪಲು ಗ್ರಾಮದ ಕೋಣಮ್ಮ ದೇವಾಲಯವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, 'ನಾನು ಬಜೆಟ್ ಮಂಡಿಸಿದಾಗ ₹ 13 ಸಾವಿರ ಕೋಟಿ ಸಾಲವಿತ್ತು. ಬಿಜೆಪಿಯು ಮೂರು ವರ್ಷದ ಅಧಿಕಾರ ಅವಧಿಯಲ್ಲಿ ₹ 2.20 ಲಕ್ಷ ಕೋಟಿ ಸಾಲ ಮಾಡಿದ್ದು, ಅಭಿವೃದ್ಧಿಗೆ ವಿನಿಯೋಗವಾಗುತ್ತಿಲ್ಲ' ಎಂದು ಟೀಕಿಸಿದರು.

'ಕೇಂದ್ರ ಸರ್ಕಾರವೂ ₹ 5.18 ಲಕ್ಷ ಕೋಟಿ ಸಾಲ ಮಾಡಿದೆ. ಬಿಜೆಪಿ ಬಡವರ ಪರವಲ್ಲ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಸಿಮೆಂಟ್, ಕಬ್ಬಿಣ, ಇಂಧನ ದರ ಹೆಚ್ಚಿರುವುದರಿಂದ ಜೀವನ ದುಬಾರಿಯಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಜನರ ಆಶೀರ್ವಾದ ಪಡೆದು ಬಹುಮತದಿಂದ ಬಿಜೆಪಿಯು ಸರ್ಕಾರ ರಚಿಸಿಲ್ಲ. ಆಪರೇಷನ್ ಕಮಲದ ಮೂಲಕ ಅಧಿಕಾರ ಹಿಡಿದಿದೆ. ಹೀಗಿರುವಾಗ ಜನಪರ ಆಡಳಿತ ನೀಡಲು ಹೇಗೆ ಸಾಧ್ಯ? ಜೆಡಿಎಸ್ ಬಗ್ಗೆ ಮಾತನಾಡಲ್ಲ. ಅವರು ಮತ್ತೊಬ್ಬರ ಹೆಗಲ ಮೇಲೆ ಕೈಹಾಕಿ ಅಧಿಕಾರ ಪಡೆಯುತ್ತಾರೆ' ಎಂದು ಲೇವಡಿ ಮಾಡಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹390
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹395

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1530 (1530)
ಸೋಯಾ (ರಿಫೈಂಡ್)	₹1537 (1540)
ಸೂರ್ಯಕಾಂತಿ (ರಿಫೈಂಡ್)	1670 (1650)
ಪಾಮೋಲಿನ್	₹1520 (1525)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2700
ಮಧ್ಯಮ	₹1000-1500
ಸಣ್ಣ	₹500-1000

‘ಜಿಯೋ ವರ್ಲ್ಡ್ ಸೆಂಟರ್’ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈನ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ ದೇಶದ ಅತಿದೊಡ್ಡ ಕನ್ವೆಂನ್ಶನ್ ಸೆಂಟರ್ ‘ಜಿಯೋ ವರ್ಲ್ಡ್ ಸೆಂಟರ್’ ಆರಂಭಿಸಿರುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ತಿಳಿಸಿದೆ.

ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿ 18.5 ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ಜಿಯೊ ವರ್ಲ್ಡ್ ಸೆಂಟರ್ ವ್ಯಾಪಿಸಿದ್ದು, ಹಂತ ಹಂತವಾಗಿ ಬಳಕೆಗೆ ಲಭ್ಯವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

‘ನಮ್ಮ ರಾಷ್ಟ್ರದ ಗೌರವ ಮತ್ತು ನವ ಭಾರತದ ಆಕಾಂಕ್ಷೆಗಳ ಪ್ರತಿಬಿಂಬ ಇದಾಗಿದೆ. ದೊಡ್ಡ ಮಟ್ಟದ ಸಮಾವೇಶಗಳನ್ನು ನಡೆಸಲು, ವ್ಯಾಪಾರ, ವಾಣಿಜ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಉತ್ತಮ ತಾಣವಾಗುವ ಮೂಲಕ ಮುಂಬೈನ ಹೊಸ ಹೆಗ್ಗುರುತಾಗಲಿದೆ’ ಎಂದು ರಿಲಯನ್ಸ್ ಇಂಡಸ್ಟ್ರೀಸ್‌ನ ನಿರ್ದೇಶಕಿ ನೀತಾ ಅಂಬಾನಿ ಹೇಳಿದ್ದಾರೆ.

ಎಂಎಫ್: ಮಹಿಳಾ ನಿಧಿ ನಿರ್ವಾಹಕರ ಸಂಖ್ಯೆ ಅಲ್ಪ ಹೆಚ್ಚಳ



ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಉದ್ಯಮದಲ್ಲಿ ಮಹಿಳಾ ನಿಧಿ ನಿರ್ವಾಹಕರ ಸಂಖ್ಯೆಯು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಅಲ್ಪ ಏರಿಕೆ ಆಗಿದೆ ಎಂದು ಮಾರ್ನಿಂಗ್‌ಸ್ಟಾರ್ ವರದಿ ತಿಳಿಸಿದೆ.

ಉದ್ಯಮದಲ್ಲಿ ನಿಧಿ ನಿರ್ವಹಣೆ ಮಾಡುತ್ತಿರುವ ಮಹಿಳೆಯರ ಸಂಖ್ಯೆಯು 2021ರಲ್ಲಿ 30 ಇತ್ತು. 2022ರಲ್ಲಿ 32ಕ್ಕೆ ಏರಿಕೆ ಆಗಿದೆ. ಉದ್ಯಮದಲ್ಲಿ ಒಟ್ಟಾರೆ 399 ನಿಧಿ ನಿರ್ವಾಹಕರಿದ್ದು, ಇವರಲ್ಲಿ ಮಹಿಳೆಯರ ಪಾಲು ಶೇ 8ರಷ್ಟು ಮಾತ್ರ. ಕಳೆದ ವರ್ಷ ಒಟ್ಟಾರೆ ನಿಧಿ ನಿರ್ವಾಹಕ ಸಂಖ್ಯೆ 376 ಇತ್ತು.

ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯ ₹ 38 ಲಕ್ಷ ಕೋಟಿಗಳಷ್ಟು ಇದ್ದು, ಇದರಲ್ಲಿ ಮಹಿಳೆಯರು ನಿರ್ವಹಿಸುತ್ತಿರುವ ಸಂಪತ್ತು ಮೌಲ್ಯವು ₹ 4.55 ಲಕ್ಷ ಕೋಟಿಗಳಷ್ಟಿದೆ.

ಮಾರ್ನಿಂಗ್‌ಸ್ಟಾರ್ ಕಂಪನಿಯು 2017ರಲ್ಲಿ ಮೊದಲಿಗೆ ವರದಿ ಬಿಡುಗಡೆ ಮಾಡಿದಾಗ ಮಹಿಳಾ ನಿಧಿ ನಿರ್ವಾಹಕರ ಸಂಖ್ಯೆ 18 ಇತ್ತು.

2025ಕ್ಕೆ ಸಾಲ ₹ 7.38 ಲಕ್ಷ ಕೋಟಿ!

ಒಂದನೇ ಪುಟದಿಂದ

ಪ್ರಸಕ್ತ ಆರ್ಥಿಕ ವರ್ಷ ರಾಜಸ್ವ ಸ್ವೀಕೃತಿಗಳ ಒಟ್ಟು ಪ್ರಮಾಣವು ಜಿಎಸ್‌ಡಿಪಿಯ ಶೇ 11.01ರಷ್ಟಿದೆ. 2022–23ರಲ್ಲಿ ಅದು ಶೇ 10.07ಕ್ಕೆ ಕುಸಿಯಲಿದೆ. 2025–26ರಲ್ಲಿ ಇನ್ನೂ ಕುಸಿತ ಕಾಣಲಿದ್ದು, ಶೇ 8.87ಕ್ಕೆ ತಲುಪಲಿದೆ ಎಂಬ ಅಂದಾಜಿದೆ.

ವೇತನ, ಪಿಂಚಣಿ ವೆಚ್ಚ ಹೆಚ್ಚಳ: ರಾಜ್ಯ ಸರ್ಕಾರವು ನೌಕರರ ವೇತನ ಮತ್ತು ಪಿಂಚಣಿಗಳಿಗಾಗಿ ಮಾಡುವ ವೆಚ್ಚದಲ್ಲಿ 2023–24ನೇ ಆರ್ಥಿಕ ವರ್ಷದಿಂದ ಗಣನೀಯ ಹೆಚ್ಚಳ ಆಗಲಿದೆ ಎಂಬ ಅಂಶ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿದೆ. ಇದು, ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಯ ಸುಳಿವು ನೀಡಿದೆ.

ಈಗ ವೇತನಕ್ಕಾಗಿ ₹ 38,430 ಕೋಟಿ ಮತ್ತು ನಿವೃತ್ತಿ ವೇತನಕ್ಕಾಗಿ ₹ 23,413 ಕೋಟಿ ವ್ಯಯಿಸಲಾಗುತ್ತಿದೆ. 2022–23ರಲ್ಲಿ ಈ ಮೊತ್ತಗಳು ಅನುಕ್ರಮವಾಗಿ ₹ 41,288 ಕೋಟಿ ಮತ್ತು ₹ 24,016 ಕೋಟಿ ಇರಲಿವೆ. 2023–24ರಲ್ಲಿ ವೇತನಕ್ಕಾಗಿ ₹ 56,942 ಕೋಟಿ ಮತ್ತು ನಿವೃತ್ತಿ ವೇತನಕ್ಕಾಗಿ ₹ 26,178 ಕೋಟಿ ವೆಚ್ಚವಾಗಲಿದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಎನ್‌ಎಸ್‌ಇನಲ್ಲಿ ಷೇರುಗಳ ಖರೀದಿ–ಮಾರಾಟದ ಸೌಲಭ್ಯ ದುರ್ಬಳಕೆ

ಚಿತ್ರಾಗೆ ಇಲ್ಲ ನಿರೀಕ್ಷಣಾ ಜಾಮೀನು

ಮುಖ್ಯಾಂಶಗಳು
- 2018ರ ಮೇನಲ್ಲಿ ಪ್ರಕರಣ ದಾಖಲು
- ಸಿಬಿಐ ವಶದಲ್ಲಿ ಮಾಜಿ ಸಿಒಒ ಆನಂದ್ ಸುಬ್ರಮಣಿಯನ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಚಿತ್ರಾ ರಾಮಕೃಷ್ಣ ಅವರಿಗೆ ನಿರೀಕ್ಷಣಾ ಜಾಮೀನು ನೀಡಲು ದೆಹಲಿ ಹೈಕೋರ್ಟ್ ಶನಿವಾರ ನಿರಾಕರಿಸಿತು.

ಪ್ರಕರಣದಲ್ಲಿ ಬಂಧನದಿಂದ ರಕ್ಷಣೆ ಪಡೆಯಲು ಚಿತ್ರಾ ಅವರು ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಚಿತ್ರಾ ಪರ ವಕೀಲರು ಮತ್ತು ಸಿಬಿಐ ಅಧಿಕಾರಿಗಳ ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯವು ಅರ್ಜಿಯನ್ನು ವಜಾ ಮಾಡಿತು.

ಆರ್ಥಿಕ ಅಪರಾಧಗಳು ಸಾರ್ವಜನಿಕ ಹಣದ ನಷ್ಟಕ್ಕೆ ಕಾರಣ ಆಗಬಹುದಾದ ಅತ್ಯಂತ ದೊಡ್ಡ ಮಟ್ಟದ ಪಿತೂರಿಗಳನ್ನು ಒಳಗೊಂಡಿರುತ್ತವೆ ಎಂದು ಹೇಳುವ ಮೂಲಕ ನ್ಯಾಯಮೂರ್ತಿ ಸಂಜೀವ್ ಅಗರ್‌ವಾಲ್ ಅವರು ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದಾರೆ.


ಚಿತ್ರಾ

ಷೇರುಗಳನ್ನು ತ್ವರಿತವಾಗಿ ಖರೀದಿಸಲು ಹಾಗೂ ಮಾರಾಟ ಮಾಡಲು ವರ್ತಕರಿಗೆ ಅವಕಾಶ ಕಲ್ಪಿಸುವ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡ ಆರೋಪವನ್ನು ಚಿತ್ರಾ ಅವರು ಎದುರಿಸುತ್ತಿದ್ದಾರೆ.

ಆರೋಪಿಯು ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದು, ತನಿಖೆಯು ಇನ್ನೂ ಆರಂಭಿಕ ಹಂತದಲ್ಲಿಯೇ ಇದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ. ಆರೋಪಿಯು ಈ ಹಿಂದೆ ಎನ್‌ಎಸ್‌ಇನಲ್ಲಿ ಜಂಟಿ ವ್ಯವಸ್ಥಾಪಕ ನಿರ್ದೇಶಕಿ, ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಆಗಿದ್ದರಿಂದ ಅವರು ದಾಖಲೆಗಳನ್ನು ತಿದ್ದುವ ಸಾಧ್ಯತೆಗಳು ಹೆಚ್ಚಿವೆ ಎಂದು ಹೇಳಿದ್ದಾರೆ.



ಎನ್‌ಎಸ್‌ಇ ಕಟ್ಟಡ

ಸಿಬಿಐಗೆ ತರಾಟೆ: ನಾಲ್ಕು ವರ್ಷಗಳಿಂದ ಹಗರಣದ ಪ್ರಮುಖ ಆರೋಪಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಂತೆ ಕಾಣುತ್ತಿಲ್ಲ. ಸಿಬಿಐನ ಈ ನಡೆಯನ್ನು ಒಪ್ಪಲು ಆಗುವುದಿಲ್ಲ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಬಂಡವಾಳ ಮಾರುಕಟ್ಟೆಯ ಮೇಲ್ವಿಚಾರಕ ಆಗಿರುವ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಎಫ್‌ಐಆರ್‌ನಲ್ಲಿ ಹೆಸರಿಸಿರುವ ಆರೋಪಿಗಳ ಬಗ್ಗೆ ಬಹಳ ಸೌಮ್ಯ ಮತ್ತು ಮೃದು ಧೋರಣೆ ಹೊಂದಿರುವ ಬಗ್ಗೆಯೂ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಪ್ರಕರಣದಿಂದಾಗಿ ಷೇರುದಾರರು, ಸಾಂಸ್ಥಿಕ ಹೂಡಿಕೆದಾರರು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ಪ್ರಾಮಾಣಿಕ ಹೂಡಿಕೆದಾರರಿಗೆ ಭಾರಿ ನಷ್ಟ ಉಂಟಾಗಿರುವ ಸಾಧ್ಯತೆ ಇದೆ. ಇಂತಹ ಹೂಡಿಕೆದಾರರು ದೇಶದ ಪ್ರತಿಷ್ಠಿತ ಹಣಕಾಸು ಸಂಸ್ಥೆ ‘ಎನ್‌ಎಸ್‌ಇ’ ಮೇಲೆ ಇಟ್ಟುಕೊಂಡಿರುವ ನಂಬಿಕೆಗೆ ಧಕ್ಕೆ ಆಗಿರಬಹುದು ಎಂದು ನ್ಯಾಯಮೂರ್ತಿ ಅಗರ್‌ವಾಲ್ ಹೇಳಿದ್ದಾರೆ.

‘ಮುಸ್ಲಿಂ ಎಂಬ ಕಾರಣಕ್ಕೆ ನವಾಬ್‌ಗೆ ಕಿರುಕುಳ’

ಪುಣೆ(ಪಿಟಿಐ): ‘ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಅವರ ಬಂಧನವು ರಾಜಕೀಯ ಪ್ರೇರಿತವಾದದ್ದು, ಅವರು ಮುಸ್ಲಿಂ ಎನ್ನುವ ಕಾರಣಕ್ಕಾಗಿಯೇ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಅವರೊಂದಿಗೆ ನಂಟು ಹೊಂದಿದ್ದಾರೆಂದು ಆರೋಪಿಸಲಾಗುತ್ತಿದೆ’ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಶನಿವಾರ ಹೇಳಿದ್ದಾರೆ.

ನವಾಬ್ ಮಲಿಕ್ ರಾಜೀನಾಮೆ ನೀಡಬೇಕೆಂಬ ಪ್ರತಿಪಕ್ಷಗಳ ಒತ್ತಾಯವನ್ನು ತಳ್ಳಿ ಹಾಕಿದ ಅವರು, ‘ಮುಸ್ಲಿಂ ಎನ್ನುವ ಕಾರಣಕ್ಕಾಗಿಯೇ ಮಲಿಕ್ ಮತ್ತು ಅವರ ಕುಟುಂಬದ ಸದಸ್ಯರಿಗೆ ಉದ್ದೇಶಪೂರ್ವಕವಾಗಿ ಕಿರುಕುಳ ನೀಡಲಾಗುತ್ತಿದೆ. ಆದರೆ ಇದರ ವಿರುದ್ಧ ನಾವು ಹೋರಾಡುತ್ತೇವೆ’ ಎಂದರು.


ನವಾಬ್ ಮಲಿಕ್

‘ಮಲಿಕ್ ಅವರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಪ್ರತಿಪಕ್ಷ ಬಿಜೆಪಿ ಆಗ್ರಹಿಸುತ್ತಿದೆಯೆಲ್ಲ’ ಎನ್ನುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ, ‘ಬಿಜೆಪಿಗೆ ಸೇರಿದ ಕೇಂದ್ರ ಸಚಿವ ನಾರಾಯಣ ರಾಣೆ ಮತ್ತು ಮಲಿಕ್ ಬಗ್ಗೆ ವಿಭಿನ್ನ ಮಾನದಂಡಗಳನ್ನು ಅನ್ವಯಿಸಲಾಗುತ್ತಿದೆ’ ಎಂದು ಶರದ್ ಉತ್ತರಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	45800-46229
ಬೆಟ್ಟೆ	36119-36559
ಕೆಂಪುಗೋಟು	30700-31100
ರಾಶಿ	45339-45779
ಕಾರ್ಕಳ	
ಹೊಸತು	40000-44500
ಹಳತು	46000-53000
ಕುಂದಾಪುರ	
ಹಳೆಚಾಲಿ	51500-52500
ಹೊಸಚಾಲಿ	36019-40419
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22199-29608
ಚಾಲಿ	43099-46099
ಕೋಕ	21199-27499
ಹೊಸಚಾಲಿ	36099-40509
ಕೆಂಪುಗೋಟು	26169-33589
ರಾಶಿ	45099-46599
ತಟ್ಟಿಬೆಟ್ಟೆ	26169-33589
ಶಿರಸಿ	
ಬೆಟ್ಟೆ	35009-44639
ಬಿಳಿಗೋಟು	20099-34693
ಚಾಲಿ	25313-41399
ರಾಶಿ	44108-47609
ರಾಮನಗರ ರೇಷ್ಮೆ	
ಮಿಶ್ರತಳಿ	400-766
ದ್ವಿತಳಿ	501-925

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15600	15600	224.25 ಸೆಂಟ್ಸ್
ಎಸಿ	---	7600	7700	
ಆರ್‌ಪಿ	---	8200	8300	ಲಂಡನ್
ಆರ್‌ಸಿ	---	3800	3875	2038 ಡಾಲರ್ಸ್

ರೈಲಿನಲ್ಲಿ ಬೆಂಕಿ: ಪ್ರಯಾಣಿಕರು ಪಾರು

ಮೀರತ್ (ಪಿಟಿಐ): ಉತ್ತರ ಪ್ರದೇಶದ ಸಹರಾನ್‌ಪುರದಿಂದ ದೆಹಲಿಗೆ ತೆರಳುತ್ತಿದ್ದ ಪ್ಯಾಸೆಂಜರ್ ರೈಲಿನ 2 ಬೋಗಿಗಳಲ್ಲಿ ಶನಿವಾರ ಬೆಂಕಿ ಕಾಣಿಸಿಕೊಂಡಿದ್ದು, ಯವುದೇ ಸಾವು-ನೋವು ಸಂಭವಿಸಿಲ್ಲ.

ದೌರಾಲಾ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ಬೋಗಿಯಲ್ಲಿ ಕಂಡು ಬಂದಿರುವ ಬೆಂಕಿ ರೈಲಿನ ಎಂಜಿನ್‌ಗೂ ವ್ಯಾಪಿಸುವ ಭೀತಿ ಎದುರಾಗಿತ್ತು. ಈ ವೇಳೆ ಪ್ರಯಾಣಿಕರ ನೆರವಿನೊಂದಿಗೆ ರೈಲ್ವೆ ನಿಲ್ದಾಣದ ಸಿಬ್ಬಂದಿ ಬೆಂಕಿ ವ್ಯಾಪಿಸಿದ ಬೋಗಿಗಳಿಂದ ಎಂಜಿನ್ ಅನ್ನು ಪ್ರತ್ಯೇಕಗೊಳಿಸುವಲ್ಲಿ ಯಶಸ್ವಿಯಾದರು. ಇದರಿಂದ ಭಾರೀ ದುರಂತವೊಂದು ತಪ್ಪಿತು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಯಾಣಿಕರು ಸುರಕ್ಷಿತವಾಗಿದ್ದು, ಯಾವುದೇ ಸಾವು–ನೋವು ಸಂಭವಿಸಿಲ್ಲ.

ಸಂಕ್ಷಿಪ್ತ ಸುದ್ದಿ

ಬ್ರಹ್ಮೋಸ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿಯಾದ ‘ಬ್ರಹ್ಮೋಸ್’ನ ಪರೀಕ್ಷಾರ್ಥ ಪ್ರಯೋಗ ಶನಿವಾರ ಯಶಸ್ವಿಯಾಗಿ ನಡೆಯಿತು ಎಂದು ಭಾರತೀಯ ನೌಕಾಪಡೆ ತಿಳಿಸಿದೆ.

ಕ್ಷಿಪಣಿಯು ‘ಪಿನ್ ಪಾಯಿಂಟ್’ ನಿಖರತೆಯೊಂದಿಗೆ ಗುರಿ ಮುಟ್ಟಿದೆ ಎಂದು ನೌಕಾಪಡೆಯ ವಕ್ತಾರರು ಮಾಹಿತಿ ನೀಡಿದ್ದಾರೆ. ಇದು ಇಂಡೊ-ರಷ್ಯನ್ ಜಂಟಿಯಾಗಿ ತಯಾರಿಸಿದ ಅತ್ಯಂತ ಸುಧಾರಿತ ಕ್ಷಿಪಣಿಯಾಗಿದೆ.

3 ಕೋಟಿ ಯುವಜನತೆಗೆ ಲಸಿಕೆ ಪೂರೈಕೆ

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧ 15–18 ವಯೋಮಾನದ ಸುಮಾರು 3 ಕೋಟಿ ಯುವಜನತೆಗೆ ಲಸಿಕೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಶನಿವಾರ ಹೇಳಿದ್ದಾರೆ.

‘15–18 ವಯೋಮಾನದ ಸುಮಾರು 3 ಕೋಟಿ ಯುವಜನತೆ ಕೋವಿಡ್ ವಿರುದ್ಧದ ಎರಡೂ ಡೋಸ್ ಲಸಿಕೆಯನ್ನು ಪಡೆಯುವ ಮೂಲಕ ದೊಡ್ಡ ಹೆಜ್ಜೆಯೊಂದನ್ನು ಇಟ್ಟಿದ್ದಾರೆ. ಯುವ ಭಾರತವು ವಿಶ್ವದ ಅತಿದೊಡ್ಡ ಲಸಿಕಾ ಅಭಿಯಾನವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದಿದೆ’ ಎಂದು ಮಾಂಡವೀಯ ಅವರು ಟ್ವೀಟ್ ಮಾಡಿದ್ದಾರೆ.

‘ಸ್ಪುಟ್ನಿಕ್ ಲೈಟ್’: 3ನೇ ಹಂತದ ಟ್ರಯಲ್‌ಗೆ ಶಿಫಾರಸು

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆಯ ‘ಸ್ಪುಟ್ನಿಕ್ ಲೈಟ್’ಅನ್ನು ಬೂಸ್ಟರ್ ಡೋಸ್ ಆಗಿ ಬಳಸುವುದಕ್ಕೆ ಸಂಬಂಧಿಸಿ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಸಲು ಅನುಮತಿ ನೀಡುವಂತೆ ನೇಮಿಸಿದ ತಜ್ಞರ ಸಮಿತಿ ಶಿಫಾರಸು ಮಾಡಿದೆ.

ಅಂತಿಮ ಅನುಮೋದನೆಗಾಗಿ ಈ ಶಿಫಾರಸುಗಳನ್ನು ಭಾರತೀಯ ಔಷಧ ಮಹಾನಿಯಂತ್ರಕರಿಗೆ (ಡಿಸಿಜಿಐ) ಕಳುಹಿಸಲಾಗಿದೆ.

ಕೆಲ ನಿಬಂಧನೆಗಳನ್ನು ವಿಧಿಸಿದ್ದ ಡಿಸಿಜಿಐ, ಸ್ಪುಟ್ನಿಕ್ ಲೈಟ್ ಅನ್ನು ತುರ್ತು ಸಂದರ್ಭಗಳಲ್ಲಿ ಬಳಸುವಂತೆ ಸೂಚಿಸಿತ್ತು. ಈ ಲಸಿಕೆಯನ್ನು ಬೂಸ್ಟರ್ ಡೋಸ್ ಆಗಿ ಬಳಸಲು ಮೂರನೇ ಹಂತದ ಕ್ಲಿನಿಕಲ್ ಟ್ರಯಲ್‌ಗಾಗಿ ಹೈದರಾಬಾದ್ ಮೂಲದ ಡಾ.ರೆಡ್ಡೀಸ್ ಲ್ಯಾಬೋರೇಟರೀಸ್ ಪ್ರಸ್ತಾವನೆ ಸಲ್ಲಿಸಿತ್ತು.

ಪಾಕಿಸ್ತಾನ ಬಾಂಬ್ ಸ್ಫೋಟ: ಹೊಣೆ ಹೊತ್ತ ಐಎಸ್

ಪೆಶಾವರ (ಎಪಿ): ಪೆಶಾವರದ ಶಿಯಾ ಮಸೀದಿಯೊಂದರಲ್ಲಿ ಶುಕ್ರವಾರ ಪ್ರಾರ್ಥನೆಗೂ ಮುನ್ನ ಸಂಭವಿಸಿದ ಆತ್ಮಾಹುತಿ ಬಾಂಬ್ ದಾಳಿಯ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ (ಐಎಸ್) ಸಂಘಟನೆ ಹೊತ್ತುಕೊಂಡಿದೆ.

ಆಫ್ಗನ್ ಆತ್ಮಾಹುತಿ ಬಾಂಬ್ ದಾಳಿಕೋರನೊಬ್ಬನಿಂದ ಸಂಭವಿಸಿದ ದುರಂತದಲ್ಲಿ 56 ಮಂದಿ ಮೃತಪಟ್ಟಿದ್ದು, 194 ಜನ ಗಂಭೀರ ಗಾಯಗೊಂಡಿದ್ದರು.

ಶಂಕಿತ ಪಾಕ್ ಡ್ರೋನ್ ಮೇಲೆ ಬಿಎಸ್‌ಎಫ್ ಗುಂಡಿನ ದಾಳಿ

ಜಮ್ಮು: ಇಲ್ಲಿನ ಅಂತರರಾಷ್ಟ್ರೀಯ ಗಡಿ (ಐಬಿ)ಯ ಅರ್ನಿಯ ಪ್ರದೇಶದಲ್ಲಿ ಶನಿವಾರ ಡ್ರೋನ್‌ವೊಂದು ಹಾರಾಟ ನಡೆಸಿರುವ ಬಗ್ಗೆ ವರದಿಯಾಗಿದ್ದು, ಶಂಕಿತ ಪಾಕಿಸ್ತಾನದ ಡ್ರೋನ್ ಮೇಲೆ ಗಡಿಭದ್ರತಾ ಪಡೆ (ಬಿಎಸ್‌ಎಫ್) ಹಲವು ಸುತ್ತು ಗುಂಡು ಹಾರಿಸಿದೆ.

‘ಮುಂಜಾನೆ 4.10 ಸುಮಾರಿಗೆ ಅರ್ನಿಯ ಜನವಸತಿ ಪ್ರದೇಶದಲ್ಲಿ ಶಂಕಿತ ಡ್ರೋನ್‌ನ ಗುನುಗುವ ಶಬ್ದ ಕೇಳಿಸಿತು. ಶಬ್ದದ ದಿಕ್ಕಿನಲ್ಲಿ ಬಿಎಸ್‌ಎಫ್ ಯೋಧರು ಗುಂಡು ಹಾರಿಸಿದರು’ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದರು.

‘ಡ್ರೋನ್ ಹಾರಾಟ ನಡೆಸಿದ ಪ್ರದೇಶದಲ್ಲಿ ಶಸ್ತ್ರಾಸ್ತ್ರಗಳು ಹಾಗೂ ಮಾದಕ ವಸ್ತುಗಳನ್ನು ಬೀಳಿಸಿರುವ ಶಂಕೆಯ ಹಿನ್ನೆಲೆಯಲ್ಲಿ ಸ್ಥಳೀಯ ಪೊಲೀಸರ ನೆರವಿನೊಂದಿಗೆ ಜಂಟಿ ಶೋಧ ಕಾರ್ಯಾಚರಣೆ ನಡೆಸಲಾಯಿತು. ಯಾವುದೇ ವಸ್ತುಗಳು ಪತ್ತೆಯಾಗಲಿಲ್ಲ’ ಎಂದು ಹೇಳಿದರು.

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹16000
ಗರಿಷ್ಠ	₹17800
ಮಾದರಿ	₹17300
ಒಟ್ಟು ಆವಕ (ಕ್ವಿಂಟಲ್)	1692.48

ಮುಂಬೈ ಧಾರಣೆ

ಶೇಂಗಾ
5-3-2022

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	8400-8500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	1520 (1555)
ಪಾಮ್ ವಾರದ ಡೆಲಿವರಿ	1518 (1523)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
52,290 (51,450)
ಬೆಳ್ಳಿ ಕೆ.ಜಿ 69,100 (67,900)
ಆವರಣದಲ್ಲಿ ಹಿಂದಿನ ದಿನದ ಧಾರಣೆ



ಪ್ರಧಾನಿ ಮೋದಿ ಲೋಕಸಭಾ ಕ್ಷೇತ್ರದ ಪಕ್ಕದ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಮೇಲೆ ಎಸ್‌ಪಿ ಕಣ್ಣು

ಮಿರ್ಜಾಪುರ: ಬಿಜೆಪಿಗೆ ಸುಲಭದ ತುತ್ತಲ್ಲ

ಮಿರ್ಜಾಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿನಿಧಿಸುತ್ತಿರುವ ಉತ್ತರ ಪ್ರದೇಶದ ವಾರಾಣಸಿ ಲೋಕಸಭಾ ಕ್ಷೇತ್ರದ ಪಕ್ಕದ ಜಿಲ್ಲೆ ಮಿರ್ಜಾಪುರ. ಈ ಜಿಲ್ಲೆಯ ಎಲ್ಲ ಕ್ಷೇತ್ರಗಳನ್ನು 2017ರ ಚುನಾವಣೆಯಲ್ಲಿ 'ಮೋದಿ ಅಲೆ'ಯಲ್ಲಿ ಸಲೀಸಾಗಿ ಗೆದ್ದುಕೊಂಡಿದ್ದ ಬಿಜೆಪಿಗೆ ಈ ಬಾರಿ ಕಠಿಣ ಸ್ಪರ್ಧೆ ಎದುರಾಗಿದೆ. ಐದು ವಿಧಾನಸಭಾ ಕ್ಷೇತ್ರಗಳಾದ ಚುನಾರ್, ಮರಿಯನ್, ಮಿರ್ಜಾಪುರ ನಗರ, ಮಝುವಾನ್, ಛನ್‌ಬೇಗಳಲ್ಲಿ ಸೋಮವಾರ ಕೊನೆಯ ಹಂತದ ಮತದಾನ ನಡೆಯಲಿದ್ದು, ಸಮಾಜವಾದಿ ಪಕ್ಷವು (ಎಸ್‌ಪಿ) ಪ್ರಬಲ ಪೈಪೋಟಿ ನೀಡುತ್ತಿದೆ.

ಬಿಎಸ್‌ಪಿ ಹಾಗೂ ಕಾಂಗ್ರೆಸ್ ಪಕ್ಷಗಳೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಬಹುಕೋನ ಸ್ಪರ್ಧೆ ಇದೆ. ಜಿಲ್ಲೆಯ ಹಲವು ಜನರಲ್ಲಿ ಆಡಳಿತ ವಿರೋಧಿ ಭಾವನೆ ಎದ್ದು ಕಾಣುತ್ತಿದೆ ಎನ್ನಲಾಗಿದೆ. ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಒಂದು ಕ್ಷೇತ್ರವನ್ನು ನಿಷಾದ್ ಪಕ್ಷಕ್ಕೆ ಬಿಟ್ಟುಕೊಟ್ಟಿದೆ.

ಪ್ರಾದೇಶಿಕ ಪಕ್ಷಗಳಾದ ಅಪ್ನಾ ದಳ (ಕಮೆರವಾದಿ) ಹಾಗೂ ಓಂಪ್ರಕಾಶ್ ರಾಜ್‌ಭರ್ ನೇತೃತ್ವದ ಸುಹೇಲ್‌ದೇವ್ ಭಾರತ್ ಸಮಾಜ ಪಾರ್ಟಿ (ಎಸ್‌ಬಿಎಸ್‌ಪಿ) ಜೊತೆ ಮೈತ್ರಿ ಮಾಡಿಕೊಂಡು ಕಣಕ್ಕೆ ಧುಮುಕಿರುವ ಅಖಿಲೇಶ್ ಯಾದವ್, 2017ರಲ್ಲಿ ಬಿಜೆಪಿಗೆ ಸಿಕ್ಕಿದ್ದ ಗೆಲುವನ್ನು ಈ ಬಾರಿ ಕಿತ್ತುಕೊಳ್ಳಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆ.

> **ವಿಂಧ್ಯ ಯೋಜನೆಗಾಗಿ ಜನರು ತಮ್ಮ ಮನೆಗಳನ್ನು ಬಿಟ್ಟುಕೊಡಬೇಕಾದ ಸಂದರ್ಭ ಎದುರಾಗಿದ್ದಾಗ, ಬಿಜೆಪಿ ಶಾಸಕ ರತ್ನಾಕರ್ ಮಿಶ್ರಾ ಅವರು ಸ್ಥಳೀಯರ ಬೆಂಬಲಕ್ಕೆ ಬರಲಿಲ್ಲ**
> **ಮಿರ್ಜಾಪುರದ ಸ್ಥಳೀಯ**

> **ಜನರಿಗೆ ಏನೇ ಅಸಮಾಧಾನವಿದ್ದರೂ ಮೋದಿ ಅವರ ರ‍್ಯಾಲಿ ಬಳಿಕ ಎಲ್ಲ ಸರಿಯಾಗಲಿದೆ. ಎಸ್‌ಪಿ ಅವಧಿಯಲ್ಲಿದ್ದ ಗೂಂಡಾಗಿರಿಯ ಕರಾಳ ದಿನಗಳನ್ನು ಮತ್ತೆ ಎದುರಿಸಲು ಜನರು ಸಿದ್ಧರಿಲ್ಲ**
> **ಮನೋಜ್ ಜೈಸ್ವಾಲ್**
> ನಗರ ಪರಿಷತ್ ಅಧ್ಯಕ್ಷ


ಮಿರ್ಜಾಪುರದಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹಾಗೂ ಕೇಂದ್ರ ಸಚಿವೆ ಅನುಪ್ರಿಯಾ ಪಟೇಲ್ ಭಾಗಿಯಾಗಿದ್ದರು–ಪಿಟಿಐ ಚಿತ್ರ

ಹಿಂದಿನ ಚುನಾವಣೆಯಲ್ಲಿ ವಾರಾಣಸಿಯ ಎಲ್ಲ ಎಂಟು ವಿಧಾನ ಸಭಾ ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿತ್ತು.

ಹಲವು ವಿಚಾರಗಳು ಚುನಾವಣೆಯಲ್ಲಿ ಪ್ರಭಾವ ಬೀರಲಿವೆ. ವಾರಾಣಸಿಯಿಂದ 50 ಕಿಲೋಮೀಟರ್ ದೂರದಲ್ಲಿರುವ ವಿಂಧ್ಯಾಚಲ ದೇವಸ್ಥಾನದಿಂದ ಮಿರ್ಜಾಪುರ ಹೆಸರಾಗಿದೆ. ಕಾಶಿ ವಿಶ್ವನಾಥ ಕಾರಿಡಾರ್ ಮಾದರಿಯಲ್ಲಿ, ವಿಂಧ್ಯ ಯೋಜನೆಯಡಿ ಸ್ಥಳೀಯರ 930 ಮನೆಗಳನ್ನು ತೆರವು ಮಾಡಲಾಗಿತ್ತು. ಈ ಕಾರಣಕ್ಕೆ ಸ್ಥಳೀಯ ಬಿಜೆಪಿ ಮುಖಂಡರು ಹಾಗೂ ರಾಜ್ಯ ಸರ್ಕಾರದ ಮೇಲೆ ಇಲ್ಲಿನ ಜನ ಮುನಿಸಿಕೊಂಡಿದ್ದಾರೆ ಎನ್ನಲಾಗಿದೆ.

ಯೋಜನೆಗಾಗಿ ಜಾಗ ಬಿಟ್ಟುಕೊಟ್ಟಿದ್ದ ಮನೆ ಮಾಲೀಕರಿಗೆ ಮಾರುಕಟ್ಟೆ ದರಕ್ಕಿಂತ ಕಡಿಮೆ ಹಣ ನೀಡಲಾಗಿದೆ ಎಂದು ಶಿವರಾಮ್ ಮಿಶ್ರಾ ಎಂಬುವರು ಹೇಳುತ್ತಾರೆ. ರಸ್ತೆ ವಿಸ್ತರಣೆಗಾಗಿ ಬ್ರಾಹ್ಮಣರು ಹಾಗೂ ವೈಶ್ಯರ ಮನೆಗಳನ್ನು ತೆರವು ಮಾಡಲಾಗಿದೆ. ಆದರೆ ಠಾಕೂರ್ ಸಮುದಾಯಕ್ಕೆ ಸೇರಿದವರ ಮನೆಗಳನ್ನು ಜಾಣ್ಮೆಯಿಂದ ಕೈಬಿಡಲಾಗಿದೆ ಎಂದು ಹೆಸರು ಹೇಳಲಿಚ್ಛಿಸದ ಸ್ಥಳೀಯರೊಬ್ಬರು ಆರೋಪಿಸುತ್ತಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಠಾಕೂರ್ ಸಮುದಾಯಕ್ಕೆ ಸೇರಿದವರು.

ಬೆಲೆ ಏರಿಕೆ ಪ್ರಮುಖ ಸಮಸ್ಯೆ ಎಂದಿರುವ ಮುಷ್ತಾಕ್ ಅಹ್ಮದ್ ಮತ್ತು ಗೋಬಿನ್ ಅಹ್ಮದ್ ಅವರು, ಬಿಜೆಪಿಗೆ ಹೋಲಿಸಿದರೆ ಎಸ್‌ಪಿ ಆಡಳಿತ ಉತ್ತಮವಾಗಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಖಿಲೇಶ್ ಅವರನ್ನು ಮತ್ತೆ ಮುಖ್ಯಮಂತ್ರಿಯನ್ನಾಗಿ ನೋಡುವ ಅಭಿಲಾಷೆ ಇಲ್ಲಿನ ಜನರದ್ದಾಗಿದ್ದು, ಮಿರ್ಜಾಪುರದಲ್ಲಿ ಎಸ್‌ಪಿ ಖಂಡಿತವಾಗಿ ಗೆಲ್ಲಲಿದೆ ಎಂದು ಪಕ್ಷದ ಕಾರ್ಯಕರ್ತರು ವಿಶ್ವಾಸ ವ್ಯಕ್ತಪಡಿಸುತ್ತಾರೆ.


ನುಡಿ-ಕಿಡಿ


ತಕ್ಷಣವೇ ನಿಮ್ಮ ವಾಹನದ ಪೆಟ್ರೋಲ್ ಟ್ಯಾಂಕ್‌ಗಳನ್ನು ತುಂಬಿಸಿ. ಮೋದಿ ಸರ್ಕಾರದ ಚುನಾವಣಾ ಕೊಡುಗೆ ಶೀಘ್ರ ಕೊನೆಯಾಗಲಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ


ರಾಜಕೀಯ ವಿರೋಧಿಗಳನ್ನು ಹಣಿಯಲು ಅಕ್ರಮವಾಗಿ ದೂರವಾಣಿ ಕದ್ದಾಲಿಕೆ ಮಾಡುವ ಮಹಾರಾಷ್ಟ್ರ ಮಾದರಿಯನ್ನು ಫಲಿತಾಂಶ ಪ್ರಕಟವಾಗಬೇಕಿರುವ ಗೋವಾದಲ್ಲೂ ಅನುಸರಿಸಲಾಗುತ್ತಿದೆ. ಮಾರ್ಚ್ 10ರಂದು ಫಲಿತಾಂಶ ಪ್ರಕಟವಾಗಲಿರುವ ಉತ್ತರ ಪ್ರದೇಶದಲ್ಲೂ ಈ ಮಾದರಿ ಕೆಲಸ ಮಾಡಬಹುದು

ಸಂಜಯ್ ರಾವುತ್, ಶಿವಸೇನಾ ವಕ್ತಾರ


ಗೂಂಡಾಗಳು ಈ ಬಾರಿಯ ಚುನಾವಣೆಯಲ್ಲಿ ಗೆಲ್ಲದಂತೆ ನೋಡಿಕೊಳ್ಳಿ. ತಮ್ಮ ಡಿಎನ್‌ಎಯಲ್ಲಿ 'ಸೇವೆಯನ್ನೇ ಮೌಲ್ಯ' ಎಂದು ಅಳವಡಿಸಿಕೊಂಡಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ. ದೋಚುವವರು ಬೇಡ, ನೀಡುವವರನ್ನು ಆಯ್ಕೆ ಮಾಡಿ. ಕೆನ್ನೆಗೆ ಹೊಡೆಯುವವರನ್ನು ಆಯ್ಕೆ ಮಾಡಬೇಡಿ. ಹಾಗೆ ಮಾಡಿದವರನ್ನು ಜೈಲಿಗಟ್ಟುವವರನ್ನು ಚುನಾಯಿಸಿ

ಅಮಿತ್ ಶಾ, ಕೇಂದ್ರ ಗೃಹಸಚಿವ


ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ತೆರವು ಮಾಡುವ ಕಾರ್ಯಾಚರಣೆಯನ್ನೂ ಪ್ರತಿಪಕ್ಷಗಳು ರಾಜಕೀಯಕ್ಕೆ ಬಳಸಿಕೊಳ್ಳುತ್ತಿವೆ. ಸ್ಥಳೀಯ ಸರಕು ಬಳಸುವ ಅಭಿಯಾನ ಹಾಗೂ ಸ್ವಚ್ಛ ಭಾರತ ಅಭಿಯಾನಗಳನ್ನೂ ವಂಶಾಡಳಿತವಾದಿಗಳು ಲೇವಡಿ ಮಾಡಿದರು

ನರೇಂದ್ರ ಮೋದಿ, ಪ್ರಧಾನಿ

ಬಿಜೆಪಿ ಸಂಸದೆ ರೀಟಾ ಪುತ್ರ ಎಸ್‌ಪಿ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಲಖನೌ: ಬಿಜೆಪಿ ಸಂಸದೆ ರೀಟಾ ಬಹುಗುಣ ಜೋಷಿ ಅವರ ಪುತ್ರ ಮಯಂಕ್ ಜೋಷಿ ಅವರು ಸಮಾಜವಾದಿ ಪಕ್ಷಕ್ಕೆ (ಎಸ್‌ಪಿ) ಶನಿವಾರ ಸೇರ್ಪಡೆಯಾದರು. ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಕೊನೆಯ ಹಂತದ ಮತದಾನಕ್ಕೆ ಎರಡೇ ದಿನ ಬಾಕಿಯಿರುವಾಗ ಅವರು ಪಕ್ಷಾಂತರ ಮಾಡಿದ್ದಾರೆ.

ಮಯಂಕ್ ಅವರು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರನ್ನು ಕೆಲವು ದಿನಗಳ ಹಿಂದೆ ಭೇಟಿಯಾಗಿದ್ದರು. ಆಜಂಗಢದಲ್ಲಿ ಎಸ್‌ಪಿ ಸಮಾವೇಶದಲ್ಲೂ ಅವರು ಭಾಗಿಯಾಗಿದ್ದರು. ಮಯಂಕ್ ಅವರು ಎಸ್‌ಪಿ ಸೇರಲಿದ್ದಾರೆ ಎಂದು ಅಖಿಲೇಶ್ ಅವರು ತಮ್ಮ ಭಾಷಣದಲ್ಲಿ ಘೋಷಿಸಿದ್ದರು. ಮಯಂಕ್ ಸೇರ್ಪಡೆಯಾದರೆ ಎಸ್‌ಪಿ ಬಲ ವೃದ್ಧಿಸಲಿದೆ ಎಂದು ಹೇಳಿದ್ದರು.

ಮಯಂಕ್ ಅವರಿಗೆ ಲಖನೌ ಕಂಟೋನ್ಮೆಂಟ್ ಕ್ಷೇತ್ರದ ಟಿಕೆಟ್ ನೀಡುವುದಾಗಿ ಆರಂಭದಲ್ಲಿ ಘೋಷಿಸಿದ್ದ ಅಖಿಲೇಶ್, ನಂತರ ನಿರಾಕರಿಸಿದ್ದರು.

> **ರಾಜೀನಾಮೆಗೆ ಮುಂದಾಗಿದ್ದ ರೀಟಾ**
>
> ರೀಟಾ ಬಹುಗುಣ ಜೋಷಿ ಅವರು ತಮ್ಮ ಪುತ್ರನಿಗೆ ಲಖನೌ ಕಂಟೋನ್ಮೆಂಟ್ ಕ್ಷೇತ್ರದ ಟಿಕೆಟ್ ನೀಡುವಂತೆ ಕೇಳಿದ್ದರು. ಅವರ ಬೇಡಿಕೆಯನ್ನು ಬಿಜೆಪಿ ಒಪ್ಪಿರಲಿಲ್ಲ. ಮಯಂಕ್‌ಗೆ ಟಿಕೆಟ್ ನೀಡಿದರೆ, ತಾವು ಪ್ರತಿನಿಧಿಸುತ್ತಿರುವ ಪ್ರಯಾಗ್ ರಾಜ್ ಲೋಕಸಭಾ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಸ್ತಾವವನ್ನು ರೀಟಾ ಪಕ್ಷದ ಮುಂದೆ ಇರಿಸಿದ್ದರು ಎನ್ನಲಾಗಿದೆ. 'ಮಯಂಕ್‌ಗೆ ಟಿಕೆಟ್ ನೀಡಿದರೆ, ಕುಟುಂಬದ ಒಬ್ಬರಿಗೆ ಸ್ಥಾನ ಎಂಬ ಪಕ್ಷದ ನಿಯಮ ಉಲ್ಲಂಘನೆಯಾಗುತ್ತದೆ. ಹೀಗಾಗಿ ರಾಜೀನಾಮೆ ನೀಡುತ್ತೇನೆ' ಎಂದು ಜೋಷಿ ಹೇಳಿದ್ದರು.

ಸಂಜೆ 5 ಗಂಟೆವರೆಗೆ ಶೇ 76.62ರಷ್ಟು ಮತದಾನ; ಹಲವೆಡೆ ಘರ್ಷಣೆ

ಮಣಿಪುರ: ಗುಂಡೇಟಿಗೆ ಇಬ್ಬರ ಬಲಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಾಂಗ್ರೆಸ್, ಬಿಜೆಪಿ ಹಾಗೂ ಎನ್‌ಪಿಪಿ ಕಾರ್ಯಕರ್ತರ ನಡುವೆ ಘರ್ಷಣೆ
- ಇವಿಎಂ ಹಾನಿಗೊಂಡ 12 ಪ್ರಕರಣ ವರದಿ
- ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ ಮಾಹಿತಿ

ಇಂಫಾಲ್: ಹಿಂಸಾಚಾರದ ನಡುವೆಯೇ ಮಣಿಪುರ ವಿಧಾನಸಭೆಗೆ ಶನಿವಾರ ಕೊನೆಯ ಹಂತದ ಮತದಾನ ನಡೆಯಿತು. ಸಂಜೆ 5 ಗಂಟೆವರೆಗೆ ಶೇ 76.62ರಷ್ಟು ಮತದಾನವಾಗಿದೆ. ಮತದಾನ ಆರಂಭಕ್ಕೂ ಮುನ್ನ ಹಾಗೂ ನಂತರ ಹಲವು ಭಾಗಗಳಲ್ಲಿ ಘರ್ಷಣೆ ನಡೆದಿವೆ.

ಆರು ಜಿಲ್ಲೆಗಳ 22 ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆಯಿತು. ಕಾಂಗ್ರೆಸ್ 'ಭದ್ರಕೋಟೆ' ಎನಿಸಿರುವ ತೌಬಲ್ ಜಿಲ್ಲೆಯ ವಾಂಗ್‌ಜಿಂಗ್ ತೆಂಥ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತದಾನ ಆರಂಭವಾಗುವ ಮುನ್ನ, ಅಂದರೆ ಬೆಳಿಗ್ಗೆ 6 ಗಂಟೆಯ ಸಮಯದಲ್ಲಿ ಅಪರಿಚಿತರ ಗುಂಡೇಟಿಗೆ ಬಿಜೆಪಿ ಕಾರ್ಯಕರ್ತರೊಬ್ಬರು ಬಲಿಯಾಗಿದ್ದಾರೆ. ಗುಂಡೇಟಿನಿಂದ ಗಾಯಗೊಂಡಿದ್ದ ಎಲ್. ಅಮುಬಾ ಸಿಂಗ್ ಅವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

> **ಕಾಂಗ್ರೆಸ್ ಪಕ್ಷ ಈ ಬಾರಿ ಮಣಿಪುರದಲ್ಲಿ ಸರ್ಕಾರ ರಚಿಸಲಿದೆ. ಬಹುಮತಕ್ಕೆ ಒಂದೆರಡು ಸ್ಥಾನ ಕೊರತೆಯಾದಲ್ಲಿ, ಮೈತ್ರಿ ಮಾಡಿಕೊಳ್ಳಲಾಗುವುದು**
> **ಒಕ್ರಮ್ ಐಬೊಬಿ ಸಿಂಗ್**
> ಕಾಂಗ್ರೆಸ್ ಮುಖಂಡ

ಸೇನಾಪತಿ ಜಿಲ್ಲೆಯ ಕರೋಂಗ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ. ನಗಂಜು ಎಂಬ ಗ್ರಾಮದಲ್ಲಿ ಇವಿಎಂ ಹೊತ್ತೊಯ್ಯುತ್ತಿದ್ದ ಇಬ್ಬರ ಮೇಲೆ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದ್ದಾರೆ. ಗುಂಡೇಟಿನಿಂದ ಒಬ್ಬ ಮೃತಪಟ್ಟಿದ್ದಾರೆ. ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಬಿಜೆಪಿ ಅಭ್ಯರ್ಥಿ ಆಗ್ರಹಿಸಿದ್ದಾರೆ.


ಸೇನಾಪತಿ ಜಿಲ್ಲೆಯ ತೋಬಿಫಿ ಗ್ರಾಮದಲ್ಲಿ ಚುನಾವಣಾ ಹಿಂಸಾಚಾರದ ವೇಳೆ ವಾಹನವೊಂದು ಜಖಂಗೊಂಡಿದೆ–ಪಿಟಿಐ ಚಿತ್ರ

ಬಿಜೆಪಿಯಿಂದ ಉಚ್ಚಾಟನೆಗೊಂಡಿದ್ದ ಮುಖಂಡ ಬಿಜೈ ಅವರ ಮನೆಯ ಹೊರಗಡೆ ಕಚ್ಚಾ ಬಾಂಬ್ ಸ್ಫೋಟಗೊಂಡಿದೆ. ಇಂಫಾಲ್ ಪಶ್ಚಿಮ ಜಿಲ್ಲೆಯ ಲಾಂಫಲ್ ಪ್ರದೇಶದಲ್ಲಿ ಶುಕ್ರವಾರ ತಡರಾತ್ರಿ ಈ ಘಟನೆ ನಡೆದಿದೆ. ಬೈಕ್‌ನಲ್ಲಿ ಬಂದಿದ್ದ ಇಬ್ಬರು ಮುಸುಕುಧಾರಿಗಳು ಬಾಂಬ್ ಎಸೆದಿದ್ದಾರೆ. ಬಾಂಬ್ ಸ್ಫೋಟದಲ್ಲಿ ಯಾರೂ ಗಾಯಗೊಂಡಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡನೇ ಹಾಗೂ ಕೊನೆಯ ಹಂತದ ಚುನಾವಣಾ ಕಣದಲ್ಲಿದ್ದವರ ಪೈಕಿ ಕಾಂಗ್ರೆಸ್ ಮುಖಂಡ ಒಕ್ರಮ್ ಐಬೊಬಿ ಸಿಂಗ್ ಅವರು ಪ್ರಮುಖರಾಗಿದ್ದಾರೆ. ಫೆ.28ರಂದು ನಡೆದ ಮೊದಲ ಹಂತದ ಮತದಾನದಲ್ಲೂ ಹಿಂಸಾಚಾರ ನಡೆದಿತ್ತು. ಶೇ 88.63ರಷ್ಟು ಮತದಾನವಾಗಿತ್ತು.

ಉತ್ತರ ಪ್ರದೇಶ: ಎರಡು ತಿಂಗಳ ಚುನಾವಣಾ ಪ್ರಚಾರಕ್ಕೆ ತೆರೆ

ಮುಖ್ಯಾಂಶಗಳು
- 613 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ
- 2.06 ಕೋಟಿ ಜನರಿಗೆ ಮತದಾನದ ಹಕ್ಕು

ಲಖನೌ (ಪಿಟಿಐ): ಉತ್ತರ ಪ್ರದೇಶದ 54 ವಿಧಾನಸಭಾ ಕ್ಷೇತ್ರಗಳ ಚುನಾವಣಾ ಪ್ರಚಾರಕ್ಕೆ ಶನಿವಾರ ಸಂಜೆ ತೆರೆ ಬಿದ್ದಿದೆ. ಈ ಮೂಲಕ ಸತತ ಎರಡು ತಿಂಗಳ ಸುದೀರ್ಘ ಚುನಾವಣಾ ಪ್ರಚಾರ ಕೊನೆಗೊಂಡಂತಾಗಿದೆ. ಉತ್ತರ ಪ್ರದೇಶ ವಿಧಾನಸಭೆಯ ಏಳನೇ ಹಾಗೂ ಕೊನೆಯ ಹಂತದ ಮತದಾನ ಸೋಮವಾರ ನಡೆಯಲಿದೆ. ಮಾರ್ಚ್ 10ರಂದು ಮತ ಎಣಿಕೆ ನಡೆಯಲಿದೆ. ಉತ್ತರ ಪ್ರದೇಶದ ಜೊತೆ ಗೋವಾ, ಪಂಜಾಬ್, ಉತ್ತರಾಖಂಡ ಹಾಗೂ ಮಣಿಪುರ ವಿಧಾನಸಭೆಯ ಮತ ಎಣಿಕೆಯೂ ನಡೆಯಲಿದೆ.

ಉತ್ತರ ಪ್ರದೇಶದ ಆಡಳಿತಾರೂಢ ಬಿಜೆಪಿ ಹಾಗೂ ಪ್ರತಿಪಕ್ಷಗಳು ಕೋವಿಡ್ ನಿರ್ವಹಣೆ, ಕಾನೂನು ಮತ್ತು ಸುವ್ಯವಸ್ಥೆ, ಆರ್ಥಿಕತೆ, ರಾಷ್ಟ್ರೀಯ ಭದ್ರತೆ, ರೈತರ ಪ್ರತಿಭಟನೆ ವಿಚಾರಗಳನ್ನು ಚುನಾವಣಾ ಪ್ರಚಾರದಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಕೊನೆಯ ಹಂತದ ಪ್ರಚಾರದಲ್ಲಿ ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ರೋಡ್ ಶೋ ನಡೆಸುವ ಮೂಲಕ ಮತಯಾಚನೆ ಮಾಡಿದರು. ದೇಗುಲಗಳ ನಗರದಲ್ಲಿ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಪರವಾಗಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಮತ ಕೇಳಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಹೋದರ ರಾಹುಲ್ ಗಾಂಧಿ ಅವರ ಒಡಗೂಡಿ ನಾಲ್ಕು ದಿನಗಳಿಂದ ವಾರಾಣಸಿಯಲ್ಲಿ ಪ್ರಚಾರ ನಡೆಸಿದ್ದಾರೆ.

54ರ ಪೈಕಿ 51 ಕ್ಷೇತ್ರಗಳಲ್ಲಿ ಶನಿವಾರ ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಕೊನೆಗೊಂಡಿತು. ನಕ್ಸಲ್‌ಪೀಡಿತ ಕ್ಷೇತ್ರಗಳಾದ ಚಾಕಿಯಾ, ರಾಬರ್ಟ್ಸ್‌ಗಂಜ್ ಹಾಗೂ ದುದ್ಧಿಯಲ್ಲಿ ಸಂಜೆ 4 ಗಂಟೆಗೆ ಪ್ರಚಾರಕ್ಕೆ ತೆರೆ ಬಿದ್ದಿತು.

ಕೃಷ್ಣಪ್ಪ ಗೌತಮ್‌ಗೆ 5 ವಿಕೆಟ್ ಗೊಂಚಲು; ಪುದುಚೇರಿಗೆ ಫಾಲೊ ಆನ್ ನೀಡಿದ ಮನೀಷ್ ಬಳಗ

ಮತ್ತೊಂದು ಜಯದ ಸನಿಹ ಕರ್ನಾಟಕ

ಪ್ರಜಾವಾಣಿ ವಾರ್ತೆ

ಚೆನ್ನೈ: ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮತ್ತೊಂದು ಜಯದ ಹೊಸ್ತಿಲಲ್ಲಿ ಬಂದು ನಿಂತಿದೆ.

ಎಸ್‌ಎಸ್‌ಎನ್ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಸಿ ಗುಂಪಿನ ಮೂರನೇ ಪಂದ್ಯದ ಮೂರನೇ ದಿನವಾದ ಶನಿವಾರ ಕೃಷ್ಣಪ್ಪ ಗೌತಮ್ (86ಕ್ಕೆ5) ದಾಳಿಗೆ ಪುದುಚೇರಿ ತಂಡವು ಮೊದಲ ಇನಿಂಗ್ಸ್‌ನಲ್ಲಿ 212 ರನ್‌ಗಳ ಮುನ್ನಡೆ ಸಾಧಿಸಿತು.

ಎದುರಾಳಿ ತಂಡದ ಮೇಲೆ ಫಾಲೋ ಆನ್ ಕೂಡ ಹೇರಿತು. ದಿನದಾಟದ ಮುಕ್ತಾಯಕ್ಕೆ ಪುದುಚೇರಿ ತಂಡವು 23 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 62 ರನ್ ಗಳಿಸಿದೆ. ಕೊನೆಯ ದಿನವಾದ ಭಾನುವಾರ ಬೇಗನೆ ಆರು ವಿಕೆಟ್‌ಗಳನ್ನು ಗಳಿಸಿದರೆ ಕರ್ನಾಟಕವು ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಇಡಲಿದೆ.

ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 453 ರನ್‌ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಅದಕ್ಕುತ್ತರವಾಗಿ ಪುದುಚೇರಿ ತಂಡಕ್ಕೆ 77.4 ಓವರ್‌ಗಳಲ್ಲಿ 241 ರನ್ ಗಳಿಸಲಷ್ಟೇ ಸಾಧ್ಯವಾಯಿತು. ನಾಯಕ ದಾಮೋದರನ್ ರೋಹಿತ್ ಶತಕ ಗಳಿಸಿದರು.

ಗೌತಮ್ ಮೋಡಿ: ಶುಕ್ರವಾರ ದಿನದಾಟದ ಕೊನೆಗೆ ಪುದುಚೇರಿ ತಂಡವು 18 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 52 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ನಯನ್ ಕಂಗಯನ್ (ಬ್ಯಾಟಿಂಗ್ 24) ಮತ್ತು ಗೊನ್ನಬಟ್ಟುಲಾ ಚಿರಂಜೀವಿ (ಬ್ಯಾಟಿಂಗ್ 12) ಮೂರನೇ ದಿನ ಬೆಳಿಗ್ಗೆ ಆಟ ಮುಂದುವರಿಸಿದರು.


ಕೃಷ್ಣಪ್ಪ ಗೌತಮ್ ಬೌಲಿಂಗ್ ಶೈಲಿ



ಪ್ರಸಿದ್ಧ ಕೃಷ್ಣ

ರಾಯಚೂರು ಹುಡುಗ ವಿದ್ಯಾಧರ್ ಪಾಟೀಲ ಬೇಗನೆ ಯಶಸ್ಸು ಗಳಿಸಿದರು. ಅವರು ಕಂಗಯನ್ ವಿಕೆಟ್ ಗಳಿಸಿದರು. ಇದರ ನಂತರ ಗೌತಮ್ ಮೋಡಿಯಾಟ ಶುರುವಾಯಿತು. ಚಿರಂಜೀವಿ, ಪವನ್ ದೇಶಪಾಂಡೆ ಅವರ ವಿಕೆಟ್‌ಗಳನ್ನು ಗಳಿಸಿ ಮಧ್ಯಮಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ಪದಾರ್ಪಣೆ ಪಂದ್ಯ ಆಡುತ್ತಿರುವ ವಿದ್ವತ್ ಕಾವೇರಪ್ಪ ಎಸೆತದಲ್ಲಿ ಪಾರಸ್ ಡೋಗ್ರಾ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಇದರಿಂದಾಗಿ ತಂಡವು ಬೇಗನೆ ಕುಸಿಯುವ ಆತಂಕ ಎದುರಿಸಿತ್ತು. 113 ರನ್‌ಗಳಿಗೆ ಆರು ವಿಕೆಟ್‌ಗಳು ಪತನವಾಗಿದ್ದವು.

ಆದರೆ ಈ ಹಂತದಲ್ಲಿ ದಿಟ್ಟೆದೆಯ ಬ್ಯಾಟಿಂಗ್ ಮಾಡಿದ ರೋಹಿತ್ (ಔಟಾಗದೆ 100; 133ಎ, 4X15, 6X2) ಮತ್ತು ಎಸ್ ಕಾರ್ತಿಕ್ (19; 43ಎ) ಏಳನೇ ವಿಕೆಟ್ ಜೊತೆಯಾಟದಲ್ಲಿ 40 ರನ್‌ಗಳನ್ನು ಸೇರಿಸಿದರು. ಈ ಜೊತೆಯಾಟವನ್ನೂ ಗೌತಮ್ ಮುರಿದರು. ಕಾರ್ತಿಕ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಆಫ್‌ಸ್ಪಿನ್ನರ್ ಗೌತಮ್ ಸಂಭ್ರಮಿಸಿದರು.

ಆದರೂ ಛಲ ಬಿಡದ ರೋಹಿತ್ ಆಟ ರಂಗೇರಿತು. ಸಾಗರ್ ತ್ರಿವೇದಿ (29; 39ಎ) ಅವರೊಂದಿಗೆ ಎಂಟನೇ ವಿಕೆಟ್ ಜೊತೆಯಾಟದಲ್ಲಿ 77 ರನ್ ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು ದ್ವಿಶತಕದ ಗಡಿ ದಾಟಿತು. ಆದರೆ ಈ ಜೊತೆಯಾಟಕ್ಕೂ ಗೌತಮ್ ಕಡಿವಾಣ ಹಾಕಿದರು. ಶ್ರೇಯಸ್ ಗೋಪಾಲ್ ಪಡೆದ ಕ್ಯಾಚ್‌ಗೆ ಸಾಗರ್ ತ್ರಿವೇದಿ ಪೆವಿಲಿಯನ್‌ಗೆ ಮರಳಿದರು.

ಸುಬೋಧ ಬಾಟಿ ವಿಕೆಟ್ ಕೂಡ ಗಳಿಸಿದ ಗೌತಮ್ ಇನಿಂಗ್ಸ್‌ಗೆ ತೆರೆಯೆಳೆದರು. ಎರಡನೇ ಇನಿಂಗ್ಸ್ ಆರಂಭಿಸಿದ ಪುದುಚೇರಿಗೆ ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಪೆಟ್ಟು ಕೊಟ್ಟರು. ಇದರಿಂದಾಗಿ ಕೇವಲ 24 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡ ತಂಡದ ಗಾಯಕ್ಕೆ ಶ್ರೇಯಸ್ ಗೋಪಾಲ್ ಮತ್ತು ವಿದ್ಯಾಧರ್ ತಲಾ ಒಂದು ವಿಕೆಟ್ ಪಡೆದು ಬರೆ ಎಳೆದರು. ಟೂರ್ನಿಯ ಎರಡನೇ ಪಂದ್ಯದಲ್ಲಿ ಜಮ್ಮು ಕಾಶ್ಮೀರ ವಿರುದ್ಧ ಗೆದ್ದಿದ್ದ ತಂಡವು ಈಗ ಇನ್ನೊಂದು ಜಯದ ಕನಸು ಕಾಣುತ್ತಿದೆ.

ಸ್ಕೋರ್ ಕಾರ್ಡ್

ಕರ್ನಾಟಕ ಮೊದಲ ಇನಿಂಗ್ಸ್ 8ಕ್ಕೆ 453 ಡಿಕ್ಲೇರ್ಡ್ (132.2 ಓವರ್)
ಪುದುಚೇರಿ ಮೊದಲ ಇನಿಂಗ್ಸ್ 241 (77.4 ಓವರ್)
(ಶನಿವಾರ 18 ಓವರ್‌ಗಳಲ್ಲಿ 2ಕ್ಕೆ 52)
ನೇಯನ್ ಸಿ ಗೌತಮ್ ಬಿ ವಿದ್ಯಾಧರ್ 25 (64ಎ, 4X4), ಚಿರಂಜೀವಿಸಿ ದೇವದತ್ತ ಬಿ ಗೌತಮ್ 14 (52ಎ, 6X1), ಪವನ್ ಸಿ ಶರತ್ ಬಿ ಗೌತಮ್ 29 (83ಎ, 4X1, 6X2), ಪಾರಸ್ ಎಲ್‌ಬಿಡಬ್ಲ್ಯು ಬಿ ಕಾವೇರಪ್ಪ 5 (12ಎ, 4X1), ದಾಮೋದರನ್ ಔಟಾಗದೆ 100 (133ಎ, 4X15, 6X2), ಕಾರ್ತಿಕ್ ಎಲ್‌ಬಿಡಬ್ಲ್ಯು ಬಿ ಗೌತಮ್ 19 (43ಎ, 4X4), ಸಾಗರ್ ತ್ರಿವೇದಿ ಸಿ ಗೋಪಾಲ್ ಬಿ ಗೌತಮ್ 29 (39ಎ, 4X5, 6X1), ಆಶಿತ್ ಬಿ ಪ್ರಸಿದ್ಧ ಕೃಷ್ಣ 0 (3ಎ), ಸುಬೋಧ್ ಎಲ್‌ಬಿಡಬ್ಲ್ಯು ಬಿ ಗೌತಮ್ 0 (7ಎ)
ಇತರೆ (ಬೈ 4, ಲೆಗ್‌ಬೈ 1) 5
ವಿಕೆಟ್ ಪತನ: 3-55 (ನೇಯನ್ ಶ್ಯಾಮ್ ಕಂಗಯನ್, 21.5), 4-60 (ಗೊನ್ನಬಟ್ಟುಲಾ ಚಿರಂಜೀವಿ, 29.1), 5-67 (ಪಾರಸ್ ಡೋಗ್ರಾ, 32.4), 6-113 (ಪವನ್ ದೇಶಪಾಂಡೆ, 45.2), 7-157 (ಎಸ್. ಕಾರ್ತಿಕ್, 59.6), 8-227 (ಸಾಗರ್ ತ್ರಿವೇದಿ, 73.6), 9-232 (ಆಶಿತ್ ರಾಜೀವ್, 74.5), 10-241 (ಸುಬೋಧ್ ಭಾಟಿ, 77.4)
ಬೌಲಿಂಗ್: ಪ್ರಸಿದ್ಧ ಕೃಷ್ಣ 18–6–42–2, ವಿದ್ಯಾಧರ್ ಪಾಟೀಲ 13–2–41–2, ವಿದ್ವತ್ ಕಾವೇರಪ್ಪ 12–3–39–1, ಶ್ರೇಯಸ್ ಗೋಪಾಲ್ 8–2–28–0, ಕೃಷ್ಣಪ್ಪ ಗೌತಮ್ 26.4–6–86–5
ಪುದುಚೇರಿ ಎರಡನೇ ಇನಿಂಗ್ಸ್ (ಫಾಲೋ ಆನ್) 4ಕ್ಕೆ 62 (23 ಓವರ್)
ನೇಯನ್ ಸಿ ಶರತ್ ಬಿ ಪ್ರಸಿದ್ಧ 16 (13ಎ, 4X3), ಕೋದಂಡಪಾಣಿ ಸಿ ಗೋಪಾಲ್ ಬಿ ವಿದ್ಯಾಧರ್ 4 (9ಎ, 4X1), ಕಾರ್ತಿಕ್ ಸಿ ಪಾಂಡೆ ಬಿ ಗೋಪಾಲ್ 8 (50ಎ), ಪಾರಸ್ ಸಿ ಶರತ್ ಬಿ ಪ್ರಸಿದ್ಧ 14 (45ಎ, 4X2), ಪವನ್ ಬ್ಯಾಟಿಂಗ್ 3 (9ಎ), ದಾಮೋದರನ್ ಬ್ಯಾಟಿಂಗ್ 10 (12ಎ, 4X1, 6X1)
ಇತರೆ (ಬೈ 6, ವೈಡ್ 1) 7
ವಿಕೆಟ್ ಪತನ: 1-20 (ಕೋದಂಡಪಾಣಿ ಅರವಿಂದ್, 3.3), 2-24 (ನೇಯನ್ ಶ್ಯಾಮ್ ಕಂಗಯನ್, 4.1), 3-47 (ಪಾರಸ್ ಡೋಗ್ರಾ, 18.4), 4-47 (ಎಸ್. ಕಾರ್ತಿಕ್, 19.5)
ಬೌಲಿಂಗ್: ಪ್ರಸಿದ್ಧ ಕೃಷ್ಣ 6–1–31–2, ವಿದ್ಯಾಧರ್ ಪಾಟೀಲ 6–3–9–1, ವಿದ್ವತ್ ಕಾವೇರಪ್ಪ 6–3–6–0, ಕೆ.ವಿ ಸಿದ್ದಾರ್ಥ್ 1–0–5–0, ಶ್ರೇಯಸ್ ಗೋಪಾಲ್ 4–1–5–1

ವಿಶ್ವ ಗುಂಪು 1ರಲ್ಲಿ ಭಾರತದ ಸ್ಥಾನ ಭದ್ರ

ಡೇವಿಸ್ ಕಪ್ ಟೆನಿಸ್: ರೋಹನ್ – ದಿವಿಜ್ ಜಯಭೇರಿ

ನವದೆಹಲಿ (ಪಿಟಿಐ): ರೋಚಕ ಹಣಾಹಣಿಯಲ್ಲಿ ಭಾರತದ ರೋಹನ್ ಬೋಪಣ್ಣ– ದಿವಿಜ್ ಶರಣ್ ಜೋಡಿ ಡೇವಿಸ್ ಕಪ್ ಟೆನಿಸ್ ವಿಶ್ವ ಗುಂಪು ಒಂದರ ಪ್ಲೇ ಆಫ್‌ನಲ್ಲಿ ಡೆನ್ಮಾರ್ಕ್ ಜೋಡಿಯನ್ನು ಶನಿವಾರ ಮಣಿಸಿತು. ಇದರೊಂದಿಗೆ ಭಾರತ ತಂಡವು 3–0 ಮುನ್ನಡೆ ಗಳಿಸಿ ವಿಶ್ವಗುಂಪು 1ರಲ್ಲಿ ಉಳಿದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಶರಣ್ ಮತ್ತು ಕನ್ನಡಿಗ ಬೋಪಣ್ಣ ಡಬಲ್ಸ್ 6-7 (4) 6-4 7-6 (4)ರಿಂದ ಡೆನ್ಮಾರ್ಕ್‌ನ ಫ್ರೆಡರಿಕ್ ನೆಲ್ಸನ್ ಮತ್ತು ಮೈಕೆಲ್ ಟೋರ್ಪ್‌ಗಾರ್ಡ್ ಅವರಿಗೆ ಸೋಲುಣಿಸಿದರು.

ನೆಲ್ಸನ್ ಮತ್ತು ಟೋರ್ಪ್‌ಗಾರ್ಡ್ ಅವರ ಚುರುಕಿನ ಸರ್ವ್‌ಗಳು, ಡೆನ್ಮಾರ್ಕ್‌ಗೆ ಮೊದಲ ಸೆಟ್‌ನಲ್ಲಿ ಗೆಲುವು ಸಾಧಿಸುವಂತೆ ಮಾಡಿದವು. ಆದರೆ ಬೋಪಣ್ಣ– ದಿವಿಜ್ ತೀವ್ರ ಪೈಪೋಟಿಯನ್ನೇ ನೀಡಿದರು. ನೆಲ್ಸನ್ ಸೆಟ್‌ದುದ್ದಕ್ಕೂ ಒಂದೂ ಪಾಯಿಂಟ್ಸ್ ಕೈಚೆಲ್ಲಲಿಲ್ಲ.

ಎರಡು ಮತ್ತು ಮೂರನೇ ಸೆಟ್‌ಗಳಲ್ಲೂ ಡೆನ್ಮಾರ್ಕ್ ಜೋಡಿಯು ತೀವ್ರ ಪೈಪೋಟಿಯೊಡ್ಡಿದರೂ ಪಂದ್ಯವು ಭಾರತದ ಆಟಗಾರರ ಕೈವಶವಾಗುವುದನ್ನು ತಪ್ಪಿಸಲಾಗಲಿಲ್ಲ.



ದಿವಿಜ್ ಶರಣ್ (ಎಡ) ಮತ್ತು ರೋಹನ್ ಬೋಪಣ್ಣ – ಪಿಟಿಐ ಚಿತ್ರ

ವಿಚಾರಣೆ ಸಮಿತಿಗೆ ಎಲ್ಲ ಹೇಳಿರುವೆ: ಸಹಾ

ನವದೆಹಲಿ (ಪಿಟಿಐ): ಪತ್ರಕರ್ತರೊಬ್ಬರು ತಮಗೆ ಬೆದರಿಕೆ ಹಾಕಿರುವ ಪ್ರಕರಣದ ಕುರಿತು ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಅವರು ಶನಿವಾರ ಬಿಸಿಸಿಐ ವಿಚಾರಣೆ ಸಮಿತಿಗೆ ವಿವರಗಳನ್ನು ನೀಡಿದರು. ಮೂರು ಸದಸ್ಯರ ಸಮಿತಿ ವಿಚಾರಣೆ ನಡೆಸಿತು.

'ಸಮಿತಿಗೆ ಎಲ್ಲವನ್ನೂ ಹೇಳಿದ್ದೇನೆ. ಅದನ್ನು ನಿಮ್ಮ ಮುಂದೆ ಬಹಿರಂಗಪಡಿಸಲು ಸಾಧ್ಯವಿಲ್ಲ. ಈ ಸಭೆಯ ಕುರಿತು ಎಲ್ಲಿಯೂ ಮಾತನಾಡದಂತೆ ಬಿಸಿಸಿಐ ಸೂಚಿಸಿದೆ. ಅವರೇ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುವರು' ಎಂದು ಸಹಾ ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿದರು.

ಫೆಬ್ರುವರಿ 23ರಂದು ಟ್ವಿಟರ್‌ನಲ್ಲಿ ಸರಣಿ ಸಂದೇಶಗಳನ್ನು ಪ್ರಕಟಿಸಿದ್ದ ಸಹಾ, ಪತ್ರಕರ್ತರೊಬ್ಬರಿಂದ ತಮಗೆ ಬಂದ ಸಂದೇಶವನ್ನು ಬಹಿರಂಗಪಡಿಸಿದ್ದರು. ಆದರೆ, ಆ ಪತ್ರಕರ್ತನ ಹೆಸರನ್ನು ಬಹಿರಂಗಪಡಿಸಿರಲಿಲ್ಲ.

ಈಚೆಗಷ್ಟೇ ಪ್ರಕಟವಾದ ಬಿಸಿಸಿಐ ಕೇಂದ್ರ ಗುತ್ತಿಗೆಯಲ್ಲಿ ಸಹಾ ಅವರು ಸಿ ಗುಂಪಿಗೆ ಹಿಂಬಡ್ತಿ ಪಡೆದಿದ್ದರು.



ಪ್ರಶಸ್ತಿಯೊಂದಿಗೆ ಕರ್ನಾಟಕದ ಮಹಿಳಾ ತಂಡದವರ ಸಂಭ್ರಮ

ಕ್ರಿಕೆಟ್: ಕರ್ನಾಟಕ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಆವೃತ್ತಿಯ ಚಾಂಪಿಯನ್ ಒಡಿಶಾವನ್ನು ಮಣಿಸಿದ ಕರ್ನಾಟಕ ತಂಡದವರು ಇಂಡಸ್‌ಇಂಡ್ ಬ್ಯಾಂಕ್ ಆಯೋಜಿಸಿದ್ದ ಅಂಧ ಮಹಿಳೆಯರ ರಾಷ್ಟ್ರೀಯ ಟ್ವೆಂಟಿ20 ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿದರು.

ನಗರದ ಆಲ್ಫಿಯಾರ್ ಕ್ರಿಕೆಟ್ ಮೈದಾನದಲ್ಲಿ ಶನಿವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಕರ್ನಾಟಕ ಐದು ವಿಕೆಟ್‌ಗಳಿಂದ ಜಯ ಗಳಿಸಿತು. ಇದು, ಟೂರ್ನಿಯ ಎರಡನೇ ಆವೃತ್ತಿಯಾಗಿತ್ತು.

ಟಾಸ್ ಗೆದ್ದ ಕರ್ನಾಟಕದ ನಾಯಕಿ ವರ್ಷಾ ಯು ಅವರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಒಡಿಶಾ ನಿಗದಿತ 20 ಓವರ್‌ಗಳಲ್ಲಿ ಏಳು ವಿಕೆಟ್ ಕಳೆದುಕೊಂಡು 148 ರನ್ ಗಳಿಸಿತು. ಕರ್ನಾಟಕ 16.5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 150 ರನ್ ಗಳಿಸಿ ಪ್ರಶಸ್ತಿಗೆ ಮುತ್ತಿಕ್ಕಿತು.

ಹಿಂದಿನ ನಾಲ್ಕು ಪಂದ್ಯಗಳಲ್ಲಿ ಕರ್ನಾಟಕದ ಪರ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದ್ದ ಆರಂಭಿಕ ಬ್ಯಾಟರ್ ಗಂಗಾ ಅವರು ಫೈನಲ್‌ನಲ್ಲೂ ಅಮೋಘ ಆಟವಾಡಿ 43 ರನ್ ಗಳಿಸಿದರು. ನಾಯಕಿ ವರ್ಷಾ 62 ರನ್ ಗಳಿಸಿ ಔಟಾಗದೇ ಉಳಿದರು.

ಸಂಕ್ಷಿಪ್ತ ಸ್ಕೋರು: ಒಡಿಶಾ ಮಹಿಳೆಯರು: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 148 (ಜಿಲಿ ಬಿರುಹಾ 31, ರಚನಾ ಜನಾ 26; ಗಂಗಾ 10ಕ್ಕೆ1); ಕರ್ನಾಟಕ ಮಹಿಳೆಯರು: 16.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 150 (ಗಂಗಾ 43, ವರ್ಷಾ ಯು. 62; ರಚನಾ ಜನಾ 32ಕ್ಕೆ1). ಫಲಿತಾಂಶ: ಕರ್ನಾಟಕಕ್ಕೆ 5 ವಿಕೆಟ್ಗಗಳ ಜಯ; ಪ್ರಶಸ್ತಿ.

ಇನ್ವಿಟೇಷನ್ ಕಪ್ ರೇಸ್

ಝೂಕರೆಲಿ ಗೆಲ್ಲುವ ನಿರೀಕ್ಷೆ

ಟರ್ಫ್ ಇನ್ವಿಟೇಷನ್ ಕಪ್ ವಾರಾಂತ್ಯದ ರೇಸ್‌ಗಳು ಭಾನುವಾರ ಚೆನ್ನೈನಲ್ಲಿ ಮುಕ್ತಾಯಗೊಳ್ಳಲಿದೆ. ದಿನದ ಗೌರವಾನಿತ್ವ ರೇಸ್ ಚೆಟ್ಟಿನಾಡ್ ಇಂಡಿಯನ್ ಟರ್ಫ್ ಇನ್ವಿಟೇಷನ್ ಕಪ್‌ನಲ್ಲಿ ಬೆಂಗಳೂರು ಮತ್ತು ಮುಂಬೈ ಡರ್ಬಿ ರೇಸ್‌ಗಳನ್ನು ಗೆದ್ದು ಉತ್ತಮ ಫಾರ್ಮ್‌ನಲ್ಲಿರುವ ಝೂಕರೆಲಿ ಈ ಕಪ್ ಗೆಲ್ಲುವ ಮೂಲಕ ಡರ್ಬಿ ಹ್ಯಾಟ್ರಿಕ್ ಗಳಿಸುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡತಿದೆ:

1ನೇ ರೇಸ್: ಲಾಗೋಸ್ 1, ದಿ ಸಾವರಿನ್ ಆರ್ಬ್ 2, ವಾಚ್ ಮೈ ಸ್ಟಾರ್ಸ್ 6
2ನೇ ರೇಸ್: ಸ್ಟಾಕ್‌ಬ್ರಿಡ್ಜ್ 7, ಸಾಂತ ಕ್ಲಾರ 4, ನ್ಯೂ ಲುಕ್ 3
3ನೇ ರೇಸ್: ಅಶ್ವ ಮೊರೊಕೊ 1, ಡಿವೈನ್ ಥಾಟ್ಸ್ 3, ಸೂಪ್ ಆ್ಯಂಡ್ ಸ್ಯಾಂಡ್‌ವಿಚ್ 7
4ನೇ ರೇಸ್: ಲಾಸ್ಟ್ ವಿಶ್ 4, ಲಾ ಮಿರೇಜ್ 9, ಅಶ್ವ ಯುದ್ಧೀರ್ 1
5ನೇ ರೇಸ್: ಅಶ್ವ ಬ್ರಾವೋ 2, ಮಲ್ಟಿಫೆಸೆಟೆಡ್ 1, ಪ್ರೈಸ್‌ಲೆಸ್ ಗೋಲ್ಡ್ 5
6ನೇ ರೇಸ್: ಫಾರೆಸ್ಟ್ ಫ್ಲೇಮ್ 4, ಕಾಸ್ಮಿಕ್ ರೇ 3, ಜೈಂಟ್ ಸ್ಟಾರ್ 1
7ನೇ ರೇಸ್: ಝೂಕರೆಲಿ 6, ಎ ಸ್ಟಾರ್ ಈಸ್ ಬಾರ್ನ್ 5, ಜೂಲಿಯೆಟ್ 2
8ನೇ ರೇಸ್: ಅಲಮಂಡ 4, ಸ್ಟುಪಲ್ಸ್ 1, ಫೋರ್ ವ್ಹೀಲ್ ಡ್ರೈವ್ 7

ಉತ್ತಮ ಬೆಟ್: ಸ್ಟಾಕ್‌ಬ್ರಿಡ್ಜ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	4,5,6	6,7,8

ಬಾಲ್ ಬ್ಯಾಡ್ಮಿಂಟನ್: ನಾಲ್ಕರ ಘಟ್ಟಕ್ಕೆ ಕರ್ನಾಟಕ, ರೈಲ್ವೆ

ಮೂಡುಬಿದಿರೆ: ಆಳ್ವಾಸ್ ಸಂಸ್ಥೆಯಲ್ಲಿ ನಡೆಯುತ್ತಿರುವ 67ನೇ ರಾಷ್ಟ್ರೀಯ ಸೀನಿಯರ್ ಬಾಲ್-ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕರ್ನಾಟಕ ಹಾಗೂ ಭಾರತೀಯ ರೈಲ್ವೆ ತಂಡಗಳು ನಾಲ್ಕರ ಘಟ್ಟಕ್ಕೆ ಆಯ್ಕೆಯಾಗಿವೆ.

ಪುರುಷರ ವಿಭಾಗದಲ್ಲಿ ಕೇರಳ ತಂಡವು ಹರಿಯಾವನ್ನು 35-17, 35-23ರಲ್ಲಿ ಹಾಗೂ ಕೆನರಾ ಬ್ಯಾಂಕ್ ತಂಡ ಪುದುಚೆರಿ ತಂಡವನ್ನು 35-21, 35-14 ಅಂತರದಿಂದ ಮಣಿಸಿತು.

ಪುರುಷರ ಪ್ರೀ-ಕ್ವಾಟರ್ ಫೈನಲ್‌ನಲ್ಲಿ ಕೇರಳ ತಂಡವು ಮುಂಬೈ ತಂಡವನ್ನು 35-27, 35-22ಗಳಿಂದ, ಕೆನರಾ ಬ್ಯಾಂಕ್ ತಂಡವು, ಚತ್ತೀಸ್‌ಗಢ ವಿರುದ್ಧ 35-18, 35-22ರಲ್ಲಿ ಗೆದ್ದಿತು.

ಪುರುಷರ ಕ್ವಾರ್ಟರ್ ಫೈನಲ್ಸ್‌ನಲ್ಲಿ ಭಾರತೀಯ ರೈಲ್ವೆ ತಂಡವು ಕೆನರಾ ಬ್ಯಾಂಕ್ ತಂಡ ವಿರುದ್ಧ 35-19, 35-19 ಅಂತರದಿಂದ ಹಾಗೂ ತೆಲಂಗಾಣ ತಂಡ ಮಹಾರಾಷ್ಟ್ರವನ್ನು 35-18,35-19ರಲ್ಲಿ ಸೋಲಿಸಿತು.


ಮಹಿಳೆಯರ ಕ್ವಾಟರ್ ಫೈನಲ್‌ನಲ್ಲಿ ತಮಿಳುನಾಡು ತಂಡವು ಕೇರಳ ತಂಡವನ್ನು 35-25, 35-28 ಸೆಟ್‌ಗಳಿಂದ, ಕರ್ನಾಟಕ ತಂಡವು ಪುದುಚೆರಿ ತಂಡವನ್ನು 35-21, 35-14 ಅಂತರದಿಂದ ಮಣಿಸಿ ಗೆಲುವು ಸಾಧಿಸಿದವು. ಆಂಧ್ರಪ್ರದೇಶ ತಂಡವು ಬಿಹಾರ ತಂಡವನ್ನು 36-34, 35-22 ಅಂತರದಿಂದ ಸೋಲಿಸಿತು. ಮಹಾರಾಷ್ಟ್ರ ತಂಡವು ಚತ್ತೀಸ್‌ಗಢ ತಂಡವನ್ನು 21-35, 35-31, 36-34 ಅಂತರಗಳಿಂದ ಮಣಿಸಿತು.

ಸಹ ಕೈದಿಗಳಿಗೆ ಸುಶೀಲ್ ತರಬೇತಿ

ನವದೆಹಲಿ (ಪಿಟಿಐ): ಕೊಲೆ ಪ್ರಕರಣದಲ್ಲಿ ತಿಹಾರ್ ಜೈಲಿನಲ್ಲಿರುವ, ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಸಹ ಕೈದಿಗಳಿಗೆ ಕುಸ್ತಿ ಹಾಗೂ ದೈಹಿಕ ಫಿಟ್‌ನೆಸ್ ತರಬೇತಿ ನೀಡಲಿದ್ದಾರೆ ಎಂದು ಜೈಲು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ರಾಷ್ಟ್ರ ರಾಜಧಾನಿ ಮತ್ತು ಜೈಲು ಆವರಣದೊಳಗೆ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾದ್ದರಿಂದ ಈ ಬೆಳವಣಿಗೆ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತಿಹಾರ್ ಜೈಲಿನ ಆಡಳಿತವು ಈ ಹಿಂದೆಯೇ ಸುಶೀಲ್ ಅವರನ್ನು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಯೋಜಿಸಿತ್ತು. ಆದರೆ ದೆಹಲಿಯಲ್ಲಿ ಕೋವಿಡ್‌ನ ಮೂರನೇ ಅಲೆ ಹಬ್ಬುವ ಆತಂಕದಿಂದ ಯೋಜನೆಯನ್ನು ಕೈಬಿಡಬೇಕಾಗಿತ್ತು.



ಇಕೋ ಅಕ್ಕೈ ಬಂದರು ರಂಗಕೆ...

10

ರೋಗವೇ ಮದ್ದಾದರೆ ಉಳಿಯಲು ಸಾಧ್ಯವೇ?

ಉಕ್ರೇನ್‌ನಲ್ಲಿ ಹಾವೇರಿಯ ವಿದ್ಯಾರ್ಥಿ ನವೀನ್ ಗ್ಯಾನಗೌಡರ್ ಸಾವಿನ ಬಳಿಕ ವೈದ್ಯಕೀಯ ಶಿಕ್ಷಣದ ಕುರಿತು ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ನೀಟ್ ರದ್ದುಗೊಳಿಸುವಂತೆ ಹುಯಿಲು ಎದ್ದಿದೆ. ವಾಸ್ತವವಾಗಿ ನಮ್ಮ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯಲು ವಿದೇಶಕ್ಕೆ ಹೋಗುವುದೇಕೆ? ಹಾಗಾದರೆ ಅದನ್ನು ತಪ್ಪಿಸುವ ದಾರಿಯಾದರೂ ಯಾವುದು?



ಉಕ್ರೇನ್‌ನಿಂದ ಸುರಕ್ಷಿತವಾಗಿ ಹೊರಬಂದ ಭಾರತದ ವೈದ್ಯಕೀಯ ವಿದ್ಯಾರ್ಥಿಗಳು ರೊಮೇನಿಯಾದ ಕ್ರೀಡಾ ಸಂಕೀರ್ಣದಲ್ಲಿ ತಾತ್ಕಾಲಿಕವಾಗಿ ಆಶ್ರಯ ಪಡೆದಾಗ...

ಡಾ. ಶ್ರೀನಿವಾಸ ಕಕ್ಕಿಲ್ಲಾಯ

ಉಕ್ರೇನ್-ರಷ್ಯಾ ಯುದ್ಧದಲ್ಲಿ ಸಿಲುಕಿ ಹಾವೇರಿಯ ವಿದ್ಯಾರ್ಥಿ ಮೃತಪಟ್ಟದ್ದು, ಅಲ್ಲಿದ್ದ 18,000 ಭಾರತೀಯ ವೈದ್ಯ ವಿದ್ಯಾರ್ಥಿಗಳು ಕಷ್ಟಕ್ಕೀಡಾದದ್ದು ನಮ್ಮ ವೈದ್ಯಕೀಯ ಶಿಕ್ಷಣದ ಬಗ್ಗೆ ಚರ್ಚೆಯನ್ನೆಬ್ಬಿಸಿವೆ. ಪಿಯುಸಿಯಲ್ಲಿ ಶೇ 97ರಷ್ಟು ಅಂಕಗಳನ್ನು ಪಡೆದಿದ್ದರೂ ಜಾತಿ ಮೀಸಲಾತಿಯಿಂದಾಗಿ, ಕೋಟಿಗಟ್ಟಲೆ ಶುಲ್ಕದಿಂದಾಗಿ ಇಲ್ಲಿ ವೈದ್ಯಕೀಯ ಸೀಟು ಸಿಗಲಿಲ್ಲ ಎಂದ ಹೆತ್ತವರ ಹೇಳಿಕೆಯು ಭಾವನೆಗಳನ್ನು ಕೆರಳಿಸಿದೆ. ನೀಟ್ ಪರೀಕ್ಷೆಗಳಲ್ಲಿ ವಿಫಲರಾದವರಷ್ಟೇ ವಿದೇಶಕ್ಕೆ ಹೋಗುತ್ತಾರೆ, ಅಲ್ಲಿ ಕಲಿತ ಶೇ 90ರಷ್ಟು ವೈದ್ಯರು ಇಲ್ಲಿ ಮತ್ತೆ ಅನುತ್ತೀರ್ಣರಾಗಿ ಕಷ್ಟಕ್ಕೊಳಗಾಗುತ್ತಾರೆ ಎಂದು ಸಚಿವ ಪ್ರಲ್ಹಾದ ಜೋಶಿ ಹೇಳಿದ್ದು ಟೀಕೆಗೊಳಗಾಗಿದೆ, ನೀಟ್ ಪರೀಕ್ಷೆಯೇ ರದ್ದಾಗಬೇಕೆಂಬ ಅಭಿಯಾನ ಆರಂಭಗೊಂಡಿದೆ.

ಮಾನ್ಯ ಪ್ರಧಾನಿಯವರು ದನಿಗೂಡಿಸಿ, ವೈದ್ಯರಾಗಲೆಂದು ಸಣ್ಣಪುಟ್ಟ ದೇಶಗಳಿಗೆಲ್ಲ ಹೋಗುವುದೇಕೆ, ದೇಶದ ಹಣ (!?) ಹೊರಹೋಗುವುದೇಕೆ, ಇಲ್ಲೇ ಖಾಸಗಿ ಬಂಡವಾಳಗಾರರು ಅಗಾಧ ಸಂಖ್ಯೆಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಬಾರದೇ, ರಾಜ್ಯ ಸರ್ಕಾರಗಳು ಅದಕ್ಕೆ ಭೂಮಿಯನ್ನು ನೀಡಬಾರದೇ ಎಂದು ಕೇಳಿದ್ದಾರೆ, ಜೊತೆಗೆ, ಆಯುಷ್ ಚಿಕಿತ್ಸೆಗೆ ಇನ್ನಷ್ಟು ಉತ್ತೇಜನ ದೊರೆಯಲಿ ಎಂದಿದ್ದಾರೆ. ಇದಕ್ಕೆ ಪೂರಕವಾಗಿ, ವೈದ್ಯಕೀಯ ಸೇವೆಗಳಲ್ಲಿ ವಿಚ್ಛಿದ್ರಕಾರಿಯಾದ ತಿರುವುಗಳಾಗಲಿವೆ ಎಂದು ನೀತಿ ಆಯೋಗವು ಹೇಳಿದೆ, ಆಧುನಿಕ ವೈದ್ಯ ಶಿಕ್ಷಣದಲ್ಲಿ ಆಯುಷ್ ಬೆರೆಸಬೇಕು ಎಂದು ಹೊಸ ಶಿಕ್ಷಣ ನೀತಿಯಲ್ಲಿ ಹೇಳಲಾಗಿದೆ. ಆಧುನಿಕ ವೈದ್ಯ ಶಿಕ್ಷಣದಲ್ಲಿ ಚರಕ ಶಪಥ, ಯೋಗ, ಗಿಡಮೂಲಿಕೆ ಜ್ಞಾನ, ಆಯುಷ್ ಶಿಕ್ಷಣ ಎಲ್ಲವೂ ಇರಬೇಕು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಸ್ನಾತಕ ಶಿಕ್ಷಣ ಮಂಡಳಿಯು ಕೆಲವೇ ದಿನಗಳ ಹಿಂದೆ ಪ್ರಸ್ತಾಪವಿಟ್ಟಿದೆ.

ಇವುಗಳ ಬೆನ್ನಿಗೆ, ದೇಶದಲ್ಲಿ ಆಧುನಿಕ ವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವ ಎನ್‌ಎಂಸಿಯ ಸ್ನಾತಕೋತ್ತರ ಶಿಕ್ಷಣ ಮಂಡಳಿಯ ಅಧ್ಯಕ್ಷ, ನಮ್ಮದೇ ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಕೆ. ರಮೇಶ್ ಅವರು ಈಗಿರುವ ಅರ್ಧಕ್ಕರ್ಧ ವೈದ್ಯರ ಕೌಶಲವು ಅಪೇಕ್ಷಿತ ಮಟ್ಟದಲ್ಲಿಲ್ಲ, ಇನ್ನಷ್ಟು ಹೊಸ ಕಾಲೇಜು ಸ್ಥಾಪಿಸುವುದಕ್ಕೆ ರಾಜಕಾರಣಿಗಳಿಗೆ ಆಸಕ್ತಿಯಿದ್ದರೂ ಅದು ಪರಿಹಾರವೇ ಅಲ್ಲ. ವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದೇ ಅತಿಮುಖ್ಯ ಎಂದಿರುವುದು ವರದಿಯಾಗಿದೆ.

ಇವೆಲ್ಲವೂ ಆಧುನಿಕ ವೈದ್ಯ ಶಿಕ್ಷಣದ ಬಗೆಗಿರುವ ಗೊಂದಲಗಳನ್ನು ತೋರಿಸುತ್ತವೆ. ಆಧುನಿಕ ವೈದ್ಯ ವಿಜ್ಞಾನವು ರೋಗದ ಮೂಲ ಕಾರಣವನ್ನು ಪತ್ತೆ ಹಚ್ಚಿ ಅವುಗಳನ್ನು ನಿವಾರಿಸಲು ಮದ್ದು ನೀಡುತ್ತದೆ; ಆದರೆ ಪ್ರಧಾನಿ ಹೇಳಿದಂತೆ ಮತ್ತಷ್ಟು ಖಾಸಗಿ ಕಾಲೇಜುಗಳನ್ನು ತೆರೆಯುವುದೆಂದರೆ ರೋಗದ ಮೂಲ ಕಾರಣವನ್ನೇ ಮದ್ದಾಗಿ ಕೊಟ್ಟಂತಾಗುತ್ತದೆ! ಆಯುಷ್ ಅನ್ನು ಆಧುನಿಕ ವೈದ್ಯವಿಜ್ಞಾನದೊಳಕ್ಕೆ ಬೆರೆಸಿದರೆ ವೈದ್ಯ ಶಿಕ್ಷಣವೇ ನಾಶವಾಗಲಿದೆ, ಆಗ ಆಧುನಿಕ ವೈದ್ಯರಾಗಬಯಸುವ ಎಲ್ಲಾ ವಿದ್ಯಾರ್ಥಿಗಳು ಹೊರದೇಶಗಳಿಗೇ ಹೋಗಬೇಕಾಗುತ್ತದೆ! ನೀಟ್ ಪರೀಕ್ಷೆ, ಮೀಸಲಾತಿ, ಹುಟ್ಟಿದ ಜಾತಿಗಳಂತೂ ವೈದ್ಯಶಿಕ್ಷಣದ ರೋಗಕ್ಕೆ ಕಾರಣಗಳೇ ಅಲ್ಲ, ಅವುಗಳನ್ನು ದೂಷಿಸುವುದರಿಂದ ರೋಗ ಪರಿಹಾರವಾಗದು.

ಮತ್ತಷ್ಟು ವೈದ್ಯಕೀಯ ಕಾಲೇಜುಗಳು ಬೇಕೇ?

ದೇಶದಲ್ಲಿ ವೈದ್ಯರ ಬಹುದೊಡ್ಡ ಕೊರತೆಯಿದೆ, ಹಳ್ಳಿಗಳಲ್ಲಿ ವೈದ್ಯರಿಲ್ಲ, ವರ್ಷದಲ್ಲಿ ನೀಟ್ ಬರೆಯುವ 15 ಲಕ್ಷ ವಿದ್ಯಾರ್ಥಿಗಳಲ್ಲಿ 90 ಸಾವಿರ ಮಂದಿ ಮಾತ್ರ ಸೀಟು ಪಡೆಯುತ್ತಾರೆ, ಹಾಗಾಗಿ ಇನ್ನಷ್ಟು ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲೇ ಬೇಕು ಎಂದು ಪ್ರಧಾನಿಯಾದಿಯಾಗಿ ಎಲ್ಲರೂ ಹೇಳುತ್ತಿರುವುದು ಸರಿಯಿದೆಯೇ?



ದೇಶದಲ್ಲಿ 13 ಲಕ್ಷ ಆಧುನಿಕ ವೈದ್ಯರೂ, ಐದೂವರೆ ಲಕ್ಷ ಆಯುಷ್ ಚಿಕಿತ್ಸಕರೂ ಇದ್ದಾರೆ. ಇವರಲ್ಲಿ ಶೇ 80ರಷ್ಟು ಸಕ್ರಿಯರೆಂದರೂ 834 ಜನರಿಗೊಬ್ಬ ವೈದ್ಯನಿರುವಂತಾಯಿತು ಎಂದು ಕೇಂದ್ರ ಆರೋಗ್ಯ ಸಚಿವೆ ಡಾ. ಭಾರತಿ ಪವಾರ್ ಅವರು ಕಳೆದ ಡಿಸೆಂಬರ್ 14ರಂದು ರಾಜ್ಯಸಭೆಯಲ್ಲಿ ಹೇಳಿದ್ದಾರೆ. ಆಯುಷ್ ಚಿಕಿತ್ಸಕರನ್ನು ಬಿಟ್ಟರೂ 1,070-1,300 ಜನರಿಗೊಬ್ಬ ಆಧುನಿಕ ವೈದ್ಯನಿದ್ದಾನೆಂದಾಯಿತು. ಅಂದರೆ, ಸಾವಿರ ಜನರಿಗೊಬ್ಬ ವೈದ್ಯನಿರಬೇಕೆಂಬ ಭೋರ್ ಸಮಿತಿ ಹಾಗೂ ವಿಶ್ವ ಆರೋಗ್ಯ ಸಂಸ್ಥೆಗಳ ಗುರಿಯ ಹತ್ತಿರಕ್ಕೆ ತಲುಪಿದಂತಾಯಿತು. ಸುಮಾರು 75-80 ಸಾವಿರದಷ್ಟು ಆಧುನಿಕ ವೈದ್ಯರಿರುವ ಕರ್ನಾಟಕವು ಸಾವಿರ ಜನರಿಗೊಬ್ಬ ವೈದ್ಯನಿರಬೇಕೆಂಬ ಗುರಿಯನ್ನು ಮೀರಿದಂತಾಯಿತು. ಈಗ 313 ಸರ್ಕಾರಿ ಹಾಗೂ 283 ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವರ್ಷಕ್ಕೆ 90,824 ಎಂಬಿಬಿಎಸ್ ಸೀಟುಗಳಿವೆ. ರಾಜ್ಯದಲ್ಲಿ 19 ಸರ್ಕಾರಿ ಕಾಲೇಜುಗಳಲ್ಲಿ 2,900 ಹಾಗೂ 44 ಖಾಸಗಿ ಕಾಲೇಜುಗಳಲ್ಲಿ ಒಟ್ಟು 6,945 ಸೀಟುಗಳಿವೆ; ಪ್ರತೀ ವರ್ಷ ಇಷ್ಟು ಎಂಬಿಬಿಎಸ್ ವೈದ್ಯರು ಆರೋಗ್ಯ ಸೇವೆಗಳಿಗೆ ಸೇರುತ್ತಲೇ ಇರುತ್ತಾರೆ.

ಆಧುನಿಕ ವೈದ್ಯರ ಸಂಖ್ಯೆಯು ಸಾಕಷ್ಟಿದ್ದರೂ ಹಿಂದುಳಿದ ಹಾಗೂ ಗ್ರಾಮೀಣ ಭಾಗಗಳಲ್ಲಿ ಅವರ ಕೊರತೆ ಇದೆ ಎಂದರೆ ವೈದ್ಯರ ನಿಯೋಜನೆಯಲ್ಲಿ ಸಮಸ್ಯೆಯಿದೆ ಎಂದಾಗುತ್ತದೆ. ಹಾಗಿರುವಾಗ ಇನ್ನಷ್ಟು ಖಾಸಗಿ ಕಾಲೇಜುಗಳ ಅಗತ್ಯವೇನು?

ನೀಟ್ ಹೋದರೆ ಎಲ್ಲವೂ ಸರಿಯಾಗುತ್ತದೆಯೇ?

ವೈದ್ಯಕೀಯ ಕಲಿಕೆಯು ದುಸ್ತರವಾಗಿರುವುದಕ್ಕೆ ನೀಟ್ ಪರೀಕ್ಷೆಯನ್ನು ದೂಷಿಸಿ, ಅದನ್ನು ರದ್ದು ಮಾಡಬೇಕೆಂಬ ಕೂಗು ಜೋರಾಗುತ್ತಿದೆ. ಆದರೆ, ವಿಶ್ವದೆಲ್ಲೆಡೆ ವೈದ್ಯಕೀಯ, ತಂತ್ರಜ್ಞಾನ, ಕಾನೂನು ಇತ್ಯಾದಿ ಉನ್ನತ ವೃತ್ತಿಗಳ ಕಲಿಕೆಗೆ ಪ್ರವೇಶ ಪಡೆಯಲು ಸಾಕಷ್ಟು ಕಠಿಣವಾದ ಮಾನದಂಡಗಳೇ ಇರುತ್ತವೆ, ಅವು ಬಹಳ ಸ್ಪರ್ಧಾತ್ಮಕವೂ ಆಗಿರುತ್ತವೆ. ಹಾಗಿರುವಾಗ, ಭಾರತದಲ್ಲಿ ವೈದ್ಯಕೀಯ ಪ್ರವೇಶಾತಿಯ ಮಾನದಂಡವನ್ನು ಕಿತ್ತೊಗೆದರೆ ಇನ್ನಷ್ಟು ಸಮಸ್ಯೆಗಳೇ ಆಗಲಿವೆ.

ಎಂಬತ್ತರ ದಶಕದವರೆಗೆ ಪಿಯುಸಿ ಅಂಕಗಳ ಆಧಾರದಲ್ಲೇ ವೈದ್ಯಕೀಯ ಸೀಟುಗಳನ್ನು ನೀಡಲಾಗುತ್ತಿತ್ತು. ಆದರೆ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆಯೂ ಪ್ರಭಾವವೂ ಹೆಚ್ಚಿದಂತೆ ಅಂಕಗಳಿಲ್ಲದವರು ಕ್ಯಾಪಿಟೇಶನ್ ಶುಲ್ಕಕ್ಕೆ ಸೀಟು ಪಡೆಯುವುದು ಹೆಚ್ಚುತ್ತಾ ಹೋಯಿತು. ಇತ್ತ ಲಂಚ ಕೊಟ್ಟು ಪಿಯುಸಿ ಅಂಕಗಳನ್ನೇ ತಿದ್ದಿ, ಪ್ರಭಾವ ಬೀರಿ ಸರ್ಕಾರಿ ಕಾಲೇಜುಗಳ ಸೀಟುಗಳನ್ನು ವಶಪಡಿಸಿಕೊಳ್ಳುವುದೂ ಹೆಚ್ಚತೊಡಗಿತು. ವೈದ್ಯರಾಗಲು ಅತ್ಯಾಸಕ್ತರಾಗಿದ್ದ ಪ್ರತಿಭಾವಂತ ವಿದ್ಯಾರ್ಥಿಗಳು ಈ ವಂಚನೆಗಳನ್ನು ಪ್ರತಿಭಟಿಸಿ ಬೀದಿಗಿಳಿದರು; ಅಂಕ ತಿದ್ದುವ ಮೋಸವನ್ನು ತಡೆಯಲು ಪ್ರವೇಶ ಪರೀಕ್ಷೆಗಾಗಿಯೂ ಕ್ಯಾಪಿಟೇಶನ್ ಶುಲ್ಕ ತಡೆಯಲು ಖಾಸಗೀಕರಣದ ವಿರೋಧವಾಗಿಯೂ ಎಂಬತ್ತರ ದಶಕದಲ್ಲಿ ದೇಶದಾದ್ಯಂತ ಹೋರಾಟಗಳಾಗಿ, ಕರ್ನಾಟಕದಲ್ಲಿ 1984ರಲ್ಲಿ ಪ್ರವೇಶ ಪರೀಕ್ಷೆಗಳು ತೊಡಗಿದವು, ಖಾಸಗೀಕರಣದ ಭರಾಟೆಗೂ ಲಗಾಮು ಬಿತ್ತು.

ಆದರೆ ತೊಂಬತ್ತರ ಆರಂಭದಲ್ಲಿ ಹೊಸ ಆರ್ಥಿಕ ನೀತಿ ಬಂತು, ವಿದ್ಯಾರ್ಥಿ ಚಳವಳಿಗಳೂ ದುರ್ಬಲಗೊಂಡವು. ಎಲ್ಲೆಂದರಲ್ಲಿ ಖಾಸಗಿ ಕಾಲೇಜುಗಳು ತೆರೆದವು; ಅವು ತಮಗೆ ಹಣ ನೀಡಿದವರಿಗೆ ಸೀಟುಗಳನ್ನು ಕೊಡಿಸುವುದಕ್ಕಾಗಿ ಸರ್ಕಾರಗಳು ನಡೆಸುತ್ತಿದ್ದ ಪ್ರವೇಶ ಪರೀಕ್ಷೆಗಳನ್ನು ತಿರುಚಿಕೊಳ್ಳುವ ವ್ಯವಸ್ಥೆಗಳನ್ನು ಮಾಡಿಕೊಂಡವು, ತಮ್ಮದೇ ಆದ ಪ್ರವೇಶ ಪರೀಕ್ಷೆಗಳನ್ನೂ ಆರಂಭಿಸಿದವು. ಇದನ್ನು ತೊಡೆದುಹಾಕಲು ಇಡೀ ದೇಶಕ್ಕೆ ಅನ್ವಯಿಸುವಂತೆ 2013ರಲ್ಲಿ ನೀಟ್ ಪರೀಕ್ಷೆಯನ್ನು ತರಲಾಯಿತು. ಖಾಸಗಿ ಕಾಲೇಜುಗಳು ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿ ರದ್ದುಪಡಿಸಲು ಯಶಸ್ವಿಯಾದವು. ಆದರೆ ಆ ತೀರ್ಪಿನ ಬಗ್ಗೆ ನ್ಯಾಯಮೂರ್ತಿಗಳೇ ಪ್ರಶ್ನೆಗಳನ್ನೆತ್ತಿದ್ದರಿಂದ ತೀರ್ಪನ್ನು ಹಿಂಪಡೆಯುವಂತಾಗಿ 2016ರಿಂದ ನೀಟ್ ನಿರಂತರವಾಗಿ ನಡೆಯತೊಡಗಿತು.

ಖಾಸಗಿ ಕಾಲೇಜುಗಳು ನೀಟ್ ಅನ್ನು ಬಗ್ಗಿಸುವುದಕ್ಕೂ ದಾರಿ ಮಾಡಿಕೊಂಡವು, ಒಮ್ಮಿಂದೊಮ್ಮೆಗೇ ತಮ್ಮ ಶುಲ್ಕವನ್ನು ಆರೇಳು ಪಟ್ಟು ಹೆಚ್ಚಿಸಿಕೊಂಡವು. ಒಳ್ಳೆಯ ಅಂಕಗಳಿದ್ದ ವಿದ್ಯಾರ್ಥಿಗಳಲ್ಲಿ ಅಷ್ಟೊಂದು ಹಣವಿಲ್ಲದೆ ಸೀಟುಗಳು ತುಂಬದಾದಾಗ ಹಣವಷ್ಟೇ ಇದ್ದು ಅಂಕಗಳಿಲ್ಲದವರಿಗೆ ಸೀಟು ನೀಡುವುದಕ್ಕಾಗಿ ನೀಟ್‌ನ ಮರುವರ್ಷವೇ, 2017ರಲ್ಲಿ, ಅರ್ಹತಾ ಅಂಕಗಳನ್ನೇ ಕೇಂದ್ರ ಸರ್ಕಾರವು ಬದಲಿಸುವಂತೆ ಮಾಡಲಾಯಿತು; ಕನಿಷ್ಠ ಶೇ 50ರಷ್ಟು ಅಂಕಗಳ ಮಾನದಂಡವನ್ನು ಬದಲಿಸಿ ಮೇಲಿನ ಶೇ 50ರಷ್ಟು ಆಕಾಂಕ್ಷಿಗಳೆಲ್ಲರಿಗೂ ಅರ್ಹತೆಯನ್ನು ನೀಡಲಾಯಿತು. ಸರ್ಕಾರದ ಕೋಟಾ ಖೋತಾ ಮಾಡುವುದು, ಸೀಟು ಹಂಚಿಕೆಯಲ್ಲಿ ಹಗರಣಗಳು ಕೂಡ ಜೊತೆಗೆ ಸೇರಿದವು.


ಅಂದರೆ, ಪಿಯುಸಿ ಅಂಕಗಳಿರಲಿ, ರಾಜ್ಯಗಳ ಸಿಇಟಿ ಯಾ ರಾಷ್ಟ್ರ ಮಟ್ಟದ ನೀಟ್ ಆಗಿರಲಿ, ಖಾಸಗಿ ಕಾಲೇಜುಗಳು ದುಡ್ಡು ಕೊಟ್ಟವರಿಗೆ ಸೀಟು ಕೊಡುವುದಕ್ಕೆ ದಾರಿಯನ್ನು ಮಾಡಿಕೊಳ್ಳುತ್ತವೆ. ಹಾಗೆಯೇ, ಎಲ್ಲ ಬಗೆಯ ಪರೀಕ್ಷೆಗಳಿಗೆ ದುಡ್ಡಿದ್ದವರಿಗೆ, ನಗರವಾಸಿಗಳಿಗೆ, ಆಂಗ್ಲ ಮಾಧ್ಯಮದವರಿಗೆ ವಿಶೇಷ ಕೋಚಿಂಗ್ ಸೌಲಭ್ಯಗಳು ದೊರೆಯುತ್ತವೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ಅಲ್ಲೂ ವಂಚಿತರಾಗುತ್ತಾರೆ. ಇದೇ ಕಾರಣಕ್ಕೆ ಹಲವು ಮಕ್ಕಳು ಪಿಯುಸಿ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದರೂ ಪ್ರವೇಶ ಪರೀಕ್ಷೆಗಳಲ್ಲಿ ಹಿಂದೆ ಬೀಳುತ್ತಾರೆ. ಆದ್ದರಿಂದ ಮಾನದಂಡ ಯಾವುದೇ ಇದ್ದರೂ ಅವುಗಳನ್ನು ಪಾರದರ್ಶಕವಾಗಿ, ಭ್ರಷ್ಟಾಚಾರ ಮುಕ್ತವಾಗಿ, ಎಲ್ಲರಿಗೂ ಎಟಕುವಂತೆ ಮಾಡುವುದೇ ಮುಖ್ಯವಾಗುತ್ತದೆ.

ಸಾಂವಿಧಾನಿಕ ಮೀಸಲಾತಿಯಿಂದ ವಂಚನೆಯಾಗುತ್ತಿದೆಯೇ?

ವೃತ್ತಿಪರ ಶಿಕ್ಷಣಕ್ಕೆ ಪ್ರವೇಶ ಪಡೆಯುವುದು ಅಸಾಧ್ಯವಾದಾಗ ಸಂವಿಧಾನಬದ್ಧವಾದ ಮೀಸಲಾತಿಯನ್ನು ದೂರುವುದು ಅತ್ಯಂತ ಸಾಮಾನ್ಯವಾಗಿ ಬಿಟ್ಟಿದೆ. ಸಾಮಾಜಿಕವಾಗಿ ತುಳಿತಕ್ಕೊಳಗಾದವರಿಗೆ, ಆ ಕಷ್ಟಗಳಿಂದಾಗಿ ಸಮಾನ ಶಿಕ್ಷಣದಿಂದ ವಂಚಿತರಾದವರಿಗೆ ವೃತ್ತಿ ವ್ಯಾಸಂಗದಲ್ಲಿ ಮೀಸಲಾತಿ ನೀಡುತ್ತಿರುವುದನ್ನು ದೂರುವುದೆಂದರೆ ಆ ವರ್ಗದ ಮಕ್ಕಳನ್ನು ಮತ್ತೆ ಅವಮಾನಿಸಿ ದೌರ್ಜನ್ಯವೆಸಗಿದಂತೆಯೇ ಆಗುತ್ತದೆ.

ವಸ್ತುಸ್ಥಿತಿಯೇನೆಂದರೆ, ವೈದ್ಯಕೀಯ ಶಿಕ್ಷಣದ ಖಾಸಗೀಕರಣದಿಂದಾಗಿ ಇಂದು ಅರ್ಧಕ್ಕೂ ಹೆಚ್ಚು ಸೀಟುಗಳು ಖಾಸಗಿ ಕಾಲೇಜುಗಳಲ್ಲೇ ಇವೆ, ಅಲ್ಲಿರುವ ಖಾಸಗಿ ಕೋಟಾದ ಸೀಟುಗಳಿಗೆ ಸಾಂವಿಧಾನಿಕ ಮೀಸಲಾತಿಯು ಅನ್ವಯಿಸುವುದೇ ಇಲ್ಲ. ಸರ್ಕಾರಿ ಕಾಲೇಜುಗಳ ಶುಲ್ಕಕ್ಕೆ ಹೋಲಿಸಿದರೆ, ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳಿಗೆ ಮೂರು ಪಟ್ಟು, ಮ್ಯಾನೇಜ್‌ಮೆಂಟ್ ಮತ್ತು ಎನ್‌ಆರ್‌ಐ ಹೆಸರಿನ ಕೋಟಾದ ಸೀಟುಗಳಿಗೆ 10-20 ಪಟ್ಟು ಹೆಚ್ಚು ಶುಲ್ಕವಿರುವುದರಿಂದ, ಅತ್ಯುತ್ತಮ ಅಂಕಗಳನ್ನು ಹೊಂದಿರುವ ಪ್ರತಿಭಾವಂತ ವಿದ್ಯಾರ್ಥಿಗಳು ಹಿಂಜರಿಯಬೇಕಾಗುತ್ತದೆ.

11ನೇ ಪುಟಕ್ಕೆ...



ಇವರೂ ಸಾಧಕಿಯರೇ!

ಫಾತಿಮಾ ರಲಿಯಾ

ಪ್ರತಿಬಾರಿಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲೂ ಜಗತ್ತಿನಾದ್ಯಂತ ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಸಮಾಜಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರ, ಸಾಧಕಿಯರ ವ್ಯಕ್ತಿಚಿತ್ರ, ಸಿನಿಮಾ, ಅವರ ಜೀವನ ಆಧರಿಸಿದ ಪುಸ್ತಕಗಳು ಬಿಡುಗಡೆಯಾಗುತ್ತವೆ. ಶತಮಾನಗಳ ಕಾಲ ಕೈಕೋಳ ತೊಡಿಸಿಕೊಂಡಂತೆ ಕೂತಿದ್ದ, ತನ್ನಿಂದೇನೂ ಘನವಾದದ್ದು ಸಾಧಿಸಲು ಸಾಧ್ಯವಿಲ್ಲ ಎಂದು ನಂಬಿಸಲ್ಪಟ್ಟಿದ್ದ ಸಮುದಾಯವೊಂದರ ಸಾಧನೆಯನ್ನು ಜಗತ್ತಿನ ಮುಂದೆ ತೆರೆದಿಟ್ಟು ಆತ್ಮವಿಶ್ವಾಸ ತುಂಬುವ ಕೆಲಸ ಆಗಬೇಕಾದದ್ದೇ.

ಆದರೆ, ಸಾಧಕಿಯರನ್ನು ಗುರುತಿಸುವುದು ಹೇಗೆ? ಅದಕ್ಕಿರುವ ಮಾನದಂಡಗಳು ಯಾವುವು? ಗಮನಸೆಳೆಯುವ ಕ್ಷೇತ್ರಗಳಾದ ವಿಜ್ಞಾನ, ಸಾಹಿತ್ಯ, ಸಿನಿಮಾ ಮುಂತಾದವುಗಳಲ್ಲಿ ಗುರುತಿಸಿಕೊಂಡ, ಎತ್ತರಕ್ಕೆ ಏರಿದ ಮಹಿಳೆಯರನ್ನು ಮಾತ್ರ ಸಾಧಕಿಯರು ಎನ್ನಬೇಕೇ? ಹಾಗಿದ್ದರೆ ನಮ್ಮ ಹಳ್ಳಿಗಳಲ್ಲಿ ಗಂಡಿಗೆ ಸರಿಸಮಾನವಾಗಿ ಕೆಲಸ ಮಾಡುವ, ಯಾರ ಹಂಗಿಗೂ ಒಳಗಾಗದೆ ತಮ್ಮ ಅನ್ನವನ್ನು ತಾವೇ ದುಡಿದುಕೊಳ್ಳುತ್ತಿರುವ, ಕುಟುಂಬಕ್ಕೆ ಆಧಾರವಾಗಿರುವ ತಮ್ಮ ತಮ್ಮ ಸಣ್ಣ ಗದ್ದೆಗಳಲ್ಲೇ ನೇಗಿಲು ಹಿಡಿದು ಉಳುಮೆ ಮಾಡುವ, ಪೆಟ್ರೋಲ್ ಬಂಕ್‌ಗಳಲ್ಲಿ ರಾತ್ರಿ ಹಗಲಿನ ವ್ಯತ್ಯಾಸವಿಲ್ಲದೆ ದುಡಿಯುವ, ನೂರು ವಿರೋಧದ ಮಾತುಗಳನ್ನು ಬೆನ್ನಿಗೆ ಕಟ್ಟಿಕೊಂಡೇ ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳಹಿಸುವ ಸಂಪ್ರದಾಯಸ್ಥ ಮನೆತನದ ಅಮ್ಮಂದಿರ ದಿಟ್ಟತನಗಳೆಲ್ಲ ಯಾಕೆ ಸಾಧಕಿಯರ ಪಟ್ಟಿಯಲ್ಲಿ ಕಾಣಿಸಿಕೊಳ್ಳುವುದಿಲ್ಲ?

ಹಾಗೆ ನೋಡುವುದಾದರೆ 'ಅಂತರಾಷ್ಟ್ರೀಯ ಮಹಿಳೆಯರ ದಿನ' ಎನ್ನುವ ಉದಾತ್ತ ಕಲ್ಪನೆ ಮೊದಲ ಬಾರಿ ಹುಟ್ಟಿದ್ದು ಉತ್ತರ ಅಮೆರಿಕ ಮತ್ತು ಯೂರೋಪ್‌ನಲ್ಲಿ ನಡೆದ ಕೂಲಿ ಚಳವಳಿಯಲ್ಲಿ (ಲೇಬರ್ ಮೂವ್‌ಮೆಂಟ್ಸ್). ಸಮಾನ ಕೆಲಸಕ್ಕೆ ಸಮಾನ ವೇತನ ಬೇಕು ಎನ್ನುವ ಹಕ್ಕೊತ್ತಾಯವೇ ಮೊದಲ 'ಮಹಿಳೆಯರ ದಿನ'ಕ್ಕೆ ಪ್ರೇರಣೆ. ಪ್ರೇಮಿಗಳ ದಿನ, ತಾಯಂದಿರ ದಿನ ಅಥವಾ ಇನ್ನುಳಿದ 'ದಿನ'ಗಳಂತೆ ಇದು ಸಂಭ್ರಮದಿಂದ, ಖುಶಿಯಿಂದ, ಪ್ರೀತಿಯಿಂದ ಹುಟ್ಟಿಕೊಂಡ ಆಚರಣೆ ಅಲ್ಲ. ತಮ್ಮ ನ್ಯಾಯಯುತ ಹಕ್ಕನ್ನು ದಕ್ಕಿಸಿಕೊಳ್ಳಲು, ತಮಗೆ ಸಿಗಬೇಕಾದ ಅವಕಾಶಗಳನ್ನು ದೊರಕಿಸಿಕೊಳ್ಳಲು ಕ್ಲಾರಾ ಜೆಟ್‌ಕಿನ್ ಎಂಬ ಮಹಿಳೆ ತುಳಿದ ಅತ್ಯಂತ ಸಂಘರ್ಷಪೂರ್ಣ ಹೋರಾಟಕ್ಕೆ ಸಿಕ್ಕ ಗೆಲುವನ್ನು, ಹೋರಾಟದ ಹಾದಿಯಲ್ಲಿನ ಅವರ ಬದ್ಧತೆಯನ್ನು ಸ್ಮರಿಸಿಕೊಳ್ಳಲಿರುವ ದಿನ. ಈ ಅರ್ಥದಲ್ಲಿ ನೋಡುವುದಾದರೆ ನಗರಕೇಂದ್ರಿತ, ಸುಶಿಕ್ಷಿತ, ದುಡಿಯುವ, ತಮ್ಮ ಅಹವಾಲುಗಳನ್ನು ಸ್ಪಷ್ಟ ಮಾತುಗಳಲ್ಲಿ ಹೇಳಬಲ್ಲ, ಗಮನಸೆಳೆಯುವ ಕ್ಷೇತ್ರಗಳಲ್ಲಿ ಕೆಲಸ ಮಾಡುವವರದು ಮಾತ್ರ ಸಾಧನೆಯಲ್ಲ, ಯಾವ ಪ್ರಚಾರವನ್ನೂ ಬಯಸದೆ, ಅದರ ಬಗ್ಗೆ ಕಿಂಚಿತ್ತು ಸುಳಿವೂ ಇಲ್ಲದೆ, ಮಾಧ್ಯಮಗಳ, ಸೋಶಿಯಲ್ ಮೀಡಿಯಾ ಎಂಬ ವರ್ಚುವಲ್ ಜಗತ್ತಿನಿಂದ ನೂರಾರು ಮೈಲಿ ಅಂತರ ಕಾಯ್ದುಕೊಂಡು ಒಂದು ಸಮಾಜದ ಯೋಚನಾ ಕ್ರಮವನ್ನು ಬದಲಿಸುವ ಲಕ್ಷಾಂತರ ಮಹಿಳೆಯರದ್ದೂ ಸಾಧನೆಯೇ.

'ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ' ಥೀಮ್‌ನಲ್ಲಿ ಈ ವರ್ಷ ಮಹಿಳಾ ದಿನವನ್ನು ಆಚರಿಸಲಾಗುತ್ತಿದೆ. ನ್ಯಾಯ, ಘನತೆ ಮತ್ತು ಭರವಸೆಯನ್ನು ಪ್ರತಿನಿಧಿಸುವ ಈ ಬಾರಿಯ ಥೀಮ್‌ಅನ್ನು ಓದಿಕೊಂಡಾಗ, ಮನಸ್ಸಲ್ಲಿ ಅನುರಣಿಸಿಕೊಂಡಾಗೆಲ್ಲ ನನಗೆ ನಮ್ಮೂರಿನ ಹೈಸ್ಕೂಲಿನ ಪಕ್ಕ ಪುಟ್ಟ ಮನೆ ಮಾಡಿಕೊಂಡಿದ್ದ ಲಲಿತಮ್ಮ ನೆನಪಾಗುತ್ತಾರೆ.


ಜೀವನ ನಿರ್ವಹಣೆಗಾಗಿ ಸಣ್ಣದೊಂದು ಗದ್ದೆ ಇಟ್ಟುಕೊಂಡಿದ್ದ ಅವರು ತಮ್ಮ ಗಂಡನ ಜೊತೆಗೂಡಿ ಬೆಳಗ್ಗೆ ಎಂಟುಗಂಟೆಗೇ ಮಧ್ಯಾಹ್ನದ ಬುತ್ತಿಯನ್ನೂ ಕಟ್ಟಿಕೊಂಡು ಹೊಲಕ್ಕೆ ಹೊರಟರೆ ಮರಳುತ್ತಿದ್ದುದು ಸಂಜೆ ಆರು ಗಂಟೆಗೆ. ಹಾಗೆ ಹೋಗುವಾಗೆಲ್ಲಾ ತಮ್ಮ ಮನೆಯ ಪುಟ್ಟ ಗೇಟ್‌ಅನ್ನು ತೆರೆದಿಟ್ಟೇ ಹೋಗುತ್ತಿದ್ದ ದಂಪತಿಯೆಂದರೆ ನಮಗೆ ತೀರದ ಅಚ್ಚರಿ.

ಹೈಸ್ಕೂಲ್ ದಿನಗಳ ಸಹಜ ಕುತೂಹಲದಿಂದ ನಾವು ಕೆಲ ಹೆಣ್ಣುಮಕ್ಕಳು ಆ ಮನೆಯ ಸುತ್ತ ವಿನಾಕಾರಣ ಠಳಾಯಿಸುತ್ತಿದ್ದೆವು.

13ನೇ ಪುಟಕ್ಕೆ...

ವಯಸ್ಸನ್ನು ಜ್ಞಾಪಿಸಬೇಡಿ...

ಕನ್ನಡದ ಬಹುಮುಖ್ಯ ಚಿಂತಕ–ಲೇಖಕರಲ್ಲಿ ಒಬ್ಬರಾದ ಬರಗೂರು ರಾಮಚಂದ್ರಪ್ಪ ಅವರು ಮಾತು, ಬರಹ, ಚಿಂತನೆ ಮತ್ತು ಕ್ರಿಯೆಯಲ್ಲಿ ಸದಾ ಕ್ರಿಯಾಶೀಲವಾಗಿ ತೊಡಗಿಸಿಕೊಂಡವರು. ಕಥೆ, ಕಾವ್ಯ, ಕಾದಂಬರಿ, ವಿಮರ್ಶೆ ಸೇರಿದಂತೆ ಸಾಹಿತ್ಯದ ಹಲವು ಪ್ರಕಾರಗಳಿಗೆ ಅರ್ಥಪೂರ್ಣವಾದ ಕೊಡುಗೆ ನೀಡಿದವರು. ಬಂಡಾಯ ಸಾಹಿತ್ಯ ಸಂಘಟನೆಯನ್ನು ಮುಂಚೂಣಿಯಲ್ಲಿ ನಿಂತು ರೂಪಿಸಿದವರಲ್ಲಿ ಒಬ್ಬರು. ಶ್ರಮ ಮತ್ತು ಸೃಜನಶೀಲತೆಯ ಸಂಬಂಧವನ್ನು ಕಾಯ್ದಿಟ್ಟುಕೊಂಡವರು. ಅಧ್ಯಾಪಕರಾಗಿ, ಸಿನಿಮಾ ನಿರ್ದೇಶಕರಾಗಿ, ಆಡಳಿತಗಾರರಾಗಿ ನಾಡು–ನುಡಿಯನ್ನು ಕಟ್ಟುವ ಕೆಲಸದಲ್ಲಿ, ಜನಪರ ಮನಸ್ಸುಗಳನ್ನು ರೂಪಿಸುವ ಕ್ರಿಯೆಯಲ್ಲಿ ದಣಿವರಿಯದ ದುಡಿಮೆ ಅವರದು. ಸ್ಪಷ್ಟ ನಿಲುವು, ಖಚಿತ ಮಾತುಗಳಿಗೆ ಹೆಸರಾದ ಬರಗೂರು ಅವರ ಸಮಗ್ರ ಸಾಹಿತ್ಯ ಸಂಪುಟ 'ಬೆವರು ನನ್ನ ದೇವರು' ಈ ತಿಂಗಳ 12ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಜನಾರ್ಪಣೆ ಆಗಲಿದೆ. ಈ ಹಿನ್ನೆಲೆಯಲ್ಲಿ ಹಿರಿಯ ಚೇತನದೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.



ಸಂದರ್ಶನ: ಎನ್. ಉದಯಕುಮಾರ್

- **ಸರ್ವಾಧಿಕಾರಿ ಧೋರಣೆಗಳೇ ವಿಜೃಂಭಿಸುತ್ತಿರುವ ಈ ಹೊತ್ತಲ್ಲಿ ಲೇಖಕರ ಜವಾಬ್ದಾರಿ ಏನು?**

ಸಂವಿಧಾನಾತ್ಮಕ ಆಶಯಗಳನ್ನು ಕೇಂದ್ರವಾಗಿಟ್ಟುಕೊಂಡೇ ಸರ್ವಾಧಿಕಾರಕ್ಕೆ ನಾವು ಎದುರಾಗಬೇಕು. ಎಲ್ಲ ರೀತಿಯ ಸರ್ವಾಧಿಕಾರಗಳನ್ನು ವಿರೋಧಿಸಬೇಕು– ಅದು ಜಾತಿ ಮೂಲವಾದ ಸಾಮಾಜಿಕ ಸರ್ವಾಧಿಕಾರ ಆಗಿರಲಿ, ಧರ್ಮ ಮೂಲವಾದ ಸಾಂಸ್ಕೃತಿಕ ಸರ್ವಾಧಿಕಾರ ಆಗಿರಲಿ ಅಥವಾ ಅಧಿಕಾರ ಮೂಲವಾದ ರಾಜಕೀಯ ಸರ್ವಾಧಿಕಾರ ಆಗಿರಲಿ.

ಸಾಹಿತಿಗಳಾದ ನಾವು ಜನರಿಂದ ಮನ್ನಣೆ ನಿರೀಕ್ಷಿಸುತ್ತೇವೆ. ಜನ ನಮ್ಮಿಂದ ಜವಾಬ್ದಾರಿ ನಿರೀಕ್ಷಿಸುತ್ತಾರೆ. ಯಾವುದೋ ಒಂದು ಪಕ್ಷ ಇಲ್ಲವೇ ಮುಖಂಡನನ್ನು ವಿರೋಧಿಸುವುದು ಆದ್ಯತೆಯಾಗದೆ ಸತ್ಯವನ್ನು ಜನರಿಗೆ ಮನವರಿಕೆ ಮಾಡಿಕೊಡುವುದೇ ಆದ್ಯತೆ ಆಗಬೇಕು.

- **ಯುವ ಸಮುದಾಯವು ಮುಕ್ತ ಚರ್ಚೆ– ಸಂವಾದಗಳಿಗೆ ಬೆನ್ನು ತಿರುಗಿಸಿ ನಿಂತಿರುವಂತೆ ಭಾಸವಾಗುತ್ತಿದೆ. ಇದಕ್ಕೆ ಕಾರಣ ಏನಿರಬಹುದು?**

ಇದಕ್ಕೆ ಶಿಕ್ಷಣ ವ್ಯವಸ್ಥೆ, ಸಾಮಾಜಿಕ ಮತ್ತು ರಾಜಕೀಯ ಸಂದರ್ಭಗಳು ಕಾರಣ. ಶಿಕ್ಷಣ ಕ್ಷೇತ್ರದಲ್ಲಿ ಬದ್ಧತೆ ಕಡಿಮೆಯಾಗಿದೆ. ಶಿಕ್ಷಣ ಯಾಂತ್ರಿಕವಾಗಿದೆ. ವಿಚಾರಮಂಥನಕ್ಕೆ ಅವಕಾಶ ಇಲ್ಲದಿರುವುದೇ ಹೆಚ್ಚು. ಇದನ್ನು ಜಾತಿ– ಧರ್ಮದ ಶಕ್ತಿಗಳು ದುರುಪಯೋಗ ಮಾಡಿಕೊಳ್ಳುತ್ತಿವೆ. ಪ್ರಗತಿಪರ ಪ್ರತಿರೋಧದ ಶಕ್ತಿ ಹಿಂದಿನಷ್ಟು ಪ್ರಖರವಾಗಿಲ್ಲ. ಜಾಗತೀಕರಣವು ನಮ್ಮ ಮನಃಸ್ಥಿತಿಯಲ್ಲಿ ಪರೋಕ್ಷವಾಗಿ ಸ್ವಾರ್ಥ ತುಂಬಿದೆ. ಸಮೂಹಪ್ರಜ್ಞೆ ಜಾಗದಲ್ಲಿ ವ್ಯಕ್ತಿಪ್ರಜ್ಞೆ ಬಂದು ಕುಳಿತಿದೆ. 'ನಾನು ಚೆನ್ನಾಗಿದ್ದಾರೆ ಸಾಕು' ಎಂಬ ಭಾವ ಬೆಳೆದಿದೆ. ಯುವಪೀಳಿಗೆಯು ಸಮೂಹಸನ್ನಿಗೆ ಬಲಿಯಾಗುತ್ತಿದೆ.

- **ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಬರವಣಿಗೆಯ ಕೃಷಿ ಮಾಡಿದ್ದೀರಿ. ಅವುಗಳಲ್ಲಿ ನಿಮಗೆ ಇಷ್ಟವಾದ ಕೃತಿ ಅಥವಾ ಬರಹ ಯಾವುದು?**

ನನ್ನ ಒಟ್ಟು ಸಾಹಿತ್ಯ ಕೃಷಿಯೇ ಒಂದು ಕೃತಿ. ಅದರಲ್ಲಿ ಒಂದು ಗ್ರಾಫ್ ಇದೆ. ನಿರ್ದಿಷ್ಟ ಆಶಯದ ಬೆಳವಣಿಗೆಯನ್ನು ಅದರಲ್ಲಿ ಕಾಣಬಹುದು. ಕೆಲವು ಸಲ ಬೆಳೆ ಚೆನ್ನಾಗಿ ಬಂದಿರಬಹುದು. ಕೆಲವೊಮ್ಮೆ ಚೆನ್ನಾಗಿ ಬಾರದೇ ಇದ್ದಿರಬಹುದು. ಇಷ್ಟಾಗಿಯೂ ವೈಚಾರಿಕ ಬರಹಗಳು ನನಗೆ ಯಾವಾಗಲೂ ಇಷ್ಟ. ಇತ್ತೀಚಿನ ದಿನಗಳಲ್ಲಿ ಬರೆದಂತಹ 'ಮರಣ ದಂಡನೆ', 'ಶಬರಿ', ಕಸ್ತೂರ್‌ಬಾ vs ಗಾಂಧಿ' ಯಂಥ ಕಾದಂಬರಿಗಳು ಕೂಡ ಇಷ್ಟ. ಇಲ್ಲೆಲ್ಲ ಇನ್ನಷ್ಟು ಮಾಗಿದ್ದೇನೆ ಅಂತ ಅನಿಸುತ್ತದೆ.

ವೈಚಾರಿಕ ಬರಹಗಾರ ಎಂದು ಬ್ರ್ಯಾಂಡ್ ಆದ ಕಾರಣಕ್ಕೋ ಏನೋ ನನ್ನ ಸೃಜನಶೀಲ ಬರವಣಿಗೆ ಕುರಿತಂತೆ ತುಂಬಾ ಗಮನಾರ್ಹ ವಿಮರ್ಶೆ ಬರಲಿಲ್ಲವೇನೋ ಅಂತ ಅನಿಸುತ್ತದೆ. ಅದರಲ್ಲೂ ವಿಶೇಷವಾಗಿ ಕಾವ್ಯದ ಕುರಿತು. ಕವಿ ಮನಸ್ಸು ಇಲ್ಲದೇ ಇದ್ದರೆ ನಾನು ಉತ್ತಮ ವೈಚಾರಿಕ ಲೇಖಕ ಆಗಲಿಕ್ಕೇ ಆಗುತ್ತಿರಲಿಲ್ಲ.

12ನೇ ಪುಟಕ್ಕೆ...

ಕುಣಿಯುವ ಜಿಂಕೆಗಳ ನಡುವೆ...

ಡಾ. ಕೆ.ಎಸ್.ಚೈತ್ರಾ

'ಭಾರತದ ಸ್ವಿಡ್ಜರ್ಲೆಂಡ್ ಎಂದೇ ಪ್ರಸಿದ್ಧವಾದ ಮಣಿಪುರದ ರಾಜಧಾನಿ ಇಂಫಾಲ ನಗರವನ್ನು ಇನ್ನೇನು ತಲುಪಲಿದ್ದೇವೆ' ಎಂಬ ಗಗನಸಖಿಯ ಘೋಷಣೆ ಕೇಳಿ ಸುಮ್ಮನೇ ಕಿಟಕಿಯಿಂದ ನೋಡಿದೆ. ತಿಳಿನೀಲಿಬಣ್ಣದ ಸೀರೆಯಂತೆ ವಿಸ್ತಾರವಾಗಿ ಹರಡಿದ ಜಲರಾಶಿಯ ನಡುವೆ ಹಸಿರು ಬಳೆಗಳಂಥ ದೊಡ್ಡ ವರ್ತುಲಗಳು! ಎಷ್ಟು ಚೆಂದ ಅನ್ನಿಸುವ ಜತೆಗೆ ಏನಿರಬಹುದು ಎಂಬ ಕುತೂಹಲವೂ ಮೂಡಿತ್ತು. ಮಣಿಪುರದ ಹಸಿರು ಬೆಟ್ಟ, ಆಳವಾದ ಕಣಿವೆ, ದಟ್ಟವಾದ ಕಾಡು, ಹಾಲ್ನೊರೆಯ ಜಲಪಾತ ಎಲ್ಲವನ್ನೂ ನೋಡಿದ್ದಾಯ್ತು.

ಮಹಿಳೆಯರೇ ನಡೆಸುವ ಇಮಾ ಖೈತೆಲ್ (ಅಮ್ಮಂದಿರ ಮಾರುಕಟ್ಟೆ) ಸುತ್ತುವಾಗ ಬಟ್ಟೆ, ಗೊಂಬೆ, ಮ್ಯಾಗ್ನೆಟ್, ಪುಸ್ತಕ ಹೀಗೆ ಎಲ್ಲೆಲ್ಲೂ ಉದ್ದ ಕೊಂಬಿನ ಜಿಂಕೆಯ ಚಿತ್ರ, ಇದೇನು ಎಂದು ವಿಚಾರಿಸಿದಾಗ 'ಮಣಿಪುರದ ರಾಜ್ಯ ಪ್ರಾಣಿ ಇದು. ಜಗತ್ತಿನಲ್ಲೇ ವಿಶಿಷ್ಟ. ಏಕೆಂದರೆ ಇದು ಕುಣಿಯುವ ಜಿಂಕೆ' ಎಂಬ ಉತ್ತರ ಸಿಕ್ಕಿತು. ಅರೆ, ಈ ಪುಟ್ಟ ರಾಜ್ಯದಲ್ಲಿ ಪ್ರಾಣಿ ಪಕ್ಷಿಗಳೂ ಕುಣಿಯುತ್ತವೆಯೇ ಎಂದು ಬೆರಗಾದೆ. ಇಷ್ಟೆಲ್ಲಾ ಕೇಳಿದ ಮೇಲೆ ನೋಡದೇ ಬರುವುದು ಹೇಗೆ? ಅಂತೂ ಮಾಯಾ ಜಿಂಕೆ ಅಲ್ಲ, ಕುಣಿಯುವ ಜಿಂಕೆಯನ್ನು ನೋಡಲು ಇಂಫಾಲದಿಂದ ಐವತ್ತು ಕಿ.ಮೀ. ದೂರದಲ್ಲಿರುವ ಬಿಷ್ಣುಪುರ ಜಿಲ್ಲೆಯ ಲೋಕ್ತಾಕ್ ಸರೋವರದಲ್ಲಿರುವ ಕೈಬುಲ್ ಲಾಮ್ಜಾವೋ ರಾಷ್ಟ್ರೀಯ ಉದ್ಯಾನವನಕ್ಕೆ ನಮ್ಮ ಪಯಣ ಶುರುವಾಯ್ತು.


ಬಾಲೆಯ ಥರ ಬ್ಯಾಲೆ ಮಾಡುವ ಜಿಂಕೆ


ಲೋಕ್ತಾಕ್ ಸರೋವರದಲ್ಲಿ ಮೀನು ಶಿಕಾರಿ

ಪ್ರವಾಸ

ಲೋಕ್ತಾಕ್ ಸರೋವರ

ಉತ್ತರ ಭಾರತದ ಅತಿದೊಡ್ಡ ಸಿಹಿ ನೀರಿನ ಸರೋವರವಾದ ಲೋಕ್ತಾಕ್ ಸುಮಾರು ಮುನ್ನೂರು ಚದರ ಅಡಿಗಳಷ್ಟು ದೊಡ್ಡದು. ಈ ಸರೋವರದಲ್ಲಿ ಮಣ್ಣು, ಸಸ್ಯರಾಶಿ ಮತ್ತು ಸಾವಯವ ಅಂಶಗಳು ಸೇರಿದ ಫ್ಯೂಮಿಡ್ ಹಾಸು ನಿರ್ಮಾಣವಾಗಿ ಅವು ದ್ವೀಪದ ಮಾದರಿಯಲ್ಲಿ ತೇಲುತ್ತಿರುತ್ತವೆ. ಈ ಸರೋವರ ಮಣಿಪುರಿ ಜನರ ಜೀವನಾಡಿ; ಮೀನು ಸಾಕಾಣಿಕೆ ಇಲ್ಲಿನ ಜನರ ಪ್ರಮುಖ ಉದ್ಯೋಗವಾಗಿದ್ದು, ಈ ಸರೋವರ ಮೀನುಗಳ ಆಶ್ರಯ ತಾಣ. ಇದಲ್ಲದೇ ಜಲವಿದ್ಯುತ್ ಯೋಜನೆಗೆ ಇಲ್ಲಿಯ ನೀರು ಬಳಕೆಯಾದರೆ, ಕೃಷಿ ಚಟುವಟಿಕೆ ಮತ್ತು ಕುಡಿಯಲು ಇಲ್ಲಿಂದಲೇ ನೀರು ಪೂರೈಕೆಯಾಗುತ್ತದೆ. ವಿಶಾಲವಾದ ಈ ಸರೋವರದಲ್ಲಿ ಅಲ್ಲಲ್ಲಿ ಕಾಣುವ ಹಸಿರು ಬಳೆಯಂಥ ವೃತ್ತಾಕಾರದ ವಿನ್ಯಾಸಗಳೇ ಫ್ಯೂಮಿಡಿಶಾಂಗ್. ಅವುಗಳು ಮೀನುಗಳನ್ನು ಹಿಡಿಯಲು ಸ್ಥಳೀಯರು ಫ್ಯೂಮಿಡಿ ಬಳಸಿ ಕಟ್ಟಿರುವ ಮೀನು ಹಿಡಿಯುವ ಸ್ಥಳಗಳು. ಈ ಸರೋವರದಲ್ಲಿರುವ ಕೈಬುಲ್ ಲಾಮ್ಜಾವೋ ರಾಷ್ಟ್ರೀಯ ಉದ್ಯಾನವನ ಪ್ರಪಂಚದ ಏಕೈಕ ತೇಲುವ ಉದ್ಯಾನ. ಜೀವವೈವಿಧ್ಯದ ನೆಲೆಯಾಗಿರುವ ಈ ಅಪೂರ್ವ ತಾಣದಲ್ಲಿ ಕಾಡು ಬೆಕ್ಕು, ಹಾರುವ ನರಿ, ಸೀಲ್, ಕರಡಿ, ಬಿದಿರ ಇಲಿ, ಸಿವೆಟ್ ಬೆಕ್ಕು, ವಿವಿಧ ರೀತಿಯ ಹಾವುಗಳು ಮತ್ತು ಅಪರೂಪದ ಪ್ರಭೇದಗಳ ಮೀನುಗಳನ್ನು ಕಾಣಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಇಡೀ ಜಗತ್ತಿನಲ್ಲಿ, ಕುಣಿಯುವ ಜಿಂಕೆಗಳ ಏಕೈಕ ಪ್ರಾಕೃತಿಕ ನೆಲೆ ಇದಾಗಿದೆ!

ಸಾಂಗೈನ ಬ್ಯಾಲೆ

ಟಿಕೆಟ್ ಪಡೆದು ಉದ್ಯಾನವನದ ಜೀಪಿನಲ್ಲಿ ಉದ್ಯಾನವನದ ಒಳಗೆ ಹೊಕ್ಕಾಗ ಕಂಡಿದ್ದು ವಿಶಾಲ ಹುಲ್ಲುಗಾವಲು, ಅಲ್ಲಲ್ಲಿ ಸಣ್ಣ ಹೂವು ಅಷ್ಟೆ. ವೀಕ್ಷಣೆಗೆ ನಿರ್ಮಿಸಿರುವ ಅಟ್ಟಣಿಗೆಯಲ್ಲಿ ನಿಂತು ಎಲ್ಲೆಡೆ ದೃಷ್ಟಿ ಹಾಯಿಸಿದ್ದಾಯ್ತು. 'ಸದ್ದು ಮಾಡಬೇಡಿ, ಬೆಳಿಗ್ಗೆ 5-8 ಮತ್ತು ಸಂಜೆ 3-6 ಜಿಂಕೆಗಳು ಹುಲ್ಲು ತಿನ್ನಲು ಬರುವ ಸಮಯ' ಎಂಬ ಎಚ್ಚರಿಕೆಯ ನಡುವೆ ಅಲ್ಲಿದ್ದ ಬೈನಾಕ್ಯುಲರ್ಸ್‌ನಲ್ಲಿ ನೋಡುತ್ತಿದ್ದಂತೆ ಕಣ್ಣಿಗೆ ಬಿತ್ತು ಜಿಂಕೆ. ಕಂದು ಬಣ್ಣದ ಮೈ, ಉದ್ದದ ಕೋಡು. ನೋಡುತ್ತಿದ್ದಂತೆ ಕಾಲು ಬಗ್ಗಿಸಿ ಇನ್ನೊಂದೆಡೆಗೆ ಕುಣಿಯುತ್ತಾ ಓಡಿತು. ಆಗಾಗ್ಗೆ ನಿಂತು ಕತ್ತು ತಿರುಗಿಸಿ ಕಣ್ಣು ಅರಳಿಸಿ ಪೋಸ್ ಬೇರೆ ಕೊಡುತ್ತಿತ್ತು, ಥೇಟ್ ಬ್ಯಾಲೆ ಮಾಡುವ ಬಾಲೆಯ ಥರ! ಸ್ವಲ್ಪ ದೂರ ಹೀಗೆ ಕುಣಿದು ನಂತರ ಹುಲ್ಲಿನ ಮಧ್ಯೆ ಮಾಯವಾಯಿತು.

ಸ್ಥಳೀಯ ಭಾಷೆಯಲ್ಲಿ ಸಾಂಗೈ ಎಂದು ಕರೆಯಲಾಗುವ ಈ ಜಿಂಕೆಯ ಹೆಸರಿಗೆ ಅದರ ಈ ವರ್ತನೆಯೇ ಕಾರಣ. ಸಾ-ಪ್ರಾಣಿ ಅಂಗೈ-ಕಾಯುವುದು. ಈ ಜಿಂಕೆ ಎಂಥದ್ದೇ ಸಂದರ್ಭದಲ್ಲಿ ಓಡುವಾಗಲೆಲ್ಲಾ ಆಗಾಗ್ಗೆ ನಿಂತು ಹಿಂತಿರುಗಿ ನೋಡುತ್ತದೆ. ಅದರ ಭಂಗಿ, ಕಣ್ಣು ಮತ್ತು ಕಿವಿ ಅದು ಯಾರಿಗೋ ಕಾಯುತ್ತಿರುವ ಹಾಗೆ ಭಾಸವಾಗುತ್ತದೆ. ಹೀಗಾಗಿ ಅದೇ ಹೆಸರು! ಇದಕ್ಕಿರುವ ವಿಶಿಷ್ಟ ಕೋಡುಗಳಿಂದಾಗಿ ಬ್ರೋ ಆಂಟ್ಲರ್ಡ್ ಡೀರ್ ಎಂದೂ ಕರೆಯಲಾಗುತ್ತದೆ. 1951ರಲ್ಲಿ ಈ ಅಪರೂಪದ ತಳಿ ಅಳಿದುಹೋಗಿದೆ ಎಂದೇ ಭಾವಿಸಲಾಗಿತ್ತು. ಆದರೆ ಇದೇ ಉದ್ಯಾನವನದಲ್ಲಿ 1953ರಲ್ಲಿ ಅದನ್ನು ಕಂಡುಹಿಡಿದ ಕೀರ್ತಿ ಪರಿಸರತಜ್ಞ ಎಡ್ವರ್ಡ್ ಪಿ. ಜಿ. ಅವರಿಗೆ ಸಲ್ಲುತ್ತದೆ.

ಕುಣಿತದ ಗುಟ್ಟು

ವಿಶಾಲವಾದ ಈ ಹುಲ್ಲುಗಾವಲಿಗೆ ಪ್ರವೇಶ ಸಣ್ಣ ದೋಣಿಯಲ್ಲಿ ಎಂದಾಗ ಆಶ್ಚರ್ಯವಾಯ್ತು. ದೋಣಿ ಹತ್ತಲು ಕೆಳಗೆ ಬಂದಾಗಲೇ ತಿಳಿದಿದ್ದು ನಾವು ನೋಡುತ್ತಿರುವುದು ನೀರಿನ ಮೇಲೆ ಬೆಳೆದ ಹುಲ್ಲು, ಜೊಂಡು ಸಸ್ಯಗಳ ಫ್ಯೂಮಿಡಿಯ ದಪ್ಪ ಹಾಸಿಗೆ! ಈ ಹಾಸು ಕೆಲವು ಸೆಂಟಿಮೀಟರ್‌ಗಳಿಂದ ಎರಡು ಮೀಟರ್‌ಗಳವರೆಗೆ ದಪ್ಪವಿರುತ್ತದೆ. ಬೇಸಿಗೆಯಲ್ಲಿ ಸರೋವರದ ನೀರು ಕಡಿಮೆಯಾದಂತೆ ಈ ಜೌಗು ಸಸ್ಯಗಳ ಬೇರುಗಳು ನೆಲವನ್ನು ಮುಟ್ಟಿ ಅಲ್ಲಿಂದ ಮಣ್ಣಿನ ಸಾರ ಹೀರಿಕೊಳ್ಳುತ್ತವೆ. ಮಳೆಗಾಲದಲ್ಲಿ ನೀರಿನ ಪ್ರಮಾಣ ಹೆಚ್ಚಿದಂತೆ ಸರೋವರದ ತಳದಿಂದ ಮೇಲೆದ್ದು ನೀರಿನಲ್ಲಿ ತೇಲುತ್ತವೆ. ಪ್ರತೀ ಮಳೆಗಾಲ-ಬೇಸಿಗೆಯಲ್ಲಿ ಇದು ನಡೆದು ಈ ಫ್ಯೂಮಿಡಿ ಬೆಳೆಯುತ್ತದೆ. ಈ ಹಾಸು ತೆಳ್ಳಗಿದ್ದು ಹುಲ್ಲಿನ ನಡುವೆ ಅಲ್ಲಲ್ಲಿ ನೀರದಾರಿಯಲ್ಲಿ ದೋಣಿ ಸಾಗಿದಂತೆ ಜಿಂಕೆಯ ಕುಣಿತದ ಕಾರಣ ತಿಳಿಯಿತು. ಸರೋವರದ ಮೇಲೆ ತೇಲುವ ಈ ದಪ್ಪಹುಲ್ಲುಹಾಸಿನ ಮೇಲೆ ಓಡಾಡುವಾಗ ಜಿಂಕೆಯ ಪಾದಗಳು ಸ್ವಲ್ಪ ಕೆಳಕ್ಕಿಳಿದು ಮೇಲೆ ಬರುತ್ತವೆ, ಅಂದರೆ ಕುಪ್ಪಳಿಸಿದ ಹಾಗೆ. ದೂರದಿಂದ ನೋಡಿದಾಗ ಇದು ಜಿಂಕೆ ಕುಣಿಯುತ್ತಿರುವ ಹಾಗೆ ಕಾಣಿಸುತ್ತದೆ!



ಶುಭ ಶಕುನ

ಮಣಿಪುರದ ಜಾನಪದ ಸಾಹಿತ್ಯದಲ್ಲಿ ಸಾಂಗೈ ಬಗ್ಗೆ ಸಾಕಷ್ಟು ಉಲ್ಲೇಖಗಳಿವೆ. ಮನುಷ್ಯರು ಮತ್ತು ಪ್ರಕೃತಿಯನ್ನು ಬೆಸೆಯುವ ಆತ್ಮ ಈ ಸಾಂಗೈ ಎಂದು ವರ್ಣಿಸಲಾಗಿದೆ. ಹಾಗಾಗಿಯೇ ಈ ಜಿಂಕೆ ಕೊಂದರೆ ಅದು ಮಹಾಪಾಪ, ಪ್ರಕೃತಿಗೆ ಮಾಡುವ ಅಪಚಾರ ಎಂದು ಭಾವಿಸಲಾಗುತ್ತದೆ. ಜನಪದ ಕತೆಯೊಂದು ಕಡೆಂಗ್ ಎಂಬ ಮೊಯಿರಂಗ್ ಪ್ರಾಂತ್ಯದ ಮಹಾವೀರ ತನ್ನ ಪ್ರಿಯತಮೆಗಾಗಿ ಗರ್ಭಿಣಿ ಜಿಂಕೆಯೊಂದನ್ನು ಬೇಟೆಯಲ್ಲಿ ಸೆರೆ ಹಿಡಿದ. ಆದರೆ ಮರಳಿ ಬರುವಷ್ಟರಲ್ಲಿ ಆತನ ಪ್ರಿಯತಮೆ ರಾಜನನ್ನು ವರಿಸಿ ರಾಣಿಯಾಗಿದ್ದಳು. ದುಃಖಿತನಾದ ಆತ ಈ ಜಿಂಕೆಯನ್ನು ಕೈಬುಲ್ ಲಾಮ್ಜಾವೋ ಕಾಡಿನಲ್ಲಿ ಬಿಡುಗಡೆ ಮಾಡಿದ. ಅಂದಿನಿಂದ ಇದೇ ಸಾಂಗೈಗಳ ವಾಸಸ್ಥಾನವಾಯಿತು ಎಂದು ವಿವರಿಸುತ್ತದೆ. ಮತ್ತೆ ಕೆಲವು ದಂತಕತೆಗಳ ಪ್ರಕಾರ ಲುವಾಂಗ್ ವಂಶದ ರಾಜಕುವರ ದೈವಬಲದಿಂದ ಸಾಂಗೈ ಎಂಬ ಜಿಂಕೆಯಾಗಿದ್ದಾನೆ. ಕತೆ ಏನೇ ಇರಲಿ ಸಾಂಗೈ ಎಂದರೆ ಇಲ್ಲಿಯ ಜನರಿಗೆ ಶುಭ ಶಕುನ ಮತ್ತು ಎಲ್ಲಿಲ್ಲದ ಹೆಮ್ಮೆ! ನೃತ್ಯ, ಸಂಗೀತ, ನಾಟಕ, ಸಾಹಿತ್ಯ ಎಲ್ಲದರಲ್ಲೂ ಸಾಂಗೈ ಕಾಣಬಹುದು. ಪ್ರತಿವರ್ಷ ನವೆಂಬರ್‌ನಲ್ಲಿ ಹತ್ತು ದಿನಗಳ ಕಾಲ ಸಾಂಗೈ ಸಾಂಸ್ಕೃತಿಕ ಉತ್ಸವವನ್ನು ರಾಜ್ಯದೆಲ್ಲೆಡೆ ಹಮ್ಮಿಕೊಳ್ಳಲಾಗುತ್ತದೆ. ತಮ್ಮ ಕಲೆ-ಸಂಸ್ಕೃತಿ-ಸ್ಥಳೀಯ ಪಾಕವೈವಿಧ್ಯ, ಸಾಹಸ ಕ್ರೀಡೆಗಳು ಹೀಗೆ ರಾಜ್ಯದ ವೈಶಿಷ್ಟ್ಯವನ್ನು ಬಿಂಬಿಸಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸುವ ಉದ್ದೇಶ ಇದರದ್ದು.

ಕುಣಿತ ನಿಲ್ಲುವ ಭೀತಿ

ಐವತ್ತರ ದಶಕದಲ್ಲಿ ಬೆರಳೆಣಿಕೆಯಷ್ಟಿದ್ದ ಸಾಂಗೈಗಳು ಈಗ ಇನ್ನೂರಕ್ಕೂ ಹೆಚ್ಚಿವೆ. ಆದರೆ ಆತಂಕ ಮೂಡಿಸುವ ವಿಷಯವೆಂದರೆ ಇವುಗಳ ಉಳಿವಿಗೆ ಕಾರಣವಾದ ಫ್ಯೂಮಿಡಿಯ ಹಾಸು ತೆಳುವಾಗುತ್ತಿದೆ. ಅಣೆಕಟ್ಟು ನಿರ್ಮಾಣ, ಅಕ್ರಮ ಬೇಟೆ, ಸರೋವರದ ಸರಹದ್ದಿನಲ್ಲಿ ಜನವಸತಿ ಈ ಎಲ್ಲಾ ಕಾರಣಗಳಿಂದ ಸರೋವರದಲ್ಲಿ ಈ ಹಾಸು ಅಲ್ಲಲ್ಲಿ ಚೆದುರುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರಿದಲ್ಲಿ ಸಾಂಗೈಗಳು ನಶಿಸುವ ಸಾಧ್ಯತೆ ಇದೆ. ಇವುಗಳಿಗೆ ಬೇರೆ ಕಡೆ ನೆಲೆ ನಿರ್ಮಿಸುವ ಬಗ್ಗೆ ಚಿಂತನೆ ನಡೆದಿದೆಯಾದರೂ ಬಹಳ ನಾಚಿಕೆ ಸ್ವಭಾವದ ಇವು ಬೇರೆಡೆ ಹೊಂದಿಕೊಳ್ಳುವ ಸಾಧ್ಯತೆ ಕಡಿಮೆ ಎಂದೂ ಹೇಳಲಾಗುತ್ತದೆ. ಸಾಂಗೈಗಳ ಕುಣಿತ ಇನ್ನೆಷ್ಟು ದಿನ? ಕಾಲವೇ ನಿರ್ಧರಿಸಬೇಕು!



ಲೋಕ್ತಾಕ್ ಸರೋವರದಲ್ಲಿ ವಿಹಾರ ಮಾಡಿಸುವ ದೋಣಿಗಳು

ರೋಗವೇ ಮದ್ದಾದರೆ ಉಳಿಯಲು ಸಾಧ್ಯವೇ?

10ನೇ ಪುಟದಿಂದ...

ರೆಮಾ ನಾಗರಾಜನ್ ಅವರು 2017ರಲ್ಲಿ ವರದಿ ಮಾಡಿದಂತೆ, ಸರ್ಕಾರಿ ಕಾಲೇಜುಗಳಲ್ಲಿ ಸಾಮಾನ್ಯ, ಒಬಿಸಿ, ಎಸ್‌ಸಿ, ಎಸ್‌ಟಿ ಕೋಟಾಗಳಲ್ಲಿ ಕ್ರಮವಾಗಿ 524, 465, 398, 332 (ಸರಾಸರಿ 470) ಅಂಕಗಳಿದ್ದವರಿಗೆ ಸೀಟು ದೊರೆತರೆ, ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ 399, ಮ್ಯಾನೇಜ್‌ಮೆಂಟ್ ಕೋಟಾದಲ್ಲಿ 315, ಎನ್‌ಆರ್‌ಐ ಕೋಟಾದಲ್ಲಿ 221 (ಸರಾಸರಿ 345) ಅಂಕಗಳಿದ್ದವರಿಗೆ ದೊರೆತಿತ್ತು; ಸರ್ಕಾರಿ ಕಾಲೇಜುಗಳಲ್ಲಿ ಎಸ್‌ಸಿ ಕೋಟಾದ ವಿದ್ಯಾರ್ಥಿಗಳ ಅಂಕಗಳು 398 ಆಗಿದ್ದರೆ, ಎಲ್ಲಾ ಸೀಟುಗಳನ್ನೂ ಪರಿಗಣಿಸಿದರೆ 367 ಆಗಿತ್ತು, ಅಂದರೆ, ಖಾಸಗಿ ಕಾಲೇಜುಗಳ ಮ್ಯಾನೇಜ್‌ಮೆಂಟ್ ಮತ್ತು ಎನ್‌ಆರ್‌ಐ ಕೋಟಾದಲ್ಲಿ ಪ್ರವೇಶ ಪಡೆದವರಿಗಿಂತಲೂ ಎಸ್‌ಸಿ ವಿದ್ಯಾರ್ಥಿಗಳಿಗೆ 52 ಅಂಕಗಳು ಹೆಚ್ಚೇ ಇದ್ದವು. ಅದೇ ವರ್ಷ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದ ಕನಿಷ್ಠ 400 ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಕೇವಲ ಒಂದಂಕೆಯ ಅಂಕಗಳನ್ನು ಪಡೆದಿದ್ದರು ಮತ್ತು 110 ವಿದ್ಯಾರ್ಥಿಗಳು ಭೌತ ಹಾಗೂ ರಸಾಯನ ವಿಜ್ಞಾನಗಳಲ್ಲಿ ಸೊನ್ನೆ ಯಾ ನೆಗೆಟಿವ್ ಅಂಕಗಳನ್ನು ಪಡೆದಿದ್ದರು! ಕಳೆದ ವರ್ಷ ಕೇವಲ 138 (ಶೇ 19) ಅಂಕಗಳಿದ್ದವರು ಖಾಸಗಿ ಕಾಲೇಜಿಗೆ ಸೇರಲು ಅರ್ಹರಾಗಿದ್ದರು, 7.5 ಲಕ್ಷ ರ್‍ಯಾಂಕ್‌ಗೂ ಖಾಸಗಿ ಸೀಟು ದಕ್ಕಿತ್ತು!

ಆದ್ದರಿಂದ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸೀಟುಗಳು ದೊರೆಯದಾಗಲು ವೈದ್ಯ ಶಿಕ್ಷಣದ ಖಾಸಗೀಕರಣ, ಅಲ್ಲಿನ ವಿಪರೀತ ಶಿಕ್ಷಣ ಶುಲ್ಕ ಹಾಗೂ ಅತಿ ಹೆಚ್ಚಿನ ಹಣ ತೆತ್ತರೆ ಅತಿ ಕಡಿಮೆ ಅಂಕಗಳಿದ್ದವರಿಗೆ ಸೀಟು ಕೊಡುವ ವ್ಯವಸ್ಥೆಯ ಮೂಲಕ ನೀಟ್ ಪರೀಕ್ಷೆಯ ಆಶಯವನ್ನು ಬುಡಮೇಲು ಮಾಡಿರುವುದೇ ಕಾರಣ ಹೊರತು, ಸಾಮಾಜಿಕ ನ್ಯಾಯಕ್ಕಾಗಿ ನೀಡಲಾಗಿರುವ ಸಾಂವಿಧಾನಿಕ ಮೀಸಲಾತಿಯಲ್ಲ ಎನ್ನುವುದು ಸುಸ್ಪಷ್ಟ. ಆದ್ದರಿಂದ, ಕಷ್ಟಗಳಿಂದ ನರಳಿ ಕಲಿಯಲಾಗದವರಿಗೆ ನೀಡುವ ಮೀಸಲಾತಿಯನ್ನು ದೂಷಿಸುವ ಬದಲು, ಅತಿ ಶ್ರೀಮಂತರಾಗಿದ್ದು ಎಲ್ಲಾ ಸವಲತ್ತುಗಳಿದ್ದರೂ ಅಂಕಗಳನ್ನು ಪಡೆಯಲಾಗದವರಿಗೆ ಹಣಕ್ಕೆ ಸೀಟು ನೀಡುವ ವ್ಯವಸ್ಥೆಯನ್ನು ದೂಷಿಸಿ, ಅದನ್ನು ನಿರ್ಮೂಲನೆ ಮಾಡುವಂತೆ ಒತ್ತಾಯಿಸಬೇಕು.


ನವದೆಹಲಿ ವಿಮಾನ ನಿಲ್ದಾಣದಲ್ಲಿ ಉಕ್ರೇನ್‌ನಿಂದ ಮರಳಿದ ಮಗಳನ್ನು ಬಿಗಿದಪ್ಪಿ ಕಣ್ಣೀರಾದ ಹೆತ್ತವರು –ಪಿಟಿಐ ಚಿತ್ರ

• ಪರಿಣಾಮಕಾರಿ ಮದ್ದೇನು?

ಹಾಗಿರುವಾಗ, ದೇಶದ ಅಧುನಿಕ ವೈದ್ಯ ಶಿಕ್ಷಣವು ಅರ್ಹರಿಗಷ್ಟೇ ದೊರೆಯಬೇಕಾದರೆ ವೈದ್ಯ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಬೇಕು, ಹೊಸ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಬಾರದು, ಖಾಸಗಿ ಕಾಲೇಜುಗಳಲ್ಲಿ ಶುಲ್ಕವನ್ನು ಸರ್ಕಾರಿ ಕಾಲೇಜುಗಳ ಮಟ್ಟಕ್ಕೆ ಇಳಿಸಬೇಕು, ಮ್ಯಾನೇಜ್‌ಮೆಂಟ್ ಕೋಟಾ ಹೋಗಬೇಕು ಮತ್ತು ಎನ್‌ಆರ್‌ಐ ಕೋಟಾವನ್ನು ಶುದ್ಧ ಎನ್‌ಆರ್‌ಐಗಳಿಗೆ ಮಾತ್ರವೇ ನೀಡಬೇಕು, ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳ ಎಲ್ಲಾ ಸೀಟುಗಳಿಗೂ ಸಾಮಾಜಿಕ ಮೀಸಲಾತಿಯು ಅನ್ವಯಿಸಬೇಕು, ನೀಟ್ ಪರೀಕ್ಷೆಗಳು ರಾಜ್ಯ ಭಾಷೆಗಳಲ್ಲೂ ನಡೆಯಬೇಕು, ಹಿಂದುಳಿದ ವಿಭಾಗಗಳ ಮಕ್ಕಳಿಗೆ ಅದನ್ನು ಬರೆಯಲು ಎಲ್ಲಾ ನೆರವನ್ನೂ ಒದಗಿಸಬೇಕು, ಆಧುನಿಕ ವೈದ್ಯ ವಿಜ್ಞಾನದೊಳಕ್ಕೆ ಆಯುಷ್ ಬೆರಕೆ ಮಾಡುವ ಯೋಜನೆಯನ್ನು ಕೂಡಲೇ ತಡೆಯಬೇಕು, ಉಪಕೇಂದ್ರಗಳನ್ನು ಆಯುಷ್‌ಗೆ ಒಪ್ಪಿಸಬಾರದು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಹಿಡಿದು ಜಿಲ್ಲಾಸ್ಪತ್ರೆಗಳವರೆಗೆ ಯಾವುದನ್ನೂ ಖಾಸಗಿಯವರಿಗೊಪ್ಪಿಸದೆ, ಸರ್ಕಾರವೇ ನಡೆಸಬೇಕು ಮತ್ತು ಅಲ್ಲಿಗೆಲ್ಲ ಉತ್ತಮ ಸಂಬಳಕ್ಕೆ ಆಧುನಿಕ ವೈದ್ಯರನ್ನು ನೇಮಿಸಬೇಕು.

ಮುನ್ನೋಟ 6-03-2022 ರಿಂದ 12-03-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮನಸ್ಸಿಗೆ ಒಂದು ರೀತಿಯ ಸಂತೋಷ ಇರುತ್ತದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ. ಕಾರ್ಯಕ್ಷೇತ್ರದಲ್ಲಿ ನಿಮ್ಮ ನಡುವಳಿಕೆಯಿಂದ ಜನರ ಮನಸ್ಸನ್ನು ಗೆದ್ದು ಕಾರ್ಯಸಾಧನೆ ಮಾಡುವಿರಿ. ಸ್ಥಿರಾಸ್ತಿಯ ವಿಷಯದಲ್ಲಿ ಸಂತೋಷ ಪಡುವಂತಹ ವಿಚಾರವೊಂದನ್ನು ಕೇಳುವಿರಿ. ಮಕ್ಕಳ ವ್ಯವಹಾರಕ್ಕಾಗಿ ಹಣ ಹೂಡಿಕೆ ಮಾಡುವಿರಿ. ಹೃದಯದ ಕಾಯಿಲೆಗಳಿದ್ದಲ್ಲಿ ಚಿಕಿತ್ಸೆ ಪಡೆದುಕೊಳ್ಳುವುದು ಒಳ್ಳೆಯದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಮಾತಿನಲ್ಲಿ ಬಹಳ ಕಾಠಿಣ್ಯತೆ ಇರುತ್ತದೆ. ಹಣದ ಒಳಹರಿವು ಅವಶ್ಯಕತೆ ಪೂರೈಸುವಷ್ಟು ಇರುತ್ತದೆ. ಒಡಹುಟ್ಟಿದವರಿಗಾಗಿ ಹಣ ಖರ್ಚು ಮಾಡುವಿರಿ. ವಿದ್ಯಾರ್ಥಿಗಳಿಗೆ ಅವರ ಅಭ್ಯಾಸದಲ್ಲಿ ನಿರೀಕ್ಷಿತ ಫಲಿತಾಂಶವನ್ನು ಪಡೆಯುವ ಯೋಗವಿದೆ. ಶ್ವಾಸಕೋಶದ ತೊಂದರೆ ಇರುವವರು ಚಿಕಿತ್ಸೆ ಪಡೆದುಕೊಳ್ಳುವುದು ಉತ್ತಮ. ಸಂಗಾತಿಯು ನಿಮ್ಮ ಮೇಲೆ ವಿನಾಕಾರಣ ಸಿಟ್ಟಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸ್ವತಂತ್ರ ಉದ್ಯೋಗದಲ್ಲಿ ಶ್ರಮಪಟ್ಟು ಮೇಲುಗೈ ಸಾಧಿಸುವಿರಿ. ಹೆಣ್ಣುಮಕ್ಕಳಿಗೆ ಬೇಗ ವಿವಾಹ ನಿಗದಿಯಾಗುವ ಸಂದರ್ಭವಿದೆ. ಆಸ್ತಿ ವಿಚಾರದಲ್ಲಿ ಸರಿಯಾದ ನಿರ್ಧಾರವನ್ನು ಕೈಗೊಳ್ಳುವುದು ಒಳ್ಳೆಯದು. ರಾಜಕಾರಣಿಗಳಿಗೆ ಅವರ ನಾಯಕರುಗಳಿಂದ ಹೆಚ್ಚಿನ ಒತ್ತಡ ಬರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಡೈರಿ ಉತ್ಪನ್ನಗಳನ್ನು ಮಾರುವವರಿಗೆ ಹೆಚ್ಚಿನ ವ್ಯಾಪಾರವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ದೊರೆಯುವ ಲಕ್ಷಣಗಳಿವೆ. ಹೆಚ್ಚಿನ ವ್ಯಾಸಂಗಕ್ಕಾಗಿ ಸ್ಥಳ ಬದಲಾವಣೆಯಾಗಬಹುದು. ಆರ್ಥಿಕ ಸ್ಥಿತಿಯು ಸಾಮಾನ್ಯ ಮಟ್ಟದಲ್ಲಿರುತ್ತದೆ. ಹಿತೈಷಿಗಳಿಂದ ಸ್ವಲ್ಪ ಮಟ್ಟಿನ ಆರ್ಥಿಕ ಸಹಾಯ ದೊರೆಯುತ್ತದೆ. ಪಿತ್ರಾರ್ಜಿತ ಆಸ್ತಿಯು ಸಿಗುವ ಅವಕಾಶಗಳಿವೆ. ಮನೆಯ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿ ಹಿರಿಯರಿಂದ ಶಹಬ್ಬಾಸ್‌ಗಿರಿ ಪಡೆಯುವಿರಿ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಎಣ್ಣೆ ಮತ್ತು ಎಣ್ಣೆ ಕಾಳುಗಳನ್ನು ಮಾರಾಟ ಮಾಡುವವರ ವ್ಯವಹಾರದಲ್ಲಿ ಹೆಚ್ಚಿನ ಲಾಭವಿರುತ್ತದೆ. ಸಾಮಾಜಿಕ ಕಾರ್ಯಗಳನ್ನು ಹೆಚ್ಚು ಮಾಡಿ ತನ್ಮೂಲಕ ರಾಜಕೀಯ ಪ್ರವೇಶ ಮಾಡುವಿರಿ. ಕಾರ್ಖಾನೆಯ ಕೆಲಸಗಾರರಿಗೆ ಬೇಡಿಕೆಗಳು ಈಡೇರುವ ಸಂದರ್ಭ. ಸಂಗಾತಿಯನ್ನು ಹುಡುಕುವ ಬಗ್ಗೆ ಮನೆಯಲ್ಲಿ ಹೆಚ್ಚಿನ ಮಾತುಗಳಾಗುತ್ತವೆ. ಬರಹಗಾರರಿಗೆ ಬಹುಮಾನ ಗೆಲ್ಲುವ ಸಂದರ್ಭವಿರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಹೊಸ ಉದ್ಯೋಗದ ವಿಷಯದಲ್ಲಿ ಆತ್ಮೀಯರಿಂದ ಸೂಕ್ತ ಸಲಹೆ ದೊರೆಯುತ್ತದೆ. ಸಂಗಾತಿ ನಡೆಸುತ್ತಿದ್ದ ಭೂ ವ್ಯಾಜ್ಯಗಳಲ್ಲಿ ಜಯದೊರೆಯುತ್ತದೆ. ವಿನಾಕಾರಣ ಇತರರ ವಿಷಯದಲ್ಲಿ ಅನಗತ್ಯ ಚರ್ಚೆ ಮಾಡುವುದು ಒಳಿತಲ್ಲ. ಇದು ನಿಮಗೆ ತಿರುಗುಬಾಣವಾಗಬಹುದು. ಈ ವಾರ ಸ್ವಲ್ಪ ಆಲಸಿ ನಡವಳಿಕೆ ಇರುತ್ತದೆ. ಮಕ್ಕಳಿಂದ ಮನಸ್ಸಿಗೆ ಬೇಸರವಾಗುವ ಸಂದರ್ಭಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಪ್ರೇಮಿಗಳ ಇಷ್ಟಾರ್ಥಗಳು ಈಡೇರದೆ ಮುನಿಸಿಕೊಳ್ಳಬಹುದು. ಉದ್ಯೋಗ ರಂಗದಲ್ಲಿ ಇದ್ದ ಒತ್ತಡಗಳು ಕಡಿಮೆಯಾಗಿ ಮನಸ್ಸಿಗೆ ಸಂತೋಷವೆನಿಸುತ್ತದೆ. ಮಕ್ಕಳಿಂದ ಧನಸಹಾಯ ದೊರೆಯುವ ಸಾಧ್ಯತೆ ಇದೆ. ಶಿಕ್ಷಣ ಕ್ಷೇತ್ರದಲ್ಲಿರುವ ಕೆಲವರಿಗೆ ಗೌರವಗಳು ದೊರೆಯುತ್ತವೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಆಸ್ತಿ ವ್ಯವಹಾರಗಳನ್ನು ಮಾಡುವವರು ಹೆಚ್ಚಿನ ಎಚ್ಚರಿಕೆಯಲ್ಲಿ ಇರಬೇಕು.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಹಣ್ಣು ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ದೊರೆಯುತ್ತದೆ. ಅರಣ್ಯಾಧಿಕಾರಿಗಳಿಗೆ ಪ್ರೋತ್ಸಾಹಧನ ಬರುವ ಸಾಧ್ಯತೆ ಇದೆ. ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪ ಸಫಲತೆಯನ್ನು ಕಾಣಬಹುದು. ಕಾಡುತ್ತಿದ್ದ ರಾಜಕೀಯ ಅನಿಶ್ಚಿತತೆ ನಿವಾರಣೆಯಾಗುತ್ತದೆ. ಒಡಹುಟ್ಟಿದವರ ನಡುವೆ ಸ್ವಲ್ಪಮಟ್ಟಿನ ಭಿನ್ನಾಭಿಪ್ರಾಯಗಳು ಬರಬಹುದು.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಮಕ್ಕಳ ಶ್ರೇಯಸ್ಸಿನ ಬಗ್ಗೆ ಸಾಕಷ್ಟು ಸಂತೋಷವಾದ ವಾರ್ತೆಗಳನ್ನು ಕೇಳುವಿರಿ. ಆರ್ಥಿಕ ವಿಚಾರದಲ್ಲಿ ಚೇತರಿಕೆ ಕಾಣಬಹುದು. ಉನ್ನತ ಶಿಕ್ಷಣದ ವಿಷಯದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ದೊರೆಯುತ್ತದೆ. ಪ್ರಸಿದ್ಧ ಸಂಸ್ಥೆಯೊಂದಕ್ಕೆ ಸಲಹೆಗಾರರಾಗಿ ಸೇರುವ ಸಂದರ್ಭ ಕೆಲವರಿಗೆ ಇರುತ್ತದೆ. ಕುಟುಂಬದವರ ಸಂತೋಷಕ್ಕಾಗಿ ಸಂತೋಷ ಕೂಟವೊಂದನ್ನು ಆಯೋಜಿಸುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ದೊಡ್ಡ ದೊಡ್ಡ ಹೂಡಿಕೆಗಳಲ್ಲಿ ಹೆಚ್ಚಿನ ಆಸಕ್ತಿ ಬರುತ್ತದೆ. ನೀರಾವರಿ ಗುತ್ತಿಗೆದಾರರಿಗೆ ಹೊಸ ಗುತ್ತಿಗೆಗಳು ಸಿಗುವ ಸಂದರ್ಭವಿದೆ. ಔಷಧಿ ವಿತರಕರಿಗೆ ಹೊಸ ಹೊಸ ಜಾಗಗಳಲ್ಲಿ ವಿತರಣೆ ಮಾಡುವ ಅವಕಾಶ ದೊರೆಯುತ್ತದೆ. ಕರಕುಶಲ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ವ್ಯಾಪಾರ ಹೆಚ್ಚುತ್ತದೆ. ಪಾರಂಪರಿಕ ವೈದ್ಯರುಗಳಿಗೆ ಬೇಡಿಕೆ ಬರತೊಡಗುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಲೇವಾದೇವಿ ನಡೆಸುತ್ತಿದ್ದವರಿಗೆ ಹಳೆಯ ಬಾಕಿ ವಸೂಲಿಗಳು ಈಗ ಆಗುತ್ತದೆ. ನಿಮ್ಮ ಪ್ರಭಾವದಿಂದ ನಿಮ್ಮೊಡನೆ ಕೆಲಸ ಮಾಡುತ್ತಿರುವವರನ್ನು ಹುರಿದುಂಬಿಸಿ ಉತ್ತಮ ಕೆಲಸ ಮಾಡಿಸುವಿರಿ. ಸೋದರಿಯ ಸಹಾಯ ಸಕಾಲಕ್ಕೆ ದೊರೆಯುತ್ತದೆ. ನಿಮ್ಮ ತಂದೆಯಿಂದ ಧನ ಸಹಾಯವಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಧನಾದಾಯವು ತೃಪ್ತಿಕರವಾಗಿರುತ್ತದೆ. ಸಂಗೀತಗಾರರಿಗೆ ಉತ್ತಮ ಸಂಭಾವನೆ ದೊರೆಯುತ್ತದೆ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸವಿದ್ದು ಸಂಪಾದನೆ ಹೆಚ್ಚುತ್ತದೆ. ಮಕ್ಕಳ ಅನುಕೂಲಕ್ಕೋಸ್ಕರ ಹೆಚ್ಚು ಹಣ ಖರ್ಚು ಮಾಡುವಿರಿ. ಕೇಶಾಲಂಕಾರ ಮಾಡುವವರಿಗೆ ಹೆಚ್ಚು ಕೆಲಸ ದೊರೆತು ಸಂಪಾದನೆ ಹೆಚ್ಚುತ್ತದೆ. ನೀರಿನಿಂದ ಆರೋಗ್ಯ ತಪ್ಪಬಹುದು.

ಪದಬಂಧ 2729



ಮೇಲಿನಿಂದ ಕೆಳಕ್ಕೆ

1. ಜಗತ್ತಿನಲ್ಲಿ ಎಲ್ಲವೂ ಹಲವು ಬಗೆ 4
2. ನಾವಿರುವ ಧರೆಯ ಆವೃತ್ತಿ 4
3. ಗೆಲುವಿನ ನಂತರ ವಿನೋದ ಯಾತ್ರೆ 5
4. ವಯಸ್ಸಾದ ಮೇಲೆ ಹೆಜ್ಜೆ ಹಾಕಲು ಬೇಕಾಗುವ ಬೆತ್ತ 4
5. 'ಓಕೆ ಕೊಡು' ಎಂದು ಈ ಹುಡುಗಿಯನ್ನು ಕರೆಯಬಹುದೆ? 3
7. ಹೋಟೇಲಿನಲ್ಲಿ ಜನಪ್ರಿಯ ಉದ್ದಿನ ಕರಿದ ಖಾದ್ಯದ ಜೊತೆಗೆ ಮಸಾಲೆ ಮಿಶ್ರಣದ ಸಾರು 5
9. ಎಂದೆಂದಿಗೂ ಉಳಿದು ಹೋಗಿರುವ ಸೀಮೆಯ ವ್ಯಾಜ್ಯ 5
11. ಹಗುರವಾದ ಅಂತರಂಗ 3
14. ಕಲ್ಲು ಬೆಂಚಿನ ಮೇಲೆ ಮುಗಿಯದ ಮಾತು 5
15. ಭಾರತದ ಹಣಕಾಸಿನ ಮೌಲ್ಯ ಅಳೆಯುವ ನಾಣ್ಯ 3
16. ಕ್ಷೀರಭಾಗ್ಯಕ್ಕೆ ತೆರಬೇಕಾದ ಹಣ 4
18. ಗಂಡು ಹೆಣ್ಣಿನ ಜಾತಕದಲ್ಲಿರಬೇಕಾದ ಆಕಾಶಕಾಯಗಳ ಸ್ನೇಹ 4
19. ತಲೆ ಕೆಳಗು ಮಾಡಿದ ಸಿಗ್ಗಿನ ಸ್ವಭಾವ 4

ಎಡದಿಂದ ಬಲಕ್ಕೆ

1. ಅಲಂಕಾರಿಕವಾಗಿ ಸರ್ಪವನ್ನು ಸುತ್ತಿಕೊಂಡ ಈಶ್ವರ, ಈಶ್ವರಪುತ್ರ 5
3. ವರ್ಷ ವರ್ಷಕ್ಕೂ ವಯಸ್ಸನ್ನು ನೆನಪಿಸುವ ಹುಟ್ಟಿದ ದಿವಸ ವಿರಳವಾಗಿದೆ 5
5. ಹಿಂದು ಮುಂದಾದ ವಿಶೇಷವಾದ ಕಲಹ ದ್ರವ 3
6. ಬಿಳಿ ಹಿಮದ ಬೆಟ್ಟ 5
8. ಬೆಳ್ಳಂಬೆಳಕಿನಲ್ಲಿ ನಡೆಯುವ ಕೃತ್ಯದ ವಿವರಣೆಯಲ್ಲಿ 'ಹಾಡು' ಹೊಕ್ಕಿದೆ 5
10. ಕೆಂಬಣ್ಣದ ಲೋಹವನ್ನು ವಿರಳವಾಗಿ ಉಚ್ಚರಿಸಿ 3
12. ಸುವಾಸನೆಯ ಹೊಗೆಗಾಗಿ ಕೆಂಡಕ್ಕೆ ಹಾಕುವ ಲೋಬಾನ 3
13. ಬೇಡಿ ಬದುಕುವವ 3
14. ಎಳೆ ಮಕ್ಕಳಿಗೆ ಕಣ್ಣು ತಾಗಿ ಉಂಟಾಗುವ ಅಸ್ವಸ್ಥತೆ 3
16. ಗಾಳಿಯಲ್ಲಿ ಹಾರುವ ಪರಗ್ರಹದ ಅಪರಿಚಿತ ಆಕಾಶಕಾಯ 5
17. ವಧೂವರರು ಕೈಹಿಡಿದು ಒಬ್ಬರನ್ನೊಬ್ಬರು ಒಪ್ಪಿಕೊಳ್ಳುವ ವಿವಾಹ ಪ್ರಕ್ರಿಯೆ 5
20. ಗಾಳಿಯಲ್ಲಿ ಹಾರಾಡುವಂತೆ ಮಾಡುವ ಅಗ್ಗದ ಚಪ್ಪಲಿ 3
21. ಚಿತ್ರದುರ್ಗದಲ್ಲಿ ಗಟ್ಟಿಯಾಗಿ ನೆಲೆನಿಂತಿರುವ ಶಿಲಾ ಪಹರೆ 5
22. ಧರೆಯನ್ನು ರಕ್ಷಿಸುವ ಒಡೆಯ 5

ಪದಬಂಧ ಉತ್ತರ -2728


ಮೇಲಿಂದ ಕೆಳಕ್ಕೆ

1. ರಬ್ಬರು 2.ತರಲೆಮಗ 3.ಹೋರಿಕಾಳಗ 4.ವರದ 5.ನಯನ 7.ನಗರ 10.ಜಯಿಸು 12.ಸಕ್ಕರೆ 13.ಕದೂಸಂ 14.ರಥಸಮೂಹ 15.ಕುಸುಮಕಂಪು 16.ಖನನ 19.ಸನಿಹ 21.ವಿಗಣ

ಎಡದಿಂದ ಬಲಕ್ಕೆ

1. ರಜತಮಹೋತ್ಸವ 5.ನವಿರುಕಲೆ 6.ಕಾಮದಹನ 8.ಮರುಳ 9.ನವಜನಾಂಗ 11.ಗದಾಸಮರ 13.ಕನಸುಗಾರ 15.ಕುದುರೆಮುಖ 17.ಥಳಿಸು 18.ಸಂಧಿಸಮಾಸ 20.ಮನೋವಿಜ್ಞಾನ 22.ಹರಿಹರಪುರಾಣ

ಚಿನಿವಾರಿಕೆಯ ಕುಸುರಿ, ನದಿ ಹರಹಿನ ವಿಸ್ತಾರ


ಗೇಬ್ರಿಯಲ್ ಗಾರ್ಸಿಯ ಮಾರ್ಕೇಸ್

ಮಾರ್ಚ್ 6, ಆಧುನಿಕ ಕಾಲದ ಮಹಾ ಕಾದಂಬರಿಕಾರ ಎಂದು ಗುರುತಿಸುವ ಗೇಬ್ರಿಯಲ್ ಗಾರ್ಸಿಯ ಮಾರ್ಕೇಸ್ ಹುಟ್ಟಿದ ದಿನ. ಅವರ ಆಯ್ದ ಅಂಕಣ ಬರಹಗಳ ಸಂಗ್ರಹ 'ಗದ್ಯ ಗಾರುಡಿ' ಸಾಮಾಜಿಕ ಜಾಲತಾಣದಲ್ಲಿ ಇಂದು ಅನೌಪಚಾರಿಕವಾಗಿ ಬಿಡುಗಡೆಯಾಗುತ್ತಿದೆ.

ಕೇಶವ ಮಳಗಿ

ಸರ್,

'ನನ್ನ ಹೆಸರು ಗೇಬ್ರಿಯಲ್ ಗಾರ್ಸಿಯ ಮಾರ್ಕೇಸ್. ಸಾಮಾನ್ಯ ಸ್ಥಳನಾಮಗಳ ಗೊಂಚಲಾಗಿರುವ ಈ ಹೆಸರು ನನಗೆ ಪ್ರಿಯವೇನೂ ಅಲ್ಲ. ಇದರೊಂದಿಗೆ ಗುರುತಿಸಿಕೊಳ್ಳಲು ಮುಜುಗರ, ಕ್ಷಮಿಸಿ. ನಲ್ವತ್ತು ವರ್ಷಗಳ ಹಿಂದೆ ಕೊಲಂಬಿಯದ ಅರಕಟಕದಲ್ಲಿ ನಾನು ಹುಟ್ಟಿದೆ. ಆ ಕುರಿತು ಈವರೆಗೆ ದುಃಖಿತನೇನೂ ಆಗಿಲ್ಲ.

'ನನ್ನದು ಮೀನರಾಶಿ, ಹೆಂಡತಿ ಮೆರ್ಸಿಡೆಸ್. ಇವೆರಡು ನನ್ನ ಬದುಕಿನ ಅತ್ಯಂತ ಮಹತ್ವದ ಸಂಗತಿಗಳಾಗಿದ್ದು, ನನ್ನ ಸಂಗಾತಿಯಿಂದಾಗಿಯೇ ಈವರೆಗೂ ಬರಹದ ಮೂಲಕ ಬದುಕಲು ಸಾಧ್ಯವಾಗಿದೆ. ನಾನೊಬ್ಬ ಸಂಕೋಚದ ಲೇಖಕ. ನನ್ನ ನಿಜವಾದ ವೃತ್ತಿ ಯಕ್ಷಿಣಿಯಾಗಿದರೂ ಕೈಚಳಕವೊಂದನ್ನು ಮಾಡಲು ಯತ್ನಿಸಿದಾಗ ಯಡವಟ್ಟು ಮಾಡಿಕೊಂಡೆ. ಆ ಕಾರಣವಾಗಿ ನನ್ನ ಏಕಾಂತಕ್ಕಾಗಿ ಸಾಹಿತ್ಯವನ್ನು ಆಶ್ರಯಿಸಬೇಕಾಯಿತು. ಅದೇನೇ ಆಗಲಿ, ಈ ಎರಡೂ ಚಟುವಟಿಕೆಗಳು ಬಾಲ್ಯದಿಂದಲೂ ನನ್ನ ತೀವ್ರ ಆಸಕ್ತಿಯಾದ ಗೆಳೆಯರ ಪ್ರೀತಿ ಸಂಪಾದನೆಯಡೆಗೇ ಕರೆದೊಯ್ಯುವವು.

'ನನ್ನ ಮಟ್ಟಿಗೆ ಲೇಖಕನಾಗಿರುವುದು ನಾವು ಪಡೆಯಬಹುದಾದ ಅತ್ಯುತ್ತಮ ಅರ್ಹತೆಯಾಗಿದೆ. ಬರವಣಿಗೆಯ ವಿಷಯಕ್ಕೆ ಬಂದಾಗ ನಾನು ಮಹಾ ನಿಷ್ಕರುಣಿ. ಅರ್ಧಪುಟದ ಬರಹ ಮುಗಿಸಲು ಎಂಟು ಗಂಟೆಗಳ ಕಠಿಣ ಪರಿಶ್ರಮಕ್ಕೆ, ಕಟುಶಿಸ್ತಿಗೆ ಒಳಪಡಬೇಕಾಗುತ್ತದೆ. ಪ್ರತಿ ಪದದೊಂದಿಗೂ ಗುದ್ದಾಡಬೇಕಾಗುತ್ತದೆ. ಗೆಲ್ಲುವುದು ಯಾವಾಗಲೂ ಶಬ್ದಲೋಕವೇ. ನಾನೂ ಕಡಿಮೆ ಹಟಮಾರಿಯಲ್ಲ, ಈ ಇಪ್ಪತ್ತು ವರ್ಷಗಳಲ್ಲಿ ನಾಲ್ಕು ಪುಸ್ತಕ ಪ್ರಕಟಿಸುವಲ್ಲಿ ಯಶಸ್ವಿಯಾಗಿದ್ದೇನೆ.

'ಈಗ ಪ್ರಕಟಿಸಬೇಕಿರುವ ಐದನೆಯ ಕೃತಿ ಉಳಿದೆಲ್ಲವುಗಳಿಗಿಂತ ಆಮೆವೇಗದಲ್ಲಿ ಸಾಗುತ್ತಿರುವುದಕ್ಕೆ ಕಾರಣವಿದೆ. ಸಾಲಗಾರರಿಂದ ಹಾಗೂ ನರದೌರ್ಬಲ್ಯದಿಂದ ತಪ್ಪಿಸಿಕೊಂಡು ನಾನು ಬರವಣಿಗೆಗೆ ಸಮಯವನ್ನು ಹೊಂದಿಸಿಕೊಳ್ಳಬೇಕಿದೆ. ಸಾಹಿತ್ಯದ ಕುರಿತು ಮಾತನಾಡದಿರಲು ಕಾರಣ ಆ ಕುರಿತು ನನಗೆ ತಳಬುಡ ತಿಳಿದಿಲ್ಲದಿರುವುದು, ಜತೆಗೆ, ಸಾಹಿತ್ಯವಿಲ್ಲದೆ ಲೋಕವು ಮೊದಲಿದ್ದಂತೆಯೇ ಸಾಗಬಲ್ಲುದು ಎಂದು ನನಗೆ ಮನವರಿಕೆಯಾಗಿರುವುದು.'

ಮೇಲಿನ ಮಾತುಗಳನ್ನು ಮೂವತ್ತೊಂಬತ್ತು ವರ್ಷಗಳ ಮಾರ್ಕೇಸ್ ಅರ್ಜೆಂಟೀನದಲ್ಲಿ 1966ರಲ್ಲಿ ಅನಾಮಧೇಯ ಸಂಪಾದಕರಿಂದ ಪ್ರಕಟವಾದ 'ಟೆನ್ ಕಮಾಂಡ್‌ಮೆಂಟ್ಸ್' ಎಂಬ ಸಂಕಲನದಲ್ಲಿದ್ದ ತಮ್ಮ ಕಥೆಗೆ ಬರೆದ ಆರಂಭಿಕ ಟಿಪ್ಪಣಿ. ಈ ಬರಹದಲ್ಲಿ



ಪು: 174 ₹150

ಗೇಬ್ರಿಯಲ್ ಗಾರ್ಸಿಯ ಮಾರ್ಕೇಸ್
ಗದ್ಯ ಗಾರುಡಿ
ಲೇ: ಕೇಶವ ಮಳಗಿ
ಪ್ರ: ದೀಪಂಕರ
ಸಂ: 9886279441

ಮಾರ್ಕೇಸ್‌ರ ಒಟ್ಟಾರೆ ಸಾಹಿತ್ಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಲ್ಯಾಟಿನೊ ವಿನೋದಪ್ರಜ್ಞೆ, ವಿಚಾರಗಳನ್ನು ಹೊರಗೆಡಹುವಲ್ಲಿ ಬಳಸುವ ವಿಶಿಷ್ಟ ಭಾಷೆ ಮತ್ತು ಅವರಿಗೆ ಮಾತ್ರ ಹೊಂದುವ ವಿಲಕ್ಷಣ ಸಂವೇದನಾಶೀಲತೆ ಎದ್ದು ಕಾಣುತ್ತವೆ.

ಈ ಮಾತುಗಳು ಪ್ರಕಟವಾದ ಮೇಲೆ ಮಾರ್ಕೇಸ್ ನಲ್ವತ್ತೇಳು ವರ್ಷ ಬದುಕಿ, ಬರೆದರು. ಆದರೆ, ಒಟ್ಟಾರೆಯಾಗಿ ಬದುಕು, ಸಾಹಿತ್ಯ ಮತ್ತು ಕಾಳಜಿಗಳ ಕುರಿತು ಮೂಲಭೂತ ಬದಲಾವಣೆಗಳು ಆಗಲಿಲ್ಲವೆಂಬುದು ಗಮನಾರ್ಹ. ಕೊಂಚ ಮಾತ್ರ ವ್ಯಂಗ್ಯ ಬೆರೆತ ಅವರ ಹಾಸ್ಯ, ಬರಹದಲ್ಲಿ ಸಾಧಿಸುವ ಮಾಂತ್ರಿಕತೆ, ಹೆಣ್ಣು ಮತ್ತು ಸಂಬಂಧಗಳಿಗೆ ಅವರು ನೀಡುವ ಮಹತ್ವ ಎಲ್ಲವೂ ಕೊನೆಯವರೆಗೂ ಹಾಗೆಯೇ ಉಳಿದುಬಂದವು. 2004ರಲ್ಲಿ ಪ್ರಕಟಗೊಂಡ ಮಾರ್ಕೇಸ್‌ರ ಕೊನೆಯ ಕಾದಂಬರಿ 'ಮೆಮೊರೀಸ್ ಆಫ್ ಮೈ ಮೆಲಂಕಲಿ ವ್ಹೋರ್ಸ್' ಕೃತಿಗೂ ಈ ಮಾತು ಅನ್ವಯ.

***

'ಗಾಬಿಟೋ', 'ಗಾಬೋ', ಎಂದು ಇಡೀ ಲ್ಯಾಟಿನ್ ಅಮೆರಿಕದ ಜನರಿಂದ ಪ್ರೀತಿಯಿಂದ ಕರೆಸಿಕೊಳ್ಳುವ ಗೇಬ್ರಿಯಲ್ ಗಾರ್ಸಿಯ ಮಾರ್ಕೇಸ್ ಹುಟ್ಟಿದ್ದು ಮಾರ್ಚ್ 6, 1927ರಲ್ಲಿ, ಸ್ಥಳೀಯರು 'ಕಟಕ' ಎಂದು ಗುರುತಿಸುವ ಅರಕಟಕ ಪಟ್ಟಣದಲ್ಲಿ. ದಕ್ಷಿಣ ಅಮೆರಿಕದ ಕೊಲಂಬಿಯ ದೇಶದಲ್ಲಿ. ತಾನೊಬ್ಬ 'ಕೆರಿಬಿಯನ್ ಕರಾವಳಿ ಮನುಷ್ಯ', ಎಂದು ಹೇಳಿಕೊಳ್ಳುವಲ್ಲಿ ಮಾರ್ಕೇಸ್‌ಗೆ ಹೆಮ್ಮೆ.

***

ಶಾಲಾ ದಿನಗಳಲ್ಲಿ ಗಾರ್ಸಿಯಾಗೆ ಚಿತ್ರ ಬಿಡಿಸುವ ಹುಚ್ಚು. ಹತ್ತನೇ ವಯಸ್ಸಿನ ಆಸುಪಾಸಿನಲ್ಲಿದ್ದ ಬಾಲಕನ ಮೇಲೆ ಅಪಾರವಾಗಿ ಪ್ರಭಾವ ಬೀರಿದ ಪುಸ್ತಕ, 'ಸಾವಿರದೊಂದು ರಾತ್ರಿಗಳು!' ಕಥೆ ಹೇಳಿ ಜೀವ ಉಳಿಸಿಕೊಳ್ಳಬೇಕಾದ ಶಹರಜಾದೆ. ಅರಿತು-ಅರಿಯದೆಯೋ ಬದುಕಿನ 'ರೂಪಕ'ವಾಗಿ ಬದಲಾದಳು. ಶಹರಜಾದೆ ಕಥೆ ಹೇಳುವುದು ಜೀವಿಸುವ ಅನಿವಾರ್ಯತೆಗಾಗಿ. ಆದರೆ, ಗಾರ್ಸಿಯಾರದ್ದು, 'ಕಥೆ ಹೇಳಲೆಂದೇ ಬದುಕಿ' ಉಳಿಯುವ ಸಂಕಲ್ಪ.

***

ತನ್ನ ಕೃತಿಯ ಮೂಲಕ ಲೋಕವನ್ನು ಬೆಳಗುವುದು ಮಾತ್ರವಲ್ಲ, ದಕ್ಷಿಣ ಅಮೆರಿಕದ ಕುರಿತು ಪಾಶ್ಚಾತ್ಯರಿಗಿರುವ ಪೂರ್ವಗ್ರಹವನ್ನೂ ನಿವಾರಿಸಬೇಕೆಂಬುದು ಗಾರ್ಸಿಯ ಆಶಯವಾಗಿತ್ತು. 'ದಕ್ಷಿಣ ಅಮೆರಿಕದ ಮನುಷ್ಯರು ಅಂದಕೂಡಲೇ ಭರ್ಜರಿ ಮೀಸೆ, ಕೈಯಲ್ಲಿ ಗಿಟಾರ್ ಮತ್ತು ಬಂದೂಕು ಎಂಬುದು ಯುರೋಪಿಯನ್ನರ ಗ್ರಹಿಕೆ. ಅವರಿಗೆ ಸಮಸ್ಯೆಯ ಆಳವೇ ತಿಳಿದಿಲ್ಲ,' ಎಂದು ಬರೆದಿದ್ದ ಗಾರ್ಸಿಯ, ಆ ಅಭಿಪ್ರಾಯ ಬದಲಿಸಬೇಕಿರುವುದು ಕಲಾವಿದರೇ ಎಂದು ನಂಬಿದ್ದರು. ಆದರೆ, ಕಾದಂಬರಿ ಪ್ರಕಾರ ಪ್ರಮುಖವಾಗಿ ಯುರೋಪಿಯನ್ ಸಾಹಿತ್ಯದ ಆವಿಷ್ಕಾರವಾಗಿತ್ತು. ಪ್ರಕಾರವನ್ನು ಮರುವ್ಯಾಖ್ಯಾನಿಸಲು ಇದು ತಕ್ಕ ಸಮಯವಾಗಿತ್ತು. ಅದಕ್ಕೆ ದಕ್ಷಿಣ ಅಮೆರಿಕವೂ ಒಳಗೊಂಡಂತೆ ಆಫ್ರಿಕ, ಏಷ್ಯಾ, ಏಷ್ಯಾ ಪೆಸಿಫಿಕ್ ಬರಹಗಾರರು ಸಜ್ಜಾಗುತ್ತಿದ್ದರು. ಗಾಬೋ ಅಂಥ ಪ್ರಯತ್ನದ ಮುಂಚೂಣಿ ಲೇಖಕರಾಗಿ ಹೊಮ್ಮತೊಡಗಿದ್ದರು. ಮಕೊಂಡೊ, ಕಾಂತಾಪುರ, ಮಾಲ್ಗುಡಿಯಂಥ ಕಾಲ್ಪನಿಕ ಸ್ಥಳಗಳು ಹೊಸ ಮತ್ತು ಕಂಡರಿಯದ ಬದುಕಿನ ಅನುಭವವನ್ನು ಕಟ್ಟಿಕೊಡತೊಡಗಿದವು.

***

ಅದೊಂದು ಯೋಗಾಯೋಗದ ಗಳಿಗೆ. ಕುಟುಂಬದೊಂದಿಗೆ ಮೆಕ್ಸಿಕೊ-ಅಕಪುಲ್ಕೊ ಹೆದ್ದಾರಿಯಲ್ಲಿ ಪಯಣಿಸುವಾಗ ಇದ್ದಕ್ಕಿದ್ದಂತೆ ಪರವಶತೆ ಆವರಿಸಿತು! 1942ರಿಂದ ವ್ಯಸನದಂತೆ ಕಾಡುತ್ತಿದ್ದ ವಸ್ತುವೊಂದು ಬಸಿರ ಚೀಲವನು ಒದ್ದುಕೊಂಡು ಹೊರ ಬರುವ ಮಗುವಿನಂತೆ ಅಲುಗತೊಡಗಿತ್ತು. ಮಾರ್ಕೇಸ್ ಅವರು ಎಷ್ಟೊಂದು ಭಾವಪರವಶರಾಗಿದ್ದರೆಂದರೆ, 'ನನ್ನೊಳಗೆ ಹಣ್ಣಾಗಿದ್ದ ಕೃತಿಯ ಮೊದಲ ಅಧ್ಯಾಯದ ಪದ, ಪದವನ್ನು ಟೈಪಿಸ್ಟ್‌ನಿಗೆ ಉಕ್ತಲೇಖನದ ಮೂಲಕ ಹೇಳಿ ಬರೆಸಬಲ್ಲವನಾಗಿದ್ದೆ,' ಎಂದು ಮುಂದೆ ಬರೆದುಕೊಂಡರು.

ಕಾದಂಬರಿ ಬರೆದು ಮುಗಿಸುವವರೆಗೆ, ಮುಂದಿನ ಆರು ತಿಂಗಳು ಸಂಸಾರವನ್ನು ಹೇಗಾದರೂ ನಿಭಾಯಿಸು ಎಂದು ಹೆಂಡತಿ ಮೆರ್ಸಿಡೆಸ್‌ರನ್ನು ಕೇಳಿಕೊಂಡರು. ತಮ್ಮ ಬರಹದ 'ಗುಟ್ಟಿನ ಗವಿ'ಯನ್ನು ಸೇರಿಕೊಂಡರು. ಮೈಮೇಲೆ ಬಂದವರಂತೆ ಪ್ರತಿದಿನ ಎಂಟು ಗಂಟೆಗಳ ಬರಹ. ತಿಂಗಳುಗಳು ಕಳೆಯತೊಡಗಿದವು. ಹದಿನೆಂಟು ತಿಂಗಳಲ್ಲಿ ಹತ್ತು ಸಾವಿರ ಡಾಲರ್‌ಗಳ ಸಾಲ ಬೆಳೆದಿತ್ತು. ಇತ್ತ, ಟೈಪ್ ಮಾಡಿದ ಹಸ್ತಪ್ರತಿ ಸಾವಿರದ ಮುನ್ನೂರು ಪುಟಗಳಿಗೆ ಏರಿತ್ತು!

ಟೈಪ್ ಮಾಡಿದ ಪ್ರತಿಯನ್ನು ಬಾಕ್ಸ್ ಮಾದರಿ ಪ್ಯಾಕಿಂಗ್ ಮಾಡಿ ಪ್ರಕಾಶಕರಿಗೆ ಕಳಿಸಲು ದಂಪತಿ ಅಂಚೆಕಚೇರಿಗೆ ಹೋಗುವಾಗ ದುರದೃಷ್ಟಕ್ಕೆ ಬಿರುಗಾಳಿ ಬೀಸಬೇಕೆ! ಕೆಲವು ಪುಟಗಳು ಹಾರಿ ಹೋದವು. ಒಪ್ಪ ಮಾಡಿಕೊಂಡು ಅಂಚೆಕಚೇರಿ ತಲುಪಿದಾಗ ಅಂಚೆಚೀಟಿಗೆ ಬೇಕಾಗುವಷ್ಟು ಹಣ ಇಬ್ಬರ ಬಳಿಯೂ ಇರಲಿಲ್ಲ. ಅರ್ಧ ಹಸ್ತಪ್ರತಿಯನ್ನಷ್ಟೇ ಕಳಿಸಲಾಯಿತು. ದಿನದ ಕೊನೆಯ ಅವಧಿಗೆ ಹಣ ಹೊಂದಿಸಿಕೊಂಡು ಉಳಿದ ಭಾಗವನ್ನು ಅಂಚೆಗೆ ಹಾಕಿದರು!

***

ಗೇಬ್ರಿಯಲ್ ಗಾರ್ಸಿಯ ಮಾರ್ಕೇಸ್‌ರನ್ನು ಇಪ್ಪತ್ತನೆಯ ಶತಮಾನದ ಬಹುದೊಡ್ಡ ಕಾದಂಬರಿಕಾರರೆಂದು ಗುರುತಿಸಲಾಗುತ್ತದೆ. ಅವರು ರಚಿಸಿದ ಕಾದಂಬರಿಗಳು ಮತ್ತು ಸೃಷ್ಟಿಸಿದ ಪಾತ್ರಗಳು ಗಾರ್ಸಿಯರನ್ನು ನೊಬೆಲ್ ಪುರಸ್ಕಾರದ ವೇದಿಕೆಯವರೆಗೂ ನಡೆಸಿಕೊಂಡು ಹೋಗಿವೆ. ಅವರೊಬ್ಬ ಅಪ್ಪಟ ಗದ್ಯ ಲೇಖಕರು. ತಮ್ಮ ಕಾದಂಬರಿಗಳ ಮೂಲಕ ವಿಶ್ವಸಾಹಿತ್ಯಕ್ಕೆ ಮೆಚ್ಚಿನ ಲೇಖಕರಾದಂತೆಯೇ ಅವರೊಬ್ಬ ಅತ್ಯಂತ ಜನಪ್ರಿಯ ಅಂಕಣಕಾರರೂ ಆಗಿದ್ದರು. ಪತ್ರಿಕಾರಂಗ ಗಾರ್ಸಿಯರ ಯಾವತ್ತೂ ಮೊದಲ ಆದ್ಯತೆಯಾಗಿತ್ತು. 'ಮೂಲತಃ ನಾನೊಬ್ಬ ಪತ್ರಕರ್ತ. ನನ್ನ ಪುಸ್ತಕಗಳು ಪತ್ರಕರ್ತನೊಬ್ಬನ ಕೃತಿಗಳು. ಅವು ಜನರ ಗಮನ ಸೆಳೆಯದ ಕಾಲದಲ್ಲೂ ಸಹ,' ಎಂದೊಮ್ಮೆ ಬರೆದರು.

ಈ ಕೃತಿ ಮಾರ್ಕೇಸ್‌ರ ಅಂಕಣ ಮತ್ತು ಗದ್ಯಬರಹಗಳ ಸೊಬಗು, ಉಲ್ಲಾಸ, ವಿಸ್ಮಯ, ವಿಚಾರಗಳ ವಿಸ್ತರಣೆ ಹಾಗೂ ಅಂತಿಮವಾಗಿ ಮನುಷ್ಯ ಪ್ರೀತಿಯಿಂದ ಹುಟ್ಟುವ ನಿಷ್ಕಲ್ಮಶ ಕಾಳಜಿಗಳನ್ನು ತೆರೆದಿಡುತ್ತದೆ. ಸುಮಾರು ಮೂರೂವರೆ ದಶಕಗಳಲ್ಲಿ- 1955ರಿಂದ 1985ರವರೆಗಿನ ಕಾಲಾವಧಿ- ಗಾಬೋ ಕೆತ್ತಿದ ಬರಹಗಳ ಭಾಷಾ ಬೆರಗನ್ನು ನಾವಿಲ್ಲಿ ಕಾಣಲು ಸಾಧ್ಯ. ಲೇಖಕನೊಬ್ಬನ ಸೂಕ್ಷ್ಮತೆ, ಸಂವೇದನಾಶೀಲತೆ, ಭಾಷಾ ಚಮತ್ಕಾರ, ವಿಷಯ ಗ್ರಹಿಕೆಯಲ್ಲಿ ತೋರುವ ನವೀನತೆ, ಸಾಂದ್ರತೆ, ಒಂದಕ್ಕಿನ್ನೊಂದು ಬೆಸೆಯುವ ಬಗೆ ಇಂತಹ ಅನೇಕ ಕಾರಣಗಳಿಂದ ಈ ಬರಹಗಳು ಚೆಲುವಾಗಿವೆ, ಮುಖ್ಯವಾಗಿವೆ.

(ಕೃತಿಗೆ ಬರೆದ ಪರಿಚಯದ ಸಂಗ್ರಹಿತ ಭಾಗ)


ನೊಂದ ಮನಗಳಿಗೆ ಸ್ನೇಹಸಿಂಚನ

ಶಾಲ್ಮಲಾ

ಆರೋಗ್ಯಭಾಗ್ಯದ ಮುಂದೆ ಬೇರೆಲ್ಲವೂ ಗೌಣ ಎಂಬ ಜೀವನಮೌಲ್ಯ ಇನ್ನಿಲ್ಲದಂತೆ ಹರಳುಗಟ್ಟಿರುವ ಕಾಲಘಟ್ಟ ಇದು. ಬದುಕಿನ ನಾಗಾಲೋಟಕ್ಕೆ ಥಕ್ಕನೆ ತಡೆಯೊಡ್ಡಬಲ್ಲ ಛಾತಿ ಇರುವ ಅನಾರೋಗ್ಯಕ್ಕೆ ಮಂಡಿಯೂರುವವರೇ ಹೆಚ್ಚು ಮಂದಿ. ಅದರಲ್ಲೂ ಕ್ಯಾನ್ಸರ್‌ಪೀಡಿತರು ರೋಗಬಾಧೆಗಿಂತ ಅದರ ಅಡ್ಡಪರಿಣಾಮಗಳಿಂದಲೇ ಮಾನಸಿಕವಾಗಿ ಕುಸಿದುಹೋಗುವುದು ಸಾಮಾನ್ಯ ಸಂಗತಿ. ಇಂತಲ್ಲಿ ಬಹುಮುಖ್ಯವಾಗಿ ಬೇಕಿರುವುದು ಸಾಂತ್ವನದ ಬೆಳಕಿಂಡಿ, ಆಪ್ತ ಮನದ ಸಾಂಗತ್ಯ. ಸ್ವತಃ ಅಂತಹದ್ದೊಂದು ಕಗ್ಗತ್ತಲ ಪಯಣ ಮುಗಿಸಿ ಬಂದಿರುವ ಪತ್ರಕರ್ತೆ ಕೃಷ್ಣಿ ಶಿರೂರ ಅವರ 'ಉರಿ ಬಾನ ಬೆಳದಿಂಗಳು' ನೊಂದ ಮನಗಳಿಗೆ ಅಗತ್ಯ ಸ್ನೇಹಸಿಂಚನದಂತಿದೆ.

ಯಾವುದೇ ಹೆಣ್ಣಿನ ಮನಸ್ಸನ್ನು ಜರ್ಜರಿತಗೊಳಿಸಿಬಿಡಬಹುದಾದ ಸ್ತನ ಕ್ಯಾನ್ಸರ್ ಅನ್ನು ಜಯಿಸಲು ಆತ್ಮಬಲವನ್ನೇ ಪ್ರಮುಖ ಅಸ್ತ್ರವನ್ನಾಗಿಸಿಕೊಂಡ ಕೃಷ್ಣಿ ಅವರ ಅನುಭವ ಕಥನ ಎಂತಹವರನ್ನೂ ದಿಙ್ಮೂಢರನ್ನಾಗಿಸುತ್ತದೆ. 'ನನಗೆ ಕ್ಯಾನ್ಸರ್ ಇರುವುದು ದೃಢವಾದಾಗ ನಾನು ಸತ್ತುಹೋಗಬಹುದು ಎಂಬ ಯೋಚನೆಯೇ ನನ್ನಲ್ಲಿ ಮೊಳಕೆಯೊಡೆಯಲಿಲ್ಲ, ಅದೇ ಕ್ಯಾನ್ಸರ್ ಜಯಿಸುವಲ್ಲಿನ ನನ್ನ ಬತ್ತಳಿಕೆಯಲ್ಲಿದ್ದ ಮೊದಲ ಅಸ್ತ್ರ' ಎಂಬ ಅವರ ಮಾತು ಪವಾಡಸದೃಶ ಫಲಿತಾಂಶಕ್ಕೆ ಕೈಗನ್ನಡಿ.

ತಾನು ಕ್ಯಾನ್ಸರ್ ಹಿಡಿತಕ್ಕೆ ಸಿಲುಕಿರುವುದು ಅನುಭವಕ್ಕೆ ಬಂದಾಗ ಉಂಟಾದ ದಿಗಿಲು, ಮಾನಸಿಕ ತಳಮಳ, ಚಿಕಿತ್ಸೆಯ ಒಂದೊಂದು ಹಂತದಲ್ಲೂ ಅನುಭವಿಸಿದ ದೈಹಿಕ, ಮಾನಸಿಕ ವೇದನೆ, ಆರ್ಥಿಕ ಸಂಕಷ್ಟ, ಅದನ್ನೆಲ್ಲ ಯಶಸ್ವಿಯಾಗಿ ಮೆಟ್ಟಿನಿಂತ ಪರಿ, ಅಪಾರವಾಗಿ ನಂಬಿದ ಗಾಯತ್ರಿ ಮಂತ್ರ, ಯೋಗ, ಧ್ಯಾನದೊಟ್ಟಿಗೆ ಹೆತ್ತಮ್ಮ, ಆಪ್ತೇಷ್ಟರ ನೆರವಿನ ಹಸ್ತ, ಚಿಕಿತ್ಸೆಯ ನಂತರ ಕೊಂಚ ಎಚ್ಚರ ತಪ್ಪಿದರೂ ಆಗಬಹುದಾದ ಅನಾಹುತದ ವಿವರ ಶಬ್ದಾಡಂಬರವಿಲ್ಲದೆ, ಸ್ವಮರುಕದ ಗೋಜಿಲ್ಲದೆ ಸರಳವಾದ ಶೈಲಿಯಲ್ಲಿ ಮನಮುಟ್ಟುವಂತೆ ನಿರೂಪಿತವಾಗಿದೆ.



ಪು: 148 ₹250

ಉರಿ ಬಾನ ಬೆಳದಿಂಗಳು
ಲೇ: ಕೃಷ್ಣಿ ಶಿರೂರ
ಪ್ರ: ದಿಗಂತ ಪ್ರಕಾಶನ
ಸಂ: 9482558576

ಒಳನೋಟ

ಕತೆಯ ಪಯಣದಲ್ಲಿ ಜೊತೆಯಾಗುವ ಓದುಗರ ಕಣ್ಣಾಲಿಗಳು ಕೆಲವೊಮ್ಮೆ ತುಂಬಿ ಬಂದರೆ, ಕಡುಸಂಕಟದ ಸಮಯದಲ್ಲೂ ಹೆಣ್ಣುಮಗಳೊಬ್ಬಳ ಅಸಾಧಾರಣ ಮನೋಬಲವು ಜೀವನಪ್ರೀತಿಯತ್ತ ವಿಮುಖರಾದವರನ್ನು ಆತ್ಮಶೋಧನೆಗೆ ಹಚ್ಚುವಂತಿದೆ. ಕ್ಯಾನ್ಸರ್ ರೋಗಿಗಳಷ್ಟೇ ಅಲ್ಲ ಖಿನ್ನತೆಗೆ ಜಾರಿದವರು, ಬದುಕಿನ ಸೌಂದರ್ಯಕ್ಕೆ ಬೆನ್ನು ಹಾಕಿದವರು, ಆತ್ಮವಿಶ್ವಾಸದ ಮಹತ್ವ ಮನಗಾಣಬಯಸುವವರೆಲ್ಲರೂ ಭರವಸೆಯ ಕೈಪಿಡಿಯಂತೆ, ಆಪ್ತಸಮಾಲೋಚಕಿಯೊಬ್ಬಳ ಹಿತನುಡಿಗಳಂತೆ ಇದನ್ನು ಓದಿಕೊಳ್ಳಬಹುದು.

ಕ್ಯಾನ್ಸರ್ ಚಿಕಿತ್ಸೆಗೆ ಅತ್ಯಾಧುನಿಕ ಸೌಲಭ್ಯಗಳಿವೆ; ಆದರೆ ಅವುಗಳನ್ನು ಪಡೆದುಕೊಳ್ಳುವವರಿಗೆ ಜರೂರಾಗಿ ಬೇಕಾದ ಮಾನಸಿಕ ತಯಾರಿ, ಕಠಿಣಾತಿಕಠಿಣ ಚಿಕಿತ್ಸಾ ಹಂತದಲ್ಲಿ ಬಾರಿಬಾರಿಗೂ ಕುಗ್ಗಿಹೋಗುವ ಮನಸ್ಸನ್ನು ಹಿಡಿದೆತ್ತಿ ನಿಲ್ಲಿಸುವ ಮನೋಚಿಕಿತ್ಸೆಯೂ ಆಸ್ಪತ್ರೆಗಳ ಕಡೆಯಿಂದ ಅಗತ್ಯವಾಗಿ ಆಗಬೇಕು ಎಂಬ ಅವರ ಆಗ್ರಹ, ಪತ್ರಕರ್ತೆಯೊಬ್ಬಳ ಸಾಮಾಜಿಕ ಕಳಕಳಿಯ ಬೇಡಿಕೆಯಂತೆಯೂ ಭಾಸವಾಗುತ್ತದೆ.

'ನನ್ನ ಎಷ್ಟೋ ಮಂದಿ ಸ್ನೇಹಿತರು, ಹಿತೈಷಿಗಳು ನೀವು ಸುಂದರವಾಗಿದ್ದಿರಿ, ಡೈನಮಿಕ್ ಆಗಿದ್ದಿರಿ ಎನ್ನುತ್ತಾರೆ' ಎನ್ನುವ, ಭೂತಕಾಲದಲ್ಲಿರುವ ಅವರ ಆಪ್ತೇಷ್ಟರ ಮಾತುಗಳನ್ನು (ಬಹುಶಃ ಕಾಗುಣಿತ ದೋಷ ಇರಬಹುದು) ನಿಸ್ಸಂಶಯವಾಗಿಯೂ ವರ್ತಮಾನಕ್ಕೆ ತಿರುಗಿಸಿ ಹೀಗೆ ಹೇಳಬಹುದು: 'ನೀವು ನಿಜಕ್ಕೂ ಸುಂದರವಾಗಿದ್ದೀರಿ, ಡೈನಮಿಕ್ ಆಗಿದ್ದೀರಿ...'

'ವಯಸ್ಸನ್ನು ಜ್ಞಾಪಿಸಬೇಡಿ...

10ನೇ ಪುಟದಿಂದ...

ನನ್ನೊಳಗೆ ಕವಿ ಸದಾ ಇದ್ದೇ ಇದ್ದಾನೆ. ನನ್ನ ಕಾವ್ಯವನ್ನು ವಿಮರ್ಶಕರು ಮರುಪರಿಶೀಲನೆ ಮಾಡಬೇಕು.



- **ಬರವಣಿಗೆಗೆ ಪ್ರೇರಣೆ ಸಿಕ್ಕಿದ್ದು ಎಲ್ಲಿಂದ?**

ಶಾಲಾ ದಿನಗಳಲ್ಲೇ ಅಂತಹದೊಂದು ಪ್ರೇರಣೆಗೆ ಒಳಗಾಗಲು ರವೀಂದ್ರನಾಥ ಟ್ಯಾಗೋರ್ ಅವರ ಅನುವಾದಿತ ಕೃತಿ 'ನನ್ನ ಬಾಲ್ಯ' ಕಾರಣ. ನಮಗೆ ಅದು ಉಪಪಠ್ಯವಾಗಿತ್ತು. ಪದ್ಯ ಓದಿದರೆ ಸಹಪಾಠಿಗಳಿಂದ ಚಪ್ಪಾಳೆ, ಶಿಕ್ಷಕರಿಂದ ಮೆಚ್ಚುಗೆ ದೊರೆಯುತ್ತದೆ ಎಂದು ಅದರಲ್ಲಿದ್ದ ಒಂದು ಅಂಶ ಮನಸ್ಸಿಗೆ ನಾಟಿತು. ಬರವಣಿಗೆ ಬಗೆಗೆ ಒಲವು ಮೂಡಲು ಇದು ಕಾರಣವಾಯಿತು.

ಶಿಕ್ಷಣ ಮತ್ತು ಸಾಹಿತ್ಯ ಕುರಿತು ಆಸಕ್ತಿ ಹುಟ್ಟಿದ್ದು ಮೂಲತಃ ಅಸ್ಮಿತೆಯ ಹುಡುಕಾಟದ ನೆಲೆಯಲ್ಲಿ. ಚೆನ್ನಾಗಿ ಓದಿದರೆ ಊರಿನಲ್ಲಿ ಜಾತಿಮತ ಭೇದವಿಲ್ಲದೆ ಎಲ್ಲರೂ ಗಮನಿಸುತ್ತಾರೆ ಎಂಬ ಹಂಬಲ ಓದಿನ ಬಗ್ಗೆ ಒಲವು ಹೆಚ್ಚಲು ಕಾರಣವಾಯಿತು. ಅಸ್ಮಿತೆಯ ಸಮಸ್ಯೆಯನ್ನೇ ಆತ್ಮವಿಶ್ವಾಸವಾಗಿ ಪರಿವರ್ತಿಸಿಕೊಳ್ಳುವುದು ಹೇಗೆ ಎಂಬ ಹುಡುಕಾಟದಲ್ಲಿ ಇವು ನೆರವಿಗೆ ಬಂದವು. ಬಿ.ಎ. ಎರಡನೇ ವರ್ಷದಲ್ಲಿ ಓದುವಾಗಲೇ 'ಮುಳ್ಳುಹಾದಿ' ಎಂಬ ನಾಟಕ ಬರೆದೆ. ಅದು ಪ್ರದರ್ಶನವನ್ನೂ ಕಂಡಿತು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮಗ ಸೀತಾರಾಮ್ ಅವರು ಒಂದು ದಿನ ಕರೆದು ನಾಟಕ ರಚನೆ ಹೇಗಿರಬೇಕು ಅಂತ ವಿವರಿಸಿ ಹೇಳಿದರು. ಆತ್ಮವಿಮರ್ಶೆ ಮುಖ್ಯ ಎಂಬುದು ಅವರ ಮಾತಿನಿಂದ ಗೊತ್ತಾಯಿತು. ಆ ಬಳಿಕ ನಾಟಕ ಪ್ರಕಾರ ನನಗೆ ಒಗ್ಗುವುದಿಲ್ಲ ಅಂತ ಏಕೋ ಅನ್ನಿಸಿ, ಪದ್ಯ ಬರೆಯಲು ಆರಂಭಿಸಿದೆ...

ನಾನು ಮೂಲತಃ ಗಾಂಧೀಜಿಯಿಂದ ಪ್ರಭಾವಿತನಾದವನು. ಆ ಬಳಿಕ ಮಾರ್ಕ್ಸ್ ಮತ್ತು ಅಂಬೇಡ್ಕರ್ ಅವರ ಬರವಣಿಗೆಗಳನ್ನು ಓದಿದೆ. ನನ್ನ ಅನುಭವವೇ ಅವರಲ್ಲಿ ಥಿಯರಿ ಆಗಿದೆ ಅಂತ ಅನ್ನಿಸಿ ಅವರ ಬರಹಗಳಿಗೆ ಕನೆಕ್ಟ್ ಆದೆ, ಅದರಿಂದ ಪ್ರಭಾವಿತನಾದೆ. ಈ ಮೂವರ ಚಿಂತನೆಗಳು ಇಂದಿಗೂ ಪ್ರಸ್ತುತ.

- **ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅಧ್ಯಾಪಕರಾಗಿ ನಿಮ್ಮ ಅನುಭವ?**

ಮೇಷ್ಟ್ರು ಕೆಲಸ ಮೊದಲಿನಿಂದಲೂ ನನಗೆ ಬಹಳ ಇಷ್ಟ. ಮೇಷ್ಟ್ರು ಎಂಬುದು ಬರೀ ಪದ ಅಲ್ಲ; ಸಂವೇದನೆ. ಈಗ ಪ್ರಾಧ್ಯಾಪಕರ ಸಂಖ್ಯೆ ಹೆಚ್ಚು. ಮೇಷ್ಟ್ರುಗಳ ಸಂಖ್ಯೆ ಕಡಿಮೆ. ಪ್ರಾಧ್ಯಾಪಕ ಅನ್ನುವುದು ಹುದ್ದೆ, ಸ್ಥಾನಮಾನ. ಒಳಗೆ ಒಬ್ಬ ಮೇಷ್ಟ್ರು ಇಲ್ಲದೇ ಇದ್ದರೆ ನಿಜವಾದ ಅಧ್ಯಾಪನ ನಡೆಯುವುದಿಲ್ಲ. ವಿದ್ಯಾರ್ಥಿಗಳ ಜತೆಗೆ ಸಾಮೀಪ್ಯ ಮತ್ತು ಅಂತರ ಎರಡೂ ಕಾಪಾಡಿಕೊಂಡು ಇರುವವನೇ ಸರಿಯಾದ ಮೇಷ್ಟ್ರು. ಚೆನ್ನಾಗಿ ಪಾಠ ಮಾಡಿ ಮೊದಲು ವಿದ್ಯಾರ್ಥಿಗಳ ಮನಸ್ಸು ಗೆಲ್ಲಬೇಕು. ಕನ್ನಡ ಸಾಹಿತ್ಯದ ಮುಖಾಂತರವೇ ಸಾಮಾಜಿಕ ಜವಾಬ್ದಾರಿಯನ್ನೂ ಜಾಗೃತಿಯನ್ನೂ ಮೂಡಿಸಲಿಕ್ಕೆ ಸಾಧ್ಯ ಎಂಬು ನಂಬಿದವನು ನಾನು. ಅದರಂತೆಯೇ ನಡೆದುಕೊಂಡಿದ್ದೇನೆ.

- **ಬಂಡಾಯ ಸಾಹಿತ್ಯ ಸಂಘಟನೆಯ ಉದ್ದೇಶಗಳು ಎಷ್ಟರಮಟ್ಟಿಗೆ ಈಡೇರಿವೆ?**

ಸಾಹಿತ್ಯದಲ್ಲಿ ಹೊಸ ಹುಟ್ಟು ಬೇಕು ಎಂಬ ಆಶಯ ಕನ್ನಡದ ಸಣ್ಣಕಥೆಗಳಲ್ಲಿ ಕಾಣಿಸುತ್ತಿದೆ ಅಂತ 70ರ ದಶಕದ ಮಧ್ಯಭಾಗದಲ್ಲೇ ನಾನು ಒಂದು ಲೇಖನ ಬರೆದಿದ್ದೆ. 1979ರ ವೇಳೆಗೆ ಕಾಲ ಕೂಡಿ ಬಂದಿತು. ಬಂಡಾಯ ಸಾಹಿತ್ಯ ಸಮ್ಮೇಳನ ಆಯೋಜನೆಗೊಂಡಿತು. ಚಳವಳಿಯಾಗಿ ಅದು ಏರಿಳಿತಗಳನ್ನು ಕಂಡಿದ್ದರೂ ಸಂಘಟನೆಯ ಆಶಯ ಖಂಡಿತ ಈಡೇರಿದೆ. ಹೊಸದಾಗಿ ಬರೆಯುವವರಲ್ಲಿ ಆತ್ಮವಿಶ್ವಾಸ ಮೂಡಿಸುವಂತಹ ಕೆಲಸವನ್ನು ದಲಿತ ಮತ್ತು ಬಂಡಾಯ ಚಳವಳಿಗಳು ಮಾಡಿವೆ. ನಿರ್ಲಕ್ಷಿತ ಸಮುದಾಯಗಳಿಂದ ಬಂದ ಬರಹಗಾರರಿಗೆ ಅಸ್ಮಿತೆಯನ್ನು ದೊರಕಿಸಿಕೊಟ್ಟಿವೆ. ಬೇರೆ ಬೇರೆ ಬಗೆಯ ಅಸಮಾನತೆಗಳು ಸಾಹಿತ್ಯ ಪ್ರಕಾರಗಳ ವಸ್ತುವಾಗಲು ಕಾರಣವಾಗಿವೆ.

- **ಸೃಜನಶೀಲ ಮನಸ್ಸು ಮತ್ತು ಪ್ರಭುತ್ವದ ನಡುವಣ ಸಂಬಂಧ ಹೇಗಿರಬೇಕು?**

ಸೃಜನಶೀಲ ವ್ಯಕ್ತಿ ಪ್ರಭುತ್ವದ ಜತೆ ಇಟ್ಟುಕೊಳ್ಳಬೇಕಾದ ಸಂಬಂಧದ ಸ್ವರೂಪಕ್ಕೆ ಪಂಪ, ಬಸವಣ್ಣ ಆದರ್ಶ. ತನಗೆ ಆಶ್ರಯ ಕೊಟ್ಟ ರಾಜನನ್ನು ಅರ್ಜುನನಿಗೆ ಹೋಲಿಸುತ್ತಾನೆ ಪಂಪ. ಅದೇ ಕೃತಿಯಲ್ಲಿ ಕರ್ಣ ಮೇಲುಗೈ ಪಡೆಯುವಂತೆ ನೋಡಿಕೊಳ್ಳುತ್ತಾನೆ. ಬಸವಣ್ಣ ಒಂದು ಹುದ್ದೆಯಲ್ಲಿ ಇದ್ದು ಚಳವಳಿ ಕಟ್ಟಿದರು. ಸರ್ಕಾರ ನಮಗೆ ಕೊಡಮಾಡುವ ಹುದ್ದೆ ಅಥವಾ ಸ್ಥಾನಮಾನವನ್ನು ಒಪ್ಪಿಕೊಳ್ಳಬೇಕಾದರೆ ಆ ಸರ್ಕಾರ ನಮ್ಮ ವಿಚಾರಧಾರೆಗೆ ಸ್ವಲ್ಪವಾದರೂ ಹತ್ತಿರವಾಗಿರಬೇಕು. ಇಲ್ಲವಾದರೆ ಒಪ್ಪಿಕೊಳ್ಳಬಾರದು. ವಿಚಾರಧಾರೆ, ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ರಾಜೀನಾಮೆ ಕೊಡಲು ಸಿದ್ಧವಾಗಿರಬೇಕು.

- **ನಿಮಗೀಗ 75ರ ಹರೆಯ. ಆದರೂ ನಿರಂತರವಾಗಿ ಯಾವುದಾದರೊಂದು ಕೆಲಸದಲ್ಲಿ ತೊಡಗಿಸಿಕೊಂಡಿರುತ್ತೀರಿ. ನಿಮ್ಮ ಕ್ರಿಯಾಶೀಲತೆಯ ಹಿಂದೆ ಅಡಗಿರುವ ಗುಟ್ಟೇನು?**

ವಯಸ್ಸನ್ನು ಮನಸ್ಸು ಗೆಲ್ಲಬೇಕು ಎಂದು ನಂಬಿದವನು ನಾನು. ಮನಸ್ಸು ಯಾವಾಗಲೂ ಮಲಿನವಾಗಬಾರದು. ವಯಸ್ಸಿನ ಬಗ್ಗೆ ಯೋಚನೆ ಮಾಡುವುದಿಲ್ಲ. ವಯಸ್ಸಿನ ಆಧಾರದ ಮೇಲೆ ನನ್ನ ಕುರಿತು ಕಾರ್ಯಕ್ರಮ ಆಯೋಜಿಸುವ ಪ್ರಸ್ತಾವ ತಂದಾಗ ನಾನು ಒಪ್ಪಲಿಲ್ಲ. ನನಗೆ ವಯಸ್ಸನ್ನು ಜ್ಞಾಪಿಸಬೇಡಿ ಅಂತ ಹೇಳುತ್ತೇನೆ. ನನ್ನ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕ್ರಿಯಾಶೀಲತೆಯೇ ಕಾಪಾಡಿದೆ. ಯುವ ಮನಸ್ಸುಗಳ ಜತೆ ಒಡನಾಟ ಹೆಚ್ಚು.

- **ಇಷ್ಟೆಲ್ಲ ಕೆಲಸಗಳಿಗೆ ಸಮಯ ಹೇಗೆ ಹೊಂದಿಸುತ್ತೀರಿ?**

ನಾಳೆ ಏನು ಕೆಲಸ ಮಾಡಬೇಕು ಅಂತ ಒಂದು ಅಂದಾಜು ಮಾಡಿಕೊಳ್ಳುತ್ತೇನೆ. ಅದರ ಪ್ರಕಾರ ಕೆಲಸ ಮಾಡುತ್ತೇನೆ. ಅದರ ಅರ್ಥ ಯಾಂತ್ರಿಕವಾಗಿ ಮಾಡುತ್ತೇನೆ ಎಂದು ಅಲ್ಲ. ರಾತ್ರಿಯೇ ಬರೆದಿಟ್ಟುಕೊಳ್ಳುತ್ತೇನೆ. ಆದ್ಯತೆ ಅನುಸಾರ ವಿಂಗಡಿಸುತ್ತೇನೆ. ಸಿನಿಮಾ ನೋಡುತ್ತೇನೆ. ಟಿ.ವಿ.ಯಲ್ಲಿ ನ್ಯೂಸ್ ತಪ್ಪದೇ ವೀಕ್ಷಿಸುತ್ತೇನೆ. ಕ್ರೀಡಾವಳಿಗಳನ್ನು ನೋಡುತ್ತೇನೆ. ಕುಡುಮಿ ತರಹ ಇರಲ್ಲ. ಕೆಲವು ವೇಳೆ ಏನೂ ಮಾಡಲ್ಲ. ಮೌನವಾಗಿ ಇರುತ್ತೇನೆ. ಅದೇ ವಿಶ್ರಾಂತಿ.

- **'ಬೆವರು ನನ್ನ ದೇವರು' ಹೆಸರಿನಲ್ಲಿ ಸಮಗ್ರ ಸಾಹಿತ್ಯ ಸಂಪುಟ ಹೊರಬರುತ್ತಿದೆ. ಇದರ ಕುರಿತು ಏನು ಅನಿಸುತ್ತದೆ?**

14 ಸಂಪುಟಗಳು ಒಟ್ಟು 5,260 ಪುಟಗಳ ಬರವಣಿಗೆಯನ್ನು ಒಳಗೊಂಡಿವೆ. ಬರಹಗಳು ಚದುರಿಹೋಗಿದ್ದವು. ಈಗ ವಿಷಯವಾರು ವಿಂಗಡಣೆಯಾಗಿದೆ. ಇದರಿಂದ ಅಧ್ಯಯನಕ್ಕೆ ಅನುಕೂಲ ಆಗುತ್ತದೆ. ನನ್ನ ಬೆಳವಣಿಗೆಯ ಹಂತಗಳನ್ನು ಗುರುತಿಸಲು ಸಹಕಾರಿ. ನನ್ನ ಸಾಹಿತ್ಯ ಜೀವನದಲ್ಲಿ ಇದನ್ನು ಮುಖ್ಯವಾದ ಘಟ್ಟ ಅಂತ ಭಾವಿಸುತ್ತೇನೆ.

- **ಮುಂದಿನ ಯೋಜನೆಗಳು?**

ಸಾಮಾಜಿಕ ಜವಾಬ್ದಾರಿಯುಳ್ಳ ಯುವ ತಂಡಗಳಿಗೆ ಒತ್ತಾಸೆಯಾಗಿ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಇರಾದೆ ಇದೆ. ಇವತ್ತಿನ ಸಂದರ್ಭದಲ್ಲಿ 70–80ರ ದಶಕಗಳಲ್ಲಿ ಇದ್ದಂತಹ ಸಾಮಾಜಿಕ ಜಾಗೃತಿಯನ್ನು ಮತ್ತೆ ಮೂಡಿಸುವುದು ಅಗತ್ಯ. ನನ್ನ ಪಾಲಿನ ಮುಂದಿನ ಮಹಾಕೃತಿ ಅದೇ. 'ಆತ್ಮಕತೆ ಬರೆಯಿರಿ' ಅಂತ ಗೆಳೆಯರು ಒತ್ತಾಯಿಸುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ನಾನು ಗೊಂದಲದಲ್ಲಿದ್ದೇನೆ. ಅದರ ಅಗತ್ಯ ಇದೆಯೇ ಎಂಬ ಪ್ರಶ್ನೆ ಇದೆ. ಆತ್ಮರತಿ ಆಗಿಬಿಡಬಹುದು ಎಂಬ ಅನುಮಾನವೂ ಇದೆ. ಆತ್ಮಕತೆಯ ಚೌಕಟ್ಟಿಗೆ ಹೊರತಾಗಿ ಆಯ್ದ ಅನುಭವಗಳನ್ನು ಆಧರಿಸಿ ಬರೆಯಬಹುದೇ ಎಂಬುದರ ಬಗ್ಗೆ ಯೋಚಿಸುತ್ತಿದ್ದೇನೆ.


- **ಬಲಪಂಥೀಯ ಐಕಾನ್‌ಗಳನ್ನು ಪ್ರಜ್ಞಾಪೂರ್ವಕವಾಗಿ ಮುನ್ನೆಲೆಗೆ ತರುವ ಕೆಲಸ ನಡೆದಿದೆ. ಇದನ್ನು ಅರ್ಥಮಾಡಿಕೊಳ್ಳುವುದು ಹೇಗೆ?**

ಪ್ರಜಾಸತ್ತಾತ್ಮಕ ಸರ್ಕಾರಗಳು ಸಂವಿಧಾನಾತ್ಮಕ ಆಶಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ, ಪ್ರಜ್ಞಾಪೂರ್ವಕವಾಗಿ ನಿರ್ಲಕ್ಷಿಸಿದರೆ ರಹಸ್ಯ ಕಾರ್ಯಸೂಚಿಗಳು ಬಹಿರಂಗಕ್ಕೆ ಬರುತ್ತವೆ. ಚರಿತ್ರೆಯನ್ನು ಪೂರ್ವಗ್ರಹದಿಂದ ನೋಡಬಾರದು. ವಸ್ತುನಿಷ್ಠತೆ, ವಿಶ್ಲೇಷಣೆ ಮುಖ್ಯ. ವಿಭಜಕ ಪ್ರವೃತ್ತಿ ಜಾಸ್ತಿ ಆಗುತ್ತಿದೆ. ಸಲ್ಲದವರನ್ನು ಮುನ್ನೆಲೆಗೆ ತರುವ ಪ್ರಯತ್ನ ನಡೆಯುತ್ತಿದೆ. ಆಡಳಿತ ನಡೆಸುವ ಪಕ್ಷ ಬದಲಾದ ಕೂಡಲೇ ಚರಿತ್ರೆಯನ್ನು ಬದಲಾಯಿಸುವ ಅವಶ್ಯಕತೆ ಇಲ್ಲ. ಚರಿತ್ರೆಯ ವ್ಯಾಖ್ಯಾನ, ಮರುವ್ಯಾಖ್ಯಾನವನ್ನು ಚರಿತ್ರಕಾರರು ಮಾಡಬೇಕು; ರಾಜಕೀಯ ಪಕ್ಷಗಳಲ್ಲ.

ಮೊದಲ ಓದು

ಬೇಂದ್ರೆ ಸ್ಮೃತಿ

ಎಚ್.ದಂಡಪ್ಪ



ಪು: 76 ₹80

ಇದು ಬರಿ ಬೆಳಗಲ್ಲೊ ಅಣ್ಣಾ
ಸಂಪಾದನೆ: ಬಸವರಾಜ ಸಾದರ
ಪ್ರ: ಸಂಗಾತ ಪುಸ್ತಕ, ಗದಗ
ಸಂ: 9341757653

ವರಕವಿ ಬೇಂದ್ರೆಯವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಅವರ ಸಾಹಿತ್ಯವನ್ನು ಕುರಿತು ಆಕಾಶವಾಣಿ ಧಾರವಾಡ ಕೇಂದ್ರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ಡಾ. ಬಸವರಾಜ ಸಾದರ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಇಂತಹ ಕೃತಿಗಳಲ್ಲಿರುವ ವಿಮರ್ಶೆಯು ಒಂದು ಸಂಸ್ಕೃತಿಯಲ್ಲಿನ ಹೊಸ ಓದುಗ ಸಮುದಾಯವನ್ನು ಬೆಳೆಸುತ್ತದೆ. ಹೊಸ ಓದುಗ ವಲಯ ವಿಸ್ತಾರವಾಗಲು ಸಾಧ್ಯವಾಗುತ್ತದೆ.


ಈ ಸಂಕಲನದಲ್ಲಿ 'ಬೇಂದ್ರೆ ಹಾಗೂ ಗೆಳೆಯರ ಗುಂಪು', 'ಬೇಂದ್ರೆ ಕಾವ್ಯದ ಮುಖ್ಯ ನೆಲೆಗಳು ಮತ್ತು ದರ್ಶನ', 'ಬೇಂದ್ರೆ ಕಾವ್ಯದಲ್ಲಿ ಒಲವು', 'ಬೇಂದ್ರೆಯವರ ಕಾವ್ಯೇತರ ಸಾಹಿತ್ಯ', 'ಬೇಂದ್ರೆಯವರ ಕಾವ್ಯ ಭಾಷೆ ಮತ್ತು ಪ್ರತಿಮಾ ಯೋಜನೆ' ಎಂಬ ಐದು ಲೇಖನಗಳಿವೆ. ಬೇಂದ್ರೆಯವರು ಕಟ್ಟಿದ್ದ ಗೆಳೆಯರ ಗುಂಪು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಐರ್ಲೆಂಡಿನ ಸಾಂಸ್ಕೃತಿಕ ಪುನರುಜ್ಜೀವನ ಕಾಲದಲ್ಲಿ ಏಟ್ಸ್ ಕವಿಯು 'In dreams begins responsibility' ಎಂಬ ಮಾತನ್ನು ಹೇಳುತ್ತಾನೆ. ಈ ಮಾತು ಗೆಳೆಯರ ಗುಂಪಿಗೂ ಅನ್ವಯಿಸುತ್ತದೆ. ಈ ಗೆಳೆಯರೆಲ್ಲರೂ ಕನಸುಗಾರರು. ಯಾವುದೇ ನಿಯಮ, ನಿರ್ಬಂಧಗಳಿಲ್ಲದ ಗೆಳೆತನದ ವಾತಾವರಣದಲ್ಲಿ ಸಮಾನಮನಸ್ಕರಾಗಿ ನವ ಕರ್ನಾಟಕದ ಪುನರುಜ್ಜೀವನಕ್ಕೆ ಉತ್ತರ ಕರ್ನಾಟಕದ ಪರವಾಗಿ ತಮ್ಮ ವೈಶಿಷ್ಟ್ಯಪೂರ್ಣ ಕೊಡುಗೆಯನ್ನು ಈ ಗೆಳೆಯರು ನೀಡಿದರು.

ಹದಿನೈದು ವರ್ಷಗಳ ಕಾಲ ನಡೆದ ಗೆಳೆಯರ ಗುಂಪಿನ ಕಾರ್ಯಚಟುವಟಿಕೆಗಳು ಕಾವ್ಯ ರಚನೆಗಷ್ಟೇ ಸೀಮಿತವಾಗಿರಲಿಲ್ಲ. 'ಜಯಕರ್ನಾಟಕ' ಪತ್ರಿಕೆಯಲ್ಲಿ ಹಳೆಯ ಹೊಸ ಕಾವ್ಯಗಳ ಮೌಲ್ಯಮಾಪನ ಮಾಡುವ ಜತೆಗೆ ವಿಚಾರಪೂರಿತವಾದ ಲೇಖನಗಳನ್ನೂ ಪ್ರಕಟಿಸಿದರು. ನಾಡಹಬ್ಬದ ಆಚರಣೆಯನ್ನು ಪ್ರಾರಂಭ ಮಾಡಿ ಕರ್ನಾಟಕದ ಏಕೀಕರಣಕ್ಕೆ ಪಣತೊಟ್ಟರು. ಕನ್ನಡ ನಾಡು, ನುಡಿ, ಸಂಸ್ಕೃತಿಯ ಬೆಳವಣಿಗೆಗೆ ಗೆಳೆಯರ ಗುಂಪು ಕೊಟ್ಟಿರುವ ಕೊಡುಗೆಗಳ ಹಿಂದೆ ಬೇಂದ್ರೆಯವರು ಇದ್ದರು ಎಂಬುದನ್ನು ಕುರ್ತುಕೋಟಿಯವರು ವಿವರವಾಗಿ ದಾಖಲಿಸಿದ್ದಾರೆ.

ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ಬಳಸುವ ಭಾಷೆಯು ಬದುಕನ್ನು ಕಟ್ಟುವ, ಶೋಧಿಸುವ,ಸಾಕ್ಷಾತ್ಕರಿಸುವ ಮಾನವೀಯವಾದ, ಕ್ರಿಯಾಶೀಲವಾದ ಶಕ್ತಿಯಾಗಿದೆ. ಆದ್ದರಿಂದಲೇ ಅವರ ಕಾವ್ಯ ಇಂದಿಗೂ ನವನವೀನ. ಅವರ ಭಾಷಾ ಬಳಕೆಯನ್ನು ಕುರಿತು ಇಲ್ಲಿಯವರೆಗೂ ಮಹತ್ವದ ವಿಮರ್ಶಕರು ಬರೆದಿರುವ ಲೇಖನಗಳನ್ನು ಗಮನದಲ್ಲಿಟ್ಟುಕೊಂಡು ಚನ್ನವೀರ ಕಣವಿಯವರು 'ಬೇಂದ್ರೆಯವರ ಕಾವ್ಯಭಾಷೆ ಮತ್ತು ಪ್ರತಿಮಾ ಯೋಜನೆ' ಎಂಬ ಲೇಖನ ಬರೆದಿದ್ದಾರೆ.

ಬೇಂದ್ರೆಯವರ ಕವಿತೆಯಲ್ಲಿರುವ ಪದಗಳು ಅರ್ಥದ ತರ್ಕದ ಬಂಧನದಿಂದ ಮುಕ್ತವಾಗಿವೆ. ಆದ್ದರಿಂದಲೇ ಕವಿತೆಯನ್ನು ಸ್ವಯಂಪೂರ್ಣವಾದ ಶಬ್ದ ರಚನೆ ಎಂದು ಕರೆಯಲಾಗುತ್ತದೆ. ಅವರ ಕವಿತೆಯಲ್ಲಿ ಬಳಕೆಯಾಗುವ ಪದಗಳು ತಮ್ಮ ಸ್ವಂತ ಶಕ್ತಿಯ ಮೇಲೆ ವ್ಯವಹರಿಸುತ್ತವೆ. ಅಂತಹ ಶಕ್ತಿ ಬೇಂದ್ರೆಯವರ ಕಾವ್ಯ ಭಾಷೆಗಿದೆ. ಬೇಂದ್ರೆಯವರ, ವಿಮರ್ಶೆ, ಸಂಶೋಧನೆ, ಚಿಂತನಶೀಲ ಬರಹ, ನಾಟಕ, ಕಥೆ,ಹರಟೆ ಅನುವಾದ ಇತ್ಯಾದಿ ಪ್ರಕಾರಗಳನ್ನು ಕುರಿತ ಸಮೀಕ್ಷಾತ್ಮಕ ಬರಹವನ್ನು ಗುರುಲಿಂಗ ಕಾಪಸೆಯವರು ಬರೆದಿದ್ದಾರೆ. ಇದರಲ್ಲಿ ನಾಟಕಗಳನ್ನು ಕುರಿತು ಸೂಕ್ಷ್ಮವಾದ ಒಳನೋಟಗಳಿವೆ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಲೇಖನವು ಬೇಂದ್ರೆಯವರ ಕಾವ್ಯದಲ್ಲಿರುವ ಗಂಡು ಮತ್ತು ಹೆಣ್ಣಿನ ನಡುವೆ ಇರಬಹುದಾದ ಪ್ರೇಮ, ಸಾಮರಸ್ಯ, ದಾಂಪತ್ಯದ ಸಮರಸ ಇತ್ಯಾದಿಗಳನ್ನು ಲಘುಬಗೆಯಿಂದ ವಿವರಿಸುತ್ತದೆ.

ರಂಗಾನುಭವ ತುಂಬಿದ 'ಕಲಾರಾಧನೆ'



ಪು: 200 ₹200

ಕಲಾರಾಧನೆ
ಲೇ: ಎಂ. ರಂಗನಾಥ ಭಟ್
ಪ್ರ: ಕವಿತಾ ಪ್ರಕಾಶನ, ಮೈಸೂರು
ಸಂ: 9880105526

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ಸಮೀಪದ ಮುಂಡಾಜೆ ಗ್ರಾಮದಲ್ಲಿ ಜನಿಸಿ, ರಂಗಭೂಮಿಯಲ್ಲಿ ರಂಗಕರ್ಮಿಯಾಗಿ ದಿವಂಗತ ಎಂ.ರಂಗನಾಥ ಭಟ್ ಅವರಿಟ್ಟ ಹೆಜ್ಜೆ ಗುರುತು ಇತಿಹಾಸ. ಅವರ ರಂಗಾನುಭವದ ಸಂಗ್ರಹವೇ 'ಕಲಾರಾಧನೆ'.

ತಮ್ಮ ಕಲಾಜೀವನದ ಪರಿಚಯವನ್ನು ರಂಗನಾಥ ಭಟ್ ಅವರು 1966ರಲ್ಲಿ ಪ್ರಕಟಿಸಿದ್ದರು. ಈ ಕೃತಿಯನ್ನು ಇದೀಗ ಮೈಸೂರಿನ ಕವಿತಾ ಪ್ರಕಾಶನ ಮರುಮುದ್ರಣಗೊಳಿಸಿದೆ.

ಈ ಕೃತಿಯಲ್ಲಿ ರಂಗನಾಥ ಭಟ್ ಅವರು ತಮ್ಮ ಕಲಾಜೀವನ ಹಾಗೂ ಅಲ್ಲಿ ನಡೆದ ಘಟನೆಗಳನ್ನಷ್ಟೇ ವಾಚಕರ ಮುಂದೆ ತೆರೆದಿಟ್ಟಿಲ್ಲ. ಜೊತೆಗೆ, ಹದಿಮೂರರ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ತಾವು ಹಾಗೂ ತಮ್ಮ ಕುಟುಂಬ ಎದುರಿಸಿದ ಸಂಕಷ್ಟ, ಪಿಟೀಲು ವಾದಕರಾಗಿದ್ದ ಶಿವಪ್ಪ ಶಾನುಭೋಗರ ಮೂಲಕ ರಂಗಪ್ರವೇಶಿಸಿದ ಘಟನೆ, 'ಮೈಸೂರು ಪ್ರಾಂತ್ಯದ ಲಂಡನ್' ತೀರ್ಥಹಳ್ಳಿಯಲ್ಲಿ ಹರಿಶ್ಚಂದ್ರ ಪಾತ್ರಕ್ಕೆ ಸಿಕ್ಕಿದ ಮನ್ನಣೆ, ಅಂದಿನ ಕಾಂಗ್ರೆಸ್ ಸರ್ಕಾರ ತನಗೆ ನೀಡಿದ ನಿವೃತ್ತಿ ವೇತನದ ಬಗೆಗಿನ ಅಸಮಾಧಾನ, ಕರ್ನಾಟಕದಲ್ಲಿ ನಿವೃತ್ತ ಕಲಾವಿದರನ್ನು ಸರ್ಕಾರ ಹೇಗೆ ನೋಡಿಕೊಳ್ಳುತ್ತಿತ್ತು ಎನ್ನುವುದರ ಬಗ್ಗೆಯೂ ರಂಗನಾಥ ಭಟ್ಟರು ಓದುಗರ ಮುಂದಿರಿಸಿದ್ದಾರೆ. ಮರುಮುದ್ರಣದ ಸಮಯದಲ್ಲೂ ಮೂಲ ಕೃತಿಯಲ್ಲಿ ರಂಗನಾಥ ಭಟ್ ಅವರು ಬಳಸಿದ್ದ ಗ್ರಾಮೀಣ ಭಾಷೆಯ ಸೊಗಡನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

ಇಕೋ ಅಕ್ಕೈ ಬಂದರು ರಂಗಕೆ...

ನೀನಾ ಜಾರ್ಜ್

ಲೈಂಗಿಕ ಅಲ್ಪಸಂಖ್ಯಾತರಾಗಿದ್ದು, ಆ ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತಿರುವ ಅಕ್ಕೈ ಪದ್ಮಶಾಲಿ ಅವರ ಆತ್ಮಕಥೆ 'ಅಕ್ಕೈ–ಕರುಣೆಗೊಂದು ಸವಾಲು' ರಂಗ ರೂಪಾಂತರ ಹೊಂದಿದೆ. ಮಾರ್ಚ್ 6ರಂದು ಸಂಜೆ 6ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಈ ಕೃತಿ ರಂಗವೇರುತ್ತಿದೆ.

ಡಾ.ಬೇಲೂರು ರಘುನಂದನ್ ಈ ನಾಟಕದ ನಿರ್ದೇಶಕರು. ನಯನಾ ಸೂಡ ಈ ಏಕವ್ಯಕ್ತಿ ನಾಟಕದ ಪಾತ್ರಧಾರಿ.

ಸಿದ್ಧಮಾದರಿಗಳ ಆಚೆ ಸಮುದಾಯವೊಂದರ ಏಳಿಗೆಗೆ ಶ್ರಮಿಸಿದ ಪ್ರತಿನಿಧಿಯ ಬದುಕಿನ ಮಜಲುಗಳನ್ನು ಒಬ್ಬ ಪಾತ್ರಧಾರಿ ಕಟ್ಟಿಕೊಡುವ ಸವಾಲಿನ ರಂಗಪ್ರಯೋಗವೊಂದರ ಒಳನೋಟ



ಪರಿರ್ತನೆಯಿಂದ ಪರಿಪೂರ್ಣತೆಯವರೆಗೆ... ಅಕ್ಕೈ ಅವರನ್ನು ಪ್ರತಿಬಿಂಬಿಸುವ ಯತ್ನದಲ್ಲಿ ನಯನಾ ಸೂಡ

ಅಕ್ಕೈ ಅವರ ಆತ್ಮಚರಿತ್ರೆಯ ಕೃತಿಯನ್ನು ನಾಟಕವಾಗಿಸಲು ಏನು ಪ್ರೇರಣೆ ಎಂಬ ಪ್ರಶ್ನೆಗೆ ರಘುನಂದನ್ ಅವರು ಉತ್ತರಿಸುವುದು ಹೀಗೆ: 'ನಾನು ಅಕ್ಕೈ ಅವರನ್ನು ಬಹಳ ಕಾಲದಿಂದ ಬಲ್ಲೆ. ಆದರೆ ಈ ಪುಸ್ತಕವನ್ನು ಓದಿದಾಗ ಅದೆಷ್ಟೋ ಹೊಸ ಸಂಗತಿಗಳು ಗೊತ್ತಾದವು. ಕುಟುಂಬ, ಸಮುದಾಯ ಮತ್ತು ಸಮಾಜದಿಂದ ಅವರು ಎದುರಿಸಿದ ನೋವು, ಆಘಾತ, ಅವಮಾನ ಮತ್ತು ನಿಂದನೆಯನ್ನು ನಾನು ಅರ್ಥಮಾಡಿಕೊಂಡೆ. ಹಾಗಾಗಿ ಈ ಪುಸ್ತಕ ನನ್ನನ್ನು ಭಾವುಕನನ್ನಾಗಿಸಿತು. ರಂಗಕ್ಕೆ ತರುವಂತೆಯೂ ಪ್ರೇರೇಪಿಸಿತು'.

ಸಿದ್ಧಮಾದರಿಗಳನ್ನು ಭೇದಿಸಿ ಸಮಾಜವನ್ನು ಹೆಚ್ಚು ಒಳಗೊಳ್ಳುವಂತೆ ಮಾಡಲು ಅಕ್ಕೈ ಅವರ ಪ್ರಯತ್ನಗಳನ್ನು ವ್ಯಾಪಕವಾಗಿಸುವ ಉದ್ದೇಶ ಈ ನಾಟಕದ ಹಿಂದಿದೆ ಎನ್ನುತ್ತಾರೆ ಅವರು.

'ಅಕ್ಕೈ ಅವರು ಇಂದಿನ ಹಂತಕ್ಕೆ ಏರಲು ತುಂಬಾ ಕಷ್ಟಪಟ್ಟಿದ್ದಾರೆ. ಅವರ ಪ್ರಯತ್ನಗಳು ಅವರ ನೋವುಗಳನ್ನು ನಿವಾರಿಸಿದ್ದು ಮಾತ್ರವಲ್ಲ, ಅವರ ಸಮುದಾಯದವರಲ್ಲಿ ಹಕ್ಕುಗಳಿಗಾಗಿ ಹೋರಾಡಲು ಭರವಸೆ ಮತ್ತು ವಿಶ್ವಾಸವನ್ನು ತುಂಬಿವೆ. ಇದು ಸುಲಭದ ಕೆಲಸವಲ್ಲ. ಆದರೆ, ಅಕ್ಕೈ ತಮ್ಮ ಕೆಲಸದ ಮೂಲಕ ಹಲವರ ಜೀವನವನ್ನು ಬೆಳಗಿಸಿದ್ದಾರೆ. ಈ ವಿಚಾರಗಳು ನಾಟಕದಲ್ಲಿ ಬಿಂಬಿತವಾಗಲಿವೆ' ಎನ್ನುತ್ತಾರೆ ಬೇಲೂರು.


ಅಕ್ಕೈ ಪದ್ಮಸಾಲಿ

ವಿಭಿನ್ನ ಧ್ವನಿ ಮತ್ತು ಭಾವವನ್ನು ನಿರೂಪಿಸುವ ಪ್ರಯತ್ನ ಇಲ್ಲಿನದ್ದು. ಅದಕ್ಕಾಗಿ ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಯ ಪಾತ್ರವನ್ನು ಚಿತ್ರಿಸಲು ಪುರುಷನಿಗಿಂತ ಮಹಿಳೆಯೇ ಸೂಕ್ತ ಎಂದು ಯೋಚಿಸಿದ ಬೇಲೂರು ಅವರು, ಮಹಿಳೆಯನ್ನೇ ಆ ಪಾತ್ರಕ್ಕೆ ಆಯ್ಕೆ ಮಾಡಲು ನಿರ್ಧರಿಸಿದ್ದರು. ಹಾಗೆ ಅಕ್ಕೈ ಪಾತ್ರ ನಿರ್ವಹಣೆಗೆ ಆಯ್ಕೆಯಾದವರೇ ನಯನಾ.

ನಯನಾ ಅವರು ಈ ಪ್ರಯೋಗದಲ್ಲಿ ಅಕ್ಕೈ ಅವರ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ಇಡೀ ನಾಟಕ ಒಂದೇ ಪಾತ್ರದಲ್ಲಿ ನಡೆಯುತ್ತದೆ. ಏಕಾಂಗಿ ಅಭಿನಯ. ಪುರುಷನೊಬ್ಬ ಮಹಿಳೆಯಾಗಿ ಪರಿವರ್ತನೆಗೊಳ್ಳುವ ಪಾತ್ರವದು. ಅಕ್ಕೈ ಅವರನ್ನೇ ಈ ಪಾತ್ರ ಬಿಂಬಿಸುವುದಾದರೂ ನಯನಾ ಅವರು ತಮ್ಮದೇ ಶೈಲಿಯಲ್ಲಿ ಅಭಿವ್ಯಕ್ತಿಸಲಿದ್ದಾರೆ. ಯಾವುದೇ ಅನುಕರಣೆ ಇಲ್ಲಿ ಇಲ್ಲ. ಮೂಲಕೃತಿಯಲ್ಲಿ ಬರುವ ಇತರ ಪಾತ್ರಗಳನ್ನೂ ಅವರು ಅಭಿವ್ಯಕ್ತಿಸಲಿದ್ದಾರೆ' ಎನ್ನುತ್ತಾರೆ ನಿರ್ದೇಶಕರು.

ನಯನಾ ಅವರೂ ಈ ಪಾತ್ರದ ಬಗ್ಗೆ ಖುಷಿಯಾಗಿದ್ದಾರಂತೆ. ಅವರ ಅಭಿನಯ ನೋಡಲು ಅಕ್ಕೈ ಅವರೇ ಖುದ್ದು ತಾಲೀಮಿನ ಜಾಗಕ್ಕೆ ಹೋಗಿದ್ದರು. ಅವರು ಗಮನಿಸಿದಂತೆ, 'ನಯನಾ ಒಂದು ಪಾತ್ರದಿಂದ ಇನ್ನೊಂದಕ್ಕೆ ಎಷ್ಟು ಬೇಗನೆ ಬದಲಾಗುತ್ತಾಳೆ ಎಂಬುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಒಂದು ಹಂತದಲ್ಲಿ ಅವಳು ನನ್ನ ತಂದೆ ಮತ್ತು ಮರುಕ್ಷಣದಲ್ಲಿ ಪೊಲೀಸ್ ಆಗುತ್ತಾಳೆ. ಅವಳು ವಿಷಯ ಗ್ರಹಿಸಿದ್ದಷ್ಟೇ ಅಲ್ಲ, ಭಾವನೆಗಳನ್ನು ಪರಿಪೂರ್ಣವಾಗಿ ಚಿತ್ರಿಸಿದ್ದಾಳೆ. ಅವಳು ನನ್ನ ಜೀವನವನ್ನು ಎಷ್ಟು ಚೆನ್ನಾಗಿ ಅರ್ಥೈಸಿದ್ದಾಳೆ' ಎಂದು ಅಚ್ಚರಿ ಮತ್ತು ಖುಷಿಯಿಂದ ಹೇಳುತ್ತಾರೆ ಅಕ್ಕೈ.

ನಯನಾ ಅವರು ಇದೇ ಮೊದಲ ಬಾರಿಗೆ ಒಂದೇ ನಾಟಕದಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಅವರು ಹೇಳುವಂತೆ, 'ಪಾತ್ರಗಳ ಸ್ಥಿತ್ಯಂತರವನ್ನು ನಿಭಾಯಿಸುವ ವಿಷಯದಲ್ಲಿ ಅಕ್ಕೈ ಅವರ ಜೀವನವನ್ನು ಚಿತ್ರಿಸುವುದು ಸವಾಲಿನ ಸಂಗತಿ. ಅಕ್ಕೈ ಹುಡುಗನಾಗಿ ಜನಿಸಿ, ಹುಡುಗಿಯಾಗಿ ರೂಪಾಂತರವಾಗುತ್ತಾರೆ. ಮುಂದೆ ಮಹಿಳೆಯಾಗಿ ಪರಿಪೂರ್ಣತೆಯತ್ತ ಹೊರಳುತ್ತಾರೆ. ಪೊಲೀಸರು, ಅಕ್ಕೈ ಅವರ ಪೋಷಕರು ಮತ್ತು ಶಿಕ್ಷಕರು, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಹಿಜಡಾ ನಾಯಕ ಮತ್ತು ದೊಡ್ಡ ಸಮಾಜ... ಹೀಗೆ ಪ್ರತೀ ಪಾತ್ರದೊಳಗೆ ತೊಡಗಲು ಹೆಚ್ಚು ಮಾನಸಿಕ ಸಿದ್ಧತೆಯ ಅಗತ್ಯವಿದೆ' ಎನ್ನುತ್ತಾರೆ.

'ಲಿಂಗತ್ವ ಅಲ್ಪಸಂಖ್ಯಾತರ ಬಗ್ಗೆ ಸಹಾನುಭೂತಿ ಬೆಳೆಸುವ ಬದಲು ನನ್ನ ಹೋರಾಟಗಳ ಮೂಲಕ ನಾನು ಈ ಸಮುದಾಯದ ಸದಸ್ಯರಲ್ಲಿ ಒಳಗೊಳ್ಳುವಿಕೆಯ ಪ್ರಜ್ಞೆ ಬೆಳೆಸಲು ಹೇಗೆ ಹೋರಾಟ ಮಾಡಿದೆ ಎಂಬುದನ್ನು ನಯನಾ ಕಂಡುಕೊಂಡಿದ್ದಾರೆ. ಅವರ ಅದ್ಭುತವಾದ ಧ್ವನಿ ಏರಿಳಿತ, ಅಭಿವ್ಯಕ್ತಿಯ ಮೂಲಕ ಲೈಂಗಿಕ ಅಲ್ಪಸಂಖ್ಯಾತರ ಜೀವನದಲ್ಲಿ ನೋವು, ಕಿರುಕುಳ, ಆಘಾತಕಾರಿ ಘಟನೆಗಳನ್ನು ತೋರಿಸಿದ್ದಾರೆ. ನಾಟಕದಲ್ಲಿ ತೊಡಗಿಕೊಳ್ಳುವ ಮುನ್ನ ನನ್ನ ಪುಸ್ತಕ ಓದಿದ್ದಾರೆ. ನನ್ನ ದೇಹಭಾಷೆ ಮತ್ತು ಪಾತ್ರವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದಾರೆ' ಎಂದು ಮೆಚ್ಚುಗೆ ಮಾತುಗಳನ್ನಾಡುತ್ತಾರೆ ಅಕ್ಕೈ.

ಅಕ್ಕೈ ಅವರ ಮೊದಲ ಹೆಸರು ಜಗದೀಶ್. ಮಧ್ಯಮ ವರ್ಗದ ಸಣ್ಣ ಕುಟುಂಬದಲ್ಲಿ ಗಂಡಾಗಿಯೇ ಅವರು ಹುಟ್ಟಿದ್ದು. ತಂದೆ ಭಾರತೀಯ ರಕ್ಷಣಾ ಸಚಿವಾಲಯದ ಏರೋನಾಟಿಕಲ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಕಾರ್ಮಿಕರಾಗಿದ್ದರು. ಅಮ್ಮ ಗೃಹಿಣಿ. 'ಮಧ್ಯಮವರ್ಗ ಕುಟುಂಬದ ಸಾಮಾನ್ಯ ನಿರೀಕ್ಷೆಯಂದರೆ ಇಬ್ಬರು ಗಂಡು ಮಕ್ಕಳು, ಒಬ್ಬಳು ಹೆಣ್ಣಾಗಿದ್ದರೆ ಸಾಕು ಎನ್ನುವುದು. ಹಾಗೆಯೇ ಆಗಿತ್ತು. ಅಂದರೆ, ನನ್ನೊಡನೆ ಮತ್ತಿಬ್ಬರು ಒಡಹುಟ್ಟಿದವರು ಇದ್ದರು. ನಾನು ಈ ಇಬ್ಬರ ನಡುವಿನ ಮಗುವಾಗಿದ್ದೆ' ಎಂದು ಅವರು ಮೆಲುಕು ಹಾಕುತ್ತಾರೆ.

'ಅಪ್ಪ-ಅಮ್ಮ ಇಬ್ಬರ ಕಡೆಯಿಂದಲೂ ಸಂಬಂಧಿಕರು ಹೆಚ್ಚು. ಇಂತಹ ಕುಟುಂಬದೊಳಗೆ ಹೆಣ್ಣುತನದತ್ತ ವಾಲಿದ್ದೆ, ಹುಡುಗಿಯಾಗಬೇಕೆಂದೇ ಇಚ್ಛಿಸಿದ್ದೆ. ಆ ಕುರಿತಂತೆ ಮಾತನಾಡಿದ್ದೂ ಇದೆ! ಗೆಜ್ಜೆ ತೊಟ್ಟು, ಅಮ್ಮನ ಸೀರೆಯುಟ್ಟು ಸಿಂಗಾರ ಮಾಡಿಕೊಳ್ಳುತ್ತಿದ್ದೆ. ಹಾಗೆಯೇ ಟವಲ್ ತೊಟ್ಟು, ಉದ್ದ ಕೂದಲಿನವಳೆಂದು ನಟಿಸುತ್ತಿದ್ದೆ' ಎಂದೆನ್ನುವ ಅಕ್ಕೈ ಅವರ ಬದುಕಿನ ರೂಪಾಂತರದ ಕಥೆ ಈ ನಾಟಕದಲ್ಲಿ ಎಳೆ ಎಳೆಯಾಗಿ ಬಿಚ್ಚಿಕೊಳ್ಳುತ್ತದೆ.

ನಾಟಕಕ್ಕೆ ರಾಜಗುರು ಅವರ ಸಂಗೀತ, ಜಯರಾಜ್ ಹುಸ್ಕೂರ್ ಅವರ ಮೇಕಪ್, ಎಂ.ಜಿ.ನವೀನ್ ಅವರ ಬೆಳಕಿನ ನಿರ್ವಹಣೆ ಇದೆ.

ಇವರೂ ಸಾಧಕಿಯರೇ

10ನೇ ಪುಟದಿಂದ..

ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಅವರ ಮನೆಯ ಅಂಗಳದಲ್ಲಿದ್ದ ಸಂಪಿಗೆ ಮರದಡಿ ಕುಳಿತುಕೊಳ್ಳುವುದೆಂದರೆ ನಮಗೆಲ್ಲಾ ಒಂದು ರೀತಿಯ ಸಂಭ್ರಮ. ಆ ದಂಪತಿಗೆ ನಮ್ಮ ಕಿತಾಪತಿ ಮೊದಲೇ ಗೊತ್ತಿತ್ತೋ ಇಲ್ಲವೋ ಗೊತ್ತಿಲ್ಲ, ಒಂದಿನ ಮರಕ್ಕೆ ತಾಗಿಸಿಕೊಂಡಂತೆ ಸಣ್ಣ ಸ್ಟೂಲ್ ಒಂದನ್ನು ಇಟ್ಟು ಅದರ ಮೇಲೆ ಮಣ್ಣಿನ ಮಡಕೆಯಲ್ಲಿ ನೀರು ತುಂಬಿಸಿಟ್ಟಿದ್ದರು, ಮೇಲೊಂದು ಸ್ಟೀಲ್ ಲೋಟ ಕೂಡ. ಅದುವರೆಗೆ ಆಟ, ತಮಾಷೆ ಮಾತ್ರ ಮಾಡುತ್ತಿದ್ದ ನಮಗೆ ಅಲ್ಲಿನ ಯಾವ ವಸ್ತುಗಳನ್ನೂ ಮುಟ್ಟಬಾರದು, ಹಾಳುಗೆಡವಬಾರದು ಎನ್ನುವ ಜ್ಞಾನೋದಯ ಅವತ್ತಾಗಿತ್ತು. ಕಾರಣವೇ ಇಲ್ಲದೆ ನಮ್ಮ ಮೇಲೆ ಕಾಳಜಿ ತೋರುವ ದಂಪತಿಯ ಮೇಲೆ ಪ್ರೀತಿ ಹುಟ್ಟಿತ್ತು.

ಮಾತಾಡಿಸೋಣ ಎಂದರೆ ಅವರು ಸಿಗುತ್ತಲೇ ಇರಲಿಲ್ಲ. ಸಿಕ್ಕರೂ ಗದ್ದೆ, ಕೆಲಸ ಎಂದು ಬ್ಯುಸಿ ಆಗಿರುತ್ತಿದ್ದ ಅವರನ್ನು ಸುಮ್ಮನೆ ಕೆದಕಿ ಮಾತಾಡಿಸುವ ಧೈರ್ಯವೂ ನಮಗಿರಲಿಲ್ಲ. ಆದರೆ, ಒಂದಿನ ಮಾತಾಡಿಸಲೇಬೇಕಾದ ಜರೂರತ್ತು ಒದಗಿಬಂದಿತ್ತು. ಆ ದಿನ ಶಾಲೆಯಲ್ಲಿ ನೀರಿರಲಿಲ್ಲ. ನಮ್ಮ ಕ್ಲರ್ಕ್ ಸಂಕು ಅಣ್ಣ ಅದೆಲ್ಲಿಂದಲೋ ಎರಡು ಕೊಡ ನೀರು ಕುಡಿಯಲು ಎತ್ತಿಕೊಂಡು ಬಂದಿದ್ದರು. ಶೌಚಕ್ಕಾಗಲೀ, ಊಟ ಮಾಡಿ ಕೈ ತೊಳೆಯಲಾಗಲೀ ನೀರಿರಲಿಲ್ಲ.

'ದುರ್ಭಿಕ್ಷದಲ್ಲಿ ಅಧಿಕ ಮಾಸ' ಎಂಬಂತೆ ನಮ್ಮ ಗೆಳತಿಯೊಬ್ಬಳು ಅದೇ ದಿನ ಮೊದಲ ಬಾರಿ ಮುಟ್ಟಾಗಿದ್ದಳು. ನಮ್ಮಲ್ಲಿ ಅನೇಕರಿಗೆ ಆಗ ಮುಟ್ಟಿನ ಅನುಭವವಾಗಲೀ, ಅದು ತಂದೊಡ್ಡುವ ಸಂಕಟವಾಗಲೀ ಗೊತ್ತಿರಲಿಲ್ಲ. ಆಗ ನಮ್ಮಲ್ಲಿ ಇದ್ದುದು ಬಟ್ಟೆಯಲ್ಲಾಗುವ ಕಲೆ ಯಾರಿಗೂ ಗೊತ್ತಾಗಬಾರದು ಎನ್ನುವ ಪರಮ ಮುಗ್ಧ ನಂಬಿಕೆಯೊಂದೇ. ಆ ಗೆಳತಿ ಹೊಟ್ಟೆನೋವಿನಿಂದ ಮುಲುಗುಡುತ್ತಿದ್ದರೆ ನಮ್ಮಲ್ಲಿ ಕೆಲವರಿಗೆ ಮುಸಿ ಮುಸಿ ನಗು. ಆದರೆ ಅದು ಎಷ್ಟು ಯಾತನಾಮಯವಾಗಿರುತ್ತದೆ ಎಂಬುವುದು ಅರಿವಾಗಲು ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ.

ಮಹಿಳಾ ಅಧ್ಯಾಪಕರಿಲ್ಲದ ನಾವು ಬೇರೆ ಯಾವುದೇ ಆಯ್ಕೆಗಳಿಲ್ಲದೆ ಅವಳನ್ನು ಕರೆದುಕೊಂಡು ಲಲಿತಮ್ಮನ ಮನೆಯ ಕಡೆ ಹೊರಟೆವು. ನಮ್ಮ ಪುಣ್ಯಕ್ಕೆ ಅವರು ಆ ದಿನ ಮನೆಯಲ್ಲೇ ಇದ್ದರು. ಆ ಮನೆಯೊಳಗೆ ಎಂದೂ ಪ್ರವೇಶಿಸದೇ ಇದ್ದ ನಾವು ಬಾಗಿಲಲ್ಲಿ ನಿಂತು ಆಚೀಚೆ ನೋಡುತ್ತಿದ್ದರೆ ಅವರೇ ಬಂದು ವಿಚಾರಿಸಿ ನಮ್ಮೆಲ್ಲರನ್ನು ಮನೆಯೊಳಗೆ ಕರೆಸಿ ಒಂದು ಚಾಪೆ ಹಾಸಿ ಕೂರಿಸಿ ಅಳುತ್ತಿದ್ದ ಅವಳಿಗೆ ಸಾಂತ್ವನ ಹೇಳಿ, 'ಇದೆಲ್ಲಾ ಹುಡುಗಿಯೊಬ್ಬಳ ಬದುಕಲ್ಲಿ ನಡೆಯಲೇಬೇಕಾದ ಸಂಗತಿ. ಅಳುವಂಥದ್ದು, ದುಃಖ ಪಡುವಂಥದ್ದು ಏನೂ ಇಲ್ಲ. ಈ ನೋವಿಗೆ, ಸಂಕಟಕ್ಕೆಲ್ಲಾ ಅಳುತ್ತಾ ಕೂರಬಾರದು' ಎಂದು ಹೇಳಿ ಅವರದೇ ಮರದಲ್ಲಿ ಬೆಳೆದ ಎಳನೀರೊಂದನ್ನು ಕೊಯ್ದು ಅವಳಿಗೆ ಕೊಟ್ಟು, ತುಂಬು ಆತ್ಮೀಯತೆಯಿಂದ ಬಚ್ಚಲು ಕೋಣೆಗೆ ಕರೆದುಕೊಂಡು ಹೋಗಿ ಮುಟ್ಟಿನ ದಿನಗಳಲ್ಲಿ ಪಾಲಿಸಬೇಕಾದ ಮುಂಜಾಗ್ರತಾ ಕ್ರಮಗಳನ್ನು ಹೇಳಿಕೊಟ್ಟರು. ಗೆಳತಿಯ ಹೊಟ್ಟೆ ನೋವಿನ ನೆಪದಲ್ಲಿ ಇಡೀ ದಿನ ಕ್ಲಾಸಿಗೆ ಚಕ್ಕರ್ ಹಾಕಿದ ನಾವು ಸಂಜೆಯವರೆಗೂ ಆ ಮನೆಯಲ್ಲಿದ್ದು ನಂತರ ಮನೆಗೆ ಮರಳಿದವು.



ಮರುದಿನ ಬೆಳಗ್ಗೆ ಎಂದಿನಂತೆ ಶಾಲೆಗೆ ಹೋಗಬೇಕಾದರೆ ಶಾಲೆಯ ಹತ್ತಿರ ನಿಂತಿದ್ದ ಅವರು ನಮ್ಮನ್ನು ಕರೆದುಕೊಂಡು ಹೋಗಿ ಅವರ ಮನೆಯ ಕಿಟಕಿಯಲ್ಲಿ ಒಂದು ಪೆಟ್ಟಿಗೆಯಲ್ಲಿ ಒಂದಿಷ್ಟು ಸ್ಯಾನಿಟರಿ ಪ್ಯಾಡ್‌ಗಳನ್ನೂ ಪಕ್ಕದಲ್ಲೇ ಕಿಂಡಿ ಹೊಂದಿರುವ ಸಣ್ಣದೊಂದು ಡಬ್ಬವನ್ನೂ ತೋರಿಸಿ 'ಓದೋ ಮಕ್ಕಳು ನೀವು, ಮುಟ್ಟಿನ ಕಾರಣದಿಂದ ಪಾಠಗಳು ತಪ್ಪಬಾರದು. ಬೇಕೆಂದಾಗೆಲ್ಲಾ ಇಲ್ಲಿ ಬಂದು ಈ ಪೆಟ್ಟಿಗೆಯಿಂದ ಪ್ಯಾಡ್ ತೆಗೆದುಕೊಂಡು ಕೈಯಲ್ಲಿ ದುಡ್ಡಿದ್ದರೆ ಅದರ ದುಡ್ಡನ್ನು ಈ ಡಬ್ಬಕ್ಕೆ ಹಾಕಿ ಹೋಗಿ. ದುಡ್ಡಿಲ್ಲದಿದ್ದರೂ ಪ್ಯಾಡ್ ಬಳಸಲು ಹಿಂಜರಿಯಬೇಡಿ' ಅಂದಿದ್ದರು. ಆಗಿನ್ನೂ ಸರ್ಕಾರದ 'ಸಖಿ' ಪ್ಯಾಡ್ ಶಾಲೆಗಳಲ್ಲಿ ಬಂದಿರಲಿಲ್ಲ. ಈಗಷ್ಟೇ ಬದುಕನ್ನು ನೋಡಲು ಆರಂಭಿಸಿದ್ದ ನಮಗೆ ಅವರು ಅವರಿಗೇ ಗೊತ್ತಿಲ್ಲದಂತೆ ಒಂದು ವಿಶಿಷ್ಟ ಆತ್ಮವಿಶ್ವಾಸ ತುಂಬಿದ್ದರು.


ಈಗ ಯೋಚಿಸುವಾಗ ಧರಿಸುವ ಬಟ್ಟೆಯ ಕಾರಣದಿಂದ ಸುಶಿಕ್ಷಿತರೇ ಶಿಕ್ಷಣ ನಿರಾಕರಿಸುತ್ತಿರುವಾಗ ಅಕ್ಷರ ಜ್ಞಾನವಿಲ್ಲದ, ನಮ್ಮ ಜನಪ್ರಿಯ ಮಹಿಳಾ ವಾದಗಳು ಹುಟ್ಟುಹಾಕಿರುವ ಯಾವ ಫ್ರೇಮಿನೊಳಗೂ ನಿಲ್ಲದ ಲಲಿತಮ್ಮನಂಥವರು ಕ್ಲಾರಾ ಜೆಟ್‌ಕಿನ್‌ನ ನಿಜದ ವಾರಸುದಾರರಂತೆ ತೋರುತ್ತಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗೆರೆಗಳಲ್ಲಿ ಗಮ್ಮತ್ತು



ಇಲ್ಲಿ ಇರುವ ಪ್ರತಿ ಗೆರೆಯ ಮುಂದಕ್ಕೆ ಸಾಗಿ ಯಾವ ಅಂಚು ಮುಟ್ಟುತ್ತದೆ ಪತ್ತೆ ಮಾಡಿ



ಅದಲು ಬದಲು ಕಂಚಿ ಕದಲು

1. ನವದಾರ = ________
2. ಗುಣಿಸು = ________
3. ಮಗನಸತಿ ಸಹ = ________
4. ಪತಿ ರಿಣ = ________

ಬ್ರೇನ್‌ವ್ಹಿಟಾ ಆಟ

ಜ ನು ಮ ದ ಜೋ ಡಿ

ಇದೊಂದು ಸಿನಿಮಾ ಹೆಸರು. ಇಲ್ಲಿ ಕೊನೇ ಅಕ್ಷರ 'ಡಿ' ಸ್ಥಿರವಾಗಿ ಇಟ್ಟುಕೊಂಡು ಆರಂಭದಿಂದ ಒಂದೊಂದೇ ಅಕ್ಷರ ಅದಕ್ಕೆ ಜೋಡಿಸಿದರೆ ಎಲ್ಲವೂ ಅರ್ಥಬದ್ಧ ಪದಗಳೇ. ಇದೇ ಗುಣ ಹೊಂದಿರುವ ಇನ್ನೊಂದು ಸಿನಿಮಾ ಹೆಸರು ಇದೆ. ಯಾವುದು?

ಸುಳಿವು 1: ಇದರಲ್ಲಿ ಯಶ್ ನಟಿಸಿದ್ದಾರೆ

ಸುಳಿವು 2: ಈ ಹೆಸರಲ್ಲಿ 'ಸ' ಅಕ್ಷರವಿದೆ

ಟ್ವೆಂಟಿ – 20 ಮ್ಯಾಚ್

A. ದ್ವಿರುಕ್ತಿ ಪದಕ್ಕೆ ಹೊಂದಾಣಿಕೆ ಪದ ಹೊಂದಿಸಿ

1 ಗಟಗಟ	A ಸೋರು
2 ತಟತಟ	B ನಡುಗು
3 ಥಳಥಳ	C ಹೊಡಿ
4 ಧಗಧಗ	D ಕಡಿ
5 ಪಡಪಡ	E ಹೊಳೆ
6 ಮರಮರ	F ಮುರಿ
7 ಮಿರಿಮಿರಿ	G ಕುಡಿ
8 ಗದಗದ	H ಮಿಂಚು
9 ಲಟಲಟ	I ಉರಿ
10 ಕಟಕಟ	J ಮರುಗು

B. ನಿಮ್ಮ G.K ಎಷ್ಟು O.K ಹೊಂದಿಸಿ

1 ಸಪ್ತ ಬೆಟ್ಟಗಳ ನಗರ	A ಜೈಪುರ
2 ಕಗ್ಗತ್ತಲೆಯ ಖಂಡ	B ನಾರ್ವೆ
3 ನೈಲ್ ನದಿಯ ಕೊಡುಗೆ	C ಫಿನ್‌ಲ್ಯಾಂಡ್
4 ಕಾಂಗರೂ ನಾಡು	D ಈಜಿಪ್ಟ್
5 ನಡುರಾತ್ರಿ ಸೂರ್ಯನಿರುವ ನಾಡು	E ಆಫ್ರಿಕಾ
6 ಲವಂಗದ ದ್ವೀಪ	F ಕೇರಳ
7 ಭಾರತದ ಮಸಾಲೆ ತೋಟ	G ಜಂಜಿಬಾರ
8 ಸಾವಿರ ಸರೋವರಗಳ ನಾಡು	H ಆಸ್ಟ್ರೇಲಿಯಾ
9 ಬಿಳಿ ಆನೆಗಳ ನಾಡು	I ಆಕ್ಸ್‌ಫರ್ಡ್
10 ಭಾರತದ ಪಿಂಕ್ ಸಿಟಿ	J ಥಾಯ್ಲೆಂಡ್


ಕುಂಬಳಕಾಯಿ ಅಜ್ಜಿ


• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಅದೊಂದು ದಟ್ಟ ಕಾಡು. ಹುಲಿ, ಸಿಂಹದಂತಹ ಪ್ರಾಣಿಗಳು ಅಲ್ಲಿದ್ದವು. ಪಕ್ಕದಲ್ಲಿ ಒಂದು ಹಳ್ಳಿ ಇತ್ತು. ಜನರಿಗೆ ಕಾಡು ಪ್ರಾಣಿಗಳ ಭಯವೂ ಇತ್ತು. ಆ ಊರಿನಲ್ಲಿ ಒಬ್ಬಳು ಬುದ್ಧಿವಂತ ಅಜ್ಜಿ ಇದ್ದಳು


ಆ ಚಾಣಾಕ್ಷ ಅಜ್ಜಿಯು ಒಮ್ಮೆ ತನ್ನ ಮಗಳನ್ನು ನೋಡಲು ಪಕ್ಕದೂರಿಗೆ ಹೊರಟಳು. ಮಕ್ಕಳಿಗೆ ಹಣ್ಣು, ತಿನಿಸುಗಳನ್ನು ಕಟ್ಟಿಕೊಂಡು ಆ ಕಾಡಿನ ದಾರಿಯಲ್ಲಿ ಹೊರಟಳು. ದಾರಿಯಲ್ಲಿ ಹುಲಿ ಸಿಕ್ಕಿತು


ಅಜ್ಜಿಯನ್ನು ತಿಂದು ಬಿಡುವುದಾಗಿ ಹುಲಿ ಹೇಳಿತು. ಅದಕ್ಕೆ ಅಜ್ಜಿಯು, 'ನೀನು ನನ್ನನ್ನು ಈಗ ತಿಂದರೆ ನಿನ್ನ ಹಸಿವು ನೀಗದು. ನಾನು ಮಗಳ ಮನೆಗೆ ಹೋಗಿ, ತಿಂದುಂಡು ದಪ್ಪವಾಗಿ ಬರುತ್ತೇನೆ. ಆ ಮೇಲೆ ತಿನ್ನು ಎಂದಳು


ಮಗಳ ಮನೆಯಿಂದ ವಾಪಸಾಗುವಾಗ ಅಜ್ಜಿಯು ಕಾಡಿನಲ್ಲಿ ಹುಲಿ, ನರಿ ಎದುರಾಗಿ ತನ್ನನ್ನು ತಿನ್ನುವುದಾಗಿ ಹೇಳಿದ್ದನ್ನು ತಿಳಿಸಿದಳು. ಆಗ ಮಗಳು, ಅಜ್ಜಿಯನ್ನು ಒಂದು ಕುಂಬಳಕಾಯಿ ಒಳಗೆ ದೇಹ ತೂರುವಂತೆ ಮಾಡಿ ಕಳುಹಿಸಿದಳು


ಕುಂಬಳಕಾಯಿಯ ತಲೆ ನೋಡಿದ ಹುಲಿ ಮತ್ತು ನರಿ ಗಾಬರಿಯಾದವು. ಬನ್ನಿ ನಿಮ್ಮಿಬ್ಬರಲ್ಲಿ ಯಾರು ನನ್ನನ್ನು ತಿನ್ನುತ್ತೀರಿ? ನಿಮ್ಮಿಂದ ಸಾಧ್ಯವೇ ಎಂದು ಅಜ್ಜಿಯು ಗರ್ಜನೆಯ ಧ್ವನಿಯಲ್ಲಿ ಕೇಳಿದಳು


ಅಜ್ಜಿಯ ಧ್ವನಿಕೇಳಿ ಗಾಬರಿಯಾದ ನರಿ ಮತ್ತು ಹುಲಿ ಮೆಲ್ಲನೆ ಅಡಗಿಕೊಂಡು ಕುಳಿತು ದಾರಿ ಬಿಟ್ಟವು. ಆಗ ಕುಂಬಳಕಾಯಿಯ ತಲೆ ಹೊತ್ತಿದ್ದ ಅಜ್ಜಿಯು ಕ್ಷೇಮವಾಗಿ ಮನೆ ಸೇರಿದಳು. ಉಪಾಯ ಬಲ್ಲವನಿಗೆ ಅಪಾಯವಿಲ್ಲ

ಪದ – ಹಿಗ್ಗು

1 ಬಡ 2 ಕರೆ 3 ಕಾಡು 4 ಬಗೆ 5 ಚಡಿ 6 ಪಕ್ಷ 7 ಮಗು 8 ಹಾಸು

1	ಪಾ	5	ಣ್ಣಾ
2	ಯಿ	6	ಡಿ
3	ರೋ	7	ರಂ
4	ಗ್ಗ	8	ಲ


ಕಿರಿಯರಿಗಾಗಿ ಬರೆದ ಹಿರಿಯರ ಹಾಡು

ಚಿ. ಉದಯಶಂಕರ್ ಅವರು ಯಾರಿಗೆ ಗೊತ್ತಿಲ್ಲ. ಪ್ರಸಿದ್ಧ ಚಿತ್ರ ಸಾಹಿತಿಗಳು ಅವರು 1955ರಲ್ಲಿ ಮಕ್ಕಳಿಗಾಗಿ ಬರೆದ ಅಪರೂಪದ ಪದ್ಯವಿದು. ಓದಿ ಆನಂದಿಸಿ.

ನಗು ಕಂದ

ನಗು ಕಂದ ನಗು ಕಂದ
ನೀನಗಲು ಬಲು ಚೆಂದ
ಕಿಲಕಿಲನೆ ನಗುತಿರಲು
ನನಗೆ ಆನಂದ
ಕಂದ ನೀ ನಗುತಿರಲು
ಎನ್ನ ಮೈ ಮರೆತಿರಲು
ಜಗದ ಅರಿವೆನ್ನಿಂದ ಪೋಗುತಿರಲು
ಹರ್ಷದಿಂದುಬ್ಬಿ ಎದೆ
ಸಗ್ಗ ತೋರುತ್ತಲಿದೆ
ಮನಕೊಂದು ಸವಿಯನ್ನು
ನೀಡುತ್ತಿದೆ.
ನಗುವ ಕೆಂದುಟಿಯನ್ನು
ಜೊಲ್ಲಿನಾ ಗಲ್ಲವನು
ಮುದ್ದುಮೊಗವನು ನೀಡಿ
ನಾನು ಹಿಗ್ಗುವೆನು
ಮತ್ತೊಮ್ಮೆ ನಗು ಮಗುವೆ
ಮುತ್ತನ್ನು ನಾ ಕೊಡುವೆ
ಚೆಂದದಾ ಮೊಗವನ್ನು
ನೋಡಿ ದಣಿವೆ
ನಗು ಮುರಳಿ ಗೋಪಾಲ
ನಾ ಕೊಡುವೆ ಕೆನೆಹಾಲ
ಕೇಕೆಯನು ಹಾಕಿ
ಶ್ರೀರಂಗ ನಗುವಲ್ಲ!

– ಚಿ. ಉದಯ ಶಂಕರ್



ಕಳೆದ ಸಂಚಿಕೆಯ ಸರಿ ಉತ್ತರಗಳು

ಅದಲು ಬದಲು ಕಂಚಿ ಕದಲು: 1 ಕರಿಮಣ್ಣು 2 ಕರಿದ ತಿಂಡಿ 3 ಯಮುನಾ ನದಿ 4 ಲವಸತ್ತು

ಪದಹಿಗ್ಗು: 1 ಕರಿಂಡಿ 2 ಭಾರ್ಗವಿ 3 ಸಂಕೇತ 4 ಸುಪ್ರೀತ 5 ಕೂಡಿಸು 6 ಗಜ್ಜರಿ 7 ಹೆಗ್ಗಣ 8 ಕಬ್ಬಿಣ

ಶಬ್ದಗಳೊಡನೆ ಸರಸ: 1 ಪಾರ್ವತಿ 2 ಒಗ್ಗಟ್ಟು 3 ಸಂಸ್ಕಾರ 4 ಉದ್ಧಾರ 5 ಸಮ್ಮಾನ 6 ತನ್ಮಯ 7 ವಕ್ತಾರ 8 ಆಶ್ರಯ 9 ಸರ್ಕಾರ 10 ಕಲ್ಪಿಸು

ಟ್ವೆಂಟಿ–20 ಮ್ಯಾಚ್:
A ವಿಭಾಗ: 1-G 2-F 3-B 4-1 5-D 6-H 7-E 8-J 9-C 10-A
B: 1-D 2-F 3-A 4-C 5-B 6-E 7-H 8-D 9-J 10-I

ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು


ಸಂಸ್ಕೃತಿ ಎಂ.ಎಸ್., ಮೈಸೂರು


ಸಮೃದ್ಧಿ, ಬೆಂಗಳೂರು


ಅಮೃತ ಗದ್ದಿಕೇರಿ, ವಿಜಯಪುರ

ಸರಿ ಉತ್ತರ ಮುಂದಿನ ವಾರ


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಶ್ರೀಲಂಕಾ ಎದುರಿನ ಟೆಸ್ಟ್‌ನಲ್ಲಿ ಭಾರತದ ಪಾರಮ್ಯ: ಅಶ್ವಿನ್ ಅರ್ಧಶತಕದ ಮಿಂಚು

ಜಡೇಜ ದಾಖಲೆಗಳ ಸಾಲು

ಪ್ರಜಾವಾಣಿ ವಾರ್ತೆ



ರವೀಂದ್ರ ಜಡೇಜ ಶತಕ ಸಂಭ್ರಮ –ಪಿಟಿಐ ಚಿತ್ರ

ಮೊಹಾಲಿ: ಏಳನೇ ಕ್ರಮಾಂಕದ ಬ್ಯಾಟರ್ ರವೀಂದ್ರ ಜಡೇಜ ಅವರ ಅಬ್ಬರಕ್ಕೆ ಶನಿವಾರ ಮೊಹಾಲಿ ಅಂಗಳದಲ್ಲಿ ದಾಖಲೆಗಳು ಸಾಲುಗಟ್ಟಿದವು. ಭಾರತ ತಂಡ ಬೃಹತ್ ಮೊತ್ತ ಗಳಿಸಿತು. ಪ್ರವಾಸಿ ಶ್ರೀಲಂಕಾ ತಂಡವು ತಡಬಡಾಯಿಸಿತು!

ಸರಣಿಯ ಮೊದಲ ಟೆಸ್ಟ್ ಪಂದ್ಯದ ಎರಡನೇ ದಿನದಾಟದ ಪ್ರಮುಖ ಅಂಶಗಳು ಇವು. ರವೀಂದ್ರ ಜಡೇಜ (ಔಟಾಗದೆ 175; 228ಎ) ಅಮೋಘ ಬ್ಯಾಟಿಂಗ್ ಬಲದಿಂದ ತಂಡವು 129.2 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 574 ರನ್‌ಗಳ ದೊಡ್ಡ ಮೊತ್ತ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಟೆಸ್ಟ್ ಕ್ರಿಕೆಟ್‌ನಲ್ಲಿ ಚೊಚ್ಚಲ ದ್ವಿಶತಕ ಗಳಿಸುವ ಅವಕಾಶ ಜಡೇಜ ಅವರಿಗೆ ಇದ್ದರೂ ನಾಯಕ ರೋಹಿತ್ ಡಿಕ್ಲೇರ್ ಮಾಡುವ ನಿರ್ಧಾರವು ಅಚ್ಚರಿ ಮೂಡಿಸಿತು. ಈ ವಿಷಯ ಈಗ ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಚರ್ಚೆಗೆ ಗ್ರಾಸವಾಗಿದೆ.

ಆದರೆ, ಮೊದಲ ಇನಿಂಗ್ಸ್ ಆರಂಭಿಸಿರುವ ಲಂಕಾ ತಂಡವು ಕುಸಿತದ ಹಾದಿ ಹಿಡಿದಿದೆ. ದಿನದಾಟದ ಮುಕ್ತಾಯಕ್ಕೆ 43 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 108 ರನ್ ಗಳಿಸಿದೆ. ಪಥುಮ ನಿಸಾಂಕ (ಬ್ಯಾಟಿಂಗ್ 26) ಮತ್ತು ಚರಿತ ಅಸಲಂಕಾ (ಬ್ಯಾಟಿಂಗ್ 1) ಕ್ರೀಸ್‌ನಲ್ಲಿದ್ದಾರೆ.

ಮೂರು 'ಶತಕ'ಗಳ ಜೊತೆಯಾಟಗಳು: ಶುಕ್ರವಾರ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗಳಿಗೆ 228 ರನ್ ಗಳಿಸಿದ್ದಾಗ ಜಡೇಜ ಕ್ರೀಸ್‌ಗೆ ಬಂದಿದ್ದರು.

ಲಂಕಾ ಬೌಲರ್‌ಗಳಿಗೆ ಅವರು ದುಃಸ್ವಪ್ನವಾದರು. 228 ಎಸೆತಗಳನ್ನು ಎದುರಿಸಿ 17 ಬೌಂಡರಿ ಮತ್ತು 3 ಸಿಕ್ಸರ್ ಬಾರಿಸಿದವರು 175 ರನ್ ಗಳಿಸಿ ಔಟಾಗದೇ ಉಳಿದರು. ಅಲ್ಲದೇ ಇನಿಂಗ್ಸ್‌ನಲ್ಲಿ ಮೂರು ಜೊತೆಯಾಟಗಳಲ್ಲಿ ಭಾಗಿಯಾದರು.

ರಿಷಭ್ ಪಂತ್ ಜೊತೆಗೆ ಆರನೇ ವಿಕೆಟ್‌ಗೆ 104 ರನ್, ಆರ್. ಅಶ್ವಿನ್ ಜೊತೆಯಲ್ಲಿ 7ನೇ ವಿಕೆಟ್‌ಗೆ 130 ರನ್ ಮತ್ತು ಮೊಹಮ್ಮದ್ ಶಮಿಯೊಂದಿಗೆ ಮುರಿಯದ 9ನೇ ವಿಕೆಟ್ ಜೊತೆಯಾಟದಲ್ಲಿ 103 ರನ್ ಗಳಿಸಿದರು.

1993ರಲ್ಲಿ ವಿನೋದ್ ಕಾಂಬ್ಳಿ ಜಿಂಬಾಬ್ವೆ ವಿರುದ್ಧ ದೆಹಲಿಯಲ್ಲಿ ನಡೆದಿದ್ದ ಪಂದ್ಯದಲ್ಲಿ, 2004ರಲ್ಲಿ ರಾಹುಲ್ ದ್ರಾವಿಡ್ ಪಾಕಿಸ್ತಾನ ವಿರುದ್ಧ ರಾವಲ್ಪಿಂಡಿಯಲ್ಲಿ ನಡೆದ ಪಂದ್ಯದಲ್ಲಿ, 2005ರಲ್ಲಿ ವೀರೇಂದ್ರ ಸೆಹ್ವಾಗ್ ಪಾಕ್ ವಿರುದ್ಧ ಮೊಹಾಲಿಯಲ್ಲಿ ನಡೆದ ಪಂದ್ಯದಲ್ಲಿ ಮತ್ತು 2016ರಲ್ಲಿ ಕರುಣ್ ನಾಯರ್ ಇಂಗ್ಲೆಂಡ್ ವಿರುದ್ಧ ಚೆನ್ನೈನಲ್ಲಿ ನಡೆದ ಪಂದ್ಯದ ಇನಿಂಗ್ಸ್‌ವೊಂದರಲ್ಲಿ ಮೂರು 'ಶತಕದ ಜೊತೆಯಾಟ'ಗಳಲ್ಲಿ ಭಾಗಿಯಾಗಿದ್ದರು.

ಈ ದಾಖಲೆಗಳನ್ನು ಜಡೇಜ ಸಮಗಟ್ಟಿದರು. ಜಡೇಜ ಇಲ್ಲಿ ತಮ್ಮ ವೈಯಕ್ತಿಕ ಶ್ರೇಷ್ಠ ಸ್ಕೋರ್ ದಾಖಲಿಸಿದರು. ಅದರೊಂದಿಗೆ 35 ವರ್ಷಗಳ ಹಿಂದಿನ ದಾಖಲೆ ಪುಡಿಗಟ್ಟಿದರು. ಏಳನೇ ಅಥವಾ ಅದಕ್ಕಿಂತ ಕೆಳಗಿನ ಕ್ರಮಾಂಕದಲ್ಲಿ ಭಾರತದ ಬ್ಯಾಟರ್ ಗಳಿಸಿದ ಗರಿಷ್ಠ ಮೊತ್ತ ದಾಖಲಿಸಿದರು. 1986ರಲ್ಲಿ ಕಪಿಲ್ ದೇವ್ ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಗಳಿಸಿದ್ದ 163 ರನ್ ಇದುವರೆಗಿನ ದಾಖಲೆಯಾಗಿತ್ತು. 2019ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಅಜೇಯ 159 ರನ್ ಗಳಿಸಿದ್ದ ರಿಷಭ್ ಪಂತ್ ಮೂರನೇ ಸ್ಥಾನದಲ್ಲಿದ್ದಾರೆ.

ಅಮೋಘ ಬ್ಯಾಟಿಂಗ್ ನಂತರ ಬೌಲಿಂಗ್‌ನಲ್ಲಿಯೂ ಮಿಂಚಿದ ಜಡೇಜ ಮತ್ತು ಅಶ್ವಿನ್ ಕ್ರಮವಾಗಿ ಒಂದು ಹಾಗೂ ಎರಡು ವಿಕೆಟ್ ಗಳಿಸಿ ಲಂಕಾ ತಂಡವನ್ನು ಆತಂಕಕ್ಕೆ ದೂಡಿದರು.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 8ಕ್ಕೆ 574 ಡಿಕ್ಲೇರ್ಡ್ (129.2 ಓವರ್)
(ಶನಿವಾರ 85 ಓವರ್‌ಗಳಲ್ಲಿ 6ಕ್ಕೆ 357)
ಜಡೇಜ ಔಟಾಗದೆ 175 (228ಎ, 4X17, 6X3), ಅಶ್ವಿನ್ ಸಿ ಡಿಕ್ವೆಲ್ಲಾ ಬಿ ಲಕ್ಮಲ್ 61 (82ಎ, 4X8), ಜಯಂತ್ ಸಿ ತಿರಿಮನ್ನೆ ಬಿ ಫರ್ನಾಂಡೊ 2 (18ಎ), ಶಮಿ ಔಟಾಗದೆ 20 (34ಎ, 4X3)
ಇತರೆ (ಬೈ 4, ಲೆಗ್‌ಬೈ 12, ನೋಬಾಲ್ 12) 28
ವಿಕೆಟ್ ಪತನ: 7-462 (ರವಿಚಂದ್ರನ್ ಅಶ್ವಿನ್, 109.4 ಓವರ್), 8–471 (ಜಯಂತ್ ಯಾದವ್, 113.6)
ಬೌಲಿಂಗ್: ಸುರಂಗ ಲಕ್ಮಲ್ 25–1–90–2, ವಿಶ್ವ ಫೆರ್ನಾಂಡೊ 26–1–135–2, ಲಹಿರು ಕುಮಾರ 10.5–1–52–1, ಲಸಿತ್ ಎಂಬುಲ್ದೇನಿಯಾ 46–3–188–2, ಧನಂಜಯ್ ಡಿಸಿಲ್ವಾ 18.2–1–79–1, ಚರಿತ ಅಸಲಂಕ 3.1–0–14–0
ಶ್ರೀಲಂಕಾ ಮೊದಲ ಇನಿಂಗ್ಸ್ 4ಕ್ಕೆ 108 (43 ಓವರ್)
ದಿಮುತ್ ಎಲ್‌ಬಿಡಬ್ಲ್ಯು ಬಿ ಜಡೇಜ 28 (28, 71ಎ, 4X5) ತಿರಿಮನ್ನೆ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 17 (60ಎ, 4X1), ನಿಸ್ಸಂಕಾ ಬ್ಯಾಟಿಂಗ್ 26 (75ಎ, 4X4), ಮ್ಯಾಥ್ಯೂಸ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 22 (39ಎ, 4X1, 6X1), ಧನಂಜಯ ಎಲ್‌ಬಿಡಬ್ಲ್ಯು ಅಶ್ವಿನ್ 1 (8ಎ), ಚರಿತ ಬ್ಯಾಟಿಂಗ್ 1 (12ಎ)
ಇತರೆ (ಬೈ 6, ನೋಬಾಲ್ 7) 13
ವಿಕೆಟ್ ಪತನ: 1-48 (ಲಾಹಿರು ತಿರಿಮನ್ನೆ, 18.2), 2-59 (ದಿಮುತ್ ಕರುಣಾರತ್ನೆ, 24.2), 3-96 (ಏಂಜೆಲೊ ಮ್ಯಾಥ್ಯೂಸ್, 33.6), 4-103 (ಧನಂಜಯ ಡಿಸಿಲ್ವಾ, 38.1)
ಬೌಲಿಂಗ್: ಮೊಹಮ್ಮದ್ ಶಮಿ 7–3–17–0, ಜಸ್‌ಪ್ರೀತ್ ಬೂಮ್ರಾ 9–2–20–1, ರವಿಚಂದ್ರನ್ ಅಶ್ವಿನ್ 13–6–21–2, ಜಯಂತ್ ಯಾದವ್ 5–2–14–0, ರವೀಂದ್ರ ಜಡೇಜ 9–3–30–1

'ಡಿಕ್ಲೇರ್ ಸಲಹೆ ಕೊಟ್ಟಿದ್ದು ನಾನೇ'

ಮೊಹಾಲಿ (ಪಿಟಿಐ): 'ಪಿಚ್‌ನಲ್ಲಿ ಚೆಂಡು ತಿರುವು ಪಡೆಯಲು ಆರಂಭಿಸಿದ್ದನ್ನು ಗಮನಿಸಿದ್ದೆ. ಆದ್ದರಿಂದ ಇನಿಂಗ್ಸ್ ಡಿಕ್ಲೇರ್ ಘೋಷಿಸುವಂತೆ ನಾನೇ ಸಲಹೆ ನೀಡಿದ್ದೆ. ರೋಹಿತ್ ಅದೇ ರೀತಿ ಮಾಡಿದರು' ಎಂದು ಭಾರತ ತಂಡದ ಆಟಗಾರ ರವೀಂದ್ರ ಜಡೇಜ ತಿಳಿಸಿದ್ದಾರೆ.

175 ರನ್ ಗಳಿಸಿದ್ದ ಜಡೇಜ ಅವರಿಗೆ ದ್ವಿಶತಕ ಗಳಿಸುವ ಅವಕಾಶ ಇತ್ತು. ಆದರೆ ಇದೇ ಸಂದರ್ಭದಲ್ಲಿ ಇನಿಂಗ್ಸ್‌ಗೆ ಡಿಕ್ಲೇರ್ ಘೋಷಿಸಲಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ನಾಯಕ ರೋಹಿತ್ ವಿರುದ್ಧ ಅಪಾರ ಆಕ್ರೋಶ ವ್ಯಕ್ತವಾಗಿದೆ.

ದಿನದಾಟದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಡೇಜ, 'ಲಂಕಾ ತಂಡದ ಆಟಗಾರರು ಒಂದೂವರೆ ದಿನ ಫೀಲ್ಡಿಂಗ್ ಮಾಡಿ ಸುಸ್ತಾಗಿದ್ದರು. ಪಿಚ್ ಕೂಡ ಬದಲಾಗುತ್ತಿತ್ತು. ಆ ಸಂದರ್ಭದಲ್ಲಿ ಅವರಿಗೆ ಬ್ಯಾಟಿಂಗ್‌ಗೆ ಇಳಿಸಿದರೆ ನಮಗೆ ಸಫಲತೆ ಬೇಗ ಸಿಗುತ್ತದೆ ಅನಿಸಿತ್ತು. ಆದ್ದರಿಂದ ನಾನೇ ಡಿಕ್ಲೇರ್ ಸಲಹೆ ಕೊಟ್ಟೆ' ಎಂದರು.



ಮುಂಬೈನ ಬೀದಿಯೊಂದರಲ್ಲಿ ಕಲಾವಿದರೊಬ್ಬರು ಶೇನ್ ವಾರ್ನ್ ಅವರಿಗೆ ಗೌರವ ಸಲ್ಲಿಸಿದರು –ಎಎಫ್‌ಪಿ ಚಿತ್ರ

ಸ್ಪಿನ್ ದಿಗ್ಗಜನಿಗೆ ನಮನ

ಕಪ್ಪು ಪಟ್ಟಿ ಕಟ್ಟಿ ಕಣಕ್ಕೆ ಇಳಿದ ವಿವಿಧ ದೇಶದ ತಂಡಗಳು

ನವದೆಹಲಿ (ಪಿಟಿಐ): ಹಠಾತ್ ನಿಧನದಿಂದ ಕ್ರಿಕೆಟ್ ಪ್ರಿಯರನ್ನು ದುಃಖ ಸಾಗರದಲ್ಲಿ ಮುಳುಗುವಂತೆ ಮಾಡಿದ ಸ್ಪಿನ್ ದಿಗ್ಗಜ, ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರಿಗೆ ಶನಿವಾರ ಕ್ರೀಡಾಲೋಕ ಶ್ರದ್ಧಾಂಜಲಿ ಸಲ್ಲಿಸಿತು. ಹೃದಯಾಘಾತದಿಂದಾಗಿ ಥಾಯ್ಲೆಂಡಿನಲ್ಲಿ ಶುಕ್ರವಾರ ರಾತ್ರಿ ವಾರ್ನ್ ನಿಧನರಾಗಿದ್ದರು.

ಶನಿವಾರ ನಡೆದ ಮಹಿಳೆಯರ ವಿಶ್ವಕಪ್ ಟೂರ್ನಿ ಸೇರಿದಂತೆ ವಿವಿಧ ಕ್ರಿಕೆಟ್ ಪಂದ್ಯಗಳ ಸಂದರ್ಭದಲ್ಲಿ ವಾರ್ನ್ ನೆನಪಿನಲ್ಲಿ ಒಂದು ನಿಮಿಷ ಮೌನ ಆಚರಣೆ ನಡೆಸಲಾಯಿತು. ಎಲ್ಲ ತಂಡಗಳು ಕ್ರಿಕೆಟಿಗರು ಕೈಗೆ ಕಪ್ಪು ಪಟ್ಟಿ ಧರಿಸಿ ಆಡಿ ಗೌರವ ಸಲ್ಲಿಸಿದರು.

ಮಹಿಳೆಯರ ವಿಶ್ವಕಪ್ ಟೂರ್ನಿಯ ಎರಡೂ ಪಂದ್ಯಗಳಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್, ಬಾಂಗ್ಲಾದೇಶ ದಕ್ಷಿಣ ಆಫ್ರಿಕಾ ತಂಡಗಳ ಆಟಗಾರ್ತಿಯರು ಕಪ್ಪು ಪಟ್ಟಿ ಧರಿಸಿದ್ದರು. ರಾವಲ್ಪಿಂಡಿಯಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ–ಪಾಕಿಸ್ತಾನ ಆಟಗಾರರು, ಮೊಹಾಲಿಯಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಭಾರತ–ಶ್ರೀಲಂಕಾ, ಢಾಕಾದಲ್ಲಿ ನಡೆದ ಟ್ವೆಂಟಿ20 ಪಂದ್ಯಕ್ಕೂ ಮೊದಲು ಬಾಂಗ್ಲಾದೇಶ–ಅಫ್ಗಾನಿಸ್ತಾನ ಆಟಗಾರರು ಕೂಡ ಗೌರವ ಸೂಚಿಸಿದರು.

ಇತರ ಕ್ರೀಡೆಗಳಲ್ಲಿ ತೊಡಗಿಸಿಕೊಂಡವರು ಮತ್ತು ವಿವಿಧ ದೇಶಗಳ ಆಡಳಿತಗಾರರು ಕೂಡ ಕೂಡ ಶೇನ್ ವಾರ್ನ್ ಅವರನ್ನು ನೆನೆದರು. ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರಿಂದ ಹಾಲಿವುಡ್ ನಟರಾದ ರಸೆಲ್ ಕ್ರೋವ್ ಮತ್ತು ಹ್ಯೂಗ್ ಜಾಕ್‌ಮಾನ್ ವರೆಗೆ ವಿವಿಧ ಕ್ಷೇತ್ರಗಳ ಪ್ರಮುಖರಿಂದಲೂ ಶೋಕ ವ್ಯಕ್ತವಾಗಿದೆ.

ಶೇನ್ ವಾರ್ನ್ ಅವರೊಂದಿಗೆ ಆಸ್ಟ್ರೇಲಿಯಾದ ಆಟಗಾರರು, ವಾರ್ನ್ ವಿರುದ್ಧ ಆಡಿದ ವಿವಿಧ ದೇಶಗಳ ಕ್ರಿಕೆಟಿಗರು, ಲೀಗ್‌ಗಳಲ್ಲಿ ಆಡಿದ ಪ್ರಮುಖರು ಕೂಡ ಅವರ ಗುಣಗಾನ ಮಾಡಿದ್ದಾರೆ.

'ಅವರ ಸಾವಿನ ಸುದ್ದಿಯನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ. 15 ವರ್ಷದವನಿದ್ದಾಗ ಅವರನ್ನು ಮೊದಲು ಭೇಟಿಯಾಗಿದ್ದೆ. ನಂತರ ಒಂದು ದಶಕಕ್ಕೂ ಹೆಚ್ಚು ಕಾಲ ಜೊತೆಯಾಗಿ ಆಡಿದ್ದೇವೆ. ತಂಡದ ಏಳು–ಬೀಳುಗಳಲ್ಲಿ ಭಾಗಿಯಾಗಿದ್ದೆವು' ಎಂದು ಆಸ್ಟ್ರೇಲಿಯಾದ ಮಾಜಿ ನಾಯಕ ರಿಕಿ ಪಾಂಟಿಂಗ್ ಹೇಳಿದ್ದಾರೆ. ಮಾಜಿ ಕ್ರಿಕೆಟಿಗರಾದ ಗ್ಲೆನ್ ಮೆಗ್ರಾ, ಬ್ರಯಾನ್ ಲಾರಾ, ವಿವಿಯನ್ ರಿಚರ್ಡ್ಸ್, ಮೈಕೆಲ್ ವಾನ್, ಇಯಾನ್ ಬಾಥಮ್, ಡೇವಿಡ್ ವಾರ್ನರ್, ವಿರಾಟ್ ಕೊಹ್ಲಿ, ನಟಿ ಮತ್ತು ಐಪಿಎಲ್ ತಂಡದ ಮಾಲಕಿ ಪ್ರೀತಿ ಜಿಂಟಾ ಮುಂತಾಗಿ ನೂರಾರು ಪ್ರಮುಖರು ಸಾಮಾಜಿಕ ತಾಣಗಳಲ್ಲಿ ದುಃಖ ವ್ಯಕ್ತಪಡಿಸಿದ್ದಾರೆ. ವಿವಿಧ ದೇಶಗಳ ಕ್ರಿಕೆಟ್ ಮಂಡಳಿಗಳು ಕೂಡ ಸಂತಾಪ ವ್ಯಕ್ತಪಡಿಸಿವೆ.

ರಾಷ್ಟ್ರೀಯ ಗೌರವ; ಎಂಸಿಜಿ ಸ್ಟ್ಯಾಂಡ್‌ಗೆ ಹೆಸರು: ಶೇನ್ ವಾರ್ನ್ ಅವರ ಅಂತ್ಯಸಂಸ್ಕಾರವನ್ನು ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಗುವುದು ಎಂದು ಆಸ್ಟ್ರೇಲಿಯಾ ಪ್ರಧಾನಮಂತ್ರಿ ಸ್ಕಾಟ್ ಮಾರಿಸನ್ ಶನಿವಾರ ಘೋಷಿಸಿದ್ದಾರೆ. ಮೆಲ್ಬರ್ನ್ ಕ್ರಿಕೆಟ್ ಮೈದಾನದ ಸ್ಟ್ಯಾಂಡ್ ಒಂದಕ್ಕೆ ವಾರ್ನ್ ಅವರ ಹೆಸರನ್ನು ಇಡಲಾಗುವುದು ಎಂದು ಕೂಡ ಅವರ ತಿಳಿಸಿದ್ದಾರೆ.

ವಾರ್ನ್ ಅವರ ಹಠಾತ್ ನಿಧನದ ಸುದ್ದಿ ದೇಶದ ಜನರಿಗೆ ಬರಸಿಡಿಲಿನಂತೆ ಬಡಿದಿದೆ. ಫೆಡರಲ್ ಮತ್ತು ವಿಕ್ಟೋರಿಯನ್ ಸರ್ಕಾರವು ಕ್ರಿಕೆಟ್ ಆಸ್ಟ್ರೇಲಿಯಾ ಮತ್ತು ವಾರ್ನ್ ಅವರ ಕುಟುಂಬದ ಜೊತೆಗೂಡಿ ಅಂತ್ಯಸಂಸ್ಕಾರ ನೆರವೇರಿಸಲಿದೆ ಎಂದು ಮಾರಿಸನ್ ವಿವರಿಸಿದ್ದಾರೆ.

ಸಾವಿನಲ್ಲಿ ಶಂಕೆ ಇಲ್ಲ: ಪೊಲೀಸರ ಸ್ಪಷ್ಟನೆ

ಕೊಹ್ ಸಮುಯಿ (ಎಎಫ್‌ಪಿ): ಇಲ್ಲಿನ ಥಾಯ್ ಹಾಲಿಡೇ ಐಲೆಂಡ್ ವಿಲಾದಲ್ಲಿ ಶೇನ್ ವಾರ್ನ್ ಅವರು ಹೃದಯಾಘಾತದಿಂದ ನಿಧನರಾಗಿದ್ದರು. 52 ವರ್ಷ ವಯಸ್ಸಿನ ಅವರ ಸಾವಿನಲ್ಲಿ ಯಾವುದೇ ಬಗೆಯ ಸಂದೇಹವಿಲ್ಲ ಎಂದು ಥಾಯ್ ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಈ ನಡುವೆ ಅವರು ಸಾವಿಗೀಡಾಗಿರುವ ವಿಷಯವನ್ನು ಘೋಷಿಸಿದ ಥಾಯ್ ಇಂಟರ್‌ನ್ಯಾಷನಲ್ ಹಾಸ್ಪಿಟಲ್‌ನವರು ಶೇನ್ ವಾರ್ನ್ ಆಸ್ಪತ್ರೆ ತಲುಪುವ ಮೊದಲೇ ಕೊನೆಯುಸಿರೆಳೆದಿದ್ದರು ಎಂದು ತಿಳಿಸಿದ್ದಾರೆ.

'ಅವರನ್ನು ಜೀವರಕ್ಷಕ ವ್ಯವಸ್ಥೆಯಲ್ಲಿರಿಸಿ ಹೃದಯವನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸಲಾಯಿತು. 45 ನಿಮಿಷ ಸಿಪಿಆರ್ ಒದಗಿಸಲಾಗಿತ್ತು. ಆದರೆ ಅವರನ್ನು ಆಸ್ಪತ್ರೆಗೆ ತಲುಪಿಸುವುದರೊಳಗೆ ಪ್ರಾಣ ಹೋಗಿತ್ತು ಎಂದು ವೈದ್ಯರು ತಿಳಿಸಿದ್ದಾರೆ' ಎಂದು ಆಸ್ಪತ್ರೆಯ ನಿರ್ದೇಶಕ ದುಲ್ಯಾಕಿತ್ ವಿಟ್ಟಯಚನ್ಯಾಪೊಂಗ್ ವಿವರಿಸಿದ್ದಾರೆ.

'ತಂಡದ ಚೇತನ ಶೇನ್ ವಾರ್ನ್'

ನವದೆಹಲಿ: 'ನಮ್ಮ ತಂಡದ ಚೇತನವಾಗಿದ್ದ ಶೇನ್ ವಾರ್ನ್ ಅನೇಕ ಆಟಗಾರರ ವೃತ್ತಿಜೀವನಕ್ಕೆ ದಾರಿದೀಪವಾಗಿದ್ದರು' ಎಂದು ಐಪಿಎಲ್‌ನಲ್ಲಿ ಆಡುವ ರಾಜಸ್ಥಾನ್ ರಾಯಲ್ಸ್ ಆಡಳಿತ ಶನಿವಾರ ಅಭಿಪ್ರಾಯಪಟ್ಟಿದೆ.

ಮಹಿಳಾ ವಿಶ್ವಕಪ್ ಕ್ರಿಕೆಟ್: ಜೂಲನ್ ಗೋಸ್ವಾಮಿ, ರಾಜೇಶ್ವರಿ ಮೇಲೆ ನಿರೀಕ್ಷೆ

ಮಿಥಾಲಿ ಬಳಗಕ್ಕೆ ಪಾಕಿಸ್ತಾನ ತಂಡದ ಸವಾಲು

ಮೌಂಟ್ ಮಾಂಗನೂಯಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದಲ್ಲಿ ಎರಡು ದಶಕಗಳಿಂದ ಮಿಂಚುತ್ತಿರುವ ಮಿಥಾಲಿ ರಾಜ್ ಅವರ ವಿಶ್ವಕಪ್ ಪ್ರಶಸ್ತಿ ಗೆಲುವಿನ ಕನಸಿನ ಅಭಿಯಾನ ಭಾನುವಾರ ಆರಂಭವಾಗಲಿದೆ.

ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮಿಥಾಲಿ ನಾಯಕತ್ವದ ಭಾರತ ತಂಡ ಪಾಕಿಸ್ತಾನದ ಎದುರು ಮೊದಲ ಪಂದ್ಯ ಆಡಲಿದೆ. 2005 ಮತ್ತು 2017ರ ಆವೃತ್ತಿಗಳಲ್ಲಿ ಭಾರತ ರನ್ನರ್ಸ್‌ಅಪ್ ಆಗಿತ್ತು. ಬಹುತೇಕ ತಮ್ಮ ಕೊನೆಯ ವಿಶ್ವಕಪ್ ಟೂರ್ನಿ ಆಡಲಿರುವ ಮಿಥಾಲಿ ಮತ್ತು ವೇಗಿ ಜೂಲನ್ ಗೋಸ್ವಾಮಿ ಅವರಿಗೆ ಟ್ರೋಫಿ ಜಯದ ಉಡುಗೊರೆ ನೀಡುವುದು ತಂಡದ ಕನಸು.


ಮಿಥಾಲಿ ರಾಜ್

ತಂಡದ ವೇಗದ ಬೌಲಿಂಗ್‌ಗೆ ಜೂಲನ್ ನೇತೃತ್ವ ವಿದೆ. ಮೇಘನಾ ಸಿಂಗ್, ಪೂಜಾ ವಸ್ತ್ರಕರ್ ಮತ್ತು ರೇಣುಕಾ ಸಿಂಗ್ ಅವರು ಜೂಲನ್ ಅವರಿಗೆ ಬೆಂಬಲ ನೀಡಬೇಕಿದೆ. ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ ಮತ್ತು ರಾಜೇಶ್ವರಿ ಗಾಯಕವಾಡ್ ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕಲು ವಿಶೇಷ ತಂತ್ರಗಾರಿಕೆ ರೂಪಿಸುವುದು ಅನಿವಾರ್ಯವಾಗಿದೆ. ಸ್ಮೃತಿ ಮಂದಾನ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಮಿಥಾಲಿ ಮತ್ತು ಹರ್ಮನ್‌ಪ್ರೀತ್ ಕೌರ್ ಕೂಡ ದೊಡ್ಡ ಮೊತ್ತ ಕಲೆಹಾಕುವ ನಿರೀಕ್ಷೆ ಇದೆ.

ವಿಶ್ವಕಪ್‌ನಲ್ಲಿ ಭಾರತ–ಪಾಕಿಸ್ತಾನ ಮುಖಾಮುಖಿ

2 ಪಂದ್ಯಗಳು
2 ಭಾರತ ಜಯ
10 ಒಟ್ಟು ಆಡಿದ ಏಕದಿನ ಪಂದ್ಯಗಳು
10 ಭಾರತ ಜಯ

ಇಂಗ್ಲೆಂಡ್‌ಗೆ ಆಸ್ಟ್ರೇಲಿಯಾ ಆಘಾತ

ಹ್ಯಾಮಿಲ್ಟನ್ (ಎಎಫ್‌ಪಿ): ರಾಚೆಲ್ ಹೇನ್ಸ್ (130 ರನ್, 131ಎ, 4X14, 6X1) ಗಳಿಸಿದ ತಾಳ್ಮೆಯ ಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು ಶನಿವಾರ ನಡೆದ ಪಂದ್ಯದಲ್ಲಿ 12 ರನ್‌ಗಳಿಂದ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 32 ರನ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 3ಕ್ಕೆ 310 (ರಾಚೆಲ್ ಹೇನ್ಸ್ 130, ಮೆಗ್ ಲ್ಯಾನಿಂಗ್ 86, ಬೆಥ್ ಮೂನಿ ಔಟಾಗದೆ 27; ನ್ಯಾಟ್ ಸೀವರ್ 68ಕ್ಕೆ 2). ಇಂಗ್ಲೆಂಡ್: 50 ಓವರ್‌ಗಳಲ್ಲಿ 8ಕ್ಕೆ 298 (ಟಾಮಿ ಬಿಮೊಂಟ್ 74, ನ್ಯಾಟ್ ಸೀವರ್ ಔಟಾಗದೆ 109)


ಸುನಿಲ್ ಚೆಟ್ರಿ– ಐಎಸ್‌ಎಲ್ ಚಿತ್ರ

ಸುನಿಲ್ ಗೋಲು: ಬಿಎಫ್‌ಸಿಗೆ ಗೆಲುವು

ವಾಸ್ಕೊ: ನಾಯಕ ಸುನಿಲ್ ಚೆಟ್ರಿ ಗಳಿಸಿದ ಸೊಗಸಾದ ಗೋಲಿನ ನೆರವಿನಿಂದ ಬೆಂಗಳೂರು ಫುಟ್‌ಬಾಲ್ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶನಿವಾರ ಜಯ ಗಳಿಸಿತು.

ಈ ಆವೃತ್ತಿಯಲ್ಲಿ ತನ್ನ ಕೊನೆಯ ಪಂದ್ಯವಾಡಿದ ಬಿಎಫ್‌ಸಿ ತಂಡವು 1–0ಯಿಂದ ಎಸ್‌ಸಿ ಈಸ್ಟ್ ಬೆಂಗಾಲ್ ತಂಡಕ್ಕೆ ಸೋಲುಣಿಸಿತು.

ಪಂದ್ಯದ 24ನೇ ನಿಮಿಷದಲ್ಲಿ ಯಾಯಾ ಬನಾನಾ ಅವರ ನೆರವಿನಿಂದ ಚೆಂಡು ಹಿಡಿತಕ್ಕೆ ಪಡೆದ ಚೆಟ್ರಿ ಟೂರ್ನಿಯಲ್ಲಿ ಒಟ್ಟು 51ನೇ ಗೋಲು ದಾಖಲಿಸಿದರು.

ಭಾನುವಾರ ಬ್ಯಾಂಬೊಲಿಮ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವು ಕೇರಳ ಬ್ಲಾಸ್ಟರ್ಸ್ ಎದುರು ಸೆಣಸಲಿದೆ.